ಪ್ರಬುದ್ಧ ಕರ್ಣಾಟಕ

ಸಂಪುಟ : ೭೬-೭೭

ಸಂಚಿಕೆಗಳು : ೨೯೯-೩೦೬

೧೯೯೬

ಪ್ರಸಾರಾಂಗ: ಮೈಸೂರು ವಿಶ್ವವಿದ್ಯಾನಿಲಯ

ಗೆ ಸೂಚನೆಗಳು

೧. ಪ್ರಬುದ್ಧ ... ಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರ ಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರ ಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ ಪ್ರಕಟಣೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ.ಎಲ್., ಕನ್ನಡಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬.

Sreekantaiya, T.N., 'A Century and a Half of Literary Activity in Kannada, Kannada Studies, Vol. 1, No. 2 (Mysore 1965), p. 62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕ ಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸು ವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ೩ ಪ್ರತಿಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬**, ಇವರಿಗೆ ಕಳುಹಿಸಬೇಕು.

ಪ್ರಬುದ್ಧ ಕರ್ಣಾಟಕ

ಸಂಪುಟಗಳು ೭೬, ೭೭ ಸಂಚಿಕೆಗಳು ೨೯೯-೩೦೬
(ಸಂಯಂಕ್ತ)

ಜಾನಪದ ತತ್ತ್ವಗಳ ವಿಶೇಷಾಂಕ

ಭಾವ ಮತ್ತು ಯುವ ಸಂವತ್ಸರಗಳು

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೯೫-೯೬

PRABUDDHA KARNATAKA, a Kannada Quarterly of the University of Mysore, Volumes 76, 77, pp. viii + 138

•

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಮುದ್ರಕರು

ಶ್ರೀ ಬಿ. ಎಸ್. ಸಿದ್ದೇಗೌಡ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦ ೦೦೬

ಪ್ರಕಾಶಕರ ಪ್ರಸ್ತಾವನೆ

ಪ್ರಬಂಧ್ದ ಕರ್ಣಾಟಕದ 'ಅಮೃತ ಸಂಪುಟ'ವನ್ನು ಓದುಗರಿಗೆ ಕೊಟ್ಟ ತರುಣದಲ್ಲಿಯೇ ಅದರ ಮುಂದಿನ ಸಂಪುಟ 'ಜಾನಪದ ತತ್ವಗಳು' ವಿಶೇಷಾಂಕವನ್ನು ಓದುಗರ ಕೈಗಿಡಲು ಸಂತೋಷವಾಗುತ್ತಿದೆ. ನಾಲ್ಕು ನೂರಕ್ಕೂ ಹೆಚ್ಚು ಪುಟಗಳುಳ್ಳ ಅಮೃತ ಸಂಪುಟವನ್ನು ಓದಿ ಮುಗಿಸುವ ವೇಳೆಗೆ ಅದರ ಮುಂದಿನ ಸಂಪುಟ ನಮ್ಮ ಚಂದಾದಾರರ ಕೈ ಸೇರುತ್ತಿರುವುದರಿಂದ ಅವರು ಮುಂದಗೊಳ್ಳುತ್ತಾರೆಂದು ಭಾವಿಸುತ್ತೇನೆ. ಈ ಸಂಪುಟ 'ಜಾನಪದ'ಕ್ಕೆ ಮೀಸಲಾಗಿದೆ. ಇದೂ ಒಂದು ಸಂಯುಕ್ತ ಸಂಪುಟವೇ. ಆಯಾ ಸಂಪುಟಗಳು ಆಯಾ ವರ್ಷವೇ ಹೊರತರಬೇಕೆಂಬ ದೃಷ್ಟಿಯಿಂದ ಹಿಂದೆ ಬಿದ್ದಿರುವ ಸಂಚಿಕೆಗಳನ್ನು ಒಟ್ಟುಗೂಡಿಸಿ ಸಂಯುಕ್ತ ಸಂಪುಟಗಳಾಗಿ ಹೊರತರುವುದು ಅನಿವಾರ್ಯವೇ ಆಗಿದೆ. ಈ ಅನಿವಾರ್ಯತೆಯನ್ನು ನಮ್ಮ ಚಂದಾದಾರರು ಒಪ್ಪಿಕೊಳ್ಳುತ್ತಾರೆ ಎಂದು ನಂಬಿದ್ದೇನೆ.

ಪ್ರಸಾರಾಂಗದಿಂದ ಪ್ರಕಟವಾಗುವ ಪತ್ರಿಕೆಗಳನ್ನು ಶೈಕ್ಷಣಿಕವಾದ ನೆಲೆಯನ್ನು ಗಮನದಲ್ಲಿಟ್ಟುಕೊಂಡು ತರಲಾಗುತ್ತಿದೆ. ಹೀಗಾಗಿ ಚಂದಾಹಣ ಬಹಳ ಕಡಿಮೆ ಇದೆ. ಚಂದಾಹಣ ಕಡಿಮೆ ಇದ್ದಲ್ಲಿ ಚಂದಾದಾರರು ಹೆಚ್ಚು ಸಂಖ್ಯೆಯಲ್ಲಿ ಲಭ್ಯವಾಗುತ್ತಾರೆ ಎನ್ನುವ ನಂಬಿಕೆ. ಆದರೆ ಆ ನಂಬಿಕೆ ಕೆಲವೊಮ್ಮೆ ತಿರುವುಮುರುವಾಗಬೇಕಿತ್ತೇನೋ ಎನಿಸುತ್ತದೆ.

ಪ್ರಸಾರಾಂಗದ ಪತ್ರಿಕೆಗಳಿಗೆ ಚಂದಾದಾರರ ಕೊರತೆ ಇದೆ. ಇದಕ್ಕೆ ಕಾರಣಗಳು ಹಲವಾರು. ಸಕಾಲಕ್ಕೆ ಪತ್ರಿಕೆಗಳು ಹೊರಬರುವುದಿಲ್ಲ–ಎನ್ನುವ ಕಾರಣ ಪ್ರಧಾನ ವಾದರೂ ಈ ಕಾರಣಕ್ಕೆ ಇತರೇ ಪೂರಕ ಕಾರಣಗಳೂ ಕೊಂಡಿಯಂತೆ ಸೇರುತ್ತಾ ಹೋಗುತ್ತವೆ. ಮುದ್ರಣಾಲಯದಲ್ಲಿ ವಾರ್ಷಿಕ ಆವರ್ತನದ ಕಡ್ಡಾಯ ಕೆಲಸಗಳೇ ಅಧಿಕವಾಗಿರುವುದರಿಂದ ಮುದ್ರಣದಲ್ಲಿ ವಿಳಂಬವಾಗುವಿಕೆ, ಇದರ ಪರಿಣಾಮದಿಂದ ಸಂಪಾದಕರ ಉತ್ಸಾಹ ಕುಗ್ಗಿ ಹೋಗುವಿಕೆ, ಪ್ರಬಂಧಗಳನ್ನು ಕೊಟ್ಟವರಿಗೆ ಉತ್ತರಿಸ ಲಾಗದ ವಾತಾವರಣ, ಇದರಿಂದ ಬೇಸತ್ತ ಲೇಖಕರು ಮತ್ತೊಮ್ಮೆ ಲೇಖನ ಕೊಡದಿರುವುದು ಈ ಎಲ್ಲಾ ತೊಂದರೆ ನೀಸಿಕೊಂಡು ಪತ್ರಿಕೆ ಹೊರತರಲು ಮುಂದಾದಾಗ ಪತ್ರಿಕೆಗೆ ಚಂದಾದಾರರ ಕೊರತೆ ಸಮಸ್ಯೆಯಾಗಿಬಿಡುತ್ತದೆ. ಏಕೆಂದರೆ ಹೂಡಿದ ಬಂಡವಾಳದಲ್ಲಿ ಲಾಭಾಂಶ ಬೇಡವೆಂದರೂ ಮೂಲ ಬಂಡವಾಳಕ್ಕೆ ಧಕ್ಕೆ ಯಾಗದಂತೆ ನೋಡಿಕೊಳ್ಳಬೇಕಾದುದು ಕರ್ತವ್ಯವಲ್ಲವೇ? ಯಾವಾಗ ಮೂಲ ಬಂಡವಾಳಕ್ಕೆ ಧಕ್ಕೆ ಬರುತ್ತದೋ ಆಗ ಪತ್ರಿಕೆಯಾದರೂ ಏಕೆ? ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ.

ಯಾವುದೇ ಒಂದು ಪತ್ರಿಕೆ ಜೀವಂತಿಕೆಯಿಂದ ಹೆಜ್ಜೆಹಾಕಬೇಕಾದರೆ ಓದುಗರ ಸಹಕಾರ ಅಗತ್ಯವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದುದರಿಂದ ಪತ್ರಿಕೆಗೆ

ಲೇಖನಗಳನ್ನು ಕಳುಹಿಸಿಕೊಡಿ. ಚಂದಾಹಣ ಕಟ್ಟದಿದ್ದಲ್ಲಿ ದಯವಿಟ್ಟು ಕಳುಹಿಸಿಕೊಡಿ. ನಿಮ್ಮ ಚಂದಾದಾರಿಕೆಯನ್ನು ಮುಂದುವರಿಸುವುದರ ಜೊತೆಗೆ ನಿಮ್ಮ ಸ್ನೇಹಿತರು, ಇತರ ಸಂಘ ಸಂಸ್ಥೆಗಳು ಚಂದಾದಾರರಾಗಲು ಒತ್ತಾಯ ತರಬೇಕೆಂದೂ ಕೋರುವೆ. ಒಂದು ಪತ್ರಿಕೆಯ ಯಶಸ್ಸು ಓದುಗರ ಪ್ರೋತ್ಸಾಹದ ಮೇಲೆ ನಿಂತಿದೆ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪತ್ರಿಕೆ ಹೆಚ್ಚು ಕ್ರಿಯಾಶೀಲವಾಗಲಿ ಎನ್ನುವ ಉದ್ದೇಶದಿಂದ ನಿಯತಕಾಲಿಕೆಗಳ ಸಂಪಾದಕತ್ವದ ಸ್ವರೂಪವನ್ನು ಬದಲಾಯಿಸಿದ್ದು; ಫಲಕಾರಿಯಾಗುತ್ತಿದೆ ಎಂಬುದನ್ನು ಈಗ ಓದುಗರು ಮನಗಾಣಬಹುದಾಗಿದೆ.

ಈ ಸಂಪುಟವನ್ನು ಜಾನಪದ ತತ್ವಗಳ ವಿಶೇಷಾಂಕ ಎಂದು ಕರೆಯಲಾಗಿದೆ. ಜಾನಪದಕ್ಕೆ ಸಂಬಂಧಿಸಿದ, ಹೆಸರಾಂತ ಹನ್ನೆರಡು ಜನ ವಿದ್ವಾಂಸರ ಲೇಖನಗಳು ಇಲ್ಲಿ ಸೇರ್ಪಡೆಯಾಗಿದೆ. 'ಜಾನಪದ'ದ ವಿವಿಧ ಮಗ್ಗಲುಗಳನ್ನು ಕುರಿತ ತುಲನಾತ್ಮಕ ಅಧ್ಯಯನ ಇಲ್ಲಿ ನಡೆದಿದೆ. ಈ ಲೇಖನಗಳನ್ನು ಬಳಸಿಕೊಳ್ಳಲು ಅನುಮತಿಕೊಟ್ಟ ಎಲ್ಲಾ ವಿದ್ವಾಂಸರಿಗೂ ನನ್ನ ವಂದನೆಗಳು. ಈ ಸಂಪುಟದ ಸಂಪಾದಕರಾದ ಡಾ. ಆರ್. ವಿ. ಎಸ್. ಸುಂದರಂ ಮತ್ತು ಡಾ. ಎನ್. ಎಸ್. ತಾರಾನಾಥ್ ಅವರು ಬಹಳ ಶ್ರಮವಹಿಸಿ ಪತ್ರಿಕೆ ಬೇಗ ಹೊರಬರಲು ಕಾರಣರಾಗಿದ್ದಾರೆ, ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಪ್ರಸಾರಾಂಗದ ಎಲ್ಲಾ ಕಾರ್ಯ ಚಟುವಟಿಕೆಗಳ ಯಶಸ್ಸಿಗೆ ಕುಲಪತಿಗಳಾದ ಡಾ. ಎಸ್. ಎನ್. ಹೆಗ್ಡೆ ಅವರು ನೀಡುತ್ತಿರುವ ಪ್ರೋತ್ಸಾಹವೇ ಕಾರಣವಾಗಿದೆ. ಅವರ ಕ್ರಿಯಾಶೀಲತೆ, ನಾವು ಇನ್ನೂ ಉತ್ಸಾಹದಿಂದ ಮುನ್ನುಗ್ಗಲು ಸಹಕಾರಿಯಾಗಿದೆ. ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ. ಆಡಳಿತಾತ್ಮಕವಾಗಿ ಎದ್ದು ನಿಲ್ಲುವ ಅಡೆತಡೆಗಳನ್ನು ಸರಾಗವಾಗಿ ನಿವಾರಿಸಿ ನಮ್ಮ ಕಾರ್ಯಗಳೆಲ್ಲಾ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುತ್ತಿರುವವರು ಕುಲಸಚಿವರಾದ ಪ್ರೊ. ವಿ. ಜಿ. ತಳವಾರ್ ಅವರು, ಅವರನ್ನು ತುಂಬು ಹೃದಯದಿಂದ ನೆನೆಯುತ್ತೇನೆ. ಸಕಾಲದಲ್ಲಿ ಮುದ್ರಣ ಮುಗಿಸಿಕೊಟ್ಟ ವಿಶ್ವವಿದ್ಯಾನಿಲಯ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಬಿ. ಎಸ್. ಸಿದ್ದೇಗೌಡರಿಗೆ ನನ್ನ ವಂದನೆಗಳು. ಹಾಗೆಯೇ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಡಿ. ಕೆ. ಈರೇಗೌಡ ಮತ್ತು ಬಳಗದವರಿಗೆ ನನ್ನ ವಂದನೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ.

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕ

ವಿಷಯಸೂಚಿ

ಇಲ್ಲಿಯ ಲೇಖನಗಳ ಲೇಖಕರು

ಡಾ. ಹಾ.ಮಾ. ನಾಯಕ	'ಗೋಧೂಳಿ', ಜಯಲಕ್ಷ್ಮೀಪುರಂ, ಮೈಸೂರು-೫೭೦ ೦೧೨.
ಡಾ. ಹಿ.ಶಿ. ರಾಮಚಂದ್ರೇಗೌಡ	ಜಾನಪದ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.
ಡಾ. ರಾಮೇಗೌಡ	ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.
ದಿ. ಡಾ. ಜೀ.ಶಂ. ಪರಮಶಿವಯ್ಯ	
ಡಾ. ಸಿ.ಪಿ.ಕೆ.	ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.
ಡಾ. ಡಿ.ಕೆ. ರಾಜೇಂದ್ರ	ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.
ಡಾ. ಅರವಿಂದ ಮಾಲಗತ್ತಿ	ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.
ಡಾ. ಅಂಬಳಿಕೆ ಹಿರಿಯಣ್ಣ	ಜಾನಪದ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.
ಡಾ. ಜಯಲಕ್ಷ್ಮೀ ಸೀತಾಪುರ	ಸಂಶೋಧನ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೫೭೦ ೦೦೬.
ಡಾ. ಆರ್ವಿಯಸ್. ಸುಂದರಂ	ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.
ಡಾ. ಬಿ.ಎ. ವಿವೇಕ ರೈ	ಕನ್ನಡ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ, ಕೊಣಾಜೆ, ಮಂಗಳೂರು-೫೭೪ ೧೯೯.
ಶ್ರೀಮತಿ ಎ.ಸಿ. ಲಲಿತ	ಜಾನಪದ ಪ್ರವಾಚಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.

ಲೇಖನಗಳಿಗೆ ಆಕರ

೧. ಜನಪದ ಸಾಹಿತ್ಯ, ಅದರ ಸ್ವರೂಪ
'ಜಾನಪದ ಸ್ವರೂಪ', ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೧.

೨. FOLK-FOLKLORE : ದೇಶೀವಾದದ ಹಿನ್ನೆಲೆಯಲ್ಲಿ ಮರುಚಿಂತನೆ, 'ಮಾನವಿಕ ಕರ್ಣಾಟಕ', ಸಂಪುಟ ೨೩ ಸಂಚಿಕೆ ೩ ಮತ್ತು ೪, ಮೈಸೂರು ವಿಶ್ವವಿದ್ಯಾನಿಲಯ, ೧೯೯೩.

೩. ಜನಪದ ಇತಿಹಾಸ
'ಜಾನಪದ ಅಂತರಂಗ' ಮಾನವಿ ಪ್ರಕಾಶನ, ಮೈಸೂರು, ೧೯೮೭.

೪. ಜಾನಪದ ಪ್ರಕಾರಗಳು
'ಜಾನಪದ ಸಿದ್ಧಾಂತಗಳು ಮತ್ತು ವಿಧಾನಗಳು', ಶಕ್ತಿ ಪ್ರಕಾಶನ, ಮೈಸೂರು, ೧೯೯೬.

೫. ಜನಪದ ಗೀತೆ
'ಜನಪದ ಸಾಹಿತ್ಯರೂಪಗಳು', ಪಿ.ಎ.ಎನ್. ಪಬ್ಲಿಷರ್ಸ್, ಬೆಂಗಳೂರು, ೧೯೭೫.

೬. ಲಾವಣಿ
'ಕನ್ನಡ ಜನಪದ ಐತಿಹಾಸಿಕ ಕಾವ್ಯಗಳು', ಮೈಸೂರು ವಿಶ್ವವಿದ್ಯಾನಿಲಯಂದ ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ.

೭. ಗದ್ಯಕಥನಗಳು
'ಕನ್ನಡ ಜನಪದ ಕಥೆಗಳು', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦.

೮. ಗಾದೆ
'ಜನಪದ ಸಾಹಿತ್ಯದ ಮೂಲತತ್ವಗಳು', ಅರ್ಕಾವತಿ ಪ್ರಕಾಶನ, ಮೈಸೂರು, ೧೯೭೬.

೯. ಒಗಟು
'ಜನಪದ ಸಾಹಿತ್ಯ ಪ್ರವೇಶಿಕೆ', ಚಿತ್ರಭಾನು, ಮೈಸೂರು, ೧೯೮೧.

೧೦. ಜನಪದ ನಂಬಿಕೆಗಳು
'ಅನ್ವಯಿಕ ಜಾನಪದ', ಮಂಗಳಗಂಗೋತ್ರಿ, ೧೯೮೫.

೧೧. ಮಾಟ-ಮಂತ್ರ-ಮೋಡಿ
'ಕರ್ನಾಟಕ ಜಾನಪದ ಸಮೀಕ್ಷೆ', ಪ್ರಥಮ ವಿಶ್ವಕನ್ನಡ ಸಮ್ಮೇಳನದ ಪ್ರಕಟಣೆ, ಮೈಸೂರು, ೧೯೮೩.

ಎಲ್ಲಾ ಲೇಖಕರಿಗೂ ನಮ್ಮ ಕೃತಜ್ಞತೆಗಳು.

ಡಾ. ಹಾ. ಮಾ. ನಾಯಕ

ಜನಪದ ಸಾಹಿತ್ಯ, ಅದರ ಸ್ವರೂಪ

ಜನಪದ ಸಾಹಿತ್ಯದ ಸಾಮಾನ್ಯ ಸ್ವರೂಪವನ್ನು ಕುರಿತು ನಾಲ್ಕು ಮಾತು ಹೇಳುವುದು ಈ ಪ್ರಬಂಧದ ಉದ್ದೇಶ. ಅದಕ್ಕೆ ಮೊದಲು ನಮ್ಮಲ್ಲಿ ಬಳಕೆಯಾಗುತ್ತಿರುವ ಜನಪದ, ಜಾನಪದ–ಈ ಪದಗಳ ವ್ಯಾಪ್ತಿಯನ್ನು ಕುರಿತು ಸ್ವಲ್ಪ ವಿಚಾರಮಾಡುವುದು ಅಗತ್ಯವೆಂದು ತೋರುತ್ತದೆ. ಈ ಪದಗಳು ಸಾಹಿತ್ಯ ಎಂಬ ಪದದೊಡನೆಯೇ ಬಳಕೆಯಲ್ಲಿವೆ. ಈ ಉಪಯೋಗ ಇಂಗ್ಲಿಷಿನ Folk Literature ಎಂಬುದಕ್ಕೆ ಪರ್ಯಾಯ; ಆದರೆ ಇಂಗ್ಲಿಷಿನ Folklore ಎಂಬುದಕ್ಕೆ ನಾವು ಯಾವ ಬದಲಿ ಪದವನ್ನೂ ಉಪಯೋಗಿಸುತ್ತಿಲ್ಲ. ಮಾತ್ರವಲ್ಲ ಆ ವ್ಯಾಪಕತೆಯನ್ನೂ ನಾವು ಗಮನಕ್ಕೆ ತೆಗೆದುಕೊಂಡಿಲ್ಲ.

ಜನಪದ ಎಂದರೆ ಆಪ್ಟೆಯವರ ಅರ್ಥಕೋಶದ ಪ್ರಕಾರ a community, race, nation, a kingdom, an empire, an inhabited country ಮೊದಲಾದ ಅರ್ಥಗಳ ಜೊತೆಗೆ 'the country' opp. the town (ಪುರ, ನಗರ). ಜಾನಪದ ಎಂದರೆ, an inhabitant of the country, a rustic, boor, peasant (opp. ಪೌರ), a country. ಕಿಟ್ಟೆಲ್ ಅವರು ಕೂಡ ತಮ್ಮ ಅರ್ಥಕೋಶದಲ್ಲಿ ಈ ಪದಗಳಿಗೆ ಇದೇ ಅರ್ಥಗಳನ್ನು ಕೊಟ್ಟಿದ್ದಾರೆ.

ಇಂಗ್ಲಿಷಿನಲ್ಲಿ folk–ಕೂಡ ಒಂದು ಜನಾಂಗ, ಸಮಾಜದ ಕೆಳಗಿನ ಸ್ತರ, ಸಂಕೀರ್ಣ ಸ್ವಭಾವದ ನಾಗರಿಕ ಸಮಾಜವಲ್ಲಿ ಹಳೆಯ ಗುಂಪು, ಮೂಲ ಸಂಸ್ಕೃತಿಯನ್ನು ಒಯ್ಯುವ ಸಾಮಾಜಿಕವರ್ಗ, ಸಂಪ್ರದಾಯದೊಂದಿಗೆ ಹೆಣೆದ ಸಮಾಜ ಈ ಮೊದಲಾದ ಅರ್ಥಗಳನ್ನೂ ಕೊಡುತ್ತದೆ. ಇದೆಲ್ಲದರಿಂದ ಗೊತ್ತಾಗುವುದೇನೆಂದರೆ ಇಂಗ್ಲಿಷಿನ folk ಹಳೆಯ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿರುವ ಸಾಮಾನ್ಯರ ಸಮೂಹ. ನಗರ ಜೀವನದಲ್ಲಿನ ಸಾಂಸ್ಕೃತಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ಆದಷ್ಟೂ ಕಡಿಮೆ ಪ್ರಮಾಣದಲ್ಲಿ ಹೊಂದಿರುವ ಸಮಾಜ. ಈ ಸಮಾಜದ ಪ್ರತಿಯೊಬ್ಬನ ಸಾಂಸ್ಕೃತಿಕ ಪ್ರಾಪ್ತಿಯೂ ಹೆಚ್ಚು ಕಡಮೆ ಒಂದೇಮಟ್ಟದಲ್ಲಿರುತ್ತದೆ. ವಾಸ್ತವವಾಗಿ folk culture, city culture ಗೆ ವಿರುದ್ಧವಾದುದು; ಒಂದು

ಇನ್ನೊಂದರಿಂದ ಬೇರೆಯಾದುವು. ಈ ವಿವರಗಳನ್ನು ಗಮನಿಸಿದಾಗ **ಜನಪದ** ಎನ್ನುವ ನಮ್ಮ ಪ್ರಾಚೀನ ಪದ, ಎಾದರೆ the country opp. the town (ಪುರ, ನಗರ), ಇಂಗ್ಲಿಷಿನ folk ಪದದ **ಪ್ರತಿರೂಪವಾಗಿ** ತೋರುತ್ತದೆ.[1] 'folk' ನಲ್ಲಿ ತುಂಬಿರುವ ಮೂಲಾರ್ಥ 'ಜನಪದ'ದಲ್ಲಿಯೂ ಕಂಡು ಬರುತ್ತದೆ. ಪಾರಿಭಾಷಿಕ ವಾಗಿ folk ಸಮಸ್ಯೆಯನ್ನು 'ಜನಪದ'ದಿಂದ ಪರಿಹರಿಸಿಕೊಂಡಹಾಗಾಯಿತು. ಆದರೆ folklore ಎಂಬುದಕ್ಕೆ ಪ್ರತಿಯಾಗಿ ನಮಗೆ ಒಂದು ಪದಬೇಕು. ಏಕೆಂದರೆ folk literature, folkloreನಿಂದ ಬೇರೆಯಾದುದು. ಅದು ಇದರ ಒಂದು ಭಾಗ, ಅಷ್ಟೆ. Folk literature ಇರುವಹಾಗೆ folk music ಇದೆ; folk dance ಇದೆ; folk dress ಇದೆ; folk medicine ಇದೆ; folk play ಇದೆ; ಈ ಬಗೆಯ ಇನ್ನೂ ಹಲವು ಇವೆ. ಇವೆಲ್ಲವೂ ಕೂಡಿದ್ದು folklore. ಇಂಗ್ಲಿಷ್ ಭಾಷೆಗಾದರೂ folklore ಪದ ಕೇವಲ ನೂರಇಪ್ಪತ್ತು ವರ್ಷಗಳಷ್ಟು ಮಾತ್ರ ಹಳೆಯದು. "ಜನಪ್ರಿಯ ಪ್ರಾಚೀನ ನಡಾವಳಿಗಳು"–Popular antiquities–ಎಂಬುದಕ್ಕೆ ಬದಲಾಗಿ ೧೮೪೬ ರಲ್ಲಿ ವಿಲಿಯಂ ಜಾನ್ ಥಾಮಸ್ ಈ ಪದವನ್ನು ಸೃಷ್ಟಿಸಿ ಚಲಾವಣೆಗೆ ತಂದ. ಇಲ್ಲಿನ ಎರಡನೆಯ lore (Middle English : *loor, lore;* Anglo-Saxon : *lar;* German : *lehre*) ಪ್ರಾಚೀನ ಟ್ಯುಟಾನಿಕ್ ಮೂಲದ ಪದ. ಅದರ ಅರ್ಥ ತಿಳಿವು, ಜ್ಞಾನ, ಕಲಿಕೆ. Folk ಅನ್ನು ಕುರಿತ lore folklore ಆರಂಭದಲ್ಲಿ ಬೇರೆ ಬೇರೆ ಪದಗಳಾಗಿ ತೋರಿಸಲ್ಪಟ್ಟಿದ್ದರೂ, ಬರಬರುತ್ತಾ ಒಂದೇ ಆಗಿ ಬೆಸೆದುಕೊಂಡವು. *Standard Dictionary of Folklore, Mythology and Legend*ನಲ್ಲಿ ಲೋಕವಿಖ್ಯಾತರಾದ ಸುಮಾರು ಇಪ್ಪತ್ತು ಜನ ವಿದ್ವಾಂಸರು folklore ಅನ್ನು ಕುರಿತು ವ್ಯಾಖ್ಯಾನ ಮಾಡಿದ್ದಾರೆ.[2] ಅದೆಲ್ಲದರ ಸಾರಾಂಶ : folklore ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ ಹಾಗೂ ಅದನ್ನು ಕುರಿತ ವಿಜ್ಞಾನ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ folklore ಎನ್ನುವುದು "ಸಂಪ್ರದಾಯವನ್ನು ಕುರಿತ ವಿಜ್ಞಾನ."

---

1. ಈ ಸಂದರ್ಭದಲ್ಲಿ ಮಿತ್ರರಾದ ಶ್ರೀ ಸುಜನಾ ಅವರು ಪಾಣಿನಿಯಲ್ಲಿನ ಒಂದು ಉಲ್ಲೇಖದ ಕಡೆ ನನ್ನ ಗಮನ ಸೆಳೆಯುತ್ತಾರೆ : An important geographical term used by Panini is *janapada* which was both a state and a cultural unit, its culture counting more than its geography. Its cultural integrity was reflected and preserved in the manners, customs and above all the dialect of its people. The citizens of the same *janapada* were called *sajanapada* (vi. 3–85)."

V. S. Agarwala, *India as Known to Panini* (1953), p. 48.

2. Leach, Maria (ed), *Standard Dictionary of Folklore, Mythology and Legend* (1949), Vol. I. pp. 398-403.

Folk literature ಎನ್ನುವುದಕ್ಕೆ ನಮ್ಮಲ್ಲಿ ಜನಪದ ಸಾಹಿತ್ಯವೆಂಬ ಪ್ರಯೋಗವನ್ನು ಮೊತ್ತಮೊದಲು ಯಾರು ಬಳಸಿದರೋ ವಿಚಾರಮಾಡಬೇಕಾದ ಕುತೂಹಲದ ಸಂಗತಿ. ನನಗೆ ತಿಳಿದಂತೆ, ೧೯೩೧ರಲ್ಲಿ ಪ್ರಕಟವಾದ 'ಗರತಿಯ ಹಾಡು' ಸಂಕಲನಕ್ಕೆ ಮೊದಲ ಮಾತುಗಳನ್ನು ಬರೆದ ದಿವಂಗತ ಬಿ. ಎಂ. ಶ್ರೀಕಂಠಯ್ಯನವರೂ ಶ್ರೀ ದ. ರಾ. ಬೇಂದ್ರೆಯವರೂ ಈ ಮಾತನ್ನು ಬಳಸಿದ್ದಾರೆ. ಅದಕ್ಕೂ ಮೊದಲಿನ ಉಲ್ಲೇಖಗಳು 'ಹಳ್ಳಿಯ ಹಾಡುಗಳಿ'ದು ದೊರೆಯುತ್ತವೆ. ಜನಪದ ಸಾಹಿತ್ಯವೆಂಬ ಮಾತು ಬಳಕೆಯಲ್ಲಿದ್ದಾಗಲೇ, ಯಾವುದೋ ಒಂದು ಶುಭ ಮುಂಜಾನೆ ಜಾನಪದ ಎಂಬ ಪ್ರಯೋಗವೂ ಬಳಕೆಗೆ ಬಂದು ಇತ್ತೀಚಿನ ಲೇಖಕರೆಲ್ಲ ಜಾನಪದ ಸಾಹಿತ್ಯವೆಂದೇ ಬಳಸುತ್ತಿದ್ದಾರೆ. ಜನಪದ—ಜಾನಪದಗಳ ನಡುವೆ ಯಾವ ವಿಧವಾದ ವ್ಯತ್ಯಾಸಗಳೂ ಇಲ್ಲದೆ ಬಳಕೆಯಾಗುತ್ತಿವೆ.

ಈಗ ಇದು ಶಾಸ್ತ್ರೀಯ ಅಧ್ಯಯನದ ವಿಷಯವಾಗಿರುವುದರಿಂದ, ಇವನ್ನು ಪಾರಿಭಾಷಿಕ ಪದಗಳನ್ನಾಗಿ ಎಚ್ಚರಿಕೆಯಿಂದ ಬಳಸಬೇಕಾದ ಅಗತ್ಯವಿದೆ. Folk ಎನ್ನುವುದಕ್ಕೆ 'ಜನಪದ'ವನ್ನು ನಾವು ಇಟ್ಟುಕೊಂಡಿರುವುದರಿಂದ, 'ಜಾನಪದ'ವನ್ನು folklore ಎನ್ನುವ ಅರ್ಥದಲ್ಲಿ ಉಪಯೋಗಿಸಬಹುದೆಂದು ನಾನು ಸೂಚಿಸ ಬಯಸುತ್ತೇನೆ. ಜನಪದವನ್ನು ಕುರಿತದ್ದು ಜಾನಪದ. ಜಾನಪದ ಎಲ್ಲ ಜನಪದ ಸಮೂಹವನ್ನೂ ಒಳಗೊಂಡದ್ದು. ಈ ಪದ ನಮ್ಮಲ್ಲಿ ಬಳಕೆಯಲ್ಲಿರುವುದರಿಂದ ಅರ್ಥಗಳನ್ನು ಹತೋಟಿಗೊಳಿಸಿ ಉಪಯೋಗಿಸುವುದು ಕಷ್ಟವಾಗದೆಂದು ನನ್ನ ಎಣಿಕೆ. Folk literature ಗೆ ಎದುರಾಗಿ folklore ಗೆ ಪಾರಿಭಾಷಿಕ ಪದವೊಂದನ್ನು ಕಂಡು ಕೊಳ್ಳುವ ಕಷ್ಟ ಬಂಗಾಳಿ, ಹಿಂದೀ ಮೊದಲಾದ ಅನ್ಯಭಾರತೀಯ ಭಾಷೆಗಳಿಗೂ ತಪ್ಪಿಲ್ಲ. ಈ ಭಾಷೆಗಳಲ್ಲಿ ಗ್ರಾಮ ಸಾಹಿತ್ಯ, ಪಲ್ಲಿಗೀತ್, ಲೋಕಗೀತ್, ಲೋಕಸಾಹಿತ್ಯ, ಲೋಕವಾರ್ತಾ, ಲೋಕಸಂಸ್ಕೃತಿ, ಜನಸಾಹಿತ್ಯ, ಜನಸಂಸ್ಕೃತಿ ಮೊದಲಾದ ಪದಗಳು ತೊಳಲಾಡುತ್ತಿವೆ. ಸುಪ್ರಸಿದ್ಧ ಭಾಷಾವಿಜ್ಞಾನಿ ಡಾ. ಸುನೀತಿಕುಮಾರ ಛಟರ್ಜಿ 'ಲೋಕಾಯನ' ಎಂಬ ಪದವನ್ನು ಸೂಚಿಸಿದರು. ಆದರೆ ಅದು ಚಲಾವಣೆಯಲ್ಲಿ ಬರಲಿಲ್ಲ. ಈಚೆಗೆ ಹಿಂದೀ ವಿದ್ವಾಂಸರೊಬ್ಬರು ಈ ಎಲ್ಲ ಪದಗಳ ಯುಕ್ತತೆಗಳನ್ನು ಕೂಲಂಕಷವಾಗಿ ಚರ್ಚಿಸಿ folk ಎನ್ನುವುದಕ್ಕೆ 'ಲೋಕ' ಎಂದೂ, folklore ಎನ್ನುವುದಕ್ಕೆ 'ಲೋಕವಿಜ್ಞಾನ' ಅಥವಾ 'ಲೋಕವಾಙ್ಮಯ' ಸಮನಾದ ಪದಗಳೆಂದೂ ಸೂಚಿಸಿದ್ದಾರೆ.[1] ಇವು ಭಾರತದಾದ್ಯಂತ ಬಳಕೆಯಲ್ಲಿ ಬರಬೇಕೆಂಬುದು ಅವರ ಇಚ್ಛೆ. ಆದರೆ 'ಲೋಕ'ಕ್ಕಿಂತ ಹೆಚ್ಚಾಗಿ, 'ಜನಪದ' folk ಎನ್ನುವುದರ ಮೂಲ ಅರ್ಥವನ್ನೂ ಶಕ್ತಿಯನ್ನೂ ಸಮರ್ಪಕವಾಗಿ ಗ್ರಹಿಸುತ್ತದೆಂದು ತೋರುತ್ತದೆ. Lore ಎಂಬ ಪದದ

1. Pande, Trilochan. "The concept of Folklore : its Befitting Indian Synonyms" *Folklore*. Vol. VI. No. 1 (January 1965), pp. 7–17.

learning or knowledge ಎಂಬ ಅರ್ಥವನ್ನು ವಾಙ್ಮಯ ಹೊರಲಾರದು; ಆದರೆ ವಿಜ್ಞಾನ ಧರಿಸಬಲ್ಲುದು. ಆ ದೃಷ್ಟಿಯಲ್ಲಿ ನೋಡಿದಾಗ 'ಜನಪದ ವಿಜ್ಞಾನ'ವೂ ಸಮರ್ಪಕವಾದ ಮಾತೇ ಆಗುತ್ತದೆ. ಪದಗಳ ಜೀವ, ಜೀವಾಳ ಅವನ್ನು ಬಳಸು ವವರು ಅವುಗಳಿಗೆ ಆರೋಪಿಸುವ ಅರ್ಥದಿಂದ ಮಾತ್ರ. ಯಾವುದನ್ನೂ ಚಲಾವಣೆಗೆ ತರಬಹುದು : ಯಾವುದನ್ನೂ ಚಲಾವಣೆಯಿಂದ ಹಿಂತೆಗೆದುಕೊಳ್ಳಬಹುದು. ಆದ್ದರಿಂದ ಕಾಲ ಮಿಂಚುವ ಮೊದಲೇ, 'ಜಾನಪದ' ಎನ್ನುವುದು folklore ಎನ್ನುವುದಕ್ಕೆ ಸಮನಾದ, ಸಂವಾದಿಯಾದ ಪದ ಎಂದು ನಾವು ಒಪ್ಪಿ, ಅನುಮೋದಿಸಿ ಬಳಕೆಗೆ ತರಬಹುದಾದರೆ, ಅದು 'ಜನಪದವಿಜ್ಞಾನ' ಎನ್ನುವುದಕ್ಕಿಂತ ಸಮರ್ಪಕ ವಾದ, ಸಂಕ್ಷಿಪ್ತವಾದ ಹೆಸರಾಗುತ್ತದೆ. ಮಾತ್ರವಲ್ಲ, ಇಂದಿನ ಬಳಕೆಯಲ್ಲಿ ವಿಜ್ಞಾನ ಪಡೆದುಕೊಂಡಿರುವ ಅರ್ಥವನ್ನು 'ಜನಪದವಿಜ್ಞಾನ'ದಿಂದ ದೂರ ಇಡಬಹುದು. ಈ ಸಲಹೆಯನ್ನು ನಮ್ಮ ಜನ ಒಪ್ಪುವರೋ ಇಲ್ಲವೋ. ಒಬ್ಬರಿಗೆ ಇಷ್ಟವಾದರೂ ನನ್ನ ಸೂಚನೆ ಸಾರ್ಥಕವೆಂದೇ ಎಣಿಸುತ್ತೇನೆ. ಈ ಪ್ರಬಂಧದ ಉದ್ದಕ್ಕೂ ಜಾನಪದ ವೆಂಬುದು folklore; ಜನಪದ ಎನ್ನುವುದು folk.[1]

ಇಂಗ್ಲಿಷಿನ folklore ಅನ್ನು ಜನಪದ ಸಾಹಿತ್ಯಕ್ಕೆ ನಮ್ಮ ಕೆಲವು ಲೇಖಕರು ಸಮೀಕರಿಸಿರುವುದಂತೂ ಖಂಡಿತ ಸರಿಯಲ್ಲ. ದಿವಂಗತ ಡಾ. ಗದ್ದಗಿಮಠ ಅವರು ಹೀಗೆ ಬರೆಯುತ್ತಾರೆ: "ಅವರು ಕೈಕೊಂಡ ಅನೇಕ ಸಾಧನಗಳಲ್ಲಿ ಜಾನಪದ ಸಾಹಿತ್ಯವೂ (folklore) ಮುಖ್ಯ ಸಾಧನಗಳಲ್ಲೊಂದು; ಈ ಜಾನಪದ ಸಾಹಿತ್ಯದ ಸ್ಥಿತಿಗತಿಯನ್ನು ವಿಶದವಾಗಿ ವಿಚಾರಿಸುವುದೇ ಇಲ್ಲಿ ನಮ್ಮ ಮುಖ್ಯ ಉದ್ದೇಶ."[2] ಶ್ರೀ ಎಲ್. ಆರ್. ಹೆಗಡೆಯವರು ಬರೆಯುತ್ತಾರೆ: "ಜನಪದ ಸಾಹಿತ್ಯ ಸಂಘಗಳು (folklore society) ಅನೇಕ ದೇಶಗಳಲ್ಲಿ ಸ್ಥಾಪಿತವಾದವು."[3] ಇಲ್ಲಿ ಈ ಲೇಖಕರಿಗೆ folklore ಬೇರೆಯಲ್ಲ folk literature ಬೇರೆಯಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ದಿವಂಗತ ದೇವುಡು ನರಸಿಂಹಶಾಸ್ತ್ರಿಯವರು, ಇಂಗ್ಲಿಷಿನ cultureಗೆ ಜ್ಞಾತಿಪದವಾದ ಜರ್ಮನ್ ಭಾಷೆಯ kulture ನ್ನೂ, folklore ಅನ್ನೂ ಒಂದೇ ಎಂದು ಸಮೀಕರಿಸಿರು ವುದಂತೂ ಬಹಳ ಅಸಮಂಜಸ. ಜನತೆಯ ಸಂಸ್ಕೃತಿಯನ್ನು ಕುರಿತು ಹೇಳುತ್ತಾ ಅವರು "ಇದನ್ನು ಇಂಗ್ಲಿಷಿನಲ್ಲಿ folklore ಎಂದೂ ಜರ್ಮನ್ ಭಾಷೆಯಲ್ಲಿ kulture ಎಂದೂ ಕರೆಯುತ್ತಾರೆ. ಇವುಗಳಲ್ಲಿ ಎರಡನೆಯದೇ ಸರಿಯೆಂದು ನಮ್ಮ ಅಭಿಪ್ರಾಯ" ಎಂದು ಹೇಳಿದ್ದಾರೆ![4]

---

1. ಜನಪದ-ಜಾನಪದ ಈ ಪದಗಳ ನಡುವಿನ ಅಂತರ ಬಹು ಸೂಕ್ಷ್ಮವಾಗಿ ತೋರು ವುದರಿಂದ, ನಾನು ಸೂಚಿಸಿರುವ 'ಜಾನಪದ' ಅರ್ಥದಲ್ಲಿ 'ಜಾನಪದೀಯ' ಎಂದು ಬಳಸ ಬಹುದೆಂದು ಶ್ರೀ ಕುವೆಂಪು ಸೂಚಿಸುತ್ತಾರೆ. ಇದು ಸ್ವಾಗತಾರ್ಹವಾದ ಸೂಚನೆಯಾಗಿದೆ.
2. ಗದ್ದಗಿಮಠ, ಬಿ. ಎಸ್. (ಡಾ), ಕನ್ನಡ ಜಾನಪದ ಗೀತಗಳು (೧೯೬೩) ಪು. IV.
3. ಹೆಗಡೆ, ಎಲ್. ಆರ್., ಜಾನಪದ ಕಥೆಗಳು (೧೯೬೫), ಪು. ೧೪.
4. ನರಸಿಂಹಶಾಸ್ತ್ರಿ, ದೇವುಡು, ಕರ್ಣಾಟಕ ಸಂಸ್ಕೃತಿ (ಎರಡನೆ ಮುದ್ರಣ ೧೯೬೧), ಪು. ೩-೪.

ಜನಪದ ಸಾಹಿತ್ಯವೆನ್ನುವುದು ಜಾನಪದ ಚಕ್ರದ ಒಂದು ಪುಟಿ; ಜನಪದ ಕಲೆ, ಜನಪದ ನೃತ್ಯ, ಜನಪದ ವೈದ್ಯ, ಜನಪದ ಉಡುಗೆ, ಜನಪದ ಸಂಗೀತ ಮೊದಲಾದವು ಮಿಕ್ಕ ಪುಟಿಗಳು. ಹಲವು ಪುಟಿಗಳು ಕೂಡಿ ತಾನೆ ಒಂದು ರಥದ ಚಕ್ರ? ಜನಪದ ಸಾಹಿತ್ಯ ಎನ್ನುವುದು ವಾಙ್ಮಯ ರೂಪದ ಜಾನಪದ (Folklore of the spoken word). ಇದರಲ್ಲಿನ ಅತ್ಯಂತ ಮುಖ್ಯ ವಿಭಾಗಗಳೆಂದರೆ (೧) ಕಥೆಗಳು (೨) ಗೀತಗಳು (೩) ಒಗಟುಗಳು ಮತ್ತು (೪) ಗಾದೆಗಳು. ಜಗತ್ತಿನ ಯಾವ ಜನಾಂಗದಲ್ಲೂ ಈ ಪ್ರಭೇದಗಳು ಇಲ್ಲದಿಲ್ಲ. ಸ್ಟಿತ್ ಥಾಂಸನ್ ಎಂಬ ವಿದ್ವಾಂಸರು ಇವುಗಳ ಜೊತೆಗೆ ಸೂಕ್ತಿಗಳು ಹಾಗೂ ಮೋಹಿನೀ ಮಂತ್ರಗಳು ಎಂಬ ಇನ್ನೆರಡು ಪ್ರಭೇದಗಳನ್ನೂ ಸೂಚಿಸಿದ್ದಾರೆ.[1] ಆದರೆ, ನಮ್ಮಲ್ಲಿ ಜನಪದ ಸಾಹಿತ್ಯವೆಂದರೆ ಜನಪದ ಗೀತೆಗಳೆಂದಷ್ಟೇ ಅರ್ಥ. ನಡೆದಿರುವ ಅಲ್ಪ ಸ್ವಲ್ಪ ಕೆಲಸವಾದರೂ ಗೀತೆಗಳಿಗೆ ಸಂಬಂಧಿಸಿರುವುದಷ್ಟೇ, ಗೀತಗಳನ್ನುಳಿದ ಮಿಕ್ಕ ಪ್ರಭೇದಗಳಿಗೂ ಜನಪದ ಸಾಹಿತ್ಯಕ್ಕೂ ಸಂಬಂಧವೇ ಇಲ್ಲವೆನ್ನುವಮಟ್ಟಿನ ತಿಳಿವಳಿಕೆಯೂ ಅಪರೂಪವಾದುದಲ್ಲ.

ಕೆಲವು ಜನಪದ ಕಥೆಗಳನ್ನು ಕೂಡಿಸಿ ಪ್ರಕಟಿಸಿರುವ ತೀರ ಈಚಿನ ಲೇಖಕ ರೊಬ್ಬರು ತಮ್ಮ ಕಥೆಗಳ ವಿಷಯದಲ್ಲಿ ಹೀಗೆ ಹೇಳಿಕೊಂಡಿದ್ದಾರೆ: "ಇಲ್ಲಿ ಬರುವ ಕಥೆಗಳು ಹಳ್ಳಿಗಳಲ್ಲಿ ಪ್ರಚಾರದಲ್ಲಿವೆ. ನಮ್ಮ ನಾಡಿನ ಹಳ್ಳಿಗಳಲ್ಲಿ ಇಂತಹ ಅಸಂಖ್ಯಾತ ಕಥೆಗಳು ಜನಜೀವನದಲ್ಲಿ ಹಾಸುಹೊಕ್ಕಾಗಿವೆ. 'ಜನಪದ ಸಾಹಿತ್ಯ'ದಂತೆಯೇ ಈ ನಾಡ ಕಥಾಸಾಹಿತ್ಯದ ಭಂಡಾರವೂ ಅಗಾಧವಾಗಿದೆ."[2] ಈ ಮಾತಿನಲ್ಲಿ 'ನಾಡ ಕಥಾಸಾಹಿತ್ಯ' ಜನಪದ ಸಾಹಿತ್ಯದ ಒಂದು ಅಂಗವೆಂದು ಈ ಲೇಖಕರಿಗೆ ತಿಳಿದಿರುವಂತೆ ಕಾಣಿಸುವುದಿಲ್ಲ.

ಜನಪದ ಕಥೆಗಳು ನಮ್ಮಲ್ಲಿ 'ಅಜ್ಜಿಕಥೆಗಳು' ಎಂಬ ಹೆಸರಿನಿಂದ ಪ್ರಸಿದ್ಧ ವಾಗಿವೆ. ಕಥೆ ತಲೆಮಾರಿನಿಂದ ತಲೆಮಾರಿಗೆ ಸಾಗುತ್ತದೆ. ಅಜ್ಜಿಯರು ಕಥಾ ಭಂಡಾರಗಳಿದ್ದ ಹಾಗೆ. ಕಥೆಗಾಗಿ ಅವರನ್ನು ಪೀಡಿಸದ ಎಳೆಯರಿಲ್ಲ. ಬಂಗಾಳಿ, ಅಸ್ಸಾಮಿ ಭಾಷೆಗಳಲ್ಲಿ ಇವು 'ಸಾಧುಕಥಾ' ಎಂದು ಪ್ರಸಿದ್ಧವಾಗಿವೆ. ಎಂದರೆ, ವರ್ತಕರ ಕಥೆಗಳು. ಊರಿಂದೂರಿಗೆ ಸುತ್ತುವ ವರ್ತಕ ಅಲ್ಲಿ ನಮ್ಮ ಅಜ್ಜಿಯ ಪಾತ್ರವಹಿಸಿದ್ದಾನೆ.

ಜನಪದ ಕಥೆಗಳು, ಅವುಗಳ ಸ್ವರೂಪ, ವರ್ಗೀಕರಣ ಮುಂತಾದ ವಿಚಾರ ಗಳಲ್ಲಿ ಮೊದಲಿನಿಂದಲೂ ವಿಪುಲವಾಗಿ ಚರ್ಚೆ ನಡೆದಿದೆ. ಈ ವಿಷಯದಲ್ಲಿ ಒಮ್ಮತವೇರ್ಪಟ್ಟಿಲ್ಲ. ಹೀಗೆ ವಿಚಾರ ಮಾಡಿದವರಲ್ಲಿ ಎಡ್ವಿನ್ ಸಿಡ್ನಿ ಹಾರ್ಟ್

1. Goswami, P. D., *Ballads and Tales of Assam* (1960) p. 3.

2. ಚಂದ್ರಶೇಖರ್. ಎಂ., ಬೆಪ್ಪುತಕ್ಕಡಿ ಬೆಳವ (೧೯೬೫) ಪು. ೧.

ಲ್ಯಾಂಡ್ ಒಬ್ಬ.[1] ಅವನ ಅಭಿಪ್ರಾಯದಂತೆ ಜನಪದ ಕಥೆ ಸಂಪ್ರದಾಯದಲ್ಲಿ ಬಂದ ನಿರೂಪಣೆ. ಅದು ಈಗಿರುವಂತೆ, ದೈವಿಕ ವ್ಯಕ್ತಿಗಳನ್ನು ಕುರಿತದ್ದಾಗಲಿ, ವಿಶ್ವಶಾಸ್ತ್ರಕ್ಕೆ ಸಂಬಂಧಿಸಿದ್ದಾಗಲಿ ಅಥವಾ ರಾಷ್ಟ್ರೀಯ ಘಟನೆಗಳನ್ನು ಪಡೆದದ್ದಾಗಲಿ ಆಗಿರದೆ, ಕೇವಲ ಅದ್ಭುತ ಘಟನೆಗಳನ್ನೇ ಪ್ರಧಾನವಾಗಿ ಉಳ್ಳದ್ದು. ಈ ಬಗೆಯ ಕಥೆಗಳನ್ನು ಅವನು ಎರಡು ಬಗೆಯಾಗಿ ವರ್ಗೀಕರಿಸಿದ. ಒಂದು, ಸಾಗ (saga); ಇನ್ನೊಂದು, ಮಾರ್ಷೆನ್ (marchen). ಮೊದಲ ಗುಂಪಿಗೆ ಸೇರಿದ ಕಥೆಗಳು. ಗೊತ್ತಾದ ಸ್ಥಳಕ್ಕೆ ಆರೋಪಿತವಾಗಿ, ನಿರ್ದಿಷ್ಟ ಅತಿಮಾನುಷ ವ್ಯಕ್ತಿಗಳನ್ನು ಕುರಿತವು. ಕೆಲವೊಮ್ಮೆ ಈ ಕಥೆಗಳಲ್ಲಿ ಚಾರಿತ್ರಿಕ ವ್ಯಕ್ತಿಯೂ ಸುಳಿಯಬಹುದು. ಎರಡನೆಯ ಗುಂಪಿಗೆ ಸೇರಿದ ಕಥೆಗಳು ವಿನೋದ ಕಥನಗಳು; ಬೇರೆ ಬೇರೆ ಕಾಲದಲ್ಲಿ, ಬೇರೆ ಬೇರೆ ದೇಶಗಳಲ್ಲಿ ಸಂಭವಿಸಿರಬಹುದೆಂದು ನಂಬಲಾದ ಘಟನೆಗಳನ್ನು ಆಧರಿಸಿರುವಂಥವು; ಇವುಗಳಲ್ಲೆಲ್ಲ ಕಲ್ಪನೆ ಗರಿಗಟ್ಟಿರುತ್ತದೆ. ಸ್ವಾರಸ್ಯವೆಂದರೆ ಇವನ್ನು ಹೇಳುವವರಾಗಲಿ ಕೇಳುವವರಾಗಲಿ ನಂಬಬೇಕೆಂದಿಲ್ಲ. von der Leyen ಎಂಬ ಇನ್ನೊಬ್ಬ ಲೇಖಕ ಸಾಗಾ ಎಂದರೆ ಸರಳ ಚಿತ್ರಣವೆಂದೂ, ಮಾರ್ಷೆನ್ ಎಂದರೆ ಸಂಕೀರ್ಣ ಚಿತ್ರಣವೆಂದೂ ಅಭಿಪ್ರಾಯಪಟ್ಟ.[2] ಮೊದಲನೆಯದರಲ್ಲಿ ಸಂಕ್ಷಿಪ್ತತೆ ಮುಖ್ಯಗುಣ; ಎರಡನೆಯದರಲ್ಲಿ ವಿವರಣೆಯೇ ಪರಮ ಗುರಿ. ಮೊದನೆಯದರ ತಿರುಳು ತಿಳಿವಳಿಕೆ; ಎರಡನೆಯದರ ಜೀವಾಳ ನಿರೂಪಣೆ ಮೊದಲನೆಯದು ನೀತಿ, ಎರಡನೆಯದು ಕಥೆ. ಮಿಲ್ಲರ್ ಎನ್ನುವ ವಿದ್ವಾಂಸನಿಗೆ ಜನಪದ ಕಥೆಗಳಲ್ಲಿ ಕಿನ್ನರ ಕಥೆಗಳು, ದೈನಂದಿನ ಕಥೆಗಳು, ಪ್ರಾಣಿ ಕಥೆಗಳು ಎಂಬ ಮೂರೇ ವಿಧ.[3] ವುಂಡ್ಟ್ ಎಂಬ ಜರ್ಮನ್ ಪಂಡಿತನಾದರೊ ಈ ಕಥೆಗಳನ್ನು ಏಳು ಗುಂಪಾಗಿ ವಿಂಗಡಿಸಿದ: ೧. ಪೌರಾಣಿಕ ನೀತಿ ಕಥೆಗಳು ೨. ಶುದ್ಧ ಕಿನ್ನರ ಕಥೆಗಳು ೩. ಜೈವಿಕ ಕಥೆಗಳು ಮತ್ತು ನೀತಿಕಥೆಗಳು ೪. ಶುದ್ಧ ಪ್ರಾಣಿಕಥೆಗಳು ೫. ವಾಂಶಿಕ ಕಥೆಗಳು ೬. ತಮಾಷೆ ಕಥೆಗಳು ಮತ್ತು ನೀತಿ ಕಥೆಗಳು ೭. ನೀತಿ ಕಥೆಗಳು (moral fables).[4] ಇದು ವಿವರವಾದ ವರ್ಗೀಕರಣವಾದರೂ ಹಲವಾರು ದೃಷ್ಟಿಗಳಿಂದ ದೋಷಪೂರ್ಣವಾಗಿದೆ.

Saga ಹಾಗೂ Marchen ವರ್ಗೀಕರಣವೇ ಸ್ಪಷ್ಟವಾಗದಿರುವಾಗ Myth (ಪುರಾಣ) ಎಂಬ ಇನ್ನೊಂದು ವಿಧವೂ ಸೇರಿಕೊಂಡು ಪರಿಸ್ಥಿತಿ ಇನ್ನೂ ಕ್ಲಿಷ್ಟವಾಗು

---

1. Hartland, E. S., *The Science of Fairy Tales* (1925. 2nd Edition).

2. Quoted by Goswami, *op. cit.*, p. 75.

3. Propp, V., *Morphology of the Folktale* (Translated by Laurence Scott) (1958) p. 5.

4. ibid. p. 6.

ತ್ತದೆ. 'ಎನ್‌ಸೈಕ್ಲೊಪೀಡಿಯಾ ಆಫ್ ಬ್ರಿಟಾನಿಕ'ದಲ್ಲಿ ಜನಪದ ಕಥೆಗಳನ್ನು ಸ್ಥೂಲವಾಗಿ, ಪುರಾಣಗಳು (Myths), ಐತಿಹ್ಯಗಳು (legends) ಮತ್ತು ಮನರಂಜಕ ಗಳೆಂದು ಮೂರು ಭಾಗ ಮಾಡಿದ್ದಾರೆ. ಪುರಾಣಗಳಿಗೂ ಜನಪದ ಕಥೆಗಳಿಗೂ ನಡುವಿನ ಅಂತರವನ್ನು ಗುರುತಿಸುವುದು ಕಷ್ಟ. ಇವುಗಳ ಸಂಬಂಧವನ್ನು ಬೋಯಸ್ ಎಂಬ ಮಾನವಶಾಸ್ತ್ರಜ್ಞನು *Race, Language and Culture* ಎಂಬ ತನ್ನ ಗ್ರಂಥದಲ್ಲಿ ಚರ್ಚಿಸಿದ್ದಾನೆ.[1] ಅವನ ಮತದಂತೆ ಇವೆರಡರ ನಡುವಿನ ಕೊಡು–ಕೊಳ್ಳುವಿಕೆಗಳು ತೀರ ಸಾಮಾನ್ಯ ಹಾಗೂ ಸತತ. ಆದ್ದರಿಂದ ಯಾವುದು ಯಾವುದಕ್ಕಿಂತ ಮೊದಲು ಎಂದು ಹೇಳುವುದು ಸುಲಭವಲ್ಲ.

ಸಮಕಾಲೀನ ಜಾನಪದ ವಿದ್ವಾಂಸರಲ್ಲಿ ಅಗ್ರಗಣ್ಯರಾದ ಸ್ಟಿತ್ ಥಾಂಸನ್ ಅವರು ವಾಕ್‌ಸಂಪ್ರದಾಯದ ಕಥೆಗಳನ್ನು (Stories of oral tradition) ಈ ಬಗೆಯಾಗಿ ವರ್ಗೀಕರಿಸಿದ್ದಾರೆ :

ಐತಿಹ್ಯ, ಸಂಪ್ರದಾಯಗಳು (Saga) : ಸ್ಥಳ ಐತಿಹ್ಯಗಳು; ವ್ಯಕ್ತಿ ಐತಿಹ್ಯಗಳು ; ಕಾರ್ಯಕಾರಣ ಕಥೆಗಳು; ಕಿನ್ನರ ಕಥೆಗಳು ; ಘಟನಾ ಐತಿಹ್ಯಗಳು— ಇವುಗಳ ಉದ್ದೇಶ: ಸತ್ಯ ಪ್ರತಿಪಾದನೆ.

ಕಟ್ಟು ಕಥೆಗಳು (Marchen): ಪ್ರಾಣಿಗಳ ಕಥೆಗಳು, ಅತಿಮಾನುಷ ಕಥೆಗಳು, ವಿನೋದ ಕಥೆಗಳು, ತಂತ್ರಗಳ ಕಥೆಗಳು—ಇವುಗಳ ಉದ್ದೇಶ : ಕಾಲ್ಪನಿಕ ಕಥೆ ಹೇಳುವುದು.

ವಸ್ತುವನ್ನೇ ಆಧಾರವಾಗಿಟ್ಟುಕೊಂಡು ಮಾಡಿರುವ ಈ ವರ್ಗೀಕರಣ, ತರಗತಿಗಳ ಸೌಲಭ್ಯಕ್ಕಾಗಿ ನಿಯೋಜಿತವಾದದ್ದು. ಆ ಆವಶ್ಯಕತೆಗೆ ಇದು ಅನುಗುಣ ವಾಗಿಯೇ ಇದೆ. ಜನಪದ ಕಥೆಯ ಉಗಮ, ವಿಕಾಸಗಳನ್ನು ಕುರಿತು ಲೋಕಪ್ರಸಿದ್ಧ ವಾದ ಉದ್ಗ್ರಂಥವನ್ನು ರಚಿಸಿರುವ ಈ ಪಂಡಿತರು *Standard Dictionary of Folklore, Mythology and Legend* ನಲ್ಲಿ ಜನಪದ ಕಥೆಗಳನ್ನು ಐತಿಹ್ಯ (legend), ಕಿನ್ನರ ಕಥೆಗಳು (fairy tales), ಪ್ರಾಣಿ ಕಥೆಗಳು (animal tales), ನೀತಿ ಕಥೆಗಳು (fables) ಹಾಗೂ ಪುರಾಣ (myths) ಗಳೆಂದು ವಿಭಾಗಿಸಿದ್ದಾರೆ. ಪುನರಾವರ್ತನೆಯ ದೋಷ ಕಡಮೆ ಇರುವುದರಿಂದ, ಈ ಕಥಾಪ್ರಕಾರಗಳು ಲೋಕ ವ್ಯಾಪಕವಾಗಿರುವುದರಿಂದ ಈ ವರ್ಗೀಕರಣವನ್ನು ಹೆಚ್ಚಿನ ಚರ್ಚೆ ಇಲ್ಲದೆ ಒಪ್ಪಿಕೊಳ್ಳ ಬಹುದು.[2]

---

1. Boas, Franz, *Language and Culture* (1940, 1961) pp. 397–406.

2. ವಿವರವಾದ ಚರ್ಚೆಗೆ ನೋಡಿ : S. Thompson, *The Folktale* (1946, 1951).

ಐತಿಹ್ಯಗಳು ವಿವರಣಾತ್ಮಕವಾಗಿ ಸೃಷ್ಟಿ ಹಾಗೂ ಆರಂಭವನ್ನು ಕುರಿತಿರುತ್ತವೆ; ದೈವ್ವಗಳನ್ನೊ ಅತಿಮಾನುಷ ವ್ಯಕ್ತಿಗಳನ್ನೊ ಈ ಕಥೆಗಳು ಸಂಬಂಧಿಸಿರಬಹುದು. ಕೆಲವು ಸಲ ಐತಿಹಾಸಿಕ ಹಾಗೂ ಅರ್ಧ ಐತಿಹಾಸಿಕ ಸಂಗತಿಗಳನ್ನೂ ವ್ಯಕ್ತಿಗಳನ್ನೂ ಉದ್ದೇಶಿಸಿದ ವಾಗಿರುತ್ತವೆ. ಕಿನ್ನರ ಕಥೆಗಳ ಮುಖ್ಯ ಲಕ್ಷಣವೆಂದರೆ ಅವು "ಒಂದಾನೊಂದು ಕಾಲದಲ್ಲಿ" "ಒಂದಾನೊಂದು ಊರಿನಲ್ಲಿ" ನಡೆದವು. ಪಾತ್ರಗಳಾದರೂ ಅಷ್ಟೆ : ಯಾವನೋ ಒಬ್ಬ ರಾಜ, ಒಬ್ಬಳು ರಾಣಿ, ಅವರ ಕಿರಿಯ ಮಗ, ಒಬ್ಬ ಮಂತ್ರಿ, ಮಂತ್ರಿಯ ಮೂರನೆಯ ಮಗಳು....ಹೀಗೆ. ಒಮ್ಮೊಮ್ಮೆ ಪ್ರಾಣಿಕಥೆಗಳು ಕೂಡ ಕಿನ್ನರಕಥೆಗಳ ಭಾಗಗಳಾಗಿ ಬಿಡುತ್ತವೆ. ಜನಪದ ಕಥೆಗಳ ಪ್ರಸಾರ (diffusion) ದ ದೃಷ್ಟಿಯಿಂದ ಕಿನ್ನರ ಕಥೆಗಳು ತುಂಬ ಮಹತ್ವದವಾಗಿವೆ. ಅವು ದೇಶಪರ್ಯಟನೆ ಮಾಡುವಷ್ಟು ಸುಲಭವಾಗಿ ಮಿಕ್ಕ ಕಥೆಗಳು ಹರಡಿಕೊಳ್ಳುವುದಿಲ್ಲ. ಫಿನ್‌ಲ್ಯಾಂಡಿನಲ್ಲಿ ಪ್ರಚಾರಕ್ಕೆ ಬಂದು ಈಗ ಜಾನಪದ ಅಭ್ಯಾಸದಲ್ಲಿ ಎಲ್ಲ ಕಡೆಯೂ ಬಳಕೆಯಲ್ಲಿರುವ "ಚಾರಿತ್ರಿಕ ಭೌಗೋಳಿಕ ವಿಧಾನ"ದ ಪರಿಶೀಲನೆಗೆ ಈ ಕಥೆಗಳು ಹೆಚ್ಚಾಗಿ ಸಹಾಯಮಾಡುತ್ತವೆ. ಈ ಕಥೆಗಳ ಶೈಲಿ ಹಾಗೂ ತಂತ್ರಗಳ ಆಧಾರದ ಮೇಲೆ ದೇಶ–ಸಮಾಜಗಳ ಅಧ್ಯಯನ; ಇವು ಪ್ರಚಾರದಲ್ಲಿರುವ ಸಮಾಜದಲ್ಲಿ ಇವು ವಹಿಸುವ ಪಾತ್ರದ ಪರಿಶೀಲನೆ—ಇವಕ್ಕೆ ಈ ಕಥೆಗಳು ದೊಡ್ಡ ಆಕರವಾಗಿವೆ. ಜಗತ್ತಿನ ಎಲ್ಲ ಭಾಗ ಗಳಲ್ಲಿಯೂ, ಎಲ್ಲ ಸಂಸ್ಕೃತಿಗಳಲ್ಲಿಯೂ ಕಂಡುಬರುವ ಒಂದು ಜನಪದ ಕಥಾ ಪ್ರಕಾರವೆಂದರೆ ಪ್ರಾಣಿಗಳ ಕಥೆಗಳು. ಪ್ರಾಣಿಗಳನ್ನೇ ಪ್ರಧಾನ ಪಾತ್ರವಾಗಿ ಉಳ್ಳ ಈ ಕಥೆಗಳು ಅತ್ಯಂತ ಪ್ರಾಚೀನ ಜನಪದ ಕಥೆಗಳೆಂದು ಹೇಳಲಾಗಿದೆ. ಇವುಗಳಲ್ಲಿ ಕಾರ್ಯಕಾರಣಕ್ಕೆ ಸಂಬಂಧಿಸಿದ ಕಥೆಗಳು, ನೀತಿಬೋಧಕ ಕಥೆಗಳು, ಪ್ರಾಣಿಕಥಾಚಕ್ರಗಳು ಮೊದಲಾಗಿ ಬೇರೆ ಬೇರೆ ವಿಧಗಳಿವೆ. ನೀತಿ ಕಥೆಗಳು (fables) ಸಾಮಾನ್ಯವಾಗಿ ನೀತಿಯನ್ನೇ ಪ್ರಧಾನ ಗುರಿಯನ್ನಾಗಿಸಿಕೊಂಡ ಪ್ರಾಣಿ ಕಥೆಗಳೇ ಆಗಿವೆ. ಈ ಬಗೆಯ ಕಥೆಗಳು ರಚನೆಯ ದೃಷ್ಟಿಯಿಂದ ಎರಡು ಘಟ್ಟಗಳನ್ನು ಪಡೆದಿರುತ್ತವೆ. ಮೊದಲನೆಯದು ಕಥನವಿವರಣೆ; ಎರಡನೆಯದು ಗಾದೆಯ ರೂಪದ ನೀತಿಸೂಕ್ತಿ. ಈ ನೀತಿಕಥೆಗಳು ಪ್ರಾಣಿಕಥೆಗಳ ಮುಂದಿನ ಮಜಲಾಗಿವೆ. ಇಲ್ಲಿ ಬರುವ ಪ್ರಾಣಿಗಳು ಕೆಲವು ಸಲ ಮಾನವನ ವಿಡಂಬನೆಗಳಿಗೂ, ಕೆಲವು ಸಲ ಅವನ ಆದರ್ಶಗಳಿಗೂ ಮಾದರಿಗಳಾಗಿ ನಿಲ್ಲುತ್ತವೆ. ಪ್ರಾಣಿಗಳ ಗುಣಾವಗುಣಗಳನ್ನು ಎತ್ತಿ ಆಡುವುದಕ್ಕಿಂತ ಮನುಷ್ಯನಿಗೆ ನೀತಿಯನ್ನು ಬೋಧಿಸುವುದು ಇವುಗಳ ಪರಮಗುರಿ. ಒಂದು ದೃಷ್ಟಿಯಿಂದ ನೋಡಿದರೆ ಈ ಬಗೆಯ ಎಷ್ಟೋ ನೀತಿಕಥೆಗಳು ಶುದ್ಧ ಜನಪದ ಕಥೆಗಳಲ್ಲ. ಜಾನಪದದಿಂದ ಸಾಮಗ್ರಿಯನ್ನು ಬಳಸಿಕೊಂಡ ಸಾಹಿತ್ಯಿಕ ಕೃತಿಗಳಾಗಿವೆ. ಈ ಸಾಹಿತ್ಯ ಕೃತಿಗಳೇ ಮರಳಿ ಜಾನಪದಕ್ಕೆ ಹೋಗುವುದು ಅಪರೂಪವೇನಲ್ಲ. ಜಾತಕ ಕಥೆಗಳು, ಪಂಚತಂತ್ರ, ಈಸೋಪನ ಕಥೆಗಳು ಮೊದಲಾದ ಜನಪ್ರಿಯ ಕಥಾಗುಚ್ಛಗಳು ಇದಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ. ಪುರಾಣ ಕಥೆಗಳು

ನಿಶ್ಚಯವಾಗಿಯೂ ಜನಪದ ಕಥೆಗಳ ಒಂದು ಭಾಗವೆಂದೇ ಈಗ ನಿರ್ಧಾರವಾಗಿದೆ. ಇಂದಿನ ಲೋಕದ ಪೂರ್ವಸ್ಥಿತಿಯ ಸುತ್ತ ಸಾಮಾನ್ಯವಾಗಿ ಈ ಪುರಾಣ ಕಥೆಗಳು ಹೆಣೆದುಕೊಂಡಿರುತ್ತವೆ. ಸ್ಥಿತಿ-ಲಯಗಳಿಗೂ ಇವು ಅನೇಕವೇಳೆ ಸಂಬಂಧಪಟ್ಟ ವಾಗಿರುತ್ತವೆ. ಇದರಿಂದ ಪುರಾಣಕಥೆ, ಐತಿಹ್ಯಕ್ಕೆ ಸಮೀಪವಾಗುವುದೂ ಉಂಟು. ದೇವತೆಗಳ ಸಾಹಸಕ್ಕೆ ಬಣ್ಣ ಹಾಕಿದಾಗ ಅವು ಕಿನ್ನರಕಥೆಗಳೂ ಆಗಬಹುದು. ಹಲವು ಪುರಾಣ ಕಥೆಗಳಲ್ಲಿ ಪ್ರಾಣಿಗಳೂ ಪ್ರಧಾನಪಾತ್ರವಹಿಸುತ್ತವೆ. ಪುರಾಣಗಳಿಂದ ನಾವು ಕಲಿಯಬಹುದಾದ ನೀತಿಯೂ ಪ್ರಕಟವಾಗಬಹುದು. ಇದರಿಂದಾಗಿ ಪುರಾಣ ಕಥೆಗಳು ಸಂಕೀರ್ಣ ಸ್ವರೂಪವನ್ನು ತಾಳುತ್ತವೆ. ಅನೇಕ ಸಂದರ್ಭಗಳಲ್ಲಿ ಐತಿಹ್ಯ ಗಳನ್ನೂ ಪುರಾಣಗಳನ್ನೂ ವಿಂಗಡಿಸುವುದು ಕಷ್ಟವಾಗುತ್ತದೆ. ಎದ್ದು ಕಾಣುವ ಒಂದು ಮುಖ್ಯ ವ್ಯತ್ಯಾಸವೆಂದರೆ ಪುರಾಣಗಳ ಆವರಣ-ದೈವಿಕ ; ಪಾತ್ರಗಳು-ದೇವತೆಗಳು ; ಉದ್ದೇಶ-ನಿರೂಪಣೆ. ಐತಿಹ್ಯಗಳಾದರೋ ಸ್ಥಳ, ಸಂಗತಿ, ವ್ಯಕ್ತಿಗಳನ್ನು ಕುರಿತವು ; ಹೇಳುವವರೂ, ಕೇಳುವವರೂ ನಿಜವೆಂದೇ ಭಾವಿಸಿರುವ ಕಥೆಗಳು. ಹೊರನೋಟದಲ್ಲಿ ಹೀಗಿದ್ದರೂ ವಿವರಗಳು ಇಷ್ಟು ಸರಳ ಸುಲಭವಲ್ಲವೆಂದು ತಿಳಿದರೆ ಸಾಕು.

ಇತ್ತೀಚಿನ ವರ್ಷಗಳಲ್ಲಿ ಜನಪದ ಕಥೆಗಳನ್ನು ಸಮಗ್ರದೃಷ್ಟಿಯಿಂದ ವರ್ಗಗಳನ್ನಾಗಿ ವಿಂಗಡಿಸುವುದೂ, ಆಶಯ (motif) ಗಳಿಗೆ ಅನುಗುಣವಾಗಿ ವಿಶ್ಲೇಷಿಸುವುದೂ ಸಾಮಾನ್ಯವಾಗಿದೆ. ಜನಪದ ಕಥೆಗಳ ಒಂದು ಪ್ರಮುಖ ಲಕ್ಷಣವೆಂದರೆ ಅವುಗಳ ರೂಪಾಂತರ ಸಾಧ್ಯತೆ ಎಂಬುದಾಗಿ ವಿಖ್ಯಾತ ರಷ್ಯನ್ ಜಾನಪದ ವಿದ್ವಾಂಸ ಪ್ರಾಪ್ಪ್ ತನ್ನ "ಜನಪದಕಥೆಯ ರೂಪತತ್ವ" (*Morphology of the Folktale*) ಎಂಬ ಗ್ರಂಥದಲ್ಲಿ ಪ್ರತಿಪಾದಿಸಿದ್ದಾನೆ. ಅವನ ಅಭಿಪ್ರಾಯ ಗಳನ್ನು ಕ್ರೋಡೀಕರಿಸಿ ಹೇಳುವುದಾದರೆ ಜನಪದ ಕಥೆಗಳ ವ್ಯಕ್ತಿ ಪಾತ್ರಗಳಲ್ಲಿ ವೈವಿಧ್ಯತೆಯಿದ್ದರೂ ಕ್ರಿಯೆಗಳು ಮಾತ್ರ ಸಾಮಾನ್ಯ, ದೃಢ: ಈ ದೃಢಕ್ರಿಯೆಗಳು ಸಂಖ್ಯೆಯಲ್ಲಿ ಹಲವಿಲ್ಲ ; ಕ್ರಿಯೆಗಳ ಅನುವೃತ್ತಿ ಸದಾ ಒಂದೇ ಗತಿಯಲ್ಲಿರುತ್ತದೆ : ಎಲ್ಲ ಕಥೆಗಳೂ ರಚನೆಯ ದೃಷ್ಟಿಯಿಂದ ಒಂದೇ ವರ್ಗದವಾಗಿರುತ್ತವೆ.

ಲೋಕದ ಜನಪದ ಸಂಪ್ರದಾಯಗಳ ಹಾಗೂ ಜನಪದ ಕಥೆಗಳ ವಿವರವಾದ ಅಭ್ಯಾಸ ನಮಗೆ ಜನಪದ ಕಥೆಗಳ ಕೆಲವು ಸ್ಥೂಲ ಲಕ್ಷಣಗಳನ್ನು ತಿಳಿಸುತ್ತದೆ. ಈ ಕಥೆಗಳು ಮುಖ್ಯ ಕ್ರಿಯೆಯಿಂದ ಯಾವತ್ತೂ ಆರಂಭವಾಗುವುದಿಲ್ಲ. ಅವಸರದಿಂದ ಮುಕ್ತಾಯವಾಗುವುದಿಲ್ಲ. ಆರಂಭದಲ್ಲಿ ನಿಧಾನವಾದ ಪ್ರವೇಶ. ಕಥೆ ಕೇಂದ್ರ ಬಿಂದುವನ್ನು ದಾಟಿದರೂ ಮುಗಿಯದೇ ಇರಬಹುದು. ಪುನರಾವರ್ತನೆ ಸರ್ವಸಾಮಾನ್ಯ. ಪಾತ್ರಗಳ ನಿರ್ವಹಣೆ ನೇರ. ಅವು ಸರಳ. ಕಥೆನ ಗತಿಯಲ್ಲಿ ಅವುಗಳಿಗೆ ಅಗತ್ಯ ವಿರುವಷ್ಟು ಮಾತ್ರ ಅವಕಾಶ. ಕಥಾಕ್ಷೇತ್ರದ ಹೊರಗೆ ಅವುಗಳ ಅಸ್ತಿತ್ವವಿಲ್ಲ. ವಸ್ತು ಸಂಕೀರ್ಣ ಸ್ವರೂಪದ್ದಲ್ಲ. ಕಥೆಗಳಲ್ಲಿ ಉಪಕಥೆಗಳಿಲ್ಲ. ಉಪಕಥೆಗಳು ಬಂದರೆ ಅದು

ಜನಪದ ಜಾಯಮಾನದ್ದಲ್ಲ ಎಂಬುದು ನಿರ್ವಿವಾದ. ಇವುಗಳಲ್ಲಿ ವೈವಿಧ್ಯತೆಯನ್ನು ಸಾಧಿಸಬೇಕೆಂಬ ಹಂಬಲವಿಲ್ಲ. ಸರಳತೆ, ಸುಲಭೀಕರಣಗಳು ಈ ಕಥೆಗಳ ಪ್ರಧಾನ ಲಕ್ಷಣಗಳು. ಒಟ್ಟಿನಲ್ಲಿ ಈ ಲಕ್ಷಣಗಳು ಅಕ್ಷರಸ್ಥ ಸಮಾಜದ ಸಾಹಿತ್ಯ ಕೃತಿಗಳೊಂದಿಗೆ ವೈದೃಶ್ಯವನ್ನು ಸ್ಥಾಪಿಸುತ್ತವೆ.

ಜನಪದಗೀತೆಗಳ ವಿಭಾಗದಲ್ಲಿ ನಮ್ಮಲ್ಲಿ ತಕ್ಕಷ್ಟು ಕೆಲಸ ನಡೆದಿದೆ. ಈ ಹಾಡುಗಳು ನಮ್ಮ ನಿತ್ಯ ಜೀವನ ಕರ್ಮಗಳ ಜೊತೆಗೆ ನಿರಂತರವಾಗಿ ಹೆಣೆಯಲ್ಪಟ್ಟಿರುವುದರಿಂದ ಅವು ನಮಗೆ ಚಿರಪರಿಚಿತವಾಗಿವೆ. ಜನಪದ ಗೀತಗಳನ್ನು ಲಾವಣಿಗಳು, ಗೀತಗಳು, ಕೆಲಸದ ಹಾಡುಗಳು, ನಾಟ್ಯಗೀತಗಳು, ಮಕ್ಕಳ ಹಾಡುಗಳು ಮುಂತಾಗಿ ನಾನಾವಿಧವಾಗಿ ವರ್ಗೀಕರಿಸಬಹುದು. ಸಮಾಜ, ಸಂಪ್ರದಾಯ, ಪ್ರಕೃತಿಗಳಿಗೆ ಸಂಬಂಧಿಸಿದಂತೆ ಇನ್ನೊಂದು ಬಗೆಯಾಗಿ ಅವನ್ನು ಗುಂಪುಗೊಳಿಸಬಹುದು. ಮೂರನೆಯ ಅಥವಾ ನಾಲ್ಕನೆಯ ರೀತಿಯ ವರ್ಗೀಕರಣಕ್ಕೂ ಇಲ್ಲಿ ಅವಕಾಶ ಇದ್ದೇಇದೆ. ಜನಪದ ಗೀತಗಳು ಅನಕ್ಷರಸ್ಥ ಸಮಾಜದ ಕಾವ್ಯ ಮತ್ತು ಸಂಗೀತಗಳ ಸಮಾಗಮವಾಗಿವೆ. ವಾಕ್‌ಸಂಪ್ರದಾಯದಲ್ಲಿ ಉಳಿದು ಬಂದ ಈ ಪ್ರಕಾರದಲ್ಲಿ ಗೀತಗಳು ಹಾಗೂ ಲಾವಣಿಗಳು ಬಹು ಮುಖ್ಯವಾದ ವಿಭಾಗಗಳು. ಮೊದಲನೆಯದು ಭಾವಗೀತೆಯ ಸ್ವರೂಪದ್ದು: ಎರಡನೆಯದು ಕಥನ ನಿರೂಪಣೆಯದು. ಲಕ್ಷಿಸಬೇಕಾದ ಮಹತ್ವದ ವಿಚಾರವೆಂದರೆ ಹೇಗೆ ಅಕ್ಷರಸ್ಥ ಸಮಾಜದ ಸಾಹಿತ್ಯ ಸೃಷ್ಟಿ ವೈಯಕ್ತಿಕವೋ ಹಾಗೆ ಜನಪದ ಗೀತಗಳ ನಿರ್ಮಾಣ ತನ್ನ ಆರಂಭದಲ್ಲಿ ಸಾಮೂಹಿಕವಾಗಿದೆ. ಇವುಗಳ ನಿರ್ಮಾಣದಲ್ಲಿ ಯಾರು ಯಾವಾಗ ಹೇಗೆ ಭಾಗವಹಿಸಿದರು ಎಂದು ಹೇಳಲು ಬರುವುದಿಲ್ಲ. ಈ ಅಮರಗೀತಗಳು ಅಜ್ಞಾತ ಕವಿಗಳ ಸೃಷ್ಟಿಯಾಗಿವೆ. ಬಳಕೆಯಲ್ಲಿ ಮಾತ್ರ ವ್ಯಕ್ತಿಗತವಾಗುವುದು ಈ ಗೀತಗಳ ಮತ್ತೊಂದು ಮಹತ್ವದ ಅಂಶ. ಸಮಯ, ಸಂದರ್ಭ, ಕಟ್ಟುಕಟ್ಟಳೆಗಳಿಗೆ ಇವುಗಳ ಬಳಕೆ ಸೀಮಿತವಾಗುತ್ತದೆ. ಕೆಲವನ್ನು ಗಂಡಸರು ಮಾತ್ರ ಹಾಡಬಹುದು; ಇನ್ನು ಕೆಲವಕ್ಕೆ ಹೆಂಗಸರಷ್ಟೇ ಬಾಧ್ಯರು. ಸೋಬಾನೆಯ ಹಾಡುಗಳಂತಹ ಸಾಮಾಜಿಕ ಪದ್ಧತಿಯ ಹಾಡುಗಳು ತೀರ ಸೀಮಿತ ಬಳಕೆಗೆ ಒಳಗಾದವು. ಕ್ರಿಸ್ಮಸ್ ಕೆರಾಲಿನ ಗೀತಗಳು ಹೊಸವರ್ಷದ ಆಗಮನವನ್ನು ಸೂಚಿಸುವಾಗ ಮಾತ್ರ. ಮಲೆನಾಡಿನ ದೀಪ ಸಂಪ್ರದಾಯದ ಅಂಟಿಗೆ–ಪಂಟಿಗೆ ಹಾಡುಗಳು ಕೇಳಿಬರುವುದು ದೀಪಾವಳಿಯಲ್ಲಷ್ಟೆ. ಚಿಕ್ಕಮಕ್ಕಳ ಆಟದ ಹಾಡುಗಳನ್ನು ಮುಪ್ಪಿನಲ್ಲಿ ಯಾರು ಹಾಡುತ್ತಾರೆ? ಮಹಿಳೆಯರಿಗಾಗಿಯೇ ಮೀಸಲಾದ ಗೀತೆಗಳೂ ನಾನಾ ಗುಂಪುಗಳಲ್ಲಿ ಕಂಡುಬರುತ್ತವೆ. ಇದು ನಮ್ಮ ದೇಶದಲ್ಲಿ ಎಷ್ಟು ಸಹಜವೋ ಯುಗಸ್ಲಾವಿಯಾ ದೇಶಕ್ಕೂ ಅಷ್ಟೇ ಸಹಜ; ಆಫ್ರಿಕಾದ ತೀರಪ್ರದೇಶದ ನಾಡೊಂದರ ಪದ್ಧತಿಯೂ ಹೀಗೆಯೆ.

ಜೀವನದ ವಿವಿಧ ಘಟ್ಟಗಳು—ಬಾಲ್ಯ, ಯೌವನ, ಮುಪ್ಪುಗಳಿಗೆ ಸಂಬಂಧಿಸಿದಂತೆ ಈ ಗೀತಗಳ ಹರವು ಇದೆ. ಮದುವೆ ಮುಂಜಿಯಂತಹ ಸಾಮಾಜಿಕ ಕಟ್ಟು

ಪಾಡುಗಳಲ್ಲಿ ಈ ಗೀತಗಳು ಮಹತ್ತರದ ಪಾತ್ರವಹಿಸುತ್ತವೆ. ಮದುವೆಯ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು, ಗಂಡನ್ನೂ, ಗಂಡಿನ ಕಡೆಯವರನ್ನೂ ಜರಿದು ಹಾಡುವುದನ್ನು ನಾವೆಲ್ಲ ಬಲ್ಲೆವು. ಯುರೋಪಿನ ಹಲವು ಸಮಾಜಗಳಲ್ಲಿ ಈ ಪದ್ಧತಿ ಇನ್ನೂ ಜೀವಂತವಾಗಿದೆ. ಆಧುನಿಕ ಅರ್ಥದಲ್ಲಿ ಕವಿ ಗಮಕಿಯ ಮೂಲಕ ಸಹೃದಯನನ್ನು ಮುಟ್ಟುತ್ತಾನೆ; ಸಂಗೀತದ ವಿಷಯದಲ್ಲಾದರೆ ರಚನಕಾರ ಸಂಗೀತಗಾರನ ಮುಖಾಂತರ ಶ್ರಾವಕರನ್ನು ಮುಟ್ಟುತ್ತಾನೆ. ಜನಪದ ಗೀತಗಳ ವಿಚಾರದಲ್ಲಿ ಹೀಗಾಗದಿರುವುದು ಮೂರನೆಯ ಮಹತ್ವದ ಅಂಶವಾಗಿದೆ. ಇಲ್ಲಿ ಕಾವ್ಯ ಹಾಗೂ ಸಂಗೀತದ ಸಾರ್ಥಕತೆಯ ಮೂರು ಮಜಲಿನಲ್ಲಿಯೂ ನಮಗೆ ಕಂಡುಬರುವುದು ಇಡೀ ಒಂದು ಗುಂಪು ಅಷ್ಟೆ. ಆ ಗುಂಪೇ ಸೃಷ್ಟಿಗೂ, ಪ್ರಸಾರಕ್ಕೂ, ಆಸ್ವಾದನೆಗೂ ಕಾರಣ. ಬಹು ಸಂದರ್ಭಗಳಲ್ಲಿ ಈ ಗೀತಗಳ ರಚನೆಕಾರರು ಯಾರೆಂದು ತಿಳಿದಿರುವುದಿಲ್ಲ. ಕವಿಯ ಪ್ರತಿಭಾ ಮೂಸೆಯಲ್ಲಿ ಕಾವ್ಯ ಸೃಷ್ಟಿಯಾಗುವಂತೆ ಜನಪದಕಾವ್ಯ ಸೃಷ್ಟಿಯಾಗುವುದಿಲ್ಲ. ಜನಪದ ಕಾವ್ಯ ಬೆಳೆಯುತ್ತದೆ. ಸತತವಾಗಿ ಅದರ ಬದಲಾವಣೆ ನಡೆಯುತ್ತಾ ಹೋಗುತ್ತದೆ. ಒಟ್ಟಂದದಲ್ಲಿ ಈ ನಿರ್ಮಾಣಕಾರ್ಯ ಒಬ್ಬನದಲ್ಲ; ಹಲವರದು; ಒಂದು ಗುಂಪಿನದು.

ಒಂದು ಜನಪದ ಗುಂಪಿನ ಬಳಕೆಯಲ್ಲಿರುವ ಹಾಡುಗಳನ್ನು ಸಮಗ್ರವಾಗಿ ಸಂಗ್ರಹಿಸಿ, ವಿಶ್ಲೇಷಿಸಿ, ವರ್ಗೀಕರಿಸಿ ನೋಡಿದಾಗ ಆ ಗುಂಪಿನ ಜೀವನವಿಧಾನ, ಶ್ರದ್ಧೆ, ನಂಬಿಕೆ, ಆಚರಣೆಗಳ ನೈಜ ಪರಿಚಯ ನಮಗಾಗುತ್ತದೆ. ಛಂದಸ್ಸಿನ ವಿಚಾರದಲ್ಲಿ ಯಾವುದೇ ಭಾಷೆಯ ದೇಶೀ ಸಂಪತ್ತಾಗಿರುವ ಈ ಹಾಡುಗಳಲ್ಲಿ ಬಹುಪಾಲು ಏಕನಾದವಾಗಿರುತ್ತವೆ. ಪುನರಾವರ್ತನೆಗಳು ಮೊರೆಯುತ್ತವೆ. ವಾಕ್‌ಸಂಪ್ರದಾಯದ ಗೀತಗಳು ಇವಾಗಿರುವುದರಿಂದ ಪಾಠಾಂತರ-ರೂಪಾಂತರಗಳು ಎಲ್ಲಿಗಿಂತ ಇಲ್ಲಿ ಹೆಚ್ಚು ಸಂಭವ ಸಾಧ್ಯವಾಗುತ್ತವೆ.

ಜನಪದ ಕಾವ್ಯದಲ್ಲಿ ಲಾವಣಿ ಒಂದು ಪ್ರಮುಖ ವಿಧವೆಂದು ಆಗಲೇ ಹೇಳಿದೆ. ಇಲ್ಲಿ ಲಾವಣಿಯನ್ನು Ballad ಅರ್ಥದಲ್ಲಿ ಉಪಯೋಗಿಸಿದೆ. ಆಕ್ಸ್‌ಫರ್ಡ್ ಇಂಗ್ಲಿಷ್ ಅರ್ಥಕೋಶದಲ್ಲಿ ಕೊಡುವ ಅರ್ಥದಂತೆ ಅದು "a simple, spirited poem in short stanzas, narrating some popular Story." ಆದರೆ ಇದು ತೀರ ಸಂಕುಚಿತವಾದ ಅರ್ಥವೆಂಬುದನ್ನೂ, ಲಾವಣಿಯ ನೈಜ ಸ್ವರೂಪವನ್ನು ಅದು ಹೇಳುವುದಿಲ್ಲವೆಂಬುದನ್ನೂ ನಾವು ಗಮನಿಸಬೇಕು.[1] ಈ ಕಥನ ನಿರೂಪಕ ಲಾವಣಿ, ಸಾಹಿತ್ಯ ಚರಿತ್ರಕಾರರಿಗೆ ಒಂದು ತೆರನಾಗಿ ಕಂಡರೆ, ಜಾನಪದ ವಿದ್ವಾಂಸರಿಗೆ ಇನ್ನೊಂದು ತೆರನಾಗಿ ಕಾಣಿಸುತ್ತದೆ. ಮ್ಯಾಕ್ ಎಡ್ವರ್ಡ್ ಲೀಚ್ ಅವರ ಪ್ರಕಾರ ಇದು—ಒಂದು ನಿರೂಪಣೆ; ಈ ನಿರೂಪಣೆ ಹಾಡಲು ಬರುವಂಥದು; ವಸ್ತು, ಶೈಲಿ, ತಂತ್ರ, ಗುರಿಗಳಲ್ಲಿ ಅದು ಜಾನಪದೀಯ; ಒಂದು ಲಾವಣಿ ಒಂದೇ ವಸ್ತುವಿನ ಮೇಲೆ ಕೇಂದ್ರೀಕೃತವಾದುದು; ಅದು ವ್ಯಕ್ತಿಯನ್ನು ಕುರಿತದ್ದಲ್ಲ; ಅದರ ಕಥನಗತಿ ವೇಗವಾಗಿ

1. ಈ ಕುರಿತ ಚರ್ಚೆಗೆ ನೋಡಿ: Goswami, ibid.

ಸಂಭಾಷಣೆಗಳ ಮೂಲಕ ಮುಕ್ತಾಯದ ಕಡೆಗೆ ಧಾವಿಸುತ್ತಿರುತ್ತದೆ; ಎಲ್ಲ ಕಥನ **ವೃತ್ತಗಳಿಗೂ** ಸಾಮಾನ್ಯವಾದ ವಸ್ತು, ಪಾತ್ರ, ಆವರಣ, ಕ್ರಿಯೆಗಳು ಲಾವಣಿ**ಯಲ್ಲಿ**ಯೂ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಕೊನೆಯದಾದ ಕ್ರಿಯೆಯೇ ಲಾವಣಿಯ **ಜೀವಾಳ.** ಈ ಕ್ರಿಯೆಯಾದರೋ ಹೆಜ್ಜೆ ಹೆಜ್ಜೆಗೂ ನಾಟಕೀಯ.[1]

ಜಾನಪದ ಕ್ಷೇತ್ರದ ಆರಂಭದ ವಿದ್ವಾಂಸರಾದ ಗ್ರಿಮ್ ಮೊದಲಾದವರು ಜನಪದಗೀತೆ, ಲಾವಣಿ ಇವುಗಳ ನಡುವಿನ ಅಂತರವನ್ನು ಸ್ಪಷ್ಟಪಡಿಸದೆ ಹೋದುದರಿಂದ ಸಾಕಷ್ಟು ಗೊಂದಲಕ್ಕೆ ಕಾರಣವಾಗಿದೆ. ಅವರು ಲಾವಣಿಗಳಲ್ಲಿ ಹಿಂದಿನಿಂದಲೂ ಕೂಡಿಕೊಂಡು ಬಂದ ಸಂಪ್ರದಾಯವನ್ನು ಗಮನಿಸಿ, ಪ್ರಾಚೀನ ಜನಪದ ಗೀತೆಗಳ ಅಧ್ಯಯನದಿಂದ ಲಭಿಸಿದ ತಿಳುವಳಿಕೆಗಳನ್ನೆಲ್ಲ ಅದಕ್ಕೆ ಆರೋಪಿಸಿದರು. ಮೊದಲಿಗರು ಇದನ್ನು ಒಂದು ಸಾಮೂಹಿಕ ಸೃಷ್ಟಿಯೆಂದು ಪರಿಗ್ರಹಿಸಿದರು. ಆಮೇಲೆ ಬಂದವರು ಇದನ್ನು ಸ್ವಲ್ಪಮಟ್ಟಿಗೆ ಮಾರ್ಪಡಿಸಿಕೊಂಡು. ಇದು ಸಾಮೂಹಿಕ ಸೃಷ್ಟಿಯಾದರೂ, ಒಬ್ಬ ನಾಯಕನ ನೇತೃತ್ವದಲ್ಲಿ ಆದ ರಚನೆಯೆಂದು ಹೇಳಿದರು. ಜನಪದ ಗುಂಪಿನ ಕೈವಾಡವೂ ಇತ್ತೆಂಬ ವಿಚಾರವನ್ನು ಅವರು ಕಡೆಗಣಿಸಲಿಲ್ಲ. ಆದರೆ ಇತ್ತೀಚಿನ ವಿದ್ವಾಂಸರುಗಳು ಮಾತ್ರ ಲಾವಣಿಗಳು ಯಾವನೋ ಒಬ್ಬನ ಸೃಷ್ಟಿಯೆಂದು ಹೇಳತೊಡಗಿದ್ದಾರೆ. ಅವರ ಅಭಿಪ್ರಾಯದಂತೆ, ಲಾವಣಿ ತೀರ ಪ್ರಾಚೀನ ಸೃಷ್ಟಿಯಲ್ಲ; ಮಧ್ಯಕಾಲೀನ ಬೆಳವಣಿಗೆ. ಲಾವಣಿ ತುಂಬ ಕಲಾತ್ಮಕವಾದ ಹಾಗೂ ಕ್ಲಿಷ್ಟತರವಾದ ಸಾಹಿತ್ಯ ಪ್ರಕಾರ; ಸಂಗೀತವೂ ಅದರೊಂದಿಗೆ ಮೇಳವಿಸಿದೆ—ಈ ಎಲ್ಲ ಕಾರಣಗಳೂ ಲಾವಣಿಯ ಏಕ ಕರ್ತೃತ್ವವನ್ನು ದೃಢಪಡಿಸುತ್ತವೆಂದು ಈ ವಿದ್ವಾಂಸರ ಅಭಿಮತ. ಲಾವಣಿಯ ನಿರ್ಮಾಣ ಯಾವನೋ ಒಬ್ಬನಿಂದ ಆದೊಡನೆಯೇ ಜನಪದ ಅದನ್ನು ತನ್ನ ಕೈಗೆತ್ತಿಕೊಂಡಿತು. ಕಾಲಕಳೆದು ಬಾಯಿಂದ ಬಾಯಿಗೆ ಪ್ರಸರಿಸಿದಂತೆಲ್ಲ ಅವು ಹಿಗ್ಗಿದವು, ಬೆಳೆದವು, ಬದಲಾದವು ರಚಿಸಿದವನ ಹೆಸರನ್ನು ಹೇಳಿಕೊಳ್ಳುವ ಲಾವಣಿಗಳು ಮಾತ್ರ ತೀರ ಈಚಿನವು ಎಂಬುದು ಗಮನಾರ್ಹ.

ಲಾವಣಿಯ ಪುನಶ್ಚೇತನ ಆಧುನಿಕ ರಾಷ್ಟ್ರೀಯತೆಯ ಒಂದು ದ್ಯೋತಕವಾಗಿದೆ. ರಷ್ಯಾ ಚೀನಾದಂಥ ದೇಶಗಳಲ್ಲಿ ಲಾವಣಿಯನ್ನು ಅತ್ಯಂತ ಶಕ್ತಿಶಾಲಿಯಾದ, ಸಮರ್ಪಕವಾದ ಪ್ರಸಾರಸಾಧನವನ್ನಾಗಿ ಬಳಸಿಕೊಂಡಿದ್ದಾರೆ.[2] ನಮ್ಮಲ್ಲಿಯೂ ಲಾವಣಿ

---

1. *Standard Dictionary of Folklore, Mythology and Legend*, pp. 106-111.

2. Dorson, Richard. M., "Folklore and the NDEA", *Journal of American Folklore* LXXV (April-June 1962), pp. 160–164: "Folklore is one of the most powerful propoganda weapons of the Soviet Union as it was of the Third Reich···The statellite countries are fast copying the strategy of the Soviet folklorists in using folklore to strengthen Communism...Communist China is employing folklore in its antiwestern indoctrination..."

ಆಗೊಮ್ಮೆ ಈಗೊಮ್ಮೆ ಈ ದಿಕ್ಕಿಗೆ ತಲೆಹಾಕುವುದನ್ನು ನಾವು ಬಲ್ಲೆವು. ರಾಷ್ಟ್ರೀಯ ಯೋಜನೆಗಳ ಯಶಸ್ಸನ್ನು ಕುರಿತ ಲಾವಣಿಗಳನ್ನೂ, ಚುನಾವಣಾ ಪ್ರಚಾರದ ಲಾವಣಿಗಳನ್ನೂ ನಾವು ಈಚಿನ ವರ್ಷಗಳಲ್ಲಿ ಕೇಳುತ್ತಿದ್ದೇವೆ.

ಜನಪದ ಕಥೆಯಲ್ಲಿ ನಾವು ಗುರುತಿಸುವ ಕೆಲವು ಲಕ್ಷಣಗಳೇ ಲಾವಣಿಯಲ್ಲಿಯೂ ಕಂಡುಬರುತ್ತವೆ. ಇದೂ ಕೂಡ ಕಥನ ನಿರೂಪಣೆಯಾಗಿರುವುದೇ ಅದರ ಕಾರಣ. ಲಾವಣಿಗಳ ವರ್ಗೀಕರಣ ಪ್ರಧಾನವಾಗಿ ಅವರ ವಸ್ತುವನ್ನೇ ಆಧರಿಸಿರುವಂಥದು. ಪೌರಾಣಿಕ, ಚಾರಿತ್ರಿಕ, ವಾಸ್ತವಿಕ, ವಿಡಂಬನಾತ್ಮಕ ಹಾಗೂ ಮಾಂತ್ರಿಕ ಎಂದು ಅವನ್ನು ಸಾಮಾನ್ಯವಾಗಿ ಐದು ಭಾಗಮಾಡಬಹುದು. ಇವುಗಳಲ್ಲಿ ಕೊನೆಯದಾದ ಮಾಂತ್ರಿಕ (magic) ವರ್ಗದ ಲಾವಣಿಗಳೇ ಅತ್ಯಂತ ಸ್ವಾರಸ್ಯವೂ ಕುತೂಹಲಕರವೂ ಆಗಿದೆ. ಇವು ಶುದ್ಧ ಜಾನಪದಗಳೇ ಆಗಿರುವುದರಿಂದ ಇವನ್ನು ಸುಲಭವಾಗಿ ಜನಪದ ಕಥೆಗಳ ಜೊತೆಗೆ ಸಮೀಕರಿಸಬಹುದಾಗಿದೆ; ಆಶಯಗಳನ್ನು ಹೋಲಿಸಬಹುದಾಗಿದೆ; ಲಾವಣಿಗಳ ತಾಂತ್ರಿಕ ಲಕ್ಷಣಗಳಲ್ಲಿ ನಾನಾ ಬಗೆಯ ಪುನರಾವರ್ತನೆಗಳು ಮಹತ್ವದ್ದಾಗಿವೆ.

ಜನಪದ ಸಾಹಿತ್ಯದ ಇನ್ನೆರಡು ಅಂಗಗಳಾದ ಗಾದೆಗಳ ಹಾಗೂ ಒಗಟುಗಳ ಬಗೆಗೆ ಕೆಲವು ಮಾತುಗಳನ್ನು ಹೇಳಿ ಈ ಪ್ರಬಂಧವನ್ನು ಮುಗಿಸಬಹುದೆಂದು ತೋರುತ್ತದೆ. ಗಾದೆಯ ಬಗೆ ಇರುವ ಒಂದು ಇಂಗ್ಲಿಷ್ ಗಾದೆಯಂತೆ ಅದು "The wisdom of many and the wit of one." ಆದ್ದರಿಂದಲೇ ಗಾದೆ ವೇದಕ್ಕೆ ಸಮ! ಗಾದೆ ಎಷ್ಟೋ ಸಲ ಸಾಮಾನ್ಯವಾದ ಹೇಳಿಕೆಯು ಮಾತಾಗಬಹುದು. ಸಂಪ್ರದಾಯದಲ್ಲಿಯೂ ಸಾಹಿತ್ಯದಲ್ಲಿಯೂ ಕಂಡುಬರುವ ವಿಲಕ್ಷಣ ಮಾತುಗಾರಿಕೆಯೇ ಗಾದೆಯಾಗಿ ಮಾರ್ಪಡಬಹುದು. ಎಷ್ಟೋ ಗಾದೆಗಳು ಬರಿಯ ಉಪಮೆಗಳಾಗಿರಬಹುದು. ಶೈಲಿಗೆ ಸಂಬಂಧಿಸಿದಂತೆ ಗಾದೆಗಳ ತಂತ್ರ ನೇರ, ಸರಳ, ವೈದೃಶ್ಯ, ಯಮಕ, ಪ್ರಾಸ, ಒಳಪ್ರಾಸ, ಪುನರಾವರ್ತನೆ ಎದ್ದುತೋರುವ ಲಕ್ಷಣಗಳು. ಜಾನಪದದ ಸಾಮಾನ್ಯ ಲಕ್ಷಣವಾದ ವ್ಯತ್ಯಯ (variation) ಗಾದೆಗಳಲ್ಲೂ ಹೇರಳವಾಗಿ ಕಾಣಿಸುತ್ತದೆ. ವೈದ್ಯಕೀಯ ಗಾದೆಗಳು, ಹವಾಮಾನದ ಗಾದೆಗಳು, ಕಾನೂನಿನ ಗಾದೆಗಳು, ಆರೋಗ್ಯದ ಸೂಚನೆಗಳನ್ನೂ, ಮುಂಜಾಗ್ರತೆಯ ಎಚ್ಚರವನ್ನೂ, ಉಣಿಚಿಕೊಳ್ಳುವ ಜಾಣ್ಮೆಯನ್ನೂ ಹೇಳುತ್ತವೆ. ಹೀಗೆ ಬದುಕಿನ ಎಲ್ಲ ವಿಷಯಗಳಲ್ಲೂ ಗಾದೆ ಇಣಿಕುಹಾಕುತ್ತದೆ. ಚಿಕ್ಕದರಲ್ಲಿ ದೊಡ್ಡದನ್ನು ಕಾಣುವ ಮಹಾ ಸಾಹಸಮಾಡುತ್ತದೆ. ಆದರೂ ಅದರ ಉಗಮ ಇನ್ನೂ ಅಸ್ಪಷ್ಟವಾಗಿದೆ. ಆದರೆ ಒಂದು ಗುಂಪಿನ ಜಾಣ್ಮೆ, ಜೀವನಾನುಭವ, ಅಭಿವ್ಯಕ್ತಿಯ ನವುರು ಜನಪದ ಸಾಹಿತ್ಯದ ಮಿಕ್ಕೆಲ್ಲೂ, ಗಾದೆಗಳಲ್ಲಿಯ ಹಾಗೆ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಏಕೆಂದರೆ ಗಾದೆ ವಿಶಾಲವಾದ ಜೀವನಾನುಭವದ ಆಧಾರದಿಂದ ರೂಪುಗೊಂಡ ಸಂಕ್ಷಿಪ್ತ ಅಭಿವ್ಯಕ್ತಿಯಾಗಿದೆ.

ಒಗಟುಗಳೆಂದರೆ ಸಾಮಾನ್ಯವಾಗಿ ಮನರಂಜನೆಗಾಗಿ ಪದಗಳ ಮೇಲೆ ನಿರ್ಮಿತವಾದ ಸಮಸ್ಯೆಯೆಂಬ ಅಭಿಪ್ರಾಯವಿದೆ. ಆದರೆ ಇದು ಪ್ರಾಚೀನವಾದ ಸುವ್ಯವಸ್ಥಿತ

ಗೊಂಡ ಆಲೋಚನೆಯು ಫಲವಾಗಿದೆ. ಇದು ಪುರಾಣ, ನೀತಿಕಥೆಗಳು, ಗಾದೆಗಳಿಗೆ ಸರಿಸಮನಾದುದು. ಸಿ. ಆರ್. ಪಾಟರ್ ಅವರ ಅಭಿಪ್ರಾಯದಲ್ಲಿ ವಾಕ್‌ಸಂಪ್ರದಾಯದಲ್ಲಿ ಒಗಟುಗಳೇ ಎಲ್ಲಕ್ಕಿಂತ ಮೊದಲು. ಏಕೆಂದರೆ ಅವು "essentially metaphors, and metaphors are the primary mental processes, comparison and the perception of likeness and differences."[1]

ಒಗಟುಗಳ ಪ್ರಧಾನ ಗುರಿ ಬುದ್ಧಿಯ ಕಸರತ್ತು; ಬೋಧನೆ, ಜೊತೆಗೆ ಅವುಗಳಿಂದ ಕಾರ್ಯನಿರ್ವಹಣೆಯೂ ನಡೆಯುತ್ತದೆ. ಮಳೆ ಬರಿಸುವ ವೇಳೆಯಲ್ಲಿ ಒಗಟು ಒಡ್ಡುವ ಸಂಪ್ರದಾಯಗಳನ್ನು ಫ್ರೇಜರ್ ತನ್ನ *Golden Bough* ಗ್ರಂಥದಲ್ಲಿ ನಿರೂಪಿಸಿದ್ದಾನೆ.[2] ಬೆಳೆಯನ್ನು ರಕ್ಷಿಸುವ ಅಥವಾ ನಾಶಪಡಿಸುವ ಮೋಹಿನೀತಂತ್ರ ಒಗಟುಗಳಿವೆಯೆಂಬುದು ಅನೇಕ ಜನಾಂಗಗಳ ನಂಬಿಕೆಯಾಗಿದೆ. ಮದುವೆಯ ಸಮಾರಂಭದಲ್ಲಿ ಒಗಟುಗಳನ್ನು ಕೇಳುವುದೂ ಅವನ್ನು ಬಿಡಿಸುವುದೂ ಲೋಕಸಾಮಾನ್ಯವಾದ ಸಂಪ್ರದಾಯವಾಗಿದೆ. ಈ ಒಗಟನ್ನು ಬಿಡಿಸಬಲ್ಲವರು ಬದುಕಿನ ಒಗಟುಗಳನ್ನೂ ಬಿಡಿಸುತ್ತಾರೆಂಬುದೇ ಇಲ್ಲಿನ ತಾತ್ವಿಕ ಅರ್ಥ.

ಜನಪದ ಸಾಹಿತ್ಯದ ಅಧ್ಯಯನದಲ್ಲಿ ಅತ್ಯಂತ ಮಹತ್ವಪೂರ್ಣವಾದ ಎರಡು ವಿಚಾರಗಳ ಬಗೆಗೆ ನಾನು ಈ ಸಂದರ್ಭದಲ್ಲಿ ಹೇಳಬೇಕು: ಒಂದು motif; ಇನ್ನೊಂದು type. ಸ್ಥೂಲವಾಗಿ motif ಕಥೆಯ ವಸ್ತುವನ್ನು ಕುರಿತದ್ದು; type ಅದರ ತಾಂತ್ರಿಕ ಸ್ವರೂಪವನ್ನು ಕುರಿತದ್ದು ಎಂದು ಇಟ್ಟುಕೊಳ್ಳಬಹುದು. ಜಾನಪದದ ಒಂದು ಅಂಶದ ಕನಿಷ್ಠ ಘಟಕ motif–**ಆಶಯ**. ಈ ತತ್ವ ಮುಖ್ಯವಾಗಿ ಕಥನ ನಿರೂಪಣೆಗೆ ಸಂಬಂಧಿಸಿದ್ದಾಗಿದೆ. ಸಾಮಾನ್ಯವಾಗಿ ಅಸಾಮಾನ್ಯವಾದ ವಿಚಾರಗಳಿಗೇ ಇದು ಅನ್ವಯಿಸುತ್ತದೆ. 'ತಾಯಿ' motif ಆಗುವುದಿಲ್ಲ; ಆದರೆ 'ಮಲತಾಯಿ' ಒಂದು 'ಮೋಟಿಫ್' "ಬಟ್ಟೆಹಾಕಿಕೊಂಡು ರಾಮಣ್ಣ ಪೇಟೆಗೆ ಹೋದ" ಎಂಬುದು ಸಾಮಾನ್ಯವಾದ ಹೇಳಿಕೆ; ಸಾಮಾನ್ಯವಾದ ನಡವಳಿಕೆ, ಆದರೆ, "ಕಿಂದರಿಜೋಗಿ ಮಾಯದ ಟೋಪಿಯನ್ನು ಧರಿಸಿ, ಮಂತ್ರದ ಚಾಪೆಯ ಮೇಲೆ ಕುಳಿತು ಏಳು ಸಮುದ್ರಗಳ ಆಚೆ ಮಾಯಾನಗರಿಗೆ ನೆಗೆದನು" ಎಂಬ ಹೇಳಿಕೆಯಲ್ಲಿ ಕನಿಷ್ಠ ನಾಲ್ಕು ಆಶಯಗಳಿವೆ: ಮಾಯದ ಟೋಪಿ, ಮಂತ್ರದ ಚಾಪೆ, ಸಾಹಸದ ನೆಗೆತ, ಯಾರೂ ಕಾಣದ ಮಾಯಾನಗರಿ. Type ಎನ್ನುವುದು ಇಡೀ ಒಂದು **ವರ್ಗ** ಅಥವಾ ಒಂದು ಕಥನ **ಮಾದರಿ**. ಒಂದು ಕಥೆ ಎಷ್ಟೇ ಚಿಕ್ಕದಿರಲಿ, ದೊಡ್ಡದಿರಲಿ ಅದು ತನ್ನಷ್ಟಕ್ಕೆ ಒಂದು ಸ್ವತಂತ್ರ ನಿರೂಪಣೆಯಾಗಿದ್ದರೆ ಒಂದು type. ದೀರ್ಘವಾದ ಕೆಲವು ಕಥೆಗಳಲ್ಲಿ

---

1. *Standard Dictionary of Folklore, Mythology and Legend*, p. 938.

2. Frazer, James, *Golden Bough*, III, p. 154, Quoted by Potter, *ibid*.

ಹಲವಾರು motif ಇರಬಹುದು; ಚಿಕ್ಕದಾದ ಒಂದು ಕಥೆಯಲ್ಲಿ ಒಂದೇ ಒಂದು motif. ಇದರಲ್ಲಿ motif ಹಾಗೂ type ಒಂದೇ. ವಿವರಗಳನ್ನು ಚರ್ಚಿಸುವುದಕ್ಕಿಂತ ಇವುಗಳ ವಿಷಯದಲ್ಲಿ Aarne ಮತ್ತು Thompson ಅವರ *Type of the Folktale* ಹಾಗೂ ಸ್ಟಿತ್ ಥಾಂಸನ್ ಅವರ ಮೇರು ಕೃತಿ *Motif Index of Folk Literature* ಇವೆರಡನ್ನು ತಮ್ಮ ಗಮನಕ್ಕೆ ಸೂಚಿಸಬಯಸುತ್ತೇನೆ. ಜಾನಪದದ ವಿದ್ಯಾರ್ಥಿಗಳಿಗೆ ಅವು ಅನಿವಾರ್ಯವಾದ ಗ್ರಂಥಗಳಾಗಿವೆ.[1]

ಜನಪದ ಸಮಾಜ ಗ್ರಾಮೀಣ ಸಮಾಜ, ನಗರದಿಂದ ಭಿನ್ನವಾದುದು. ಜನಪದ ಜೀವನ ನಿರಕ್ಷರಸ್ಥ ಸಮಾಜದ ಜೀವನ; ಅಕ್ಷರಸ್ಥ ಆಧುನಿಕ ಸಮಾಜದಿಂದ ಬೇರೆಯಾದುದು. ಇದೇ ಕಾರಣಗಳಿಂದ ಜನಪದಸಾಹಿತ್ಯ ಸಾಮಾನ್ಯ ಅರ್ಥದ ಸಾಹಿತ್ಯದಿಂದ ಉದ್ದೇಶದಲ್ಲಿ, ವ್ಯಾಪ್ತಿಯಲ್ಲಿ, ಸ್ವರೂಪದಲ್ಲಿ ಪ್ರತ್ಯೇಕವಾದುದು. ಇವುಗಳಲ್ಲಿ ಉದ್ದಕ್ಕೂ ವೈದೃಶ್ಯ ಎದ್ದು ಕಾಣುತ್ತದೆ. ಅದರ ಸ್ಥೂಲ ಸ್ವರೂಪವನ್ನು ಕಂಡುಕೊಳ್ಳುವ ಪ್ರಯತ್ನವಷ್ಟನ್ನೇ ಈ ಪ್ರಬಂಧದಲ್ಲಿ ಕೈಗೊಂಡಿದೆ. ಭಾಷೆ, ಶೈಲಿ ಮುಂತಾದ ವಿಷಯಗಳ ವಿವೇಚನೆಯನ್ನು ಇಲ್ಲಿ ಉದ್ದೇಶಿಸಿಲ್ಲ.

ಜನಪದ ಜೀವನದ ಮೇಲೆ ನಗರೀಕರಣದ ಪ್ರಭಾವ ಬಿದ್ದಷ್ಟೂ, ಆಧುನಿಕ ವಿದ್ಯಾಭ್ಯಾಸದ ಪರಿಚಯ ಹೆಚ್ಚಿದಷ್ಟೂ ಜಾನಪದದ ಮೂಲ ಸೊಗಸು, ದೇಸೀ ಸೊಗಡು ಕಡಮೆಯಾಗುತ್ತಾ ಹೋಗುತ್ತದೆ. ಹೊಸ ಜನಪದ ಪರಂಪರೆ ಆರಂಭವಾಗುವ ಮೊದಲು ಪ್ರಾಚೀನ ಪರಂಪರೆಯನ್ನು ಉಳಿಸಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

---

1. Antti Aarne, Stith Thompson, *Types of the Folk–Tale*, FFC, 74, Helsinki, 1928: Stith Thompson, *Motif Index of Folk Literature* (New edition) Copenhagen and Bloomington, Indiana, 1955–58.

ಡಾ. ಅರವಿಂದ ಮಾಲಗತ್ತಿ

FOLK–FOLKLORE : ದೇಶೀವಾದದ ಹಿನ್ನೆಲೆಯಲ್ಲಿ ಮರುಚಿಂತನೆ ಹಾಗೂ ಜಾಗತೀಕರಣ ಮತ್ತು ಉದಾರೀಕರಣ

Folk ಎಂದರೆ 'ಜನಪದ', Folklore ಎಂದರೆ 'ಜಾನಪದ' ಎಂದು ಆಂಗ್ಲಪದಗಳಿಗೆ ಸಂವಾದಿಯಾಗಿ ಬಳಸುತ್ತಿದ್ದೇವೆ. ಈ ಶಬ್ದಗಳು (ಜನಪದ-ಜಾನಪದ) ಕನ್ನಡದಲ್ಲಿ ಮೊದಲೇ ಬಳಕೆಯಲ್ಲಿದ್ದರೂ ನಿಗದಿತವಾದ ಅರ್ಥದಲ್ಲಿ ಬಳಕೆಯಲ್ಲಿರಲಿಲ್ಲ. ಡಾ. ಹಾ. ಮಾ. ನಾಯಕರು ನಿಗದಿತ ಅರ್ಥದಲ್ಲಿ ಬಳಕೆಗೆ ಮುಂದು ಮಾಡಿದರು.

Folk ಎಂದರೆ, ಆಂಗ್ಲ ಪರಿಭಾಷೆಯಲ್ಲಿ 'ಜನರು' ಎಂದರ್ಥ. lore ಎಂದರೆ, ತಿಳಿವು. ಜ್ಞಾನ, ಕಲಿಕೆ ಎಂದರ್ಥ. Folklore ಎಂದರೆ, 'ಜನಪ್ರಿಯ ಪ್ರಾಚೀನ ನಡಾವಳಿಗಳು' ಎಂದರ್ಥ. ವಿಲಿಯಂ ಜಾನ್ ಥಾಮ್ಸ್ ೧೮೪೬ರಲ್ಲಿ 'popular antiquities' ಎಂಬುದಕ್ಕೆ ಪರ್ಯಾಯವಾಗಿ ಟ್ಯುಟಾನಿಕ ಮೂಲದ ಶಬ್ದ 'Folklore ಎಂಬ ಪದವನ್ನು ಬಳಕೆಗೆ ತಂದನು.

೧೯೬೦ರ ದಶಕದಲ್ಲಿ ಭಾರತದಲ್ಲಾಗಲೇ Folk ಮತ್ತು Folklore ಎಂಬ ಪದಕ್ಕೆ ಸಂವಾದಿಯಾದ ತಮ್ಮದೇ ಭಾಷೆಯಲ್ಲಿಯ ಶಬ್ದಗಳ ಹುಡುಕಾಟಕ್ಕೆ ತೊಡಗಿದ್ದರು. ಬಹುಶಃ ಹಿಂದೀ ವಿದ್ವಾಂಸರಾದ ಡಾ. ಪಾಂಡೆ ಮತ್ತು ಡಾ. ಸುನೀತಿಕುಮಾರ ಚಟರ್ಜಿ ಅವರ ಆಲೋಚನೆಯ ಪ್ರೇರಣೆಯಿಂದ ಡಾ. ಹಾ. ಮಾ. ನಾಯಕರು ಜನಪದ–ಜಾನಪದ ಎಂಬ ಶಬ್ದಗಳನ್ನು ನಿಗದಿತ ಅರ್ಥದಲ್ಲಿ ಬಳಕೆಗೆ ತಂದರೆನಿಸುತ್ತದೆ.

ಜನಪದ–ಜಾನಪದ ಮರು ವ್ಯಾಖ್ಯಾನ ವಿಚಾರ :

ಜನಪದ–ಜಾನಪದ ಎಂಬ ಶಬ್ದಗಳ ಬಳಕೆ ನಮ್ಮಲ್ಲಿ ಆರಂಭವಾಗಿ ಮೂವತ್ತು ವರ್ಷಗಳು ಸಂದರೂ ಈ ಶಬ್ದಗಳ ಬಳಕೆಯ ಔಚಿತ್ಯವನ್ನು ಪ್ರಶ್ನಿಸಿ ಸಾಕಷ್ಟು ಜನ ಅಧ್ಯಯನಕಾರರು ಬರೆದಿದ್ದಾರೆ ಮತ್ತು ಇತ್ತೀಚೆಗೂ ಬರೆಯುತ್ತಿರುವುದನ್ನು ಗಮನಿಸುತ್ತೇವೆ. ಇನ್ನೂ ಕೆಲವರು ಯಾವ ಶಬ್ದವಾದರೇನು? ಬಳಸುವುದಕ್ಕೆ ಒಂದು ಪದವಿದ್ದರೆ ಮುಗಿಯಿತು ಎಂದು ಮೌನವಾಗಿ ಮುಂದಿನ ಅಧ್ಯಯನಕ್ಕೆ ತೊಡಗಿದ್ದಾರೆ.

ಮತ್ತೆ ಕೆಲವರು ಮುಂದಿನ ಅಧ್ಯಯನಕ್ಕೆ ಪೂರಕವಾಗಿ ಹೊಸ ಪರಿಕಲ್ಪನೆಗೆ ಸಂಬಂಧಿಸಿದಂತೆ ಹೊಸ ಶಬ್ದಗಳ ಹುಡುಕಾಟ ಮತ್ತು ಅನ್ವಕಾರ್ಥದ ಶಬ್ದಗಳ ಶೋಧಕ್ಕೆ ತೊಡಗಿರುವುದು ಕಂಡುಬರುತ್ತದೆ.

ಇಂಥ ಸಂದರ್ಭದಲ್ಲಿ ಈ ಶಬ್ದಗಳ ಕುರಿತು ಪ್ರಸ್ತಾಪಿಸಲು ಆರಂಭಿಸಿದ್ದೇನೆಂದರೆ ನಾನೂ ಜನಪದ ಮತ್ತು ಜಾನಪದ ಎಂಬ ಶಬ್ದಗಳ ಔಚಿತ್ಯವನ್ನು ಕುರಿತು ಚರ್ಚಿಸಲು ಮುಂದಾಗುತ್ತಿದ್ದೇನೆಂದಲ್ಲ. ನಾನು ಮೊದಲು ಸ್ಪಷ್ಟಪಡಿಸುವುದೇನೆಂದರೆ, ಈ ಪದಗಳ ಔಚಿತ್ಯ ಅಥವಾ ಬದಲಾವಣೆಯ ಅಗತ್ಯದ ಕುರಿತು ಚರ್ಚಿಸುವುದಲ್ಲ. ಅಧ್ಯಯನದ ಸಂದರ್ಭದಲ್ಲಿ ಈ ಶಬ್ದಗಳನ್ನು ಒಪ್ಪಿಕೊಂಡು ಅದರ ಮುಂದಿನ ಸಾಧ್ಯಾಸಾಧ್ಯತೆಗಳನ್ನು ಕುರಿತು ಚರ್ಚಿಸುವುದಾಗಿದೆ. ಎಂದರೆ ಈ ಶಬ್ದಗಳ ಅರ್ಥದ ಔಚಿತ್ಯ ಎಷ್ಟು? ಎಂದು ಚರ್ಚಿಸುವುದು ನನ್ನ ಮುಖ್ಯ ಉದ್ದೇಶವಾಗಿದೆ. ಅಧ್ಯಯನ ಮತ್ತು ಸಂಶೋಧನೆಯ ಸಂದರ್ಭದಲ್ಲಿ ಯಾವುದೇ ಒಂದು ಶಬ್ದದ ಪರಿಭಾಷೆಯ ಅರ್ಥದಲ್ಲಿ ಕೂದಲೆಳೆಯಷ್ಟು ಬದಲಾವಣೆಯಾದರೂ ಆಯಾ ಕ್ಷೇತ್ರದ ವಿಮರ್ಶೆ, ಅಧ್ಯಯನ ಮತ್ತು ಸಂಶೋಧನೆಯಲ್ಲಿ ಮಹತ್ತರವಾದ ಬದಲಾವಣೆಯನ್ನೇ ತಂದು ಬಿಡುತ್ತದೆ ಎಂದು ನಂಬಿಕೊಂಡವನು—ನಾನು. ಈ ಹಿನ್ನೆಲೆಯಲ್ಲಿ ಈ ಶಬ್ದಗಳ ಅರ್ಥ ಔಚಿತ್ಯದ ಕುರಿತು ಚರ್ಚಿಸುವುದು ಮೊದಲನೆಯ ವಿಚಾರವಾಗಿದೆ ಮತ್ತು ನಮ್ಮ ದೇಶದ ಅಥವಾ ಕರ್ನಾಟಕದ ಬದುಕಿನ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಜನಪದ-ಜಾನಪದ ಪದಗಳ ಅರ್ಥವನ್ನು ಗುರುತಿಸಿಕೊಳ್ಳುವುದು, ಒಂದು ನೆಲೆಯಲ್ಲಿ Identity ಪ್ರಶ್ನೆಯಾಗಿದೆ. ಈ ಹಿನ್ನೆಲೆಯಲ್ಲಿಯೇ ಜಾಗತೀಕರಣದಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳುವ ಹಾಗೂ ಉದಾರೀಕರಣದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಿದ್ಧತೆಗೆ ಈ ಚಿಂತನೆ ನಾಂದಿ ಅಥವಾ ಅಡಿಗಲ್ಲಾಗುವುದೆಂದು ಭಾವಿಸುತ್ತೇನೆ.

'ಜನಪದ' ಮತ್ತು 'ಜಾನಪದ' ಎಂಬ ಶಬ್ದಗಳು ಕನ್ನಡದ ಶಬ್ದಗಳೇ ಆಗಿದ್ದರೂ ೧೯೬೭ರಿಂದ ಇಂದಿನವರೆಗೂ ಆಂಗ್ಲ **ಪರಿಭಾಷೆಯ ಅರ್ಥದಲ್ಲಿ ಬಳಸುತ್ತಿದ್ದೇವೆಯೇ ವಿನಃ ಕನ್ನಡದ ಪರಿಭಾಷೆಯ ಅರ್ಥದಲ್ಲಿ ಬಳಸುತ್ತಿಲ್ಲ** ಎನ್ನುವುದನ್ನು ಲಕ್ಷಿಸಬೇಕು. ಇದರರ್ಥ ಕನ್ನಡದ ಮೊದಲಿನ ಪರಿಭಾಷೆಯ ಅರ್ಥದಲ್ಲಿ (ದೇಶ, ರಾಷ್ಟ್ರ, ಗ್ರಾಮ) ಬಳಸಬೇಕಿತ್ತು ಅಥವಾ ಇನ್ನು ಮುಂದೆಯಾದರೂ ಹಾಗೆ ಬಳಸಬೇಕು ಎನ್ನುವ ನೆಲೆಯಲ್ಲಿ ಈ ಮಾತನ್ನು ಹೇಳುತ್ತಿಲ್ಲ. ಬದಲಾಗಿ ಈ ಶಬ್ದಗಳನ್ನು **ನಮ್ಮದೇ ಆದ ವಿಷಯ ವಸ್ತುವಿನ ಮೇಲಿಂದ ಅರ್ಥೈ**ಸುವ **ಅಗತ್ಯವಿದೆ** ಎನ್ನುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿರುವೆ.

ನಾವು ಅನ್ಯತ್ವದ ಅನುಕರಣೆಯಲ್ಲಿ ನಿಸ್ಸೀಮರು. ಅರ್ಥೈಸುವಿಕೆಯಲ್ಲಿ, ವಿಮರ್ಶಿಸುವಿಕೆಯಲ್ಲಿ ಸ್ವಲ್ಪ ಮಂದಗತಿಯುವರು. ಡಾ. ಹಾ. ಮಾ. ನಾಯಕರು Folklore ಎಂಬ ಪದಕ್ಕೆ ಪರ್ಯಾಯವಾಗಿ 'ಜನಪದ ವಿಜ್ಞಾನ'ವೆಂದೂ ಕರೆಯಬಹುದೆಂದು ಗುರುತಿಸುತ್ತ ಅಪ್ರತ್ಯಕ್ಷವಾಗಿ 'ಜಾನಪದ' ಎಂಬ ಪದವನ್ನೇ ಸಮರ್ಥಿಸುತ್ತ

ಇಂದಿನ ಬಳಕೆಯಲ್ಲಿ ವಿಜ್ಞಾನ ಪಡೆದುಕೊಂಡಿರುವ ಅರ್ಥವನ್ನು 'ಜನಪದ ವಿಜ್ಞಾನ' ವೆಂದೂ ಕರೆಯಬಹುದೆಂದು ಗುರುತಿಸುತ್ತ, ಅಪ್ರತ್ಯಕ್ಷವಾಗಿ 'ಜಾನಪದ' ಎಂಬ ಪದವನ್ನೇ ಸಮರ್ಥಿಸುತ್ತ 'ಇಂದಿನ ಬಳಕೆಯಲ್ಲಿ ವಿಜ್ಞಾನ ಪಡೆದುಕೊಂಡಿರುವ ಅರ್ಥವನ್ನು 'ಜನಪದ ವಿಜ್ಞಾನ'ದಿಂದ ದೂರವಿಡಬಹುದು ಎಂದು ಹೇಳುತ್ತ 'ಜಾನಪದ' ಎಂಬ ಶಬ್ದದ ಅರ್ಥವನ್ನು 'ಜನಪದ ವಿಜ್ಞಾನ' ಎಂಬ ಪದದ ಅರ್ಥಕ್ಕಿಂತ ವಿಸ್ತೃತಗೊಳಿಸುತ್ತಾರೆ. ಆ ಮಾತಿನೊಂದಿಗೆ ನಾವು ನೆನಪಿಡಬೇಕಾದ ಮತ್ತೊಂದು ಮಾತೆಂದರೆ, ಡಾ. ಹಾ. ಮಾ. ನಾಯಕರು ನಿರ್ದಿಷ್ಟ ಅರ್ಥದಲ್ಲಿ ಈ ಶಬ್ದಗಳನ್ನು ಬಳಕೆಗೆ ತರುವುದರೊಂದಿಗೆ ಜಾನಪದ ಕ್ಷೇತ್ರದಲ್ಲಿ ವೈಜ್ಞಾನಿಕ ಅಧ್ಯಯನಕ್ಕೆ ನಾಂದಿ ಹಾಡಿದರು ಎನ್ನುವುದು. ಈಗ ನಾವು ಈ ಕ್ಷೇತ್ರದಲ್ಲಿ ಅರ್ಧ ಶತಮಾನಕ್ಕಿಂತಲೂ ಹೆಚ್ಚು ಅವಧಿಯನ್ನು ಕಳೆದಿದ್ದೇವೆ. ವೈಜ್ಞಾನಿಕ ಅಧ್ಯಯನದ ನೆಲೆಯೊಂದಿಗೆ ಮೂರು ದಶಕಗಳನ್ನು ಕಳೆದಿದ್ದೇವೆ. ಈ ಅಧ್ಯಯನದಲ್ಲಿ ಮತ್ತು ಈ ಎಲ್ಲದರ ಅರಿವಿನ ಹಿನ್ನೆಲೆಯಲ್ಲಿ ಮೂಲಭೂತವಾಗಿ ನಾವು ಎತ್ತಬಹುದಾದ ಪ್ರಶ್ನೆಯೇ 'ಜನಪದ' 'ಜಾನಪದ' ಎಂಬ ಶಬ್ದಗಳನ್ನು ಯೂರೋಪಿಯನ್ ನೆಲೆಯಿಂದ ಅರ್ಥೈಸುವ ಔಚಿತ್ಯ ಎಷ್ಟು ಸಮಂಜಸ ? ಎನ್ನುವುದು.

ಜಾನಪದದ ಕ್ಷೇತ್ರದಲ್ಲಿ ಯೂರೋಪಿಯನ್ ಮತ್ತು ಅಮೆರಿಕನ್ ಚಿಂತನೆಯ ನೆಲೆಗಳನ್ನು ಚಾಚೂ ತಪ್ಪದೆ ನಾವು ಅನುಸರಿಸಿಕೊಂಡು ಬಂದಿದ್ದೇವೆ. 'ಜಾನಪದ' ಎಂಬ ಶಬ್ದಕ್ಕೆ Folkloreನ popular antiquities-**'ಜನಪ್ರಿಯ ಪ್ರಾಚೀನ ನಡಾವಳಿಗಳು'** ಎಂಬ ಅರ್ಥವನ್ನೇ ಇಟ್ಟುಕೊಂಡು ಅರ್ಥೈಸುತ್ತಾ ಬಂದಿದ್ದೇವೆ. ಇದನ್ನೇ ಡಾ. ಹಾ. ಮಾ. ನಾಯಕರು ಜನಪದ (Folk) ಎಂದರೆ ಹಳೆಯ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿರುವ ಸಾಮಾನ್ಯರ ಸಮೂಹ ಎನ್ನುವುದನ್ನೇ ಹೇಳುತ್ತ, Folklore ಎಂದರೆ ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ; ಹಾಗೂ ಅದನ್ನು ಕುರಿತ ವಿಜ್ಞಾನ ಎಂದು ಒಪ್ಪಿಕೊಳ್ಳುತ್ತಾರೆ.

ಈ ಶಬ್ದದ ಅರ್ಥಗಳನ್ನು ದೇಶೀಯ ನೆಲೆಯಿಂದ ಪರಿಶೀಲಿಸುವ ಅಗತ್ಯವಿದೆ. ಹೀಗೆ ಅರ್ಥೈಸದೆ ಹೋದರೆ, ನಮ್ಮ ಜಾನಪದದ ಅರಿವು ನಮಗಿಲ್ಲದೆ ಕ್ರಮಿಸಿದ ಮಾರ್ಗವಾಗುತ್ತದೆ. ಬೆಳಕಿನಲ್ಲಿಯೇ ಕಣ್ಣು ಕಟ್ಟಿಕೊಂಡು ಬೆಳಕನ್ನು ಹುಡುಕಿದಂತಾಗುತ್ತದೆ.

'ಜನಪ್ರಿಯ ಪ್ರಾಚೀನ ನಡಾವಳಿಗಳು' ಎನ್ನುವ ಅರ್ಥ ಯುರೋಪಿಯನ್ ಚಿಂತನೆಯ ನೆಲೆಯಿಂದ ಬಂದುದು. ಇದನ್ನೇ ಹೆಚ್ಚು ಕಡಿಮೆ ಅಮೆರಿಕನರೂ ಒಪ್ಪಿಕೊಂಡಿದ್ದಾರೆ. ಅಂತೆಯೇ ನಾವೂ ಒಪ್ಪಿಕೊಂಡಿದ್ದೇವೆ. ಆದರೆ ಈ ಅನುಕರಣೆ ಸಮಂಜಸವಲ್ಲ. ಏಕೆಂದರೆ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಪಾಶ್ಚಾತ್ಯರು ಯಾವುದಕ್ಕೆ 'ಜಾನಪದ'ವೆಂದು ಬೆರಳು ಮಾಡಿ ತೋರಿಸುತ್ತಾರೆಯೋ ಅದು ನಮ್ಮಲ್ಲಿಯ 'ನಗರ ಜಾನಪದ'ದ ಮಟ್ಟವನ್ನೂ ಮೀರಿ ನಿಂತದ್ದು. ಎಂದರೆ ನಮ್ಮಲ್ಲಿಯ ಶಿಷ್ಟ

ಜಾನಪದದ ಮಟ್ಟಕ್ಕಿಂತಲೂ ಅಲ್ಲಿಯ ಜಾನಪದ ಅಸಮೃದ್ಧವಾದುದು. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅಲ್ಲಿಯ ಜನಪದರ ಬದುಕು ನಮ್ಮ ಶಿಷ್ಟ ಜನಪದರ ಬದುಕಿಗಿಂತ ಆಧುನಿಕವಾದುದು. ಹೀಗಾಗಿ ಅವರಲ್ಲಿಯ ಜಾನಪದವೆಂದರೆ ಅದು ವಸ್ತುನಿಷ್ಠ ಅರ್ಥದಲ್ಲಿ 'ಜನಪ್ರಿಯ ಪ್ರಾಚೀನ ನಡಾವಳಿ'ಗೆ ಸಂಬಂಧಿಸಿದ್ದು. ಎಂದರೆ ಇಲ್ಲಿಯ ಜಾನಪದ 'ಪ್ರಾಚೀನ'ಕ್ಕೆ ಸಂಬಂಧಿಸಿದ್ದು ಎನ್ನುವುದನ್ನು ಗಮನಿಸಬೇಕು.

ನಮ್ಮಲ್ಲಿ 'ಜಾನಪದ'ವೆಂದರೆ ಸದ್ಯದ–ಪ್ರಸ್ತುತದ ಬದುಕು. ನಮ್ಮ ಬದುಕೇ ಜಾನಪದ–ಜಾನಪದವೇ ಬದುಕು; ಆದ್ದರಿಂದ ಭಾರತದಲ್ಲಿ ಜನಪದರು ಎಂದರೆ ನಾವೇ, ನಾವೇ ಅದರಿಂದ ಹೊರಬಂದು ಅಥವಾ ಅನ್ಯರಾಗಿ ಅಧ್ಯಯನಕ್ಕೆ ಮುಂದಾಗುತ್ತಿದ್ದೇವೆ. ಹೀಗಾಗಿ ಜಾನಪದವೆಂದರೆ ನಮಗೆ ಅದು ವರ್ತಮಾನದ ಬದುಕು, ವರ್ತಮಾನದ ನಡಾವಳಿಯೇ ವಿನಃ ಪ್ರಾಚೀನ ನಡಾವಳಿಯಲ್ಲ ಅಥವಾ ಪ್ರಾಚೀನ ಬದುಕಲ್ಲ—ಎನ್ನುವುದನ್ನು ಅರಿಯಬೇಕಿದೆ.

ಡಾ. ಹಾ. ಮಾ. ನಾಯಕರು–ಜಾನಪದ ಎಂಬ ಶಬ್ದವನ್ನು ಅರ್ಥೈಸಿದ್ದು, Folklore ಎಂಬ ಶಬ್ದದ ಮೂಲದಿಂದಲೇ ಎನ್ನುವ ಮಾತು ಹಿಂದೆಯೇ ಹೇಳಿದೆ. **'ಒಂದು ಜನತೆಯ ಗ್ರಂಥವಲ್ಲದ ಸಂಪ್ರದಾಯದ ಮೊತ್ತ'** ಎಂದು ಹೇಳುವಲ್ಲಿ, 'ಒಂದು ಜನತೆಯ' ಎಂದು ಗುರುತಿಸುವ ಪರಿಕಲ್ಪನೆಯೇ ತಪ್ಪು. 'ವರ್ಗ' ಚಿಂತನೆಯ ನೆಲೆಯಿಂದ ಬಂದ ಈ ಆಲೋಚನೆ ಕರ್ನಾಟಕ ಅಥವಾ ಭಾರತ ದಂತಹ ನೆಲದಲ್ಲಿ ಬದುಕುವ ಮಂದಿಗೆ (ಜನಪದರನ್ನು) **'ಒಂದು ಜನತೆ'** ಎಂದು ಕರೆಯಲಾಗದು. ಏಕೆಂದರೆ ಒಂದು ಜನತೆ ಎಂದರೆ, ಒಂದು ಧರ್ಮ, ಒಂದು ಭಾಷೆ, ಒಂದು ಮತದಿಂದ ಕೂಡಿರಬೇಕು. ಆದರೆ ಭಾರತ ಅಥವಾ ಕರ್ನಾಟಕ ಹಲವು ಭಾಷೆ, ಹಲವು ಧರ್ಮ, ಹಲವು ಮತ, ವರ್ಣ ಜಾತಿಗಳಿಂದ ಕೂಡಿದ್ದು, ಒಂದು ಇನ್ನೊಂದಕ್ಕಿಂತ ಭಿನ್ನ, ಮತ್ತೊಂದು ಇನ್ನೊಂದಕ್ಕಿಂತ ವ್ಯತಿರಿಕ್ತ. ಒಂದು ಇನ್ನೊಂದಕ್ಕೆ ಸಂಬಂಧವಿದ್ದರೆ, ಒಂದು ಇನ್ನೊಂದಕ್ಕೆ ಸಂಬಂಧವೇ ಇಲ್ಲ; ಭಾಷೆ, ಒಳಭಾಷೆ, ಉಪಭಾಷೆ ಹೀಗೆಯೇ ಕಟ್ಟು–ಕಟ್ಟಳೆಗಳು–ಸಾಹಿತ್ಯ–ವಿಧಿ–ನಿಷೇಧ ಎಲ್ಲವೂ ಭಿನ್ನ ಅಸ್ತಿತ್ವದಿಂದ ಕೂಡಿದವು. ಒಂದು ಇನ್ನೊಂದರಿಂದ ಸಂಪೂರ್ಣ ಸ್ವತಂತ್ರವಲ್ಲದಿದ್ದರೂ ಸ್ವತಂತ್ರವೆಂಬಂತೆ ವರ್ತಿಸುವಂಥವು : ಹೀಗಿರುವಾಗ 'ಒಂದು ಜನತೆ' ಎಂದು ದೇಶೀಯ ನೆಲೆಯಲ್ಲಿ ಹೇಳಲು ಸಾಧ್ಯವೇ ?

'ಒಂದು ಜನತೆ' ಎನ್ನುವುದು ಶಿಷ್ಟ ಮತ್ತು ಜನಪದ ಎಂಬ ಪರಿಕಲ್ಪನೆಯಲ್ಲಿ ಒಂದು ಜನತೆಯನ್ನು ಗುರುತಿಸಿದ್ದೇ ಆದಲ್ಲಿ, ಇದರ ಹಿಂದೆ ನಿಂತು ಆಲೋಚನೆ ಮಾಡಿದ ಕ್ರಮವೂ ಕೂಡ ಪಾಶ್ಚಾತ್ಯ ನೆಲೆಯದ್ದೇ ಆಗಿದೆ. ಎಂದರೆ 'Folk culture', City culture ಗೆ ವಿರುದ್ಧವಾದುದು ಎಂಬ ಚಿಂತನೆ. ಯೂರೋಪಿಯನ್ ಸಮಾಜದ ಬದುಕಿನ ಆಧಾರದ ಮೇಲೆ ನಿಂತದ್ದೇ ವಿನಃ ಭಾರತೀಯ ಬದುಕಿನ ನೆಲೆಯಿಂದ ರೂಪ

ಗೊಂಡದ್ದಲ್ಲ. ನಮ್ಮಲ್ಲಿಯು Folk culture ಮತ್ತು City culture ಗಳು ವಿರುದ್ಧ ವಾದ ಸ್ವಭಾವದವು ಅಲ್ಲ. ಅವು ವಿನಿಮಯ ಸ್ವಭಾವದ ಸ್ವರೂಪದವು. ನಮ್ಮ ವಿದ್ವಾಂಸರುಗಳೆಲ್ಲ ಪಾಶ್ಚಾತ್ಯರ ವಿಚಾರಗಳನ್ನು ಯಥಾಸ್ಥಿತಿಯಲ್ಲಿ ಒಪ್ಪಿಕೊಂಡು ಅದನ್ನೇ ಹೇಳುತ್ತ ಬಂದಿರುವುದು ಸಮಂಜಸವಲ್ಲ.

ಬೆಳವಣಿಗೆಯ ಹಿನ್ನೆಲೆಯಲ್ಲಿ ಜಾಗತಿಕ ವ್ಯವಸ್ಥೆಯನ್ನು ಮೂರು ಭಾಗಗಳಾಗಿ ವಿಭಾಗಿಸಲಾಗುತ್ತದೆ.

ಒಂದು : ಅಭಿವೃದ್ಧಿ ಹೊಂದಿದ ದೇಶಗಳು
ಎರಡು : ಅಭಿವೃದ್ಧಿ ಹೊಂದುತ್ತಿರುವ ದೇಶಗಳು
ಮೂರು : ಅಭಿವೃದ್ಧಿ ಹೊಂದದ ದೇಶಗಳು

ಭಾರತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಒಂದು. ಹೀಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ, ಜನಪದ ಸಂಸ್ಕೃತಿ ಹಾಗೂ ಶಿಷ್ಟ ಸಂಸ್ಕೃತಿಗಳು ಪರಸ್ಪರ ವಿರೋಧಾಭಾಸದಿಂದ ಕೂಡಿರುವುದಿಲ್ಲ. ಅವು ವಿರುದ್ಧ ಸ್ವಭಾವದವುಗಳಾಗಿರದೆ ಪರಸ್ಪರ ವಿನಿಮಯ ಸ್ವಭಾವದವುಗಳಾಗಿರುತ್ತವೆ ಎನ್ನುವುದನ್ನು ಅರಿಯಬೇಕಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಥವಾ ಅಭಿವೃದ್ಧಿಯೇ ಹೊಂದದ ದೇಶಗಳಲ್ಲಿ ಶಿಷ್ಟ ಮತ್ತು ಜನಪದ ಸಂಸ್ಕೃತಿಗಳಲ್ಲಿ ವಿರೋಧಾಭಾಸದ ಸ್ಥಿತಿ ಇರಬಹುದೇನೋ. ಆದರೆ ಅಭಿವೃದ್ಧಿ ಹೊಂದದ ತಟಸ್ಥ ದೇಶಗಳಲ್ಲಿ ಮಂದ ಸ್ವಭಾವದ ಸ್ವರೂಪವಿದ್ದು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಥವಾ ಅಭಿವೃದ್ಧಿ ಹೊಂದದ ದೇಶದೊಂದಿಗೆ ಹೋಲಿಸಿದಾಗ, ಡಾ. ಹಾ. ಮಾ. ನಾಯಕರಂತೆ ಇತರ ವಿದ್ವಾಂಸರೂ ಅನುಕರಿಸಿ ಹೇಳುವಂತೆ ಎರಡೂ ಸಂಸ್ಕೃತಿಗಳು ವಿರೋಧ ಸ್ವಭಾವದವುಗಳಾಗಿರಲಿಕ್ಕೂ ಸಾಕು. ಆದರೆ ಭಾರತದಲ್ಲಿ ಮತ್ತು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೀಗೆ ವಿರೋಧಾಭಾಸ ದಿಂದ ಕೂಡಿರಲು ಸಾಧ್ಯವಿಲ್ಲ. ವಿರೋಧಾಭಾಸದಿಂದ ಕೂಡಿದೆ ಎನಿಸಿದರೂ ಅದು ತೋರಿಕೆಯ ಸ್ವರೂಪದ್ದು. ಅದರ ಒಳಹೊಕ್ಕು ನೋಡಿದರೆ ಸಾಕು, ಅವು ಪರಸ್ಪರ ವಿನಿಮಯ ಸ್ವಭಾವದವು ಎನ್ನುವುದು ಸ್ಪಷ್ಟವಾಗುತ್ತದೆ.

ಈ ವಿನಿಮಯ ಸ್ವಭಾವದಲ್ಲಿಯೇ ಸ್ಪಷ್ಟವಾಗುವ ಇನ್ನೊಂದು ವಿಚಾರವೆಂದರೆ, ಶಿಷ್ಟ ಜನಪದದಲ್ಲಿ ಬದಲಾವಣೆಯಾಗುವಂತೆ ಪರಿಶಿಷ್ಟ ಜನಪದದಲ್ಲಿಯೂ ಬದಲಾವಣೆ ಯಾಗುತ್ತದೆ. ಈ ಬದಲಾವಣೆಗಳು ಒಂದಿನ್ನೊಂದರ ಮೇಲೆ ಅವಲಂಬನೆಯಾಗಿರುವಂತೆ ಭಿನ್ನ ಸಂಸ್ಕೃತಿಯ ಆಕ್ರಮಣವಾದಾಗಲೂ ಕೂಡಾ, ಎರಡೂ ಒಟ್ಟಿಗೆ ಸೇರಿಯೇ (ಶಿಷ್ಟ + ಪರಿಶಿಷ್ಟ) ಕ್ರಿಯಾಶೀಲವಾಗುತ್ತವೆ ಮತ್ತು ತಮ್ಮತನವನ್ನೂ ಪರಿಷ್ಕರಿಸಿ ಕೊಂಡು ಹೊಸತನವನ್ನು ಸ್ವೀಕರಿಸಿಕೊಂಡು ಹೊಸ ಚೇತನಶಕ್ತಿಯಾಗಿ ಬೆಳೆಯುತ್ತಿರು ತ್ತವೆ. ಹೀಗಾಗಿ 'ಹಳೆಯ ಬೇರಿನೊಂದಿಗೆ ಹೊಸಚಿಗುರು ಬಿಡುವುದೇ ಜಾನಪದ'ವೆಂದು ಕರೆಯಿಸಿಕೊಳ್ಳುತ್ತದೆ. ಈ ಕಾರಣದಿಂದಾಗಿಯೇ ಜಾನಪದ ನಿತ್ಯ ನೂತನವಾದುದೆಂದೂ ಹೇಳಬೇಕಾಗುತ್ತದೆ.

'ಜಾನಪದ' ಅರ್ಥಕ್ಕೆ ಸಂಬಂಧಿಸಿದಂತೆ ಡಾ. ಹಾಮಾನಾ ಅವರ '...ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ' ಎನ್ನುವ ಮಾತನ್ನು ಪರಿಶೀಲಿಸಬಹುದು. ಶಿಷ್ಟಕ್ಕೂ ಜನಪದಕ್ಕೂ ವಿನಿಮಯವಿದ್ದಲ್ಲಿ ಯಾವುದು ಗ್ರಂಥಸ್ಥ ? ಯಾವುದು ಕಂಠಸ್ಥ ? ಎಂದು ನಿರ್ಧರಿಸಲು ಬಾರದು. ಏಕೆಂದರೆ ಎರಡೂ ಒಂದಿನ್ನೊಂದರ ಮೇಲೆ ಅವಲಂಬಿತ ವಾಗಿರುತ್ತವೆ. ಹೀಗಿದ್ದಾಗ ನಮ್ಮ ದೇಶೀಯ ಸಂದರ್ಭದಲ್ಲಿ ಜನಪದವನ್ನು 'ಗ್ರಂಥಸ್ಥ ವಲ್ಲದ್ದು' ಎಂದು ಅಷ್ಟು ಸರಳವಾಗಿ ಅಥವಾ ನೇರವಾಗಿ ಹೇಳಲೂಬಾರದು. ಚಂದ್ರಶೇಖರ ಕಂಬಾರ, ಸೋಮಶೇಖರ ಇಮ್ರಾಪುರ, ದ.ರಾ. ಬೇಂದ್ರೆ, ಚನ್ನಣ್ಣ ವಾಲೀಕಾರ ಇಂಥವರ ಸಾಹಿತ್ಯದಲ್ಲಿ ಗ್ರಂಥಸ್ಥ ಯಾವುದು ? ಕಂಠಸ್ಥ ಯಾವುದು ? ಪ್ರತ್ಯೇಕಿಸಲು ಸಾಧ್ಯವೇ ? ಎಂದುಪ್ರಶ್ನಿಸಿದರೆ ಹೊರಡುವ ಉತ್ತರ-'ಸಾಧ್ಯವಿಲ್ಲ' ಎನ್ನುವುದೇ ಆಗಿದೆ. ಹೀಗಾಗಿ ದೇಶೀವಾದದ ನೆಲೆಯಲ್ಲಿ 'ಜಾನಪದ' ಎಂದರೆ **'ಪುನರ್‌ಸೃಷ್ಟಿಯ ಸಾಮರ್ಥ್ಯವುಳ್ಳದ್ದೇ ಜಾನಪದ'** ಎಂದು ಅರ್ಥೈಸ ಬೇಕಾಗಿದೆ.

ಜನಪದ-ಜಾನಪದ-ಮರುವ್ಯಾಖ್ಯಾನ :

ಜನಪದ ಎಂದರೆ 'ಒಂದು ಜನಾಂಗ' ಎಂದು ಅರ್ಥೈಸುವುದು ಸರಿಯಲ್ಲ. ವಿಭಿನ್ನ ಸಮುದಾಯಗಳು' ಎಂದು ಅರ್ಥೈಸಬೇಕು ಎನ್ನುವ ವಿಚಾರಕ್ಕಾಗಿ ಇಷ್ಟೆಲ್ಲ ಹೇಳಿದ ಮೇಲೆ ಮತ್ತೆ ಹೆಚ್ಚು ವಿವರಿಸುವ ಅಗತ್ಯವಿಲ್ಲ. ಆದರೂ ಸ್ಪಷ್ಟತೆಗಾಗಿ ಕೆಲ ಮಾತು ಗಳನ್ನು ಇಲ್ಲಿ ಸ್ಮರಿಸಿ ಮುಂದೆ ಹೋಗಬಹುದೆನಿಸುತ್ತದೆ.

ಭಾರತ ವಿಭಿನ್ನ ಸಮುದಾಯಗಳ ಒಂದು ಸಮಾಜವೇ ವಿನಃ ಒಂದು ರಾಷ್ಟ್ರವಲ್ಲ. ರಾಷ್ಟ್ರವಲ್ಲ ಎಂದರೆ, 'ರಾಷ್ಟ್ರ' ಎನ್ನುವ ಶಬ್ದಕ್ಕೆ ಆರೋಪಿಸುವ ಲಕ್ಷಣಗಳ ಚೌಕಟ್ಟಿನಲ್ಲಿ ಭಾರತ ನಿಲ್ಲುವುದಿಲ್ಲ. ಒಂದು ರಾಷ್ಟ್ರ ಎನ್ನುವ ಕೆಲವು ಪರಿಕಲ್ಪನೆಯಿಂದ ಹೊರತಾದುದು ಎಂದರೆ ಇದಕ್ಕೆ ಒಂದು ಭಾಷೆ, ಒಂದು ಧರ್ಮ ಎನ್ನುವಂಥವು ಇಲ್ಲ. ಇದು ಹಲವಾರು ಭಾಷೆ, ಧರ್ಮಗಳನ್ನು ಒಳಗೊಂಡ ದೇಶವಾಗಿದೆ. ಇದಲ್ಲದೆ ಭಾರತದ ವೈಶಿಷ್ಟ್ಯ ಎನ್ನುವಂತೆ ಇಲ್ಲಿ ಹಲವಾರು ವಿಭಿನ್ನ ಮತಗಳಿವೆ-ವರ್ಣಗಳಿವೆ-ಕುಲಗಳಿವೆ ಜಾತಿಗಳಿವೆ. ಇವುಗಳ ಹಿನ್ನೆಲೆಯಲ್ಲಿಯೇ ವಿಧಿ-ನಿಷೇಧಗಳು, ಕೊಡು-ಕೊಳ್ಳುವಿಕೆಗಳಿವೆ. ಪ್ರತಿಯೊಂದು ಜಾತಿ, ಕುಲ, ಮತ, ಧರ್ಮಗಳು ತಮ್ಮವೇ ಆದ ತೋಂಡಿ ಸಂವಿಧಾನ ವನ್ನು ಹೊಂದಿವೆ. ಹೀಗಾಗಿ ಈ ವಿಭಿನ್ನ ಬದುಕು-ಸಂಸ್ಕೃತಿಯನ್ನೊಳಗೊಂಡ ಭಾರತ- ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಈ ಭಾರತೀಯ ಸಾಮಾಜಿಕ ಸಂರಚನೆ ಇತರ ರಾಷ್ಟ್ರಗಳಿಗಿಂತ ಭಿನ್ನವಾದುದು. ಹೀಗಾಗಿ ಭಾರತವನ್ನು 'ರಾಷ್ಟ್ರ'ದ ಪರಿಕಲ್ಪನೆಯ ಲಕ್ಷಣಗಳೊಂದಿಗೆ ಇಟ್ಟು ನೋಡಲಾಗದು. ಈ ವಿಶಿಷ್ಟವಾದ ಭಾರತೀಯ ಸಾಮಾಜಿಕ ಸಂರಚನೆಯನ್ನು ಗುರುತಿಸಿಕೊಳ್ಳುವುದಕ್ಕಾಗಿ ಇದನ್ನು 'ಭಾರತೀಯ ರಾಷ್ಟ್ರ'ವೆಂದು ಕರೆಯಬಹುದಾಗಿದೆ.

ಇದೇ ಸಂದರ್ಭದಲ್ಲಿ ಗುರುತಿಸಬಹುದಾದ ಇನ್ನೊಂದು ಮಾತೆಂದರೆ ಜಾತಿರಹಿತ ಮತ್ತು ವರ್ಣರಹಿತ ಸಮಾಜದ ಕನಸು ಕಾಣುವ ನಾವು 'ಭಾರತೀಯ ಸಂಸ್ಕೃತಿ' ಎಂದು ಬಳಸದೆ ಇಂಥ ಸಂದರ್ಭದಲ್ಲಿ 'ಭಾರತೀಯ ರಾಷ್ಟ್ರ'ವೆಂದೇ ಕರೆಯಬೇಕೆಂದು ಸೂಚಿಸಬಯಸುತ್ತೇನೆ. ಭಾರತೀಯ ಸಂಸ್ಕೃತಿ ಎಂದಾಗ ನಮಗೆ ಕೇವಲ ಹಿಂದೂ ಪರಿಕಲ್ಪನೆಯು ಮತ್ತು ವೈದಿಕ ಪರಿಕಲ್ಪನೆಯು ಭಾರತ ಕಣ್ಣೆದುರಿಗೆ ಬರುತ್ತದೆ. ಸಾಮ್ರಾಜ್ಯಶಾಹಿ ವ್ಯವಸ್ಥೆಯ ಪಳಯುಳಿಕೆಯಂತೆ ಕಾಣುವ 'ಭಾರತೀಯ ಸಂಸ್ಕೃತಿ' ಎಂಬ ಗಡಿಯನ್ನು ಮೀರಲು 'ಭಾರತೀಯ ರಾಷ್ಟ್ರ' ಎಂದು ಗುರುತಿಸಿ ಕರೆಯುವುದು ಅವಶ್ಯವಾಗಿದೆ.

ಈ 'ಭಾರತೀಯ ರಾಷ್ಟ್ರ' ವಿಭಿನ್ನ ಧರ್ಮ ಮತ್ತು ಭಾಷೆಗಳನ್ನೊಳಗೊಂಡಿರುವುದರಿಂದ 'ಜನಪದ' ಎಂಬುದಕ್ಕೆ ಇಂದು ನಾವು 'ಒಂದು ಜನತೆ' ಎಂದು ಅರ್ಥೈಸದೆ 'ವಿಭಿನ್ನ ಸಮುದಾಯಗಳು' ಎಂದು ಅರ್ಥೈಸಬೇಕಾಗಿದೆ. ಇಲ್ಲದೆ ಹೋದರೆ ನಾವು ದಿಕ್ಕು ತಪ್ಪುತ್ತೇವೆ. ಹಗಲಲ್ಲಿಯೇ ಕಣ್ಣುಕಟ್ಟಿಕೊಂಡು ಹಗಲು ಹುಡುಕಿದಂತಾಗುತ್ತದೆ. Folk ಎಂಬ ಪದಕ್ಕೆ ಸಂವಾದಿಯಾಗಿ 'ಜನಪದ' ಎಂಬ ಶಬ್ದವನ್ನು ಬಳಕೆಗೆ ತರುವಾಗಲೇ ಈ ಅರ್ಥವನ್ನು ನಾವು ಕಂಡುಕೊಳ್ಳಬೇಕಾಗಿತ್ತು. ತಡವಾದರೂ ಸರಿ ಕಾಲ ಮಿಂಚಿಲ್ಲವೆಂದು ಸಮ್ಮತಿಸಿ, **ಜನಪದ ಎಂದರೆ, 'ವಿಭಿನ್ನ ಸಮುದಾಯಗಳು'** ಎನ್ನುವ ಅರ್ಥದೊಂದಿಗೆ ಬಳಸಬೇಕಾಗಿದೆ. ಜನಪದ ಎಂದರೆ ವಿಭಿನ್ನ ಸಮುದಾಯಗಳು ಎಂದು ಒಪ್ಪಿಕೊಂಡ ಮೇಲೆ, **ಜಾನಪದ** 'Folklore' ಎಂದರೆ **'ಪುನರ್‌ಸೃಷ್ಟಿಯ ಸಾಮರ್ಥ್ಯವುಳ್ಳ ಸಮುದಾಯಗಳ ಬದುಕಿನ ಹುಟ್ಟುವಳಿ'** ಎಂದು ವ್ಯಾಖ್ಯಾನಿಸಬೇಕಾಗುತ್ತದೆ.

ಈ ಹಿಂದೆ ನಮ್ಮ ಬದುಕೇ ಜಾನಪದ ಎನ್ನುವ ಮಾತು ಹೇಳಿದೆ. ಭಾರತೀಯ ರಾಷ್ಟ್ರದಲ್ಲಿ ಜಾನಪದವೆಂದರೆ ಪ್ರಾಚೀನವಾದುದು—ಹಳೆಯದಾದುದು ಎಂದು ಹೇಳಲಾಗದು. ಅದು ನಮಗೆ ಅಥವಾ ಭಾರತೀಯರಿಗೆ ವರ್ತಮಾನದ ಬದುಕೇ ಆಗಿರುವುದರಿಂದ ಅದು ಬದುಕಿನ ಹುಟ್ಟುವಳಿಯಾಗುತ್ತದೆ. ನಮ್ಮ ಜಾನಪದ ಕೇವಲ ಗ್ರಾಮ ಸಮುದಾಯಗಳಿಗೆ ಸೀಮಿತವಾದುದಲ್ಲ. ನಗರ ಅಥವಾ ಶಿಷ್ಟರಿಗೆ ಸಂಬಂಧಿಸಿದ್ದು ಕೂಡ ಜಾನಪದದಲ್ಲಿಯೇ ಒಳಗೊಳ್ಳುತ್ತದೆ ಎನ್ನುವುದನ್ನು ಅರಿಯಬೇಕಾಗಿದೆ. ಈ ಹಿಂದೆ ಗುರುತಿಸಿಕೊಂಡಂತೆ ಗ್ರಾಮಸಂಸ್ಕೃತಿ ಮತ್ತು ನಗರಸಂಸ್ಕೃತಿಗಳು ಪರಸ್ಪರ ವಿರೋಧಿಯಾದವುಗಳಲ್ಲ. ಅವು ಪರಸ್ಪರ ಪೂರಕವಾದುವು ಮತ್ತು ವಿನಿಮಯ ಸ್ವಭಾವವನ್ನು ಹೊಂದಿದವು. ಇದರಿಂದಾಗಿ ಶಿಷ್ಟ ಜನಪದ ಮತ್ತು ಗ್ರಾಮ ಜನಪದಗಳ ನಡುವೆಯೂ ವಿನಿಮಯ ಸ್ವಭಾವವಿದ್ದು ನಿರಂತರತೆಯೂ ಇರುತ್ತದೆ ಮತ್ತು ಕಾಲಾಂತರಗಳಲ್ಲಿ ಶಿಷ್ಟಜನಪದ ಗ್ರಾಮಜನಪದವಾಗಿ, ಗ್ರಾಮಜನಪದ ಪಳೆಯುಳಿಕೆ ಜನಪದವಾಗಿ ಕಾಲದಿಂದ ಕಾಲಕ್ಕೆ ಭಿನ್ನಸಮುದಾಯಗಳಲ್ಲಿ ಭಿನ್ನ ರೀತಿಯಲ್ಲಿ ರೂಪತಾಳುವ ಸಾಮರ್ಥ್ಯ ಹೊಂದಿರುತ್ತದೆ. ಆದ್ದರಿಂದ ಜಾನಪದ ವಿಭಿನ್ನ

ಸಮುಂದಾಯಂದ ಬದುಂಕಿನ ಹುಂಟ್ಟುವಳಿಯಾಗಿರುಂವುದರೊಂದಿಗೆ ಪುನರ್‌ಸೃಷ್ಟಿಯಂ ಸಾಮುಂರ್ಥ್ಯವುಳ್ಳದ್ದೂ ಆಗಿರುಂತ್ತದೆ. ಆದ್ದರಿಂದ ಜಾನಪದ ಎನ್ನುವುದುಂ ಸ್ಥಾಯಿಯಾದುಂದ್ದಲ್ಲ, ಅದುಂ ಜಂಗಮುಂ ಸ್ವರೂಪಿಯಾದುದುಂ, ಹೀಗಾಗಿ 'ಜಾನಪದವೆಂದರೆ ಪುನರ್‌ಸೃಷ್ಟಿಯಂ ಸಾಮುಂರ್ಥ್ಯವುಳ್ಳ ವಿಭಿನ್ನ ಸಮುಂದಾಯಗಳ ಬದುಂಕಿನ ಹುಂಟ್ಟುವಳಿ' ಎಂದುಂ ಹೇಳಬೇಕಾಗುಂತ್ತದೆ.

ಜಾನಪದ ಸ್ವರೂಪ

ಜಾನಪದವನ್ನುಂ ಪ್ರಧಾನವಾಗಿ ಮುಂತ್ತುಂ ಉದಾರವಾಗಿ, ಸ್ಥಳಸೂಚಕವಾಗಿ ಎರಡುಂ ಭಾಗಗಳಾಗಿ ವಿಭಾಗಿಸಿಕೊಳ್ಳಬಹುಂದುಂ. ಒಂದುಂ : ಗ್ರಾಮ್ಯ ಜಾನಪದ, ಎರಡುಂ : ನಗರ ಜಾನಪದ. ಗ್ರಾಮ್ಯ ಜಾನಪದದಲ್ಲಿ ಶಿಷ್ಟಕ್ಕೆ ಹತ್ತಿರವಾದ ಗ್ರಾಮ್ಯ ಜಾನಪದವೂ ಇರುಂತ್ತವೆ. ಅಂತೆಯೇ ನಗರ ಜಾನಪದದಲ್ಲಿಯಂ ಗ್ರಾಮುಂ ಜಾನಪದವೂ ಸಂಪ್ತವಾಗಿರುಂತ್ತದೆ. ಇವು ಎರಡರ ಒಳವಿಭಾಗಗಳಾಗಿ ಮುಂತ್ತೆ ನಾವು ವಸ್ತುವಿನ ಕ್ರಿಯಾತ್ಮಕ ನೆಲೆಯಿಂದ ಜಾನಪದವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಗುಂರುಂತಿಸಬಹುಂದಾಗಿದೆ.

೧. ಕ್ಷೇತ್ರ ಜಾನಪದ　　೩. ಸೃಜನ ಜಾನಪದ
೨. ಮುಂದ್ರಿತ ಜಾನಪದ　　೪. ಖೋಟಾ ಜಾನಪದ

ಕ್ಷೇತ್ರ ಜಾನಪದ ಯಾವಾಗಲೂ ಜಾನಪದ ಕ್ಷೇತ್ರದಲ್ಲಿಯೇ ಇರುಂವಂತಹದುಂ. ಇದುಂ ಅಕ್ಷಯಂ ಪಾತ್ರೆ ಅಥವಾ ಎಷ್ಟು ಮೊಗೆದರೂ ತೀರದ ಮುಂತ್ತೆ ಮುಂತ್ತೆ ಮೈದುಂಬಿ ನಿಲ್ಲುಂವ ಬತ್ತದ ಪಾಲ್ಗಡಲುಂ. ಮುಂದ್ರಿತ ಜಾನಪದ ಅಕ್ಷಯಂ ಪಾತ್ರೆಯಿಂದ ಅಥವಾ ಬತ್ತದ ಪಾಲ್ಗಡಲಿಂದ ಹೊರತೆಗೆದುಂ ಕಾಯಿಂಸಿಟ್ಟ ಹಾಲು. ಈ ಮುಂದ್ರಿತ ಜಾನಪದಕ್ಕೆ ಪುನರ್‌ಸೃಷ್ಟಿಯಂ ಸಾಮುಂರ್ಥ್ಯವಿರುಂವುದಿಲ್ಲ. ಒಂದರ್ಥದಲ್ಲಿ ಇದುಂ ಸಿಂಗರಿಸಿ ಕಾಯ್ದಿಟ್ಟ ಹೆಣ. ಸೃಜನ ಜಾನಪದ ಒಂದೊಂದುಂ ಪ್ರಾಣಿಯಂ ಕೆಚ್ಚಲಿಂದ ಹಿಂಡಿ ತೆಗೆದ ಹಾಲುಂ. ಎಂದರೆ ಇದು ವ್ಯಕ್ತಿಲಿಖಿತವಾದುದುಂ. ಲಾವಣಿ-ಯಕ್ಷಗಾನಗಳ ಪತ್ಯ ಈ ಸ್ವರೂಪದವು. ಇದರರ್ಥ ಇದುಂ ಕೇವಲ ಸಾಹಿತ್ಯಕ್ಕೆ ಸೀಮಿತವೆಂದರ್ಥವಲ್ಲ. ಭೌತ ಮುಂತ್ತುಂ ಅಭೌತಗಳೆರಡಕ್ಕೂ ಸಂಬಂಧಿಸಿದ್ದುಂ. ಖೋಟಾ ಜಾನಪದ ಕಲುಷಿತವಾದುಂದುಂ. ಕಲಬೆರಕೆ ಸ್ವರೂಪದ್ದುಂ, ಕ್ಷಣಿಕವಾದುಂದುಂ, ಒಂದರ್ಥದಲ್ಲಿ ಇದುಂ ಗಂಡೂ ಅಲ್ಲದ ಹೆಣ್ಣೂ ಅಲ್ಲದ ವಿರೂಪಿ ಸ್ವರೂಪದ್ದಾಗಿದ್ದುಂ, ಹೆಚ್ಚುಕಾಲ ಬದುಂಕುಂವ ಸಾಮುಂರ್ಥ್ಯ ಇದಕ್ಕಿರುಂವುದಿಲ್ಲ.

ಜಾನಪದೀಯುತೆ ಮುತ್ತು ಜಾನಪದೀಯುರು

ಈ ಮೇಲೆ ಗುಂರುಂತಿಸಲಾದ ಜಾನಪದದ ವಿಭಿನ್ನ ಸ್ವರೂಪಗಳ ಒಂದುಂ ನೆಲೆ. ಈ ನಾಲ್ಕು ಜಾನಪದ ಸ್ವರೂಪಗಳುಂ ಎಲ್ಲ ನೆಲದಲ್ಲೂ ಕಂಡುಂಬರುಂವಂಥವು. ಇವುಗಳ

ಅಧ್ಯಯನದ ಮೊತ್ತಕ್ಕೆ ಅಥವಾ 'ಜಾನಪದ ಅಧ್ಯಯನ'ಕ್ಕೆ 'Folkloristics' ಎಂದು ಕರೆಯಲಾಗುತ್ತದೆ. Folkloristics ಪದಕ್ಕೆ ಸಂವಾದಿಯಾಗಿ 'ಜಾನಪದೀಯತೆ' ಎಂದೇ ಗುರುತಿಸುವುದು ಸಮರ್ಪಕ. ಜಾನಪದ ಅಧ್ಯಯನ ಎಂದು ಎರಡು ಶಬ್ದಗಳನ್ನು ಬಳಸುವ ಬದಲಾಗಿ ಒಂದೇ ಶಬ್ದ ಬಳಸಿದಂತಾಗುತ್ತದೆ. ಅಲ್ಲದೆ 'ಜನಪದ' 'ಜಾನಪದ' ಎಂಬ ಶಬ್ದಗಳ 'ಸ್ವರೂಪಕ್ಕೆ' 'ಜಾನಪದೀಯತೆ' ಎನ್ನುವುದು ತೀರ ಹತ್ತಿರವಾದುದು. ಇದಲ್ಲದೆ ಜನಪದ ಎಂಬ ಶಬ್ದಕ್ಕೆ 'ರು' ಕಾರವನ್ನು ಸೇರಿಸಿ ಬಳಸುವ ವಾಡಿಕೆಯೂ ನಮ್ಮಲ್ಲಿದೆ. ಜಾನಪದ ಅಧ್ಯಯನಕ್ಕೆ 'ಜಾನಪದೀಯತೆ' ಯೆಂದು ಕರೆದ ಮೇಲೆ, ಜಾನಪದ ಅಧ್ಯಯನಕಾರರಿಗೆ, ಸಂಶೋಧಕರಿಗೆ 'ಜಾನಪದೀಯರು' ಎಂದು ಕರೆಯಬಹುದು. ಕೆಲವರು ಜಾನಪದೀಯರು ಎನ್ನುವ ಶಬ್ದಕ್ಕೆ ಸಂವಾದಿಯಾಗಿ 'ಜಾನಪದರು' ಎಂದು ಕರೆಯಲು ಸೂಚಿಸಿರುವುದಿದೆ [1]

ಸೃಜನ ಜಾನಪದದ ಅಗತ್ಯ ?

ಸೃಜನ ಜಾನಪದ—ವ್ಯಕ್ತಿ ಲಿಖಿತವಾದುದು. ಇದು ಪುನರ್‌ಸೃಷ್ಟಿ ಸಾಮರ್ಥ್ಯದಿಂದ ತೀರ ಭಿನ್ನವಾದುದ್ದೇನಲ್ಲ; ಇದು ಜನಪದ ಲಾವಣಿಯಂತೆ ವ್ಯಕ್ತಿ ಅಂಕಿತದಿಂದ ಕೂಡಿದ್ದು. ಯಾವುದೇ ಸೃಷ್ಟಿಕ್ರಿಯೆ ಜಾನಪದ ಪರಂಪರೆಯಿಂದ ಬಿಡಿಸಿಕೊಂಡಿರುವುದಿಲ್ಲ ಅಥವಾ ಸ್ವಯಂಭು ಅಲ್ಲ. ಹೀಗಾಗಿ ಈ 'ಸೃಜನ ಜಾನಪದ'-ಜಾನಪದ ಪರಂಪರೆಯನ್ನು ವಿಸಾರಿದ್ದಾಗಿರಲು ಸಾಧ್ಯವಿಲ್ಲ. ಈ ಸ್ವರೂಪದ **'ಸೃಜನ ಜಾನಪದ'** ನಮ್ಮಲ್ಲಿ ತೀರ ಹೊಸದೇನಲ್ಲ, ಸಾಹಿತ್ಯದಲ್ಲಿ ಈ ಪ್ರಕ್ರಿಯೆಗೆ ಮುಂದಾಗಿ ಸೋತು ಹಿಂಜರಿದಿರುವುದು ಕಂಡುಬರುತ್ತದೆ. ಕಾವ್ಯ, ನಾಟಕ, ಗಾದೆಗಳಲ್ಲಿ ಈ ಪ್ರಯೋಗ ದಟ್ಟವಾಗಿ ನಡೆದು ನಿಂತಿರುವುದು ಕಂಡುಬರುತ್ತದೆ. ಇಂಥದ್ದಕ್ಕೆ ಎಂದರೆ ಭೌತ ಮತ್ತು ಅಭೌತ ಜಾನಪದಕ್ಕೆ ಪುನರ್‌ಚಾಲನೆಯನ್ನು ಕೊಡಬೇಕಾದ ಆವಶ್ಯಕತೆ ಇದೆ.

ಜಾಗತೀಕರಣ ಮತ್ತು ಉದಾರೀಕರಣ :
ಮರುವ್ಯಾಖ್ಯಾನದ ಹಿನ್ನೆಲೆ ಹಾಗೂ ನೆಲೆ

ಜಾಗತೀಕರಣ ಮತ್ತು ಉದಾರೀಕರಣ ಇವು ಎರಡೂ ಇಂದು ನಮ್ಮ ದೇಶದಲ್ಲಿ ಭರದಿಂದ ಸಾಗುತ್ತಿವೆ. ಒಂದು ದೇಶದಲ್ಲಿ ಯುದ್ಧ ನಡೆದರೆ, ಆ ಯುದ್ಧದ ಪರಿಣಾಮದಿಂದಾಗಿ ಯುದ್ಧ ನಡೆದಲ್ಲಿಯ ಜಾನಪದವೆಲ್ಲ ಸರ್ವನಾಶವಾಗಿ ಹೋಗುತ್ತದೆ. ಆದರೆ ಈ ಉದಾರೀಕರಣದ ನೀತಿ ಯುದ್ಧಕ್ಕಿಂತಲೂ ಭಯಾನಕವಾದುದು. ಯುದ್ಧದಿಂದ ಯುದ್ಧ ನಡೆದಲ್ಲಿ ಮಾತ್ರ ಜಾನಪದ ನಾಶವಾದರೆ, ಈ ಆರ್ಥಿಕ ಉದಾರೀಕರಣದ ನೀತಿಯಿಂದಾಗಿ ದೇಶದಲ್ಲಿಯ ಜಾನಪದವೆಲ್ಲ ನಾಶವಾಗ

1. ಡಾ. ಹಿ. ಶಿ. ರಾಮಚಂದ್ರೇಗೌಡ—ಜಾನಪದ ಅಂತರಂಗ—೬೭.

ಬಹುದು ಎನಿಸುತ್ತಿದೆ. ಹೀಗಾಗಿ ಇದು ಜಾನಪದದ ಸಾವಿನ ಕಾಲ. ಇದರರ್ಥ ಎಲ್ಲವೂ ಸರ್ವನಾಶವಾಗಿ ಹೋಗುತ್ತದೆಂದಲ್ಲ. ಹಾವು ಪೊರೆಬಿಟ್ಟಂತೆ. ಪುನರ್‌ಸೃಷ್ಟಿಯ ಕ್ರಿಯೆಯಲ್ಲಿ ಎಲ್ಲದಕ್ಕೂ ಜೀವವಿರುವುದಿಲ್ಲ ಎಲ್ಲವೂ ಸಾಯುವುದಿಲ್ಲ. ಇದನ್ನೇ ಸರಳವಾಗಿ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಇದು ಜಾನಪದದ ವಿಘಟನೆಯ ಕಾಲ.

ಇದು ಜಾನಪದದ ಸಾವಿನ ಕಾಲ ಅಥವಾ ವಿಘಟನೆಯ ಕಾಲ ಎನ್ನುವ ಎಚ್ಚರ ನಮ್ಮಲ್ಲಿ ಇದ್ದುದೇ ಆದರೆ, ಅದು ಜಾನಪದದ ಮರುಹುಟ್ಟಿನ ಕಾಲವಾಗಿ ಪುನರ್ ಸಂಘಟಿತ ಕಾಲವಾಗಿ ಪರಿವರ್ತಿಸಬಹುದು.

ಜಾನಪದ ಸಮಾಜೋಧರ್ಮ ಮುಖ್ಯವಾದುದು. ಜಾಗತೀಕರಣ ಮತ್ತು ಉದಾರೀಕರಣದ ನೆಲೆ ಅರ್ಥಮುಖಿ (money)ಯಾದುದು. ಇಲ್ಲಿ ಬುದ್ಧಿ ಮತ್ತು ವಸ್ತುವಿಗೆ (material) ಮಹತ್ವವಿದ್ದರೆ, ಜಾನಪದದಲ್ಲಿ ಭಾವ ಮತ್ತು ಅರ್ಥ (meaning)ಕ್ಕೆ ಹೆಚ್ಚು ಮಹತ್ವವಿರುತ್ತದೆ. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶದಲ್ಲಿ ಜಾಗತೀಕರಣ ಮತ್ತು ಉದಾರೀಕರಣದ ಪ್ರವೇಶದಿಂದಾಗಿ ಮೂಲದ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತಿವೆ. ಇದರಲ್ಲಿ ಯಾವುದು ಸ್ವೀಕಾರಕ್ಕೆ ಅರ್ಹ, ಯಾವುದು ಸ್ವೀಕಾರಕ್ಕೆ ಅರ್ಹವಲ್ಲ ಎನ್ನುವುದರ ಸ್ಪಷ್ಟತೆ ನಮಗಿರಬೇಕು. ಹೀಗಾದಾಗ ಇದು ಸಾಮಾಜಿಕ ಸಂರಚನೆಯನ್ನೇ ಬದಲಾಯಿಸುವ ಕಾಲವಾಗುತ್ತದೆ. ಇಂಥ ಸಂದರ್ಭದಲ್ಲಿ ಸಾಮಾಜಿಕ ಸಂರಚನೆಗೆ ತಕ್ಕಂತೆ ನಮ್ಮಲ್ಲಿ ಬದಲಾವಣೆಯೂ ಅಗತ್ಯ ಎನ್ನುವುದರ ಅರಿವು ನಮಗಿರಬೇಕು. ಈ ಸಂದರ್ಭದಲ್ಲಿ ಜಾನಪದ ವಿಘಟಿತವಾಗಿ ಮತ್ತೆ ಅದಕ್ಕೆ ಕೆಲ ಹೊಸ ಅಂಶಗಳು ಸೇರಿ ಸಂಘಟಿತವಾಗುತ್ತ ಎತ್ತೆತ್ತಲೋ ಹರಿದುಹೋಗುವ ಸಂದರ್ಭದಲ್ಲಿ. ಈ ಪ್ರಕ್ರಿಯೆಯ ಕುರಿತ ಎಚ್ಚರ ನಮ್ಮಲ್ಲಿ ಇದ್ದುದೇ ಆದರೆ ಚದುರಿ ಹರಿದುಹೋಗುವ ನೀರಿಗೆ ಸರಿಯಾದ ದಿಕ್ಕು ತೋರಿಸಬಹುದು. ಈ ದಿಕ್ಕನ್ನು ತೋರಿಸುವುದಕ್ಕೆ ನಮಗೆ ಮಂತ್ರದಂಡದಂತೆ ಕೆಲಸ ಮಾಡಬಲ್ಲ ಸಾಮರ್ಥ್ಯ ಸೃಜನ ಜಾನಪದಕ್ಕಿದೆ. ಹೀಗಾಗಿ ಈಗಿನ ಸಂದರ್ಭದಲ್ಲಿ ಅವಶ್ಯವಾಗಿ ಈ ಲಿಖಿತ ಕ್ಷೇತ್ರದಲ್ಲಿ ಸೃಜನ ಜಾನಪದವನ್ನು ಬಿತ್ತಿ ಬೆಳೆಯಬೇಕಾಗಿದೆ. ಇದರ ಪ್ರಭಾವದಿಂದ 'ಕ್ಷೇತ್ರ ಜಾನಪದ' ಹೆಚ್ಚು ಸಮೃದ್ಧವಾಗುತ್ತದೆ.

ಜಾಗತೀಕರಣ ಮತ್ತು ಉದಾರೀಕರಣದಿಂದ ವಿಭಿನ್ನ ಸಮುದಾಯಗಳ ಮನಸ್ಸೆಲ್ಲ ಕಾಂಚಾಣಮಯವಾಗಿ ನಿಲ್ಲುವ ಕಾಲವಿದು. ಇದನ್ನರಿತು–ಮರೆತು ಹಾಗೇ ಬಿಟ್ಟರೆ ಮನುಷ್ಯ ಸಂಬಂಧಗಳು ಕ್ಷೀಣವಾಗುತ್ತವೆ. ಮನಸ್ಸುಗಳು ಕಲ್ಲಾಗುತ್ತವೆ. ಭಾವಜಗತ್ತು ಸತ್ತು ಮನುಷ್ಯ ನೆಮ್ಮದಿ, ಶಾಂತಿಯ ಬದುಕನ್ನು ಕಳೆದುಹೋಗುವ ಸಂದರ್ಭ. ಕಿವಿ–ಕಣ್ಣುಗಳು ಹಣದ ಸದ್ದಿಗೆ ಸುಟ್ಟು ಸುಣ್ಣವಾಗುವ ಕಾಲಕ್ಕೆ ಆಹ್ವಾನ. ಹಣವೆಂಬ ಬಿಸಿಲ್ಗುದುರೆಗೆ ಬೆನ್ನು ಹತ್ತಿದ ಮನಸ್ಸು ಅರಿತೋ ಅರಿಯದೆಯೋ ಭೌತ ಜಗತ್ತನ್ನು ಬೆಳೆಸುತ್ತದೆ. ಆದರೆ ಅಭೌತ ಜಗತ್ತಿನೆಡೆಗೆ ಇದು ಕೈಚಾಚದು

ಏಕೆಂದರೆ ಇಲ್ಲಿ ಆರ್ಥಿಕ ಲಾಭವಿಲ್ಲದಿರುವುದೇ ಆಗಿದೆ. ಆಗ ಅಭೌತ ಜಗತ್ತು ಊನವಾಗಿಬಿಡುತ್ತದೆ. ಇದರಿಂದಾಗಿ ಭೌತ ಮತ್ತು ಅಭೌತ ಜಗತ್ತಿನಲ್ಲಿ ಅಸಮತೋಲನ ಉಂಟಾಗುತ್ತದೆ. ಈ ಅಸಮತೋಲನವನ್ನು ಬರದಂತೆ ಕಾಪಾಡಿಕೊಳ್ಳುವ ಎಚ್ಚರ ನಮಗೆ ಅಗತ್ಯವಾಗಿದೆ. ಈ ಅಸಮತೋಲನಕ್ಕೆ ಸರಿಯಾದ ಮದ್ದೇ ಸೃಜನ ಜಾನಪದ. ಅರ್ಥಪ್ರಪಂಚದೊಂದಿಗೆ ಭಾವಪ್ರಪಂಚವನ್ನು ಸೃಜನಾತ್ಮಕ ಜಾನಪದದಿಂದ ಬೆಳೆಸಬಹುದಾಗಿದೆ.

ಭೌತಕ್ಕೆ ಸಂಬಂಧಿಸಿದಂತೆ, ಕುಂಬಾರಿಕೆ ವಸ್ತುಗಳು, ಬಡಿಗತನದ ವಸ್ತುಗಳು, ಕೈಮಗ್ಗದ ವಸ್ತು ಭಿನ್ನ ಕಲಾತ್ಮಕ ವಸ್ತುಗಳಾಗಿ ಇಂದು ಹೊಸ ಆವಿಷ್ಕಾರವನ್ನು ಪಡೆಯುತ್ತಿವೆ. ಮೊದಲು ಕುಂಬಾರನ ಗಡಿಗೆ ದಿನನಿತ್ಯದ ಅತ್ಯಾವಶ್ಯಕ ವಸ್ತುವಾಗಿ ಬಳಕೆಯಾಗುತ್ತಿತ್ತು. ಈ ಉದಾರೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಇವುಗಳಿಗೆ ಮಹತ್ವ ದೊರೆತು ಹೊಸ ವೇಷ ತೊಟ್ಟು ಹೊರಬರುತ್ತಿವೆ. ಇಂದಿನ ಸಂದರ್ಭದಲ್ಲಿ ಇದು ಅನಿವಾರ್ಯ. ನಾವು ಬಯಸದಿದ್ದರೂ ಅರ್ಥಮುಖಿಯಾದ ಈ ವ್ಯವಸ್ಥೆಯಲ್ಲಿ ನಮಗರಿವಿಲ್ಲದಂತೆ ಇವು ಪುನರ್‌ಜೀವನವನ್ನು ಪಡೆದುಕೊಳ್ಳುತ್ತವೆ. ಹೀಗೆಯೇ ಸಾಹಿತ್ಯ, ಸಂಗೀತ, ನೃತ್ಯ ಕಲೆ ಇವುಗಳಲ್ಲಿಯೂ ಬದಲಾವಣೆ ತಂದು ಕೊಳ್ಳುವ ಅಗತ್ಯವಿದೆ.

ದೇಶೀವಾದವೆಂಬ ಪರುಷ ಮತ್ತು ಜಾನಪದ

ಒಂದು ಸಂಸ್ಕೃತಿಯ ಸೃಜನಾತ್ಮಕವಾದ ಎಚ್ಚರ ಮತ್ತು ಪ್ರತಿಭಟನೆಯ ಹಿಂದೆ ದೇಶೀವಾದ ಮನೆಮಾಡಿಕೊಂಡಿರುತ್ತದೆ. ಹೀಗಾಗಿ ದೇಶೀಯತೆ ಎನ್ನುವುದು ಸಮಷ್ಟೀಯ ನೆಲೆಯಿಂದ ಕೂಡಿದ ಭೂತ-ವರ್ತಮಾನ ಮತ್ತು ಭವಿಷ್ಯತ್ತಿನ ಪ್ರಜ್ಞೆಯನ್ನೊಳಗೊಂಡ ಸೃಜನಾತ್ಮಕವಾದ ಹೊಸ ಎಚ್ಚರ. ಈ ಸೃಜನಾತ್ಮಕವಾದ ಎಚ್ಚರ ಏಕಕಾಲದಲ್ಲಿಯೇ ಕಾಯುವ ಕೊಲ್ಲುವ ಎರಡೂ ಬಗೆಯ ಕೆಲಸಗಳನ್ನು ಮಾಡುತ್ತದೆ. ಅದು ಸ್ವಕೀಯದ್ದೇ ಆಗಿರಬಹುದು ಅಥವಾ ಪರಕೀಯದ್ದೇ ಆಗಿರ ಬಹುದು. ಈ ಕಾಯುವ-ಕೊಲ್ಲುವ ಕ್ರಿಯೆಯ ನಡುವೆಯೇ ಒಂದು ಸೃಜನಾತ್ಮಕ ಶಕ್ತಿ ಇದೆ. ಆ ಶಕ್ತಿಯೇ ದೇಶೀವಾದದ ಜೀವಾಳ. ಹೀಗಾಗಿ ಜಾನಪದ ಹುಟ್ಟು-ಸಾವಿನೊಡನೆಯೂ ನಿತ್ಯ ನೂತನವಾದುದ್ದಾಗಿ ನಿಲ್ಲುತ್ತದೆ.

ಸಂಸ್ಕೃತಿಮುಖಿಯಾದುದೇ ದೇಶೀವಾದ. ಆದರೆ ಸಂಸ್ಕೃತಿಯೇ ದೇಶೀವಾದವಲ್ಲ. ದೇಶೀಯತೆ ಎನ್ನುವುದು ಹರಿವ ನೀರಿನೊಂದಿಗೆ ಇರುವಂತಹದು ವಿನಃ ನಿಂತ ನೀರಿನೊಂದಿಗೆ ಇರುವಂತಹದ್ದಲ್ಲ. ಪರಸ್ಪರ ವಿರುದ್ಧ ಸಂಸ್ಕೃತಿಗಳ ಮುಖಾಮುಖಿಯಾದಾಗಲೇ 'ದೇಶೀವಾದದ ಪ್ರಜ್ಞೆ' ಜಾಗೃತವಾಗುತ್ತದೆ. ಈ ಪ್ರಜ್ಞೆ ಗ್ರಾಮೀಣ ಪ್ರದೇಶಕ್ಕಿಂತ ನಗರದಲ್ಲಿ ತೀವ್ರವಾಗಿ ಗೋಚರವಾಗುವಂತಹದು. ಅನಂತರ ಅದರ ಬಿಸಿ ಗ್ರಾಮೀಣ ಪ್ರದೇಶಕ್ಕೂ ಹಬ್ಬುತ್ತದೆ. ಇದರರ್ಥ ಹಿಮ್ಮುಖ ಚಲನೆಯಿಂದ

ಕೂಡಿರುತ್ತದೆ ಎಂದಲ್ಲ. ಕೊಡು-ಕೊಳ್ಳುವಿಕೆಯಿಂದ ಬೆಳೆಯುತ್ತ ಹೋಗುತ್ತದೆ. ಹೀಗಾಗಿ ದೇಶೀಯತೆ ಎನ್ನುವುದು ಹಳೆಯದನ್ನು ಆರಾಧಿಸುವಂತಹದ್ದೂ ಅಲ್ಲ, ಹೊಸದನ್ನು ನಿರಾಕರಿಸುವಂತಹದ್ದೂ ಅಲ್ಲ. ಈ ಎರಡರ ಕೊಡು ಕೊಳ್ಳುವಿಕೆ ಯಿಂದ ಅಥವಾ ಮಂಥನದಿಂದ ಕಾಣಿಸಿಕೊಳ್ಳುವಂತಹದು. ಅದೇ ಅಂದಿನ ಸಾಂಸ್ಕೃತಿಕ ಸಂದರ್ಭಕ್ಕೆ ಮಾದರಿಯಾಗಿ ದೇಶೀಯತೆಯ ಛಾಪು ಪಡೆಯುತ್ತದೆ.

ದೇಶೀಯತೆ ಎನ್ನುವುದು ಜನತೆಯೊಂದಿಗೆ ಸದಾಕಾಲ ಇರುವಂತಹದು. ಕೆಲವೊಮ್ಮೆ ಇದರ ಒತ್ತಡ ತ್ವರಿತವಾಗಿದ್ದರೆ ಮತ್ತೊಮ್ಮೆ ಮಂದಗತಿಯ ಸ್ವಭಾವ ದ್ದಾಗಿರಬಹುದು. ಇವೆರಡರ ನಡುವೆ ಎಂದರೆ ಸಂಧಿಕಾಲದಲ್ಲಿ ಒಡಂಬಡಿಕೆಗೆ ಮುಂದಾಗುವ ಸ್ವರೂಪದ್ದೂ ಆಗಿರುತ್ತದೆ. ಈ ದೇಶೀಯತೆ ಎನ್ನುವುದು ಇಲ್ಲದೆ ಹೋದರೆ ವಿವಿಧ ಜಾನಪದಗಳಿರುವುದಿಲ್ಲ; ವಿವಿಧ ತಾತ್ವಿಕ ನೆಲೆಗಳೂ ಇರುವುದಿಲ್ಲ. ಸ್ಥೂಲವಾಗಿ ನಾವು ಈ ದೇಶೀವಾದವನ್ನು ಅಂತರ್‌ರಾಷ್ಟ್ರೀಯ ದೇಶೀವಾದ, ಉಪರಾಷ್ಟ್ರೀಯ ದೇಶೀವಾದ, ಸ್ಥಳೀಯ ದೇಶೀವಾದವೆಂದು ಭಿನ್ನ ನೆಲೆಗಳಲ್ಲಿ ಗುರುತಿಸಿಕೊಂಡು ಅಧ್ಯಯನಕ್ಕೆ ಮುಂದಾಗಬಹುದಾಗಿದೆ. ಉಪರಾಷ್ಟ್ರೀಯ ದೇಶೀವಾದ ಮತ್ತು ಸ್ಥಳೀಯ ದೇಶೀವಾದದ, ದೇಶೀಯತೆಯನ್ನು ಗುರುತಿಸಿ ಕೊಳ್ಳುವಾಗ ಒಂದೊಂದು ಸಮೂಹ ಸೃಷ್ಟಿಸಿಕೊಂಡ ವಿಶಿಷ್ಟತೆ ಸೃಜನಾತ್ಮಕ ಬೆಳವಣಿಗೆಯ ಸ್ವರೂಪಗಳೆಂದು ಭಾವಿಸಬೇಕು.

'ದೇಶೀವಾದ' ಎನ್ನುವುದು ಒಂದು ಸ್ವಯಂ ವ್ಯವಸ್ಥೆಯುಳ್ಳದ್ದು ಎನ್ನುವುದನ್ನು ಚರಿತ್ರೆ ಸ್ಪಷ್ಟಪಡಿಸುತ್ತದೆ.* ಇದರರ್ಥ ಇದು ಸಂಪರ್ಕರಹಿತವಾದದ್ದು, ಸಂವೇದನಾ ರಹಿತವಾದುದ್ದೆಂದಲ್ಲ. ಎಲ್ಲರೊಳಗಿದ್ದೂ ಎಲ್ಲರಂತಾಗದೆ ಬೆಳೆದು ನಿಲ್ಲುವ ಶಕ್ತಿ ಇದಕ್ಕಿದೆ. ತನ್ನೊಳಗಿಂದಲೇ ಬೆಳೆಯುವ ತನ್ನನ್ನು ತಾನು ವಿಮರ್ಶೆಗೆ ತೊಡಗಿಸಿ ಕೊಳ್ಳುವ ಸಾಮರ್ಥ್ಯವುಳ್ಳದ್ದು. ಈ ಹಿನ್ನೆಲೆಯಲ್ಲಿ ದೇಶೀಯತೆ ಎನ್ನುವುದು, ಒಂದು ಜಾನಪದವನ್ನು ಒಡೆದು ಇನ್ನೊಂದು ಜಾನಪದವನ್ನು ಕಟ್ಟುವುದೇ ಆಗಿದೆ.

ಇದು ಹೊರಗಣ್ಣಿಗೆ ಕಾಣುವಂತಹ ಪಾರದರ್ಶಕ ಸ್ವರೂಪದ್ದಲ್ಲ. ಪರಕೀಯತೆ ಯನ್ನು ತಂದು ದೇಶೀಯತೆಗೆ ಹೇರಿದರೂ ತನಗೆಷ್ಟು ಬೇಕೋ ಅಷ್ಟು ತೆಗೆದುಕೊಂಡು ಇನ್ನುಳಿದುದ್ದನ್ನು ಅಥವಾ ನಿರ್ಜೀವ ಎನಿಸಿದ್ದನ್ನು ಸಮುದ್ರ ಹೊರಹಾಕುವಂತೆ ಹೊರ ಹಾಕಿ ಬಿಡುತ್ತದೆ. ಇದರ ಬೇರುಗಳನ್ನರಿತವರು ಎಂದರೆ, ಭೂತ ಮತ್ತು ವರ್ತಮಾನದ ನಡಿಗೆಯನ್ನರಿತವರು ಇದರ ಸವಾರಿಯನ್ನು ಮಾಡಬಲ್ಲರು. ತಮ್ಮ ನಿರೀಕ್ಷೆಯಂತೆ ಭವಿಷ್ಯತ್ತನ್ನು ಸೃಷ್ಟಿಸಿಕೊಳ್ಳಬಲ್ಲರು. ಇದರ ನಡಿಗೆಯನ್ನು ಅರಿಯ ಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಆಗ ಎತ್ತೆತ್ತಲೋ ಹರಿದು ಹೋಗುವ ನೀರನ್ನು

* ಹೆಚ್ಚಿನ ಅಧ್ಯಯನದ ವಿವರಕ್ಕೆ: ಇದೇ ಲೇಖಕರ ದೇಶೀವಾದದ ನೆಲೆ ಎಂಬ ಲೇಖನ ವನ್ನು ಗಮನಿಸಿ. 'ಪುರಾಣ-ಜಾನಪದ ಮತ್ತು ದೇಶೀವಾದ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಿರ್ದಿಷ್ಟವಾದೆಡೆಗೆ ಹರಿಯುವಂತೆ ಮಾಡಬಲ್ಲ ಸಾಮರ್ಥ್ಯ ನಮ್ಮಲ್ಲಿರುತ್ತದೆ. ಆದ್ದರಿಂದ ದೇಶೀವಾದ ಎನ್ನುವುದು ಯಾರೊಬ್ಬರ ವಿಚಾರದ ಹೇರಿಕೆಯಲ್ಲ ಅಥವಾ ವ್ಯಕ್ತಿನಿಷ್ಠವಾದುದಲ್ಲ, ಅದು ಸಮೂಹನಿಷ್ಠವಾದುದು. ಹೀಗಾಗಿ ದೇಶೀವಾದವೆಂದರೆ ವಿಭಿನ್ನ ಸಮೂಹಗಳ ಬಹುಮುಖಿ ಅಸ್ತಿತ್ವವಾದ.

ಜಾನಪದವನ್ನು ಒಡೆದು ಜಾನಪದವನ್ನು ಕಟ್ಟುವ ಕ್ರಿಯೆ, ವಿರುದ್ಧ ಸಂಸ್ಕೃತಿಯ ಮುಖಾಮುಖಿಯ ಸಂದರ್ಭದಲ್ಲಾಗಿರಬಹುದು ಅಥವಾ ಪರಸ್ಪರ ಸೃಜನಾತ್ಮಕ ಶಕ್ತಿಯ ಮುಖಾಮುಖಿಯ ಸಂದರ್ಭದಲ್ಲಾಗಿರಬಹುದು. ಆದರೆ, ಸವಾಲಿನ ಪ್ರಶ್ನೆ ಬರುವುದು ಹರಿವ ನೀರು ನಿಂತ ನೀರಾಗುವ ಸಂದರ್ಭದಲ್ಲಿ ಎನ್ನುವುದರ ಅರಿವಿರಬೇಕು. ಇಲ್ಲಿಯೇ ಹೊಸ ಎಚ್ಚರ ಸಾವು-ನೋವುಗಳ ಆರಂಭವಾಗಿರುತ್ತದೆ ಮತ್ತು ಇಲ್ಲಿಯ ನಡಿಗೆ ಅಷ್ಟೇ ತ್ವರಿತಗತಿಯದ್ದಾಗಿರುತ್ತದೆ. ಇವೆಲ್ಲದರ ಹಿನ್ನೆಲೆಯಲ್ಲಿ ದೇಶೀವಾದ ಎನ್ನುವುದು ವರ್ತಮಾನ, ಭೂತ ಮತ್ತು ಭವಿಷ್ಯತ್ತಿಗೆ ಸಂಬಂಧಿಸಿದ ವಿಭಿನ್ನ ಆಯಾಮಗಳಿದ್ದು ಅವು ಒಂದೇ ಸ್ವರೂಪದವು ಆಗಿರುವುದಿಲ್ಲ ಎನ್ನುವುದು ಸ್ಪಷ್ಟ.

ಪಾಶ್ಚಾತ್ಯ ಸಿದ್ಧಾಂತಗಳನ್ನು ನಿರಾಕರಿಸುವುದು ಅಥವಾ ತಳ್ಳಿಹಾಕುವುದು ಇಲ್ಲಿಯ ಉದ್ದೇಶವಲ್ಲ. ನಮ್ಮ ಚಾರಿತ್ರಿಕ ದೇಶೀವಾದವೂ ಇದನ್ನೇ ಹೇಳುತ್ತದೆ. (ದಶಾವತಾರಗಳನ್ನು ಪರಿಶೀಲಿಸಿರಿ) ಈ ಸಿದ್ಧಾಂತಗಳನ್ನು ಹೊಸ ಎಚ್ಚರಿಕೆಯಿಂದ ಬಳಸಲು ನಿರ್ದೇಶಿಸುವಂತಹುದು. ಬೌದ್ಧಿಕ ದಾಸ್ಯದಿಂದ ಹೊರತರುವಂತಹದು. ಅಥವಾ ಆಕ್ರಮಣಕಾರಿ ಪರದೇಶೀಯತೆ ಹೆಚ್ಚು ಪ್ರಭಾವಶಾಲಿ ಮತ್ತು ಪರಿಣಾಮಕಾರಿಯಾಗಿದ್ದು ಸ್ವೀಕೃತಿಯ ಅನಿವಾರ್ಯತೆ ಇದ್ದಾಗಲೂ, ಮೊದಲು ಪ್ರತಿಭಟಿಸಿ ಕಾಲಾಂತರದಲ್ಲಿ ಸಾಂಸ್ಕೃತೀಕರಣಗೊಂಡು ತನ್ನದಾಗಿಸಿಕೊಳ್ಳುವುದು. ಅಷ್ಟೇ ಅಲ್ಲ, ತಾನೇ ಅದರ ಅಧಿಪತಿ, ಸೃಷ್ಟಿಕರ್ತ ಎಂದು ಘೋಷಿಸುತ್ತದೆ; ಇಂಥ ಉದಾಹರಣೆಗಳು ಐತಿಹಾಸಿಕವಾಗಿ ಪೌರಾಣಿಕವಾಗಿ ನಮಗೆ ಸಾಕಷ್ಟು ದೊರೆಯುತ್ತವೆ.

ನಾವೀಗ ಎಲ್ಲಿದ್ದೇವೆ? ಮತ್ತು ಎತ್ತ ಸಾಗುತ್ತಿದ್ದೇವೆ ?

ನಾವು ಅನ್ವಯಿಕ ಅಧ್ಯಯನಕ್ಕೆ ಬಾಚಿ ತಬ್ಬಿಕೊಂಡುಬಿಟ್ಟಿದ್ದೇವೆ. ನಮ್ಮಲ್ಲಿ ಸ್ವಂತಿಕೆ ಎನ್ನುವುದು ಕಡಿಮೆ. ಸತ್ಯಹರಿಶ್ಚಂದ್ರನ ಹಾಗೆ ಪೋಜು ಕೊಡುವ ನಾವು ವ್ಯಕ್ತಿಗತ ಹಿತಾಸಕ್ತಿಗೆ ನಮ್ಮನ್ನೇ ನಾವು ಮಾರಿಕೊಳ್ಳಲು ಸಿದ್ಧರಿದ್ದೇವೆ. ಇನ್ನು ದೇಶದ ಮಾತೇನು ? ಜಗತ್ತಿನ ಜಾನಪದ ಎಂಬ ಭೂತಕ್ಕೆ ಸಮುದ್ರದ ನೀರೆಲ್ಲವನ್ನು ಹೀರಿದರೂ ನೆಲದೊಳಗಣ ತೇವಾಂಶವನ್ನೂ ಹೀರಿದ್ದರೂ ತೀರದ ದಾಹ. ಇಂತಹ ತೀರದ ದಾಹದ ಭೂತವನ್ನು ಹಿಡಿಯಲು ಭಾರತೀಯ ಜಾನಪದವೆಂಬ ಹೊಟ್ಟೆ ಎಳೆಯುವ ಬಾಲಕ, ನೆಲದಿಂದ ಒಮ್ಮೆಲೇ ಆಕಾಶಕ್ಕೆ ಹಾರಲು ಪ್ರಯತ್ನಿಸುತ್ತಿದ್ದಂತಿದೆ ನಮ್ಮ ಬದುಕು ; ನಮ್ಮ ಅಧ್ಯಯನ ಸಂಶೋಧನೆ.

ಯುರೋಪಿನ ವಿದ್ವಾಂಸರು ಮೊದಲು ತಮ್ಮಲ್ಲಿದ್ದ ಸಾಮಗ್ರಿಯ (ಜಾನಪದ) ಮೇಲಿಂದ ಅಂತರ್‌ರಾಷ್ಟ್ರೀಯವಾದಕ್ಕೆ ಕಟ್ಟುಬಿದ್ದು ಅನಂತರ ದೇಶೀವಾದದ ಕಡೆಗೆ ತಿರುಗಿದರು. ತಾವು ಮಾಡಿದ ತಪ್ಪಿನ ಅರಿವಿನಿಂದಾಗಿ ಅದನ್ನು ತಿದ್ದಿಕೊಂಡು ಮುಂದೆ ಬಂದರು. ಅಮೆರಿಕಾದ ವಿದ್ವಾಂಸರು ಭಾರತದಂತಹ ದೇಶಗಳಲ್ಲಿಯ ಸಮೃದ್ಧ ಜಾನಪದವನ್ನು ನೋಡಿ ತಮ್ಮಲ್ಲಿಲ್ಲದ ಸತ್ವಕ್ಕಾಗಿ ಅಂತರ್‌ರಾಷ್ಟ್ರೀಯವೆಂಬ ಚಿಂತನೆಯ ಜಾಲ ಬೀಸಿ ಸೋತು ಹಿಂದೆ ಸರಿದು ಅಗೆದ ನೆಲವನ್ನೇ ಅಗೆಯುತ್ತಿದ್ದಾರೆ. ಸ್ಥಿತಿ ಹೀಗಿರುವಾಗ ಇದನ್ನು ಗ್ರಹಿಸದೆ ಭ್ರಮಾತ್ಮಕವಾಗಿ ಕುರುಡುತನದಿಂದ ನಾವು ಅವರ ಗತಿಸಿದ ಮಾರ್ಗವನ್ನು ಅನುಸರಿಸುತ್ತಿದ್ದೇವೆ. ನಮ್ಮ ಇಂಥ ಧೋರಣೆ ಮರು ವಿಮರ್ಶೆಗೆ ಒಳಗುಮಾಡುವುದು ಅವಶ್ಯವೆನಿಸುವುದಿಲ್ಲವೇ ? ಅವರ ನಡಿಗೆ ಮೇಲಿನಿಂದ ಕೆಳಕ್ಕೆ ಬಂತು. ಆದರೆ ನಾವು, ಭೂಮಿಯನ್ನು ಬಿಟ್ಟು ಆಕಾಶವನ್ನು ನೋಡುವ ಪರಿಕಲ್ಪನೆಯನ್ನು ರೂಢಿಸಿಕೊಳ್ಳುತ್ತಿದ್ದೇವೆ.

ಆಕಾಶವನ್ನು ನೋಡುವುದು ಸಮಂಜಸವಲ್ಲ ಎನ್ನುವ ವಿಚಾರವಲ್ಲ. ಆದರೆ ಆಕಾಶವನ್ನು ನೋಡುವ ಕಾಲ ಇದಲ್ಲವೆಂದು ಗುರುತಿಸುವುದೇ ನನ್ನ ಉದ್ದೇಶ. ಈಗಿನ ಸಂದರ್ಭದಲ್ಲಿ ಆಕಾಶವನ್ನು ನೋಡುತ್ತ ಕುಳಿತರೆ ಕಾಲಡಿಯಲ್ಲಿರುವುದನ್ನು ಕಳೆದು ಕೊಳ್ಳುತ್ತೇವೆ. ಹಸಿಹಸಿಯಾದ ಬದುಕನ್ನು ಬಿಟ್ಟು ಒಣಪಾಂಡಿತ್ಯದ ಶುಷ್ಕ ಬದುಕಿಗೆ ಬಲಿಯಾಗುತ್ತಿದ್ದೇವೆ. ಪಾಶ್ಚಾತ್ಯರೇ ಆಕಾಶ ನೋಡುವುದನ್ನು ಬಿಟ್ಟು ಭೂಮಿಯಲ್ಲಿಯ ಕಾಲುಗಳನ್ನು ಅರಸುತ್ತಿರುವಾಗ, ಅವರು ಎಣಿಸಲಾಗದೆ ಬಿಟ್ಟ ನಕ್ಷತ್ರಗಳನು ಎಣಿಸಲು ಹೋಗಿ ನಾವೇಕೆ ಹಲ್ಲು ಕಳೆದುಕೊಳ್ಳಬೇಕು. ಅವರಂತೆ ನಾವೂ ಆಕಾಶ ದಿಂದ ಭೂಮಿಗಿಳಿಯುವ ಅಗತ್ಯವಿಲ್ಲ. ಬದಲಾಗಿ ಭೂಮಿಯಿಂದ ಆಕಾಶಕ್ಕೇರುವ ಅಗತ್ಯವಿದೆ ; ಎಂದರೆ ಅಂತರ್‌ರಾಷ್ಟ್ರೀಯವಾದದಿಂದ ದೇಶೀವಾದಕ್ಕೆ ಬರುವುದಕ್ಕಿಂತ ಇಂದಿನ ನಮ್ಮ ರಾಜಕೀಯ-ಸಾಂಸ್ಕೃತಿಕ ಬದುಕಿನ ಸಂದರ್ಭದಲ್ಲಿ ದೇಶೀವಾದದಿಂದ ಅಂತರ್‌ರಾಷ್ಟ್ರೀಯ ವಾದಕ್ಕೇರುವ ಅಗತ್ಯವಿದೆ.

ಇಂದಿನ ನಮ್ಮ ಸ್ಥಿತಿ ಮುದ್ದೂರಿನಿಂದ ಒಮ್ಮೆಲೇ ಗ್ಲೋಬಿನ ಮೇಲೆ ಜಿಗಿದು ಮಾತನಾಡುವ ಪರಿಭಾಷೆಯ ಕಸರತ್ತನ್ನು ತುಂಬ ಪರಿಶ್ರಮ ವಹಿಸಿ ಮಾಡುತ್ತಿದ್ದೇವೆ. ಇದರಿಂದಾಗಿ ಮದ್ದೂರು ಎನ್ನುವುದು (ಮಂಡ್ಯ) ಮಂಡಿಯಾದಲ್ಲಿದೆ ಎನ್ನುವುದನ್ನೇ ಮರೆತಿದ್ದೇವೆ. ಇನ್ನು ಇಂಡಿಯಾ ಎನ್ನುವುದೊಂದಿದೆ, ಅದರಲ್ಲಿ 'ಉಪಮಂಡಿಯಾ' ಗಳಿವೆ ಎನ್ನುವುದು ನಮ್ಮ ಅರಿವಿಗೇ ಇಲ್ಲ. ಇದು ಕೂಸು ಹೊಟ್ಟೆಯೊಳಗಿರುವಾಗಲೇ ಅವರ ಮರಿಮಕ್ಕಳ ಬಗ್ಗೆ ಚಿಂತಿಸಿದಂತೆ. ಈ ನೆಲೆಯ ಅಧ್ಯಯನ ಹೇಗಾಗಿದೆ ಎಂದರೆ, ಜನಪದ ಶಿಶುಗೀತೆಯೊಂದರ ಒಂದು ನುಡಿ ಅವಲೋಕನಕ್ಕೆ ಸಾಕೆನಿಸುತ್ತದೆ.

ಹೊಟ್ಟೆ ಡುಮ್ಮ
ಕೈ-ಕಾಲು ಸಣ್ಣ
ನೆಟಗೆ ನಡೆಯೋ
...... ತಮ್ಮ

ಬಾಗ್ನರ ಜಾನಪದ ವರ್ಗೀಕರಣ ಮತ್ತು ಸ್ಟಿಥ್‌ಥಾಮ್ಸನ್ ಅವರ ಆಶಯ ಸೂಚಿ, ಇವೆಲ್ಲ ಅಂತರ್‌ರಾಷ್ಟ್ರೀಯವಾದದ ಎಳೆಯನ್ನೇ ಹಿಡಿದು ಜಗತ್ತಿನ ಜಾನಪದಕೆ ಮುಖಮಾಡಿ ನಿಂತವು. ಇವುಗಳನ್ನೇ ಅಧಿಕೃತವೆಂದು ನೆಚ್ಚಿ, ಜಗತ್ತಿನ ಜಾನಪದದ ಧಾಟಿಗೆ ಸೇರುವ ಬಯಕೆ ನಮ್ಮದಾಗಿದೆ. ಎಂದರೆ ಒಂದು ಕಾಲು ಮದ್ದೂರಲ್ಲಿದ್ದರೆ ಇನ್ನೊಂದು ಕಾಲು ಗ್ಲೋಬಿನ ಮೇಲಿಟ್ಟ ವಾಮನಾವತಾರಿಗಳು ನಾವು ! ಬಾಗ್ನ್ ವರ್ಗೀಕರಣ ಗ್ಲೋಬಿನಾಕಾರದ್ದೇ ಆಗಿದೆ, ಇದರಲ್ಲಿ ಜಾನಪದ 'ಈ 'ಪ್ರಕಾರ ಬಂದಿಲ್ಲ. 'ಈ' ಪ್ರಕಾರ ಸೇರಿಲ್ಲವೆಂದು ಹೆಚ್ಚಿನ ಸಂಖ್ಯೆಗಳನ್ನು ಸೂಚಿಸಿ ಹೇಳ ಹೊರಡುವುದು ಗ್ಲೋಬು ನೆಗ್ಗಿದೆ ಎಂದು ಸರಿಮಾಡಲು ಹೊರಟಂತೆ ! ಥಾಮ್ಸನ್ನರ ಆಶಯ ಸೂಚಿ ಸಂಪುಟಗಳು, ಒಂದು ಬಿಳಿ ಆನೆ ಇದ್ದ ಹಾಗೆ. ನಾನು ಇಷ್ಟು ಹೊಸ ಆಶಯಗಳನ್ನು ಗುರುತಿಸಿದೆ ಎಂದು ಸಂಖ್ಯೆ ಕೊಡುವುದು ಆ ಬಿಳಿ ಆನೆಯ ಬಾಲಕ್ಕೆ ರೋಮ ಅಂಟಿಸುವ ಕೆಲಸಕ್ಕಿಂತ ಭಿನ್ನವಾದುದ್ದೇನಲ್ಲವೆನಿಸುತ್ತದೆ. ಸದ್ಯದ ಸಂದರ್ಭದಲ್ಲಿ ಇದು ಹೀಗೆ ಮುಂದುವರೆದದ್ದೇ ಆದರೆ ;

> ಗ್ಲೋಬಿನರ್ಥಕ ಸಾಯೋದ ಕಲಿಸಿ
> ಸ್ವತಃ ಸಾಯಲಿಕೆ ಬಾರದೆ ಹೋದಿ

ಎನ್ನುವ ಸ್ಥಿತಿಗೆ ನಮ್ಮ ಅಧ್ಯಯನ-ಸಂಶೋಧನೆ ಮತ್ತು ನಾವು ಬಂದು ನಿಲ್ಲುತ್ತೇವೆ ; ಹೀಗಾಗಿ ನಮ್ಮ ಸ್ವಂತಿಕೆಯೇ ನಮ್ಮನ್ನು, ನಮ್ಮತನವನ್ನು, ನಮ್ಮ ದೇಶವನ್ನು ಉಳಿಸಬಲ್ಲುದು. ಇಲ್ಲದೆ ಹೋದರೆ ಎಲ್ಲವೂ ಮಾರಾಟಕ್ಕಿಟ್ಟ ವಸ್ತುವಿನಂತಾಗುತ್ತದೆ. ನಾವು ನಮ್ಮತನವಿಲ್ಲದ ದೇಶದಲ್ಲಿ ನಾವಿದ್ದರೂ ಅಷ್ಟೇ, ಸತ್ತರೂ ಅಷ್ಟೇ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯೇ 'ರಾಷ್ಟ್ರೀಯತೆ' ಎನ್ನುವುದು ಇಂಗ್ಲೆಂಡಿನಲ್ಲಿ ಕಾಣಿಸಿಕೊಂಡಂತೆ ನಮ್ಮಲ್ಲಿಯೂ ಅದು ಬೀಜರೂಪವಾಗಿ ಕಾಣಿಸಿಕೊಂಡಿತು. ಆದರೆ ಅದು ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಕಶಕ್ತಿಯಾಗಿ ಮಾತ್ರ ಕೆಲಸ ಮಾಡಿತು. ಇಂದಿನ ಈ ಜಾಗತೀಕರಣ ಮತ್ತು ಉದಾರೀಕರಣದ ಸಂದರ್ಭದಲ್ಲಿ 'ದೇಶೀವಾದ' ಎನ್ನುವುದು ಮೊಳಕೆ ಒಡೆದು ಬೆಳೆಯಬೇಕಾಗಿದೆ. ಈ ಬೆಳವಣಿಗೆ ಹಿಂದೂ ಸ್ವರೂಪದ್ದಾಗಿರದೆ 'ಭಾರತೀಯ ರಾಷ್ಟ್ರ' ಸ್ವರೂಪದ್ದಾಗಿರಬೇಕಾಗಿದೆ.

ಡಾ. ಹಿ. ಶಿ. ರಾಮಚಂದ್ರೇಗೌಡ

ಜನಪದ ಇತಿಹಾಸ

ಜನಪದ ಇತಿಹಾಸವನ್ನು ಬರೆಯುವುದು ಬೇರೆ, ಜಾನಪದದಲ್ಲಿ ಐತಿಹಾಸಿಕ ದಾಖಲೆಗಳನ್ನು ಕಂಡುಕೊಳ್ಳುವುದು ಬೇರೆ. ಮೊದಲಿನದನ್ನು ಚಾರಿತ್ರಿಕ ಜಾನಪದ ವಿದ್ವಾಂಸ ಮಾಡಬೇಕಾಗುತ್ತದೆ. ಜಾನಪದ ಕೂಡ ಚಾರಿತ್ರಿಕ ಸೃಷ್ಟಿಯೇ ಎಂಬುದನ್ನು ಅಖಂಡ ಕಾಲಮಾನದ ಉತ್ಪತ್ತಿಗಳಲ್ಲಿ ಇದೂ ಒಂದೆಂದು ತೋರಿಸುವನು. ಜಾನಪದ ಅಂಶವೊಂದು ಚಾರಿತ್ರಿಕ ಹಿನ್ನೆಲೆಗೆ ಒಳಪಟ್ಟಿದ್ದಾಗ, ಅದರ ಮೌಲ್ಯ ಕೇವಲ ಒಂದು ಆಚರಣೆಯ ವಿಷಯ ಆಗಿದ್ದಾಗ ಅದು ಹೇಗೆ ಚರಿತ್ರೆಯ ವಿಷಯ ಕೂಡ ಆಗುತ್ತದೆ ಎಂಬುದನ್ನು ವಿಶದೀಕರಿಸಬೇಕಾಗುತ್ತದೆ. ಜಾನಪದ ಅಧ್ಯಯನದಲ್ಲಿ ಭೌಗೋಳಿಕ ಪರಿಸರದಂತೆ ಚಾರಿತ್ರಿಕ ಪರಿಸರ ಬಹಳ ಮುಖ್ಯ ಗಣನೆಯ ಸಂಗತಿ. ಚಾರಿತ್ರಿಕ ಪುನರ್‌ರಚನಾ ಸಿದ್ಧಾಂತ ಚಾರಿತ್ರಿಕ–ಭೌಗೋಳಿಕ ಪದ್ಧತಿ ಮತ್ತು ಖಂಡಾಂತರ ಚಾರಿತ್ರಿಕ ಜಾನಪದ ವ್ಯತ್ಯಯಗಳನ್ನು ಕುರಿತಂಥ ಜಾನಪದ ಸಿದ್ಧಾಂತಗಳು ನಮ್ಮಲ್ಲಿವೆ. ಇದು ಚರಿತ್ರೆ ಮತ್ತು ಜಾನಪದಕ್ಕಿರುವ ಸಂಬಂಧವನ್ನು ಸೂಚಿಸುತ್ತದೆ.

ಜನಪದ ಇತಿಹಾಸವನ್ನು ಬರೆಯುವ ಕೆಲಸ ಜಾನಪದದೊಳಗಿನ ಕೆಲಸವಾದರೆ, ಜನಪದದಿಂದ ಐತಿಹಾಸಿಕ ದಾಖಲೆಗಳನ್ನು ಹೆಕ್ಕಿತೆಗೆಯುವುದು ಚರಿತ್ರಕಾರನ ಕೆಲಸ. ಜನಪದ ಇತಿಹಾಸಕ್ಕೂ ಚರಿತ್ರೆಗೂ ಮೂಲಭೂತವಾದ ವ್ಯತ್ಯಾಸವಿದೆ. ಚರಿತ್ರೆ ನಡೆದ ಘಟನೆಗಳ ಪುನರ್‌ಚಿಂತನೆ–ಪರಿಶೀಲನೆ. "The Idea of History" ಎನ್ನುವ ಕೃತಿಕಾರನಾದ R. G. Collingwood ಚರಿತ್ರೆ ಎಂದರೆ "thought about thought" ಎನ್ನುತ್ತಾನೆ. ಎಂದರೆ ನಡೆದ ಹಾಗೆಯೇ ಚರಿತ್ರೆ ದಾಖಲೆಯಾಗುವುದಿಲ್ಲ. ನಡೆದ ಹಾಗೆಯೇ ಎಂದರೆ ವಾಸ್ತವ ಮತ್ತು ಸೇರಿಕೆಯ ವಿಷಯಗಳು ಒಟ್ಟಿಗೆ ಇರುವಂಥದು. ಯಾವುದೇ ಜನಪದದೊಳಗೆ ಘಟಿಸುವ ಸಂಗತಿಗಳು ಚರಿತ್ರೆಕಾರನ ದೃಷ್ಟಿಯಿಂದ ನೋಡಿದಾಗ ಸ್ವಚ್ಛ (pure) ಆಗಿರುವುದಿಲ್ಲ. ಜನಪದ ಮನೋಧರ್ಮಕ್ಕೆ ಇದು ಸಾಧ್ಯವೂ ಇಲ್ಲ. ಜನಪದ ಇತಿಹಾಸಕಾರ ಇದನ್ನು ನಿರೀಕ್ಷಿಸುವುದೂ ಇಲ್ಲ. ಆದರೆ ಚರಿತ್ರೆ ಹಾಗಲ್ಲ "...history is nothing but the re-enactment of past thought in the historian's mind"[1] ಎಂಬುದು ಚರಿತ್ರಾರ್ಹ ಘಟನೆಯ ಮೂಲ ಗುರಿ.

ಒಬ್ಬ ಶುದ್ಧ ಚರಿತ್ರಕಾರ ಜನಪದ ಇತಿಹಾಸಕಾರ ಆಗುವುದಿಲ್ಲ. ಅದನ್ನು ಜಾನಪದ ವಿದ್ವಾಂಸ ಒಪ್ಪುವುದಿಲ್ಲ. ಒಬ್ಬ ಶುದ್ಧ ಚರಿತ್ರಕಾರ ಒಬ್ಬ ಶುದ್ಧ ಜಾನಪದ ವಿದ್ವಾಂಸ ಕೂಡ ಆಗಿದ್ದರೆ ಅವನನ್ನು ನಂಬಬಹುದು. ಈ ನಿಟ್ಟಿನಲ್ಲಿ ಅಮೆರಿಕೆಯ ಚಾರಿತ್ರಿಕ ದೃಷ್ಟಿಕೋನದ ಜಾನಪದ ವಿದ್ವಾಂಸ Richard M. Dorsonನನ್ನು ನಾವು ಗಮನಿಸಬೇಕು. ಜನಪದ ಇತಿಹಾಸದ ಕಲ್ಪನೆ Donsonನಲ್ಲಿ ಕೂಡ ಪೂರ್ಣರೂಪದಲ್ಲಿ ಮೂರಬುವಿಲ್ಲ. ಚರಿತ್ರಕಾರ ಜಾನಪದಕ್ಕೆ ಹೊರಗಿನವನು. ಯಾಕೆಂದರೆ ಅವನು ಶುದ್ಧಿ–ಅಶುದ್ಧಿಯ ಕಲ್ಪನೆಯುನ್ನು ಹೊಂದಿದವನು. ಸಿಕ್ಕಿದ್ದು, ಕಂಡದ್ದು–ಕೇಳಿದ್ದನ್ನು ಸಂಪಾದಿಸುವುದು (edited) ಅವನ ಕೆಲಸ. ಅವನ ಶುದ್ಧಪಾಠ, ಸಂಪಾದಿಸಿದ (edited) ಪಾಠ. ಇದು ಎಂದೂ ಜನಪದ ಪಾಠಕ್ಕೆ ಪೂರಕವೂ ಅಲ್ಲ; ಪೋಷಕವೂ ಅಲ್ಲ. ಜೊತೆಗೆ ಸಾಮಾಜಿಕ–ರಾಜಕೀಯ ಇತಿಹಾಸವನ್ನು ಶೋಧಿಸುವ ಆತ ಮೊದಲು ಒಂದು ಕೇಂದ್ರೀಕೃತ ಆಡಳಿತ ವ್ಯವಸ್ಥೆಗೆ ಗಂಟುಬಿದ್ದನು. ಆ ಮೂಲಕವೇ ಜೀವ–ಜಗತ್ತನ್ನು ನೋಡುವವನು. ಈತ ಎಂದೂ ಪೂರ್ಣ ಪ್ರಮಾಣದ ಜನಪದ ಇತಿಹಾಸಕಾರ ಆಗಲಾರ ಎಂಬುದು ನನ್ನ ದೃಢ ಅಭಿಪ್ರಾಯ.

ಜನಪದ ಇತಿಹಾಸವನ್ನು ಬರೆಯುವವನ ಮುಂದೆ ಎರಡು ಸಮಸ್ಯೆಗಳಿವೆ. ಒಂದು, ಜನಪದದ ದೃಷ್ಟಿಯಲ್ಲಿ ಇತಿಹಾಸವೆಂದರೇನು ಎಂಬುದು. ಎರಡು ಈಗಿರುವ ದಾಖಲಾತಿ ಇತಿಹಾಸ (documentary history)ದ ದೃಷ್ಟಿಯಿಂದ ಮೌಖಿಕ ಪರಂಪರೆ ಎಷ್ಟರಮಟ್ಟಿಗೆ ಇತಿಹಾಸಕ್ಕೆ ಬದ್ಧವಾದುದು. ನಾವು ಮೊದಲ ಸಮಸ್ಯೆಗೆ ಉತ್ತರ ಕಂಡು ಕೊಂಡರೆ ಎರಡನೆಯ ಸಮಸ್ಯೆಗೆ ಉತ್ತರ ಹುಡುಕುವ ಅವಶ್ಯಕತೆ ಇಲ್ಲ. ಮೊದಲನೆಯ ಸಮಸ್ಯೆಗೆ ಉತ್ತರ ಕಂಡುಕೊಳ್ಳುವುದು ಸಾಧ್ಯವಾಗದಿದ್ದರೆ ಎರಡನೆಯ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಬಹಳಷ್ಟು ಜಾನಪದ ವಿದ್ವಾಂಸರಾಗಲಿ, ಚರಿತ್ರೆಕಾರರಾಗಲಿ ಮೊದಲಿನ ಸಮಸ್ಯೆ ಬಗ್ಗೆ ಗಮನಹರಿಸಿಲ್ಲ. ಇದಕ್ಕೆ ಕಾರಣ ಕೂಡ ಇದೆ. ನಾವಿನ್ನೂ ಜಾನಪದ ಮತ್ತು ಅದರ ಸಂಬಂಧಾತ್ಮಕ ಶಿಸ್ತುಗಳ ಬಗ್ಗೆ ಸ್ಪಷ್ಟ ವ್ಯತ್ಯಾಸಗಳನ್ನು ಗುರುತಿಸಿಕೊಂಡೇ ಇಲ್ಲ. ಚರಿತ್ರಕಾರ ಕೂಡ ಚಾರಿತ್ರಿಕ ದೃಷ್ಟಿ ಎಂದರೆ ಒಂದು ಅಧಿಕೃತ (official) ದೃಷ್ಟಿ ಎಂದೇ ಭಾವಿಸಿದಂತಿದೆ. ಆಡಳಿತ ವ್ಯವಸ್ಥೆಗಳು ಹುಟ್ಟಿದ ನಂತರ ಇವರ ಚರಿತ್ರೆ ಆರಂಭವಾಗುತ್ತದೆ ಮತ್ತು ಅದರ ಜೊತೆಗಿನ ವ್ಯವಸ್ಥೆಯ ಸಂಬಂಧದಲ್ಲಿ ಚರಿತ್ರೆಯನ್ನು ಬರೆಯಲಾಗಿದೆ. ಜನಸಾಮಾನ್ಯನಿಂದ ಸೃಷ್ಟಿಯಾಗುವ ಸಾಮಾನ್ಯ ಘಟನೆಗಳು ಎಂದೂ ಚರಿತ್ರೆಗಳಲ್ಲಿ ದಾಖಲುಗೊಂಡೇ ಇಲ್ಲ. ಕರ್ನಾಟಕದಲ್ಲಿ ಬಹು ವಿಜೃಂಭಣೆಯಿಂದ ಬದುಕಿದ ವಿಜಯನಗರ ಸಾಮ್ರಾಜ್ಯದ ಇತಿಹಾಸ ಅಲ್ಲಿಯ ರಾಜರ, ದ್ವೈತ-ಅದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳಿಂದ ತುಂಬಿಹೋಗಿದೆ. ಉಳಿದ ಬಹಳ ಜನಸಂಖ್ಯೆಯ ಬದುಕು–ಬವಣೆ ಚರಿತ್ರಕಾರರ ತೀವ್ರ ಸಮಸ್ಯೆಯಾಗಿಲ್ಲ. ನಮ್ಮ ಜನಪದ ಕಥೆ, ಗೀತೆಗಳಲ್ಲಿ ಬರುವ ಸಾಂಸ್ಕೃತಿಕ ವೀರರು ಚರಿತ್ರೆಯ ಪುಟಗಳಿಗೆ ಸೇರದೆ ಐತಿಹ್ಯ, ಕಥೆ, ಕಟ್ಟುಕಥೆಗಳ ರೂಪದಲ್ಲಿ ಉಳಿಯಲು ಈ ಮನೋಭಾವನೆ ಕಾರಣ.

ಈಗ, ಮತ್ತು ಈ ಮೊದಲು ಬಹಳಷ್ಟು ಚರಿತ್ರೆಕಾರರನ್ನು ಕಾಡುತ್ತಿರುವ ಸಮಸ್ಯೆ ಮೌಖಿಕ ಇತಿಹಾಸದ ವಾಸ್ತವತೆ ಎಷ್ಟು ಸತ್ಯ (reliability of oral traditional history) ? ಇದು ನಂಬಿಕೆಯ ಇತಿಹಾಸವಾಗುವುದು ಹೇಗೆ ? ಇದರಿಂದ ಚಾರಿತ್ರಿಕ ಮೂಲಾಂಶಗಳನ್ನು ಹೆಕ್ಕಿತೆಗೆಯಲು ಸಾಧ್ಯವೇ, ಸಾಧ್ಯವಿದ್ದರೆ ಹೇಗೆ ? ಎಂಬ ತಾಕಲಾಟದಲ್ಲಿಯೆ ಇದ್ದಾರೆ. Richard M. Dorson ಒಂದು ಕಡೆ "The Reliability of oral history is one of the most controversial and even inflammatory questions to perplex humanists and social scientists"[2] ಎನ್ನುವರು. ಇದೇ ಸಮಸ್ಯೆಯ ಮಧ್ಯೆ ಇರುವ Colden weiser "If a woman sees a street-car accident, should her testimony be thrown out because she believes in ghost ! Poor evidence was still evidence. and all the more valuable when no other evidence was available"[3] ಎನ್ನುವರು. ಇಲ್ಲಿಂದ ಮುಂದೆ ಜನಪದ ಇತಿಹಾಸ ಹೇಗೆ ಆಗುತ್ತದೆ, ಅದನ್ನು ಬರೆಯುವುದು ಹೇಗೆ ಎಂಬ "ಬರೆಯುವ ಸಮಸ್ಯೆ"ಯೆ ಎಲ್ಲರ ಮುಖ್ಯ ಸಮಸ್ಯೆಯಾಗಿದೆ. ಜನಪದ ಇತಿಹಾಸ ಹೇಗೆ ಇದೆ ಮತ್ತು ಇರುತ್ತದೆ ಎಂಬುದು ನಮ್ಮ ಪ್ರಾಥಮಿಕ ಸಮಸ್ಯೆಯಾಗಬೇಕು. ಅದನ್ನು ಬರೆಯುವ ಮತ್ತು ಮುಂದಿನ ಜನತೆಗೆ ಇಡುವ ಸಮಸ್ಯೆಯನ್ನು ಜನಪದ ಇತಿಹಾಸಕಾರ ಹೊರಬಾರದು. ಜನಪದ ಇತಿಹಾಸ ಇಲ್ಲಿಯವರೆಗೆ ಯಾರೂ ಬರದಿಡದೆ ಉಳಿದು ಬಂದಿದೆ. ಅದು ಉಳಿದು ಬರಲು ಜನಪದ ಇತಿಹಾಸಿಕ ಪ್ರಜ್ಞೆಯೆ ಕಾರಣ. ಈಗ ನಾವು ಆ ಪ್ರಜ್ಞೆಯ ರಚನೆಯನ್ನು ಶೋಧಿಸಬೇಕು. ಇತಿಹಾಸವನ್ನು ಜನಪದರು ಪುರಾಣ ಮಾಡುತ್ತಾರೆ. ಐತಿಹ್ಯ ಮಾಡುತ್ತಾರೆ ಅಥವ ಕಟ್ಟುಕತೆ ಮಾಡುತ್ತಾರೆ. ಎನ್ನುವ ಸರಳ ಮಾತುಗಳಿಗಿಂತ ಹಾಗೆ ಮಾಡಲು ಕಾರಣವೇನು ಎಂಬುದು ಜನಪದ ಇತಿಹಾಸಕಾರನ ಶೋಧನೆಯಾಗಬೇಕು. ಜನಪದ ಇತಿಹಾಸ ಉಳಿದು ಬರಲು ಇಂಥ ಕಲ್ಪಿತ ಮಾರ್ಗಗಳೇ ಅವರಿಗೆ ಯಾಕೆ ಬೇಕಾಗುತ್ತವೆ ಎಂಬುದು ಕೂಡ ವಿಚಾರ ಮಾಡಬೇಕಾದ ಮಹತ್ವದ ಪ್ರಶ್ನೆ.

ಈ ನಿಟ್ಟಿನಲ್ಲಿ Richard M. Dorson ತಮ್ಮ ನಿಲುವನ್ನು ವ್ಯಕ್ತ ಪಡಿಸಿದ್ದಾರೆ. ಅವರು ಪ್ರಪಂಚದ ಒಬ್ಬ ಇತಿಹಾಸಕಾರ ಮತ್ತು ದೊಡ್ಡ ಜಾನಪದ ತಜ್ಞ. ಆದರೆ ಅವರ ಹೇಳಿಕೆ ಪೂರ್ಣ ಸ್ವರೂಪದ್ದು ಎಂದು ನಾನು ಭಾವಿಸುವುದಿಲ್ಲ. ಜಾನಪದ ವಿದ್ವಾಂಸನಾಗಿಯೇ ಮಾತನಾಡುವುದಾದರೆ ಆ ಕಡೆಗೆ Dorson ದಾರಿ ತೋರಿಸಿದ್ದಾರೆ ಎಂದು ಹೇಳಬಲ್ಲೆ. ಅವರ ನಿಲುವೆಂದರೆ "The source of folk history are both oral traditions and personal documents....... Folk history is not however simply a matter of oral traditions. By history of the folk I have in mind the history of the struc-

tures in which individuals play active roles of what psychologists call "vital circuits". Thus way of looking at history does not begin with the past nor with the top, but with the present, and with the individual."[4]

ಚರಿತ್ರೆ ರಚನೆಗೆ ಒಂದು ತಲೆ ಕೆಲಸ ಮಾಡುತ್ತದೆ. ಒಂದು ಧೋರಣೆಯು ತಲೆ ಕೆಲಸ ಮಾಡುತ್ತದೆ. ಅದಕ್ಕೆ ನಿರ್ದಿಷ್ಟ ಬಂಧನಗಳಿವೆ. ಅದನ್ನು ಎಂದೂ ಚರಿತ್ರಕಾರ ತನ್ನ ಪರಿಮಿತಿ ಎಂದು ಒಪ್ಪಿಕೊಳ್ಳದೆ, ತನ್ನ ವಿದ್ವಾಂಸತ್ವದ ಅರಿವು ಮತ್ತು ಅದು ಅಧಿಕ ಉಪಯುಕ್ತ ಎಂದೇ ಭಾವಿಸುವನು. ಜನಪದ ಇತಿಹಾಸ ಕೂಡ ಚರಿತ್ರೆಕಾರ ಬರೆಯುವಂತೆ ಪುನರ್ ಸೃಷ್ಟಿಗೊಳ್ಳುತ್ತದೆ. ಅದು ನಡೆದ ಘಟನೆಯನ್ನು ಯಥಾವತ್ತಾಗಿ ಹೇಳುವುದಿಲ್ಲ; ಹೇಳುವುದು ಸಾಧ್ಯವೂ ಇಲ್ಲ. ಯಾಕೆಂದರೆ ಯಾವುದೇ ಚಾರಿತ್ರಿಕ ಘಟನೆ ಒಂದು ಸಾಮಾಜಿಕ–ಸಾಂಸ್ಕೃತಿಕ ಗರ್ಭದಿಂದ ಹುಟ್ಟಿದ ಫಲಿತ. ಆದಕಾರಣ ಜನಪದ ಇತಿಹಾಸ "ಶುದ್ಧ ಚರಿತ್ರೆ"ಯಾಗದೆ ಆ ಸಂದರ್ಭದ ಸಾಂಸ್ಕೃತಿಕ–ಸಾಮಾಜಿಕ ವಿದ್ಯಮಾನಗಳ ಒಟ್ಟು ಪರಿಣಾಮವಾಗಿಯೆ ಹುಟ್ಟಿ ಬರುತ್ತದೆ. ಅದನ್ನು ಜನಪದ ಮತ್ತೆ ಪುನಾರಚಿಸುತ್ತದೆ. ಹಲವು ತಲೆಗಳು ಈ ಪುನಾರಚನೆಯಲ್ಲಿ ಭಾಗವಹಿಸುತ್ತವೆ ಇದಕ್ಕೆ ಮುಖ್ಯ ಕಾರಣವೆಂದರೆ ಒಂದು, ಆ ಘಟನೆಯನ್ನು ಉಳಿಸುವ ಜವಾಬ್ದಾರಿ. ಈ ಜವಾಬ್ದಾರಿ ವೈಯುಕ್ತಿಕ ವಾದುದಲ್ಲ; ಪರಂಪರೆಯದು. ಪರಂಪರೆಯಲ್ಲಿ ನಡೆದ ಪ್ರತಿ ಸಾಂಸ್ಕೃತಿಕ ಘಟನೆಗಳು ಪರಂಪರೆಯ ಸೊತ್ತಾಗುತ್ತವೆ. ಈ ಸಂಪತ್ತು ಮುಂದಿನ ಪೀಳಿಗೆಯ ಶಿಕ್ಷಣ ಆಗಬೇಕಾಗುತ್ತದೆ. ಹಾಗೆ ಆದಾಗಲೆ ಪರಂಪರೆಗೆ ಬಂಧ ಮತ್ತು ಭದ್ರತೆ ಬರುತ್ತದೆ. ಜನಪದ ಇತಿಹಾಸವನ್ನು ಉಳಿಸುವ ಕೆಲಸವೆಂದರೆ ಜನಾಂಗಿಕ ಪರಂಪರೆಯೊಂದರ ಸಿದ್ಧಬಂಧ ಮತ್ತು ಭದ್ರತೆಯನ್ನು ಕಾಪಾಡುವುದು.

ಎರಡನೆಯದಾಗಿ ಮತ್ತು ಮುಖ್ಯವಾಗಿ ಜಾನಪದವೇ ಒಂದು ಪ್ರತ್ಯೇಕ ಐತಿಹಾಸಿಕ ಪರಂಪರೆ. ಅದನ್ನು ನಾವು ಮೌಖಿಕ ಇತಿಹಾಸ ಎಂದು ಕರೆಯುತ್ತೇವೆ. ಅದರ ಘಟಕಗಳು ಜನಪದ ಇತಿಹಾಸವನ್ನು ಮೌಖಿಕವಾಗಿ ಉಳಿಸಿಕೊಂಡು ಬರುತ್ತವೆ. ಜಾನಪದ ಒಂದು ಸುಂದರ ಕಲ್ಪನೆ ಎನ್ನುವವರಿಗೆ ಇದು ಹಿಡಿಸುವುದಿಲ್ಲ. ಜಾನಪದ ಸುಂದರ ಕಲ್ಪನೆ ಎಂಬ ಅಭಿಪ್ರಾಯ ಮಾತ್ರ ತಪ್ಪು. ಜಾನಪದ ಇತಿಹಾಸವೆಂಬುದು ಒಂದು ಸಾಮಾಜಿಕ ಪ್ರಕ್ರಿಯೆ. ನಡೆದ ಮತ್ತು ತಿಳಿದವ ನಡೆಯಿತೆಂದು ಹೇಳಲಾದ ಘಟನೆಗಳ ಮೊತ್ತ ಜಾನಪದ. ಘಟನೆ ನಡೆಯದೆ ಇತಿಹಾಸ ಸೃಷ್ಟಿಯಾಗುವುದು ಸಾಧ್ಯವಿಲ್ಲ. ಆದರೆ ನಡೆದದ್ದು ಯಾವ ಮಾದರಿಯ ಇತಿಹಾಸ ಎನ್ನುವುದು ಮುಖ್ಯ. ಇತಿಹಾಸ ಮರುಕಳಿಸಿತೆ ಅಥವ ಪ್ರತ್ಯೇಕವಾಗಿ ಘಟಿಸಿತೆ ಎಂಬ ತೀರ್ಮಾನದ ಮೇಲೆ ಜನಪದ ಇತಿಹಾಸದ ಮುಖಗಳು ತೆರೆದುಕೊಂಡಿವೆ. ಒಂದು ಪುರಾತನ ಐತಿಹ್ಯ ಮಾದರಿ ಹೊಸ ಸಂದರ್ಭದಲ್ಲಿ ಘಟಿಸಿದಾಗ ಅದು ಇತಿಹಾಸದ ಪುನರಾವರ್ತನೆಯಾಗುತ್ತದೆ.

ಹೊಸದಾಗಿಯೆ ಘಟಿಸುವ ಐತಿಹಾಸಿಕ ನಡವಳಿಕೆ ಜನಪದ ಇತಿಹಾಸದಲ್ಲಿ ಒಂದು ಹೊಸ ಆಶಯವಾಗುತ್ತದೆ. ಜನಪದ ಪರಂಪರೆ ಈ ಎರಡೂ ಅಂಶಗಳನ್ನು ಒಳಗೊಂಡದ್ದು. ಎಲ್ಲಿಯವರೆಗೆ ಅದಕ್ಕೆ ಪುನರ್ ಸೃಷ್ಟಿಯ ಶಕ್ತಿ ಇರುತ್ತದೊ ಅಲ್ಲಿಯವರೆಗೆ ಮತ್ತು ಎಲ್ಲಿ ತಾನು ಹೊಸದಾಗಬೇಕು ಅನ್ನುತ್ತದೊ ಅಲ್ಲಿ ಅದು ಆವಿಷ್ಕಾರ ಅಥವ ರೂಪಾಂತರವನ್ನು ಪಡೆಯುತ್ತದೆ. ಇದನ್ನು ಜನಪದ ಇತಿಹಾಸದ ರಚನೆ ಎಂದು ಕರೆಯುವೆವು. ಈ ದೃಷ್ಟಿಯಿಂದ ಜಾನಪದವೇ ಒಂದು ಐತಿಹಾಸಿಕ ವಾದ ಅಖಂಡ ಪರಂಪರೆ.

ಜನಪದ ಇತಿಹಾಸ ಸುಂದರ ಕೂಡ. ಯಾಕೆಂದರೆ ಶಿಷ್ಟ ಇತಿಹಾಸದಂತೆ ತಾಳೆನೋಡಲು ಮತ್ತು ದಾಖಲೆ ಇರಿಸಲು ಅಲ್ಲ; ಮಾನವನ ಉಳಿಯುವಿಕೆಯ ಅನಿವಾರ್ಯ ಗುಣ. ಆ ಕಾರಣಕ್ಕಾಗಿಯೇ ಜನಪದ ಇತಿಹಾಸ ಅಥವ ಪರಂಪರೆ ಯನ್ನು ಜನ ಪ್ರೀತಿ ಮತ್ತು ಭುಗ್ನತೆಯಿಂದ ಒಪ್ಪಿಕೊಳ್ಳುತ್ತಾರೆ, ಅಪ್ಪಿಕೊಳ್ಳುತ್ತಾರೆ. ಜನಪದ ಇತಿಹಾಸದಲ್ಲಿ ಆಯ್ಕೆಯ ತತ್ವ ಅನ್ವಯಿಸದು. ಆಯ್ಕೆ ಎಂದರೆ ಇಲ್ಲಿ ಬಾಳಿಕೆಯ ಅಂಶ ಎಂದೆ ಅರ್ಥ. ಮನುಷ್ಯನಿಗೆ ಕುಟುಂಬವೇ ಇಲ್ಲದ ಇತಿಹಾಸ ವೊಂದು ಇತ್ತು. ಅದರ ಅಪಾಯದಿಂದ ಪಾರಾಗಲು ಮದುವೆ ಮತ್ತು ಕುಟುಂಬ ವನ್ನು ಹೊಂದಬೇಕಾಯಿತು. ಇದನ್ನು ಶಿಷ್ಟ ಅರ್ಥದಲ್ಲಿ ಆಯ್ಕೆ ಎಂದು ಕರೆಯು ಬಹುದು. ವಾಸ್ತವದಲ್ಲಿ ಇದು ಆಯ್ಕೆಯಲ್ಲ ಬಾಳಿಕೆ. ಮತ್ತೊಂದು ಅರ್ಥದಲ್ಲಿ ಜನಪದವನ್ನು ಐತಿಹಾಸಿಕವಾಗಿ ಉಳಿಯಲು ಈಡೇರಿಸಿಕೊಂಡ ಬಯಕೆ, ಮಾಡಿಕೊಂಡ ಒಪ್ಪಂದ. ಇದು ಮಾನವನ ಪ್ರಾಕೃತಿಕ ಆವಶ್ಯಕತೆ. ಅದನ್ನು ಅನುಸರಿಸಿ, ಅನುಕರಿಸಿ, ಹೊಂದಿಸಿಕೊಂಡು, ಮತ್ತು ಅಭಿವೃದ್ಧಿ ಪಡಿಸಿಕೊಂಡು ಜನ ಬದುಕುತ್ತಾರೆ. ಶಿಷ್ಟ ಇತಿಹಾಸ ಬದಲಾವಣೆಗೆ ಸಹಕರಿಸುವಂಥದಲ್ಲ. ಅದು ಇರುವುದಕ್ಕಷ್ಟೆ ಇದೆ; ಇಲ್ಲದಿದ್ದರೆ ಏನೂ ಆಗುತ್ತಿರಲಿಲ್ಲ. ಅದೊಂದು ಬಗೆಯ ಕುತೂಹಲ. ಅದು ಎಂದೂ ಜನಾಂಗದ Morality ಆಗುವುದಿಲ್ಲ. ಜನಪದ ಇತಿಹಾಸ ಒಂದು ಜನಾಂಗದ Morality, ಮುಂದುವರಿದು ಮೌಲ್ಯ ಕೂಡ ಆಗಬಹುದು. ಹೋರಾಟದ ಜನಾಂಗ, ಸಾತ್ವಿಕಜನಾಂಗ, ಅನ್ವೇಷಣಾಶೀಲ ಜನಾಂಗ–ಈ ಮುಂತಾದ ನೀತ್ಯಾತ್ಮಕ ಮೌಲ್ಯಗಳು ಬರುವುದು ಜನಪದ ಇತಿಹಾಸ ದೊಳಗೆ. ಇದು ಎಂದೂ ಶಿಷ್ಟ ಬರಹದ ಇತಿಹಾಸಕ್ಕೆ ಸಮವೂ ಅಲ್ಲ, ಪೂರಕವೂ ಅಲ್ಲ.

ಆದ ಕಾರಣ ಜಾನಪದಜ್ಞ ಗಂಭೀರವಾಗಬೇಕಿರುವುದು ಜನಪದ ಇತಿಹಾಸವನ್ನು ಉಳಿಸಿಕೊಳ್ಳುವುದು ಮತ್ತು ರಚಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ. ಭಾರತದಲ್ಲಿ ಜಾತಿ ಜನಪದಗಳು ಸೃಷ್ಟಿಸಿದ ಇತಿಹಾಸ ಏಕೆ ಸ್ತಬ್ಧವಾಗುತ್ತಿದೆ ಅಥವ ಜನಪದಗಳ ಹೊಸ ಆಯ್ಕೆಗೆ ಅವಕಾಶ ಕೊಡುತ್ತಿಲ್ಲ ಎಂಬುದು ಸಂಬಂಧಿಸಿದ ಸಮಸ್ಯೆ. ಇದು ಶಿಷ್ಟರ ಇತಿಹಾಸಕ್ಕೆ ಪ್ರಾಥಮಿಕ ಸಾಮಗ್ರಿ ಆಗುತ್ತದೆಯೆ ಇಲ್ಲವೆ

ಎಂಬುದು ಎರಡನೆಯ ಪ್ರಶ್ನೆ. ಒಂದು ಜನಾಂಗದ ಅಖಂಡ ಇತಿಹಾಸ ಹೇಗೆ ಅವರನ್ನು ಉಳಿಸಿಕೊಂಡು ಬರುತ್ತದೆ, ಇಲ್ಲವೆ, ಸಾಧ್ಯವಾಗದಿದ್ದರೆ ಅವರ ಜೊತೆಗೆ ತಾನೇ ಇಲ್ಲವಾಗುತ್ತದೆ. ಅಥವ ಅವರನ್ನು ಉಗುಳಿ ತಾನು ಸಾಯುತ್ತದೆ ಎಂಬುದರ ಗುಣಾವಗುಣಗಳು ಜನಪದ ಇತಿಹಾಸಕಾರನ ಮೂಲ ಸಮಸ್ಯೆಗಳಾಗುತ್ತವೆ. ಜಾನಪದ (Folklorist) ನಿಗೆ ದೆವ್ವದ ಬಗ್ಗೆ ನಂಬಿಕೆ ಇರುವವನ ಐತಿಹಾಸಿಕ ಘಟನೆ ಯೊಂದನ್ನು ವಿವರಿಸಲಾರ ಎಂದರೆ ತಮಾಷೆ ಎನಿಸುತ್ತದೆ. ಅದು ಇತಿಹಾಸವನ್ನು ಶೋಧಿಸುವ ಮಾರ್ಗವೆ ಅಲ್ಲ ಎನಿಸುತ್ತದೆ. ಜನ ತಮ್ಮ ನಂಬಿಕೆ ಮತ್ತು ನಡವಳಿಕೆಗಳ ಮಧ್ಯೆಯಲ್ಲದೆ ಇತಿಹಾಸವನ್ನು ಉಳಿಸಿಕೊಂಡು ಬರಲಾರರು ಇತಿಹಾಸ ಉಳಿಸುವುದಕ್ಕೆ ಅವನ್ನು ಇಟ್ಟುಕೊಂಡಿದ್ದಾರೆ. ಜನ, ರಾಜ ಅಥವಾ ಇನ್ನೊಬ್ಬ ಆಡಳಿತಗಾರ ಹುಟ್ಟುವುದಕ್ಕೂ ಸಾಯುವುದಕ್ಕೂ ಇರುವ ಕಾರಣಗಳ ಇತಿಹಾಸ ಜನಪದ ಇತಿಹಾಸವೆ. ಆಡಳಿತಾತ್ಮಕ ಇತಿಹಾಸ ಅಪಾರವಾಗಿರುವ ಜನಪದ ಇತಿಹಾಸ ಕೆಳಗೆ ಗುರುತಿಸಿಕೊಳ್ಳುವಿಕೆಗಾಗಿ ಕೆಲವು ವಾಕ್ಯ, ಸಂದರ್ಭ ಅಥವ ಘಟನೆಗಳ ಕೆಳಗೆ ಎಳೆದ ಕೆಲವು ಗೆರೆಗಳಷ್ಟೆ.

ಪರಂಪರೆ ಎಂಬುದು ಒಂದು ಇತಿಹಾಸ. ಅದು ಶಿಷ್ಟ ಇರಬಹುದು, ಜನಪದ ಇರಬಹುದು. ಶಿಷ್ಟ ಇತಿಹಾಸ ರಚಿಸಿದ ದಾಖಲೆಗಳಲ್ಲಿ ಸಿಗುತ್ತದೆ. ಜನಪದ ಇತಿಹಾಸ ಆಚರಣೆಗಳಲ್ಲಿ ಸಿಗುತ್ತದೆ. ಒಂದು ತಪ್ಪು ಇತಿಹಾಸ ಒಪ್ಪಿತ ಇತಿಹಾಸ ವಾಗಿ ಮಾರ್ಪಡುವುದು ಜನಪದ ಇತಿಹಾಸದಲ್ಲಿ ಮಾತ್ರ ಸಾಧ್ಯ. ಶಿಷ್ಟ ಇತಿಹಾಸದಲ್ಲಿ ಅದೊಂದು ನೆನಪು ಮಾತ್ರ. ಶಿಷ್ಟ ಇತಿಹಾಸ ವಿಚಾರವಲ್ಲ, ವಿವೇಚನೆ. ನಡೆದದ್ದನ್ನು ವಿವೇಕದಿಂದ ವಿವೇಚಿಸಿ ಇಡುವುದು. ಜನಪದ ಇತಿಹಾಸವೆಂದರೆ ವಿಚಾರ. ಬೇರೆ ಬೇರೆ ಜನ-ವರ್ಗಕ್ಕೆ ಇದು comparative ಆಗಿರುತ್ತದೆ, ವ್ಯತ್ಯಾಸವಲ್ಲ. 'ಮನುಜ ಕುಲಂ ತಾನೊಂದೆ ವಲಂ' ಎನ್ನುವಾಗ ಅದನ್ನು ಹೇಳುವ ಜಾತಿ, ವರ್ಗದ ಜೊತೆಗೆ ಇನ್ನಿತರ ಅನೇಕ ವರ್ಗ, ಜಾತಿಗಳು ಅದನ್ನೇ ಹೇಳುತ್ತಲೂ, ತಮ್ಮ ಜಾತಿ ಮತ್ತು ವರ್ಗವನ್ನು ಪ್ರತ್ಯೇಕವಾಗಿಯೆ ಉಳಿಸಿಕೊಂಡು ಹೋಗುತ್ತಿರುತ್ತವೆ. ಅವು ಪ್ರತ್ಯೇಕ ವಾಗಿರುವುದಕ್ಕೆ ಮತ್ತು ಅದೇ ಸಮಯದಲ್ಲಿ ಮಾನವೀಯತೆಯನ್ನು ಹೇಳುವುದಕ್ಕೆ ಬದುಕುವ ಜನಪದಗಳ ಐತಿಹಾಸಿಕ ಅನಿವಾರ್ಯತೆಯೆ ಕಾರಣ.

ಶಿಷ್ಟ ಇತಿಹಾಸಕ್ಕೆ ಅರ್ಥ ಬರುವುದು ಇಂಥ ಕಾರಣಗಳನ್ನು ಶೋಧಿಸಿದಾಗ. ದೇಶೀಯವಾಗಿ, ಪ್ರಾಂತೀಯವಾಗಿ, ಜನಾಂಗೀಯವಾಗಿ ಇತಿಹಾಸ ಭಿನ್ನತೆಗಳನ್ನು ವ್ಯಕ್ತಪಡಿಸುವುದು ಈ ಹಿನ್ನೆಲೆಯಿಂದಲೆ. ಆದ್ದರಿಂದ ಜನಪದ ಮತ್ತು ಜಾನಪದಜ್ಞನಿಗೆ ಇತಿಹಾಸವನ್ನು ಪುನರ್ ರಚಿಸುವುದಕ್ಕಿಂತ ಇತಿಹಾಸ ಸೃಷ್ಟಿಯಾಗುವ ಮತ್ತು ಮುಂದುವರಿಯುವ ಕಾರಣಗಳು ಪ್ರಬಲ ಸೆಳೆತಗಳಾಗುತ್ತವೆ. ಕಪಿತ್ವವನ್ನು ಕಳೆದು ಕೊಂಡ ಮೇಲೂ 'ಕಪಿಕುಣಿತ' ಕರಡಿ ಕಾಡು ಸೇರಿದ ಮೇಲೂ ಕರಡಿ ಕುಣಿತ ಅತ್ಯಂತ ಪ್ರಿಯವಾಗಿ ಮುಂದುವರಿಯುವುದು ಏಕೆ ಎಂಬುದಕ್ಕೆ ಈ ಮೂಲಕ ಜಾನಪದಜ್ಞ

ಉತ್ತರ ಕೊಡುತ್ತಾನೆ. ತನ್ನೊಳಗೆ ಕಾಡುವ ಮಾನವ ವಿಕಾಸದ ಇತಿಹಾಸ ಪ್ರಶ್ನೆಗೆ ಬಾಧಿತನಾಗಿ ಮನುಷ್ಯ ಇವತ್ತೂ ಕಪಿ, ಕರಡಿ ಬಗ್ಗೆ ಇತರ ಪ್ರಾಣಿಗಳಿಗಿಂತ ಹೆಚ್ಚು ಸಾಮೀಪ್ಯ ಮತ್ತು ಪ್ರೀತಿಯನ್ನು ಹೊಂದಿದ್ದಾನೆನ್ನುವುದು ಜಾನಪದಜ್ಞನಿಗೆ ಖುಷಿ ಕೊಡುವ ಸಂಗತಿಯಾಗಿದೆ. 'ಪಾಳ್ಳೇಗಾರನ ಕುಣಿತ', 'ನಂದಿಧ್ವಜ', 'ಪಟಾಕುಣಿತ', ಪ್ರದರ್ಶಿತ ಕಲೆಗಳು, ಬಡ್ಡಿಮಗ, ಮುಂಡೆಮಗ ಜನಪದ ನುಡಿಗಟ್ಟುಗಳು ಅವನನ್ನು ಆಕರ್ಷಿಸುತ್ತವೆ. ಇದೇ ಜನಪದ ಕಥೆಗಳ ಒಳಗೆ ಕಾಮ–ಪ್ರೇಮ ಶೀಲವಾಗದಿರುವಾಗ "ಗರುಡಗಂಬದ ದಾಸಯ್ಯ" ಕಥೆಯಲ್ಲಿ "ಬ್ರಾಹ್ಮಣನ ಹುಡುಗಿ" ಕಥೆಯಲ್ಲಿ ಶೀಲವೇ ಸಮಾಜವನ್ನು ಉಳಿಸುವ ಬೆಂಕಿಯಂಥ ಮೌಲ್ಯವಾಗುವುದರ ಬಗ್ಗೆ ತನ್ನ ಐತಿಹಾಸಿಕ ಪ್ರಜ್ಞೆಯನ್ನು ಹರಿಸುತ್ತಾನೆ. "ಶೆಟ್ಟಿ ಬೀಡು ಬಿಟ್ಟಲ್ಲೆ ಪಟ್ಟಣ" ಮತ್ತು "ಊರ ಮೇಲೆ ಊರು ಬಿದ್ದರೆ ಶ್ಯಾನುಭೋಗನ ಶ್ಯಾಟಕ್ಕೇನು ಬಂತು" ಎಂಬ ಗಾದೆಗಳ ನಡುವಣ ಯುಗಗಳನ್ನು gage ಮಾಡುತ್ತಾನೆ. ಹೀಗೆ ಜಾನಪದ ಸಾಮಗ್ರಿಗಳೆಲ್ಲವೂ ಜನಪದ ಇತಿಹಾಸಕಾರನ ಜ್ವಲಂತ ಸಾಮಗ್ರಿಗಳೇ ಆಗುತ್ತವೆ.

ಕನ್ನಡ ಜನಪದ ಗೀತೆಗಳು ಕೂಡ ಜನಪದ ಇತಿಹಾಸದ ಭಾಗಗಳು. ಇವುಗಳೊಳಗಿಂದ ಚರಿತ್ರಕಾರನೆಂದು ಹೆಸರಿಸಿಕೊಂಡ ವಿದ್ವಾಂಸ ಆರಿಸಿಕೊಳ್ಳಬಹುದಾದ ಅಂಶಗಳಿಗೆ ಚರಿತ್ರೆ ಎಂದು ನಮ್ಮ academic ಜನ ಕರೆದಿದ್ದಾರೆ. ಹಾಗೆ ನೋಡಿದಾಗ ಕೂಡ ಸಾಕಷ್ಟು ಸಾಮಗ್ರಿ ಸಿಗಬಹುದು. ಮೊದಲು ಮಾರಮ್ಮ, ಕಾಳಮ್ಮ ಊರ ದೇವತೆಗಳಾಗಿ ನೆಲೆಗೊಂಡ, ಊರನ್ನು ಉಳಿಸಿದ ಇತಿಹಾಸದ ಗೀತೆಗಳನ್ನು ಕಾಣ ಬಹುದು. ನಂತರ ಐತಿಹಾಸಿಕ ಒತ್ತಡವಾಗಿ ಬಂದ ಅನ್ಯ ಧರ್ಮದಂತೆ ಮಾರಿಯಮ್ಮ ಅಥವ ಕಾಳಮ್ಮ ಅನ್ಯಧರ್ಮೀಯನನ್ನು ಮಿಂಡ ಅಥವಾ ಮಗನಾಗಿ ಪಡೆಯಬೇಕಾದ ಅನಿವಾರ್ಯತೆಗೆ ಒಳಗಾಗುವ ಗೀತೆಗಳು ಬರುತ್ತವೆ. ಸುಖದಲ್ಲಿ ಇದ್ದಾಗ ಇರುವ ದೇವತೆಗಳು, ಬರದಲ್ಲಿ ಬರುವ ದೇವತೆಗಳು, ಕುಲದೇವರು, ಮನೆದೇವರು, ಮೊರೆ ಬಿದ್ದು ದೇವರು, ರಕ್ಷಕದೇವರು–ಹೀಗೆ ಎಲ್ಲ ಸಾಮಾಜಿಕ–ಐತಿಹಾಸಿಕ ಹಂತಗಳ ಬಗ್ಗೆ ಕೂಡ ಗೀತೆಗಳಿವೆ. ಕರಾವಳಿಯ ಪಾಡ್ದನಗಳು ಇದಕ್ಕೆ ಉದಾಹರಣೆ–ಈ ಮಧ್ಯೆ ಸಾಮಾಜಿಕ ಪದ್ಧತಿಗಳು, ನಡವಳಿಕೆಗಳು ಬಂದ, ಬದಲಾದ ಸ್ಥಿತಿ–ಗತಿಗಳನ್ನು ಕುರಿತ ಗೀತೆಗಳೂ ಉಂಟು. ಒಂದು ದೇವರನ್ನು ಮತ್ತೊಂದು ದೇವರು ಗೆಲ್ಲುವುದು ಹೊಸ ಜನ–ಜಾತಿಗಳನ್ನು ಸೃಷ್ಟಿಮಾಡುವ ಇತಿಹಾಸಕ್ಕೆ ಸಂಬಂಧಿಸಿದವುಗಳಾಗಿರುತ್ತವೆ. ಕರ್ನಾಟಕದ ಮೈಲಾರಲಿಂಗ, ಮಂಟೇಸ್ವಾಮಿ, ಮಾದೇಶ್ವರ ದೇವತೆಗಳು ಈ ಬಗೆಯವು. ಲೌಕಿಕವಾಗಿ ಸತಿಹೋದ, ಪತಿಯಿಯೋಗದ, ಪಾತಿವ್ರತ್ಯ ಪರೀಕ್ಷೆಯ, ಬಲಿಗೆ ಸಂಬಂಧಿಸಿದ ತಾಡಿ ನಾಗಮ್ಮ, ಈರೋಬಿ, ಮದಗದ ಕೆಂಚಮ್ಮ, ಕೆರೆಹೊನ್ನಮ್ಮ, ಗುಣಸಾಗರಿ, ಉತ್ತರದೇವಿ, ವಲ್ಲಣದೇವಿ ಮುಂತಾದ ಮಹಿಳೆಯರ ಗೀತೆಗಳಿವೆ. ಇವೆಲ್ಲ ಒಂದು ಸಾಮಾಜಿಕ ಇತಿಹಾಸದ ದಾಖಲೆಗಳೇ ಆಗಿವೆ.

ನಮ್ಮ ವೀರಸಾಹಿತ್ಯದ ಲಾವಣಿಗಳಲ್ಲಿ ಇರುವುದು ವಿಜೃಂಭಿತ ಇತಿಹಾಸ. ಜನಪದಕಥೆ, ಗೀತೆ, ಆಚರಣೆಗಳಲ್ಲಿ ಇರುವುದು ಗಾಢವಾದ ಜನಪದ ಇತಿಹಾಸ.

ಗ್ರಾಮಹಬ್ಬ ಒಂದು ಆಚರಣೆ. ನಮ್ಮ ಕಡೆ ಅಂಥ ಹಬ್ಬವೊಂದರಲ್ಲಿ ನಾಲ್ಕು ಪ್ರಾತಿನಿಧಿಕ ಚಾರಿತ್ರಿಕ ಘಟ್ಟಗಳು ದೇವರ ಹೆಸರಿನಲ್ಲಿ ಪ್ರದರ್ಶಿಸುತ್ತವೆ, ಗ್ರಾಮ ದೇವತೆ, ಗಾರುಡಿಗ, ಶೈವ ವಿಭೂತಿಯ ಸೋಮ ಮತ್ತು ವೈಷ್ಣವ ನಾಮದ ಸೋಮ- ಇಲ್ಲಿ ನಾಲ್ಕು ಧಾರ್ಮಿಕ ಕಾಲಗಳಿವೆ ಗಾರುಡಿಗ-ಮಾಂತ್ರಿಕ ಧರ್ಮದ ಯುಗವನ್ನು ಪ್ರತಿನಿಧಿಸುತ್ತವೆ. ಗ್ರಾಮದೇವತೆ ಮಾತೃಪ್ರಧಾನ ಕುಟುಂಬದ ಸಾಮಾಜಿಕ ವ್ಯವಸ್ಥೆ ಯನ್ನು ಪ್ರತಿನಿಧಿಸುತ್ತದೆ. ಶೈವಧರ್ಮವನ್ನು ಮೂರು ಅಡ್ಡ ವಿಭೂತಿಯ ಸೋಮ ಸೂಚಿಸುತ್ತದೆ. ಮೂರು ಎತ್ತು ನಾಮದ ಸೋಮ ನಂತರ ಬಂದ ವೈದಿಕ ಸಂಸ್ಕೃತಿಯ ಪ್ರತೀಕವಾಗಿದೆ. ಹೀಗೆ ಈ ಒಟ್ಟು ಪ್ರದರ್ಶನ ಮತ್ತು ಅದರಿಂದ ಪ್ರತಿಪಾದಿತವಾಗುತ್ತಿರುವ ಆಚರಣೆಯಲ್ಲಿ ನಾಲ್ಕು ಭಿನ್ನ ಜನಪದ ಸಾಂಸ್ಕೃತಿಕ ಘಟ್ಟಗಳು ಪ್ರಕ್ರಿಯಿಸುತ್ತಿವೆ.

ವೀರ, ಪೌರುಷ ಆಶಯಗಳನ್ನು ಆಧರಿಸಿ ಎದ್ದು ನಿಲ್ಲುವ, ಬಹುಬೇಗ ಸಮಾಜವನ್ನು ಆಕರ್ಷಿಸುವ ಸಾಹಿತ್ಯವನ್ನು ವಿಜೃಂಭಿತ ಇತಿಹಾಸದ ಭಾಗವನ್ನಾಗಿ ಗಣಿಸಬಹುದು. ಒಂದು ರಾಜ್ಯದ ಹುಟ್ಟು, ವೈಭವ, ಕಾಳಗ, ಪತನ, ಶಿಷ್ಟಧರ್ಮಗಳ ಮೇಲಾಟ, ಧಾರ್ಮಿಕ ಸಂಘರ್ಷ ಮತ್ತು ಬರ ಇವು ವಿಜೃಂಭಿತ ಸಾಹಿತ್ಯದ ಕಥಾ ವಸ್ತುಗಳು. ಪಾಳ್ಯೇಗಾರರ ದೌರ್ಜನ್ಯ, ಸಾಹುಕಾರನ ಹಿಂಸೆ ಮತ್ತು ಕೊಲೆ, ಜನ ಸಾಮಾನ್ಯರ ಬಂಡಾಯ, ಸಾಂಸ್ಕೃತಿಕ ನಾಯಕರ ಸೃಷ್ಟಿ, ರಾಷ್ಟ್ರೀಯ ಹೋರಾಟಗಾರರ ಕೆಚ್ಚು, ನೆಚ್ಚು, ರಾಷ್ಟ್ರದ ಬಿಡುಗಡೆ ಮತ್ತು ಇನ್ನಿತರ ವಿಶಿಷ್ಟ ಸಂದರ್ಭಗಳು ಕೂಡ ಈ ಬಗೆಯ ಸಾಹಿತ್ಯದಲ್ಲಿ ದಾಖಲಾಗುತ್ತವೆ. ಯಾವುದೇ ದೇಶದ ಕಥನಗೀತೆಗಳನ್ನು ಅಭ್ಯಸಿಸಿದರೂ ಈ ಸಮಾನ ನೆಲೆಯನ್ನು ಕಾಣಬಹುದು. ಗಮನಿಸಬಹುದಾದ ಮುಖ್ಯ ಅಂಶವೆಂದರೆ ಈ ಕಥನಗೀತೆಗಳು ಚಕ್ರವರ್ತಿ, ಮಹಾರಾಜರಂಥವರ ಬಗೆ ಹೇಳುವುದಿಲ್ಲ. ಬದಲಾಗಿ ಸ್ಥಳೀಯವಾಗಿ ಜನರೊಂದಿಗೆ ಬೆರೆತು, ಜನರ ಆಶೋತ್ತರ ಗಳಿಗಾಗಿ ದುಡಿದ ಪಾಳ್ಯೇಗಾರ, ಸಾಂಸ್ಕೃತಿಕ ನಾಯಕ, ನೈತಿಕತೆಗಾಗಿ ಹೋರಾಡಿದ ಸಾಮಾನ್ಯ ವ್ಯಕ್ತಿ ಮುಖ್ಯನಾಗುತ್ತಾನೆ. ಹೆಣ್ಣನ್ನು ಮಾನಭಂಗದಿಂದ ರಕ್ಷಿಸಿದವನು, ದೇಶದ ಮಾನವನ್ನು ಕಾಪಾಡಿದವನು, ಕಳ್ಳಕಾಕರಿಂದ ರಕ್ಷಿಸಿದವನು, ಒಳ್ಳೆಯವನಿಗಾಗಿ, ದೇಶದ ಒಳಿತಿಗಾಗಿ ಜೀವ ಕೊಟ್ಟವನು, ನಾಡಿನ ಮರ್ಯಾದೆ ಮತ್ತು ಮಹತ್ವವನ್ನು ಎತ್ತಿಹಿಡಿದವನು ಕಥನಗೀತೆಯ ವಸ್ತುವಾಗಿ, ಸಾಂಸ್ಕೃತಿಕ ಸಂಪನ್ನತೆಯ ಕೊಡುಗೆ ಯಾಗಿ ಕೀರ್ತಿಸಲ್ಪಡುತ್ತಾನೆ.

ಅಡಿ ಟಿಪ್ಪಣಿಗಳು

1. P. 228, The Idea of History, R.G. Colling Wood.
2. P. 129, Folklore, Selected Essays, R.M. Dorson.
3. P. 205, Folklore, Selected Essays, R.M. Dorson.
4. P. 241, Folklore, Selected Essays, R.M. Dorson.

ಡಾ. ಅಂಬಳಿಕೆ ಹಿರಿಯಣ್ಣ

ಜಾನಪದ ಪ್ರಕಾರಗಳು

ಬೇರೆ ಬೇರೆ ಸಂಸ್ಕೃತಿಗಳ ಅಥವಾ ರಾಷ್ಟ್ರಗಳ ಜಾನಪದ ಬಗೆಗಳನ್ನು ಒಂದು ಸಿದ್ಧ ಚೌಕಟ್ಟಿನಲ್ಲಿ ಅಳವಡಿಸಿ ಅಭ್ಯಸಿಸುವುದು ಕಷ್ಟವಾದರೂ ಸಣ್ಣಪುಟ್ಟ ಮಾರ್ಪಾಟುಗಳೊಡನೆ ಪ್ರತಿಯೊಂದು ಸಂಸ್ಕೃತಿ ಅಥವಾ ರಾಷ್ಟ್ರಕ್ಕೂ ಅನುಸರಿಸಬಹುದಾದ ಸಾರ್ವತ್ರಿಕವಾಗಿ ಒಪ್ಪಿತವಾಗುವ ಒಂದು ಮಾದರಿಯನ್ನು ರೂಪಿಸಿಕೊಳ್ಳುವುದು ಅಗತ್ಯ. ಇದರಿಂದ ಜಾನಪದ ಸಾಮಗ್ರಿಯ ಕ್ರಮಬದ್ಧ ಸಂಗ್ರಹಣೆ ಹಾಗೂ ಜಾಗತಿಕ ನೆಲೆಯಲ್ಲಿ ಅದರ ವಿಶ್ಲೇಷಣೆ ನಡೆಸಲು ಯುಕ್ತ ಮಾರ್ಗಸೂಚಿಗಳು ಲಭ್ಯವಾಗುತ್ತವೆ. ಸಂಸ್ಕೃತಿಯೊಂದರ ಆವಶ್ಯಕತೆಗಳನ್ನು ಪೂರೈಸಲು ಆ ಮಾದರಿ ಹೊಂದಿಕೊಳ್ಳದಿದ್ದರೆ ಹೊಸದೊಂದು ಮಾದರಿಯನ್ನು ವಿನ್ಯಾಸಗೊಳಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಜಾನಪದವಿಲ್ಲದ ಮಾನವಸಮಾಜ ಜಗತ್ತಿನಲ್ಲಿ ಯಾವುದೂ ಇಲ್ಲ ಎಂಬುದು ಲಭ್ಯವಿರುವ ಆಧಾರಗಳನ್ನು ಲಕ್ಷಿಸಿ ಹೇಳುವುದಾದರೆ, ಎಲ್ಲ ಮಾನವ ಸಮಾಜಗಳೂ ಕತೆಗಳು, ಐತಿಹ್ಯಗಳು, ಪುರಾಣಗಳು, ಹಾಡುಗಳು, ಗಾದೆಗಳು, ನಾಟಕಗಳು ಇತ್ಯಾದಿಗಳನ್ನು ಸಮೃದ್ಧವಾಗಿ ಹೊಂದಿವೆ. ಸಾರ್ವತ್ರಿಕತೆ ಜಾನಪದದ ಬಹು ಪ್ರಮುಖ ಗುಣವಾಗಿದ್ದರೂ ಕೆಲವು ಸಂಸ್ಕೃತಿ ವಿಶಿಷ್ಟವಾದ ಪ್ರಕಾರಗಳೂ ಇವೆ. ಉದಾಹರಣೆಗೆ ಕೆಲವು ಸಂಸ್ಕೃತಿಗಳು ಕೆಲವು ಪ್ರಕಾರಗಳಿಗಷ್ಟೇ ಹೆಸರಾಗಿರುವುದನ್ನು ಗಮನಿಸಬಹುದು. ಕಟ್ಟುಕತೆ ಇಂಡೊ ಯುರೋಪಿಯನ್ನರ ಬಹು ಜನಪ್ರಿಯ ಪ್ರಕಾರವಾಗಿದ್ದು ಅದು ಇತರ ಸಂಸ್ಕೃತಿಗಳಿಗೂ ಪ್ರಸರಣಗೊಂಡು ಸಾಕಷ್ಟು ಬದಲಾವಣೆಗೂ ಪಕ್ಕಾಗಿದೆ. ಈ ಬಗೆಯ ಪ್ರಸರಣಕ್ಕೆ ಅಮೆರಿಕನ್ ಇಂಡಿಯನ್, ಕೇಂದ್ರೀಯ ಹಾಗೂ ದಕ್ಷಿಣ ಆಫ್ರಿಕೆಯ ಸಂಸ್ಕೃತಿಗಳು ಸ್ಪಷ್ಟ ನಿದರ್ಶನಗಳು. ಅದೇ ರೀತಿಯಾಗಿ, ದಕ್ಷಿಣ ಭಾರತದ ದ್ರಾವಿಡ ಸಂಸ್ಕೃತಿ ಉತ್ತರ ಭಾರತದ ಇಂಡೊ ಆರ್ಯನ್ನರಿಗಿಂತ ನೃತ್ಯ ನಾಟಕಗಳ ಕ್ಷೇತ್ರದಲ್ಲಿ ಹೆಚ್ಚು ಹೆಸರುವಾಸಿ ಎಲ್ಲಕ್ಕಿಂತ ಹೆಚ್ಚಾಗಿ ಪ್ರಸರಣ ಮತ್ತು ವಿವಿಧ ಮುಖವಾಗಿ ವಿತರಣೆ ಹೊಂದುವ ಜಾನಪದದ ಜಾಯಮಾನದಿಂದಾಗಿ ಅನೇಕ ಪ್ರಕಾರಗಳು ಸಮ್ಮಿಶ್ರಗೊಂಡು ಕೆಲವು ಪ್ರಕಾರಗಳು ತಮ್ಮ ಪ್ರತ್ಯೇಕತೆಯನ್ನೇ ಕಳೆದುಕೊಂಡಿವೆ. ಈ ನಷ್ಟ ಕಾರ್ಯಾತ್ಮಕ ಇಲ್ಲವೆ ರಾಚನಿಕ

ಅಥವಾ ಎರಡೂ ರೂಪದ್ದಾಗಿರಬಹುದು. ನಿದರ್ಶನಕ್ಕೆ ಹೇಳುವುದಾದರೆ ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಗಾದೆ ಮತ್ತು ಒಗಟುಗಳು ಕೆಲವು ಸನ್ನಿವೇಶಗಳಲ್ಲಿ ಒಂದೇ ಆಗಿ ಕಾಣುತ್ತವೆ.

ಜಾನಪದದ ಪ್ರಕಾರಗಳು ಮತ್ತು ಅವುಗಳ ವಿಭಜನೆ-ವಿಶ್ಲೇಷಣೆಗೆ ಸಂಬಂಧಿಸಿದಂತೆ ತೊಡಕುಗಳಿದ್ದರೂ ಜಾನಪದವನ್ನು ವಿವಿಧ ವಿದ್ವಾಂಸರು ವಿವಿಧ ರೀತಿಯಲ್ಲಿ ನಿರ್ವಚಿಸಿದ್ದಾರೆ. ಈ ನಿರ್ವಚನಗಳು ಜಾನಪದವನ್ನು ನಿರ್ವಚಿಸುವ ಯತ್ನಗಳಷ್ಟೇ ಅಲ್ಲ ಅದನ್ನು ಒಂದು ಶಿಸ್ತಾಗಿ ರೂಪಿಸಿರುವ ಪ್ರಕಾರಗಳ ಒಂದು ಪಟ್ಟಿಯನ್ನೇ ಒದಗಿಸುವ ಪ್ರಯತ್ನಗಳೂ ಹೌದು. ಸಹಜವಾಗಿ, ಇಲ್ಲಿ ಸಾಂಸ್ಕೃತಿಕ ಮಾನವಶಾಸ್ತ್ರ ಮತ್ತು ಜಾನಪದ ಅಧ್ಯಯನಗಳ ನಡುವೆ ಗೆರೆ ಎಳೆಯುವ ಹಳೆಯ ಸಮಸ್ಯೆಯೇ ಎದುರಾಗುತ್ತದೆ. ಈ ನಿರ್ವಚನಗಳಲ್ಲಿ ಬಹುಮಟ್ಟಿಗೆ ಜಾನಪದ ಎಂದರೆ ಜನಪದ ಸಾಹಿತ್ಯ ಎಂಬ ಗ್ರಹಿಕೆಯೇ ಇದೆ. ಮಾನವಶಾಸ್ತ್ರದಿಂದ ಭಿನ್ನವಾದ ಪರಿಶೀಲನೆಯ ಒಂದು ಪ್ರತ್ಯೇಕ ಕ್ಷೇತ್ರ ಎಂಬ ಅರಿವು ಕೂಡ ಗೋಚರವಾಗುತ್ತದೆ. ಶಾಬ್ದಿಕ ಕಲೆ ಅಥವಾ ಜನಪದ ಸಾಹಿತ್ಯ ರೂಪಗಳಷ್ಟೇ ಅಲ್ಲದೆ ಜಾನಪದವು ಭೌತಿಕ ಸಂಸ್ಕೃತಿ, ಸಾಮಾಜಿಕ ಜನಪದ ಸಂಪ್ರದಾಯ, ಪ್ರದರ್ಶನಾತ್ಮಕ ಜನಪದ ಕಲೆಗಳು ಇತ್ಯಾದಿಗಳನ್ನು ಕೂಡ ಒಳಗೊಳ್ಳುತ್ತದೆ ಎಂದು ವಾದ ಹೂಡಿದಾಗ ಕೆಲವು ವಿದ್ವಾಂಸರು ಜಾನಪದ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ—ಎರಡೂ ಕ್ಷೇತ್ರ ವಿದ್ಯಾರ್ಥಿಗಳನ್ನು ಸಂಶಯದಿಂದ ನೋಡಲಾರಂಭಿಸಿದರು. ಇಬ್ಬರೂ ಒಂದೇ ವಸ್ತುವಿಷಯವನ್ನು ಒಂದೇ ದೃಷ್ಟಿಕೋನದಿಂದ ಅಭ್ಯಸಿಸಿ ಒಂದೇ ತೆರನ ನಿರ್ಣಯಗಳಿಗೆ ಬರುತ್ತಾರೆಂಬ ಗ್ರಹಿಕೆಯಿಂದ ಆ ಶಂಕೆ ಬಲವಾಯಿತು. ವಾಸ್ತವವಾಗಿ ಜಾನಪದ ಅಧ್ಯಯನ ಮತ್ತು ಸಾಂಸ್ಕೃತಿಕ ಮಾನವ ಶಾಸ್ತ್ರ—ಎರಡೂ ಬೇರೆ ಬೇರೆ ಕ್ಷೇತ್ರಗಳು. ಒಂದು ಮತ್ತೊಂದರಿಂದ ಪ್ರತ್ಯೇಕಗೊಳ್ಳುವ ಗುಣಸ್ವಭಾವದವು. ಸ್ಥಳೀಯವಲ್ಲದ್ದು ಎಂಬ ಮಾನದಂಡದಿಂದ ಈ ಎರಡೂ ಕ್ಷೇತ್ರಗಳ ನಡುವೆ ಸ್ಪಷ್ಟಗೆರೆ ಎಳೆಯುವುದು ಸಾಧ್ಯ. ವಸ್ತು ವಿಷಯ ಮತ್ತು ದೃಷ್ಟಿಕೋನ—ಎರಡೂ ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ ಒಂದೇ ಎನಿಸಿದರೂ ವಿಷಯವನ್ನು ಪರಿಶೀಲಿಸುವ, ಪರಿಭಾವಿಸುವ ಮತ್ತು ಅರ್ಥೈಸುವ ರೀತಿ ಮಾತ್ರ ಬೇರೆ ಬೇರೆಯೇ, ಇಬ್ಬರಿಗೂ ಒಂದೇ ವಸ್ತು ಸಂಗತಿಯನ್ನು ಅಭ್ಯಾಸ ಮಾಡಲು ನಿಯೋಜಿಸಿದರೆ ಇಬ್ಬರೂ ಬೇರೆ ಬೇರೆ ತೀರ್ಮಾನಗಳಿಗೆ ಬರುವುದು ನಿಶ್ಚಯ. ಅದರಲ್ಲೂ ಜಾನಪದ ಅಭ್ಯಾಸಿ ತನ್ನ ಅಧ್ಯಯನಕ್ಕೆ ಬಳಸಿಕೊಂಡ ಸಾಮಗ್ರಿಯನ್ನು ತನ್ನದೆಂದೇ ಪರಿಗಣಿಸಿ ಸ್ವಂತಕ್ಕೆ ಅನ್ವಯಿಸಿ ನೋಡುವುದು ಕ್ರಮ ಅಷ್ಟೇ ಅಲ್ಲ ; ಜಾನಪದವನ್ನು ಆಗಿ ಹೋದ ಬದುಕು ಎಂದು ತಿಳಿಯದೆ ನಾಗರಿಕತೆಗೆ ಬಹುದೂರದ್ದಲ್ಲದ ವರ್ತಮಾನದ ಬದುಕಿನ ಒಂದು ಭಾಗ ಎಂದೇ ಗಣನೆಗೆ ತೆಗೆದುಕೊಳ್ಳುತ್ತಾನೆ. ಮುಖ್ಯವಾಗಿ ಅದನ್ನು ವರ್ತಮಾನದ ಹಾಗೂ ಭವ್ಯ ಭವಿತವ್ಯದ ಬದುಕಿನ ಒಂದು ಜೀವಂತ ವಸ್ತುಸಂಗತಿ ಎಂದು ತಿಳಿಯುತ್ತಾನೆ. ಈ ಅರ್ಥದಲ್ಲಿ ಜಾನಪದದ ಒಟ್ಟು ಅಧ್ಯಯನ ಎಂದೆಂದಿಗೂ ಮಾನವ ಬದುಕಿನ ಪ್ರಸಕ್ತ

ಮಾರ್ಗವೇ ಆಗಿರುತ್ತದೆ. ಈ ಅಧ್ಯಯನ ಆದಿಮ ಸಂಸ್ಕೃತಿಗಳ ಅವಶೇಷಗಳತ್ತ ಗಮನಹರಿಸುವ ಉದ್ದೇಶ ಹೊಂದಿಲ್ಲದಿರುವುದು ಗಮನಾರ್ಹ. ಅದಕ್ಕೆ ಬದಲಾಗಿ ಸಾಮಾಜಿಕ ಸಂಘರ್ಷಗಳ ಅಡಗತ್ತರಿಯಲ್ಲಿ ಸಿಲುಕಿರುವ ಮಾನವನ ವರ್ತಮಾನದ ಹಾಗೂ ಭವಿಷ್ಯದ ಬದುಕಿನ ಮೇಲೆ ಬೆಳಕು ಚೆಲ್ಲಲು ಯತ್ನಿಸುತ್ತದೆ.

ರಿಚರ್ಡ್ ಎಂ. ಡಾರ್ಸನ್ ಅವರು ನಾಲ್ಕು ಪ್ರಮುಖ ವಿಸ್ತಾರ ಕ್ಷೇತ್ರಗಳಡಿಯಲ್ಲಿ ಜಾನಪದ ಅಧ್ಯಯನ ಸಾಗಬೇಕೆಂದು ಆಶಿಸುತ್ತಾರೆ :

೧. ಮೌಖಿಕ ಸಾಹಿತ್ಯ (Oral Literature)
೨. ಭೌತಿಕ ಸಂಸ್ಕೃತಿ (Material Culture)
೩. ಸಾಮಾಜಿಕ ಜನಪದ ಸಂಪ್ರದಾಯಗಳು (Social Folk Customs)
೪. ಪ್ರದರ್ಶನಾತ್ಮಕ ಜನಪದ ಕಲೆಗಳು (Performing Folk Arts)

ಮೌಖಿಕ ಸಾಹಿತ್ಯ : ಮಾತಿನ ರೂಪದ, ಹಾಡುವಂಥ ಹಾಗೂ ಶ್ರುತಿ ರೂಪದ ರಚನೆಗಳನ್ನು ಮೌಖಿಕ ಸಾಹಿತ್ಯವೆಂದು ಗುರುತಿಸಲಾಗುತ್ತದೆ. ಇದನ್ನು ಸಾಂಪ್ರದಾಯಿಕವಾಗಿ 'ಜನಪದ ಸಾಹಿತ್ಯ' ಎಂದು ಕರೆಯುವುದು ವಾಡಿಕೆ. ಇದರಲ್ಲಿ ಗದ್ಯಕಥನ ಒಂದು ಮಹತ್ವದ ಉಪ ವಿಭಾಗ. ಇದು ಪುರಾಣ, ಕಟ್ಟುಕತೆ, ಐತಿಹ್ಯ, ಅದ್ಭುತಕತೆ, ಹಾಸ್ಯ ತುಣುಕುಗಳು ಇತ್ಯಾದಿಗಳನ್ನು ಒಳಗೊಳ್ಳುತ್ತದೆ. ಈ ಒಂದೊಂದು ಪ್ರಕಾರ ಅನೇಕಾನೇಕ ಉಪಪ್ರಕಾರಗಳನ್ನು ಹೊಂದಿವೆ. ಉದಾಹರಣೆಗೆ ಭಾರತದ ಪುರಾಣಗಳಲ್ಲಿ ಹಲವು ಪ್ರಕಾರಗಳಿವೆ. ವಿವರಣಾತ್ಮಕ ಹಾಗೂ ಧಾರ್ಮಿಕ ಪುರಾಣಗಳಿಗಂತೂ ನಮ್ಮ ದೇಶ ಪ್ರಸಿದ್ಧವಾಗಿದೆ. 'ಕಥಾಸರಿತ್ಸಾಗರ'ದಂಥ ಪ್ರಾಚೀನ ಗ್ರಂಥದಲ್ಲಿ ಪ್ರಾಚೀನ ಪುರಾಣಗಳು ಮತ್ತು ಧಾರ್ಮಿಕ ಕಥೆಗಳ ಉಲ್ಲೇಖಗಳಿವೆ. ಇದೇ ರೀತಿಯಾಗಿ ಪ್ರಾಣಿಕಥೆಗಳಿಗೆ ಸಂಬಂಧಿಸಿದ ಪ್ರಪಂಚದ ಅತ್ಯುತ್ತಮ ಸಂಕಲನಗಳಾದ 'ಪಂಚತಂತ್ರ' ಮತ್ತು 'ಜಾತಕ ಕಥೆ' ಗಳಂತಹ ಉನ್ನತ ಕಥಾ ಪರಂಪರೆಯೇ ನಮ್ಮಲ್ಲಿದೆ. ಅಂತೆಯೇ ಐತಿಹ್ಯಗಳು ಕೂಡ ಜನಪ್ರಿಯವಾಗಿವೆ. ಗುಜರಾತ್ ಮತ್ತು ರಾಜಾಸ್ಥಾನದ ಚಾರಿತ್ರಿಕ ಐತಿಹ್ಯಗಳು, ದಕ್ಷಿಣ ಭಾರತದ ಧಾರ್ಮಿಕ ಐತಿಹ್ಯಗಳು ರಾಷ್ಟ್ರಾದ್ಯಂತ ಹೆಸರುಗಳಿಸಿವೆ.

ಮೌಖಿಕ ಸಾಹಿತ್ಯದ ಮತ್ತೊಂದು ಪ್ರಮುಖ ಉಪ ವಿಭಾಗವೆಂದರೆ ಮೌಖಿಕ ಕಾವ್ಯ. ಇದು ಕೂಡ ತನ್ನದೇ ಆದ ಒಂದು ಪರಿವಾರವನ್ನು ಹೊಂದಿದೆ. ಜನಪದ ಗೀತೆಗಳು, ಕಥನಗೀತಗಳು, ಲಾವಣಿಗಳು, ಮಹಾಕಾವ್ಯಗಳು, ಆಟದ ಪ್ರಾಸಗಳು, ಮಂತ್ರಾಚರಣೆಗೆ ಸಂಬಂಧಿಸಿದ ರಚನೆಗಳು, ಜೀವನ ಚಕ್ರದ ಬಹು ಮುಖ್ಯ ಘಟ್ಟಗಳಿಗೆ ಸಂಬಂಧಿಸಿದ ಶಾಸ್ತ್ರ ವಿಧಿಗಳಿಗೆ ಸಂಬಂಧಿಸಿದ ರಚನೆಗಳು ಭಾರತಾದ್ಯಂತ ಎಲ್ಲೆಡೆ ಪ್ರಚಲಿತವಾಗಿವೆ. ಅದರಲ್ಲೂ ಹಬ್ಬ ಹರಿದಿನ, ಜಾತ್ರೆ, ಉತ್ಸವ, ವ್ರತ, ಸಮಾರಾಧನೆಗಳನ್ನು ಕುರಿತ ಮೌಖಿಕ ಕಾವ್ಯ ಗಮನಾರ್ಹವಾದುದು. ಭಾರತದ ಪ್ರಮುಖ ಹಬ್ಬಗಳ ಪೈಕಿ ದೀಪಾವಳಿ, ಹೋಳಿ, ಪೊಂಗಲ್, ಓಣಂ, ದುರ್ಗಾಪೂಜೆ ಮತ್ತು ಬೈಸಾಕಿ ಮುಖ್ಯವಾದವು.

ಗಾದೆ, ಒಗಟುಗಳು ಕೂಡ ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳು. ಗದ್ಯಕಥನ ಹಾಗೂ ಮೌಖಿಕ ಕಾವ್ಯಗಳಂತೆ ಇವು ಬಹುಮುಖಿ ಅಸ್ತಿತ್ವವನ್ನು ಪ್ರತಿನಿಧಿಸುವುದಿಲ್ಲವಾದರೂ ಅತ್ಯಂತ ರಚನಾಬದ್ಧವಾದ ಪ್ರಕಾರಗಳಾಗಿವೆ. **ಗಾದೆಗಳು** ಸಾಮಾನ್ಯವಾಗಿ ವಾಕ್‌ಚತುರ ಅಭಿವ್ಯಕ್ತಿಗಳಾಗಿರುತ್ತವೆ. ನ್ಯಾಯ ತೀರ್ಮಾನ ಕಲಾಪಗಳಲ್ಲಿ ಹಾಗೂ ಮುತ್ಸದ್ದಿತರ ಗಂಭೀರ ಸನ್ನಿವೇಶಗಳಲ್ಲಿ ಅವು ಹೆಚ್ಚು ರಚನಾತ್ಮಕವಾಗಿರುತ್ತವೆ. ದೈನಂದಿನ ಕಾರ್ಯಕಲಾಪಗಳಲ್ಲಿ ಗಾದೆಗಳ ಬಳಕೆ ಸಾಮಾನ್ಯ. **ಪ್ರತಿ**ಯೊಂದು ಗಾದೆಯೂ ಮತ್ತೆ ಮತ್ತೆ ಉದ್ಭವವಾಗುವ ಸಮಸ್ಯೆಗೆ ಉತ್ತರ ರೂಪದ ಒಂದು ಪೂರ್ಣ ಹೇಳಿಕೆಯಾಗಿರುತ್ತದೆ (ಹಿರಿಯಣ್ಣ : ೧೯೬೨ : ೬೯-೭೦). ಇನ್ನು ಒಗಟಾದರೋ ವ್ಯಾಖ್ಯಾನ ಸಾಪೇಕ್ಷವಾದ ಅರ್ಥೈಸಬೇಕಾದ ಒಂದು ಪದ ಚಕ್ರಬಂಧ. ಅದು ಸಾಮಾನ್ಯವಾಗಿ ಒಂದು ಅಡಕವಾದ ಅರ್ಥಪೂರ್ಣವಾದ ದ್ವಂದ್ವಾರ್ಥದ ಪ್ರಚ್ಛನ್ನ ಹೇಳಿಕೆಯಾಗಿರುತ್ತದೆ (ಹಿರಿಯಣ್ಣ : ೧೯೮೪ ; ೧೦೨) ಒಗಟು ಒಡ್ಡುವ ಮತ್ತು ಒಡೆಚುವ ಸನ್ನಿವೇಶದಲ್ಲಿ ಎರಡು ಬೇರೆ ಬೇರೆ ಗುಂಪುಗಳು ಒಗಟು ಪ್ರತಿಮೆ ಮತ್ತು ಉತ್ತರವನ್ನು ನಿರೂಪಿಸುವುದು ಸಾಮಾನ್ಯ. ಜನಪದ ಜೀವನದಲ್ಲಿ ಒಗಟುಗಳನ್ನು ಮಹತ್ತರವಾದ ಅನೇಕ ಉದ್ದೇಶಗಳಿಗೆ ಬಳಸುವುದುಂಟು. ಮದುವೆ ಮುಂತಾದ ಸಂದರ್ಭಗಳಲ್ಲಿ ಅವುಗಳ ಬಳಕೆ ಸರ್ವೇಸಾಮಾನ್ಯ. ವಧು ವರರ ನಡುವೆ ಏರ್ಪಡುವ ಒಗಟು ಒಡ್ಡುವ ಮತ್ತು ಒಡೆಚುವ ಪೈಪೋಟಿಯಲ್ಲಿ ಎರಡು ಬೇರೆ ಬೇರೆ ಗುಂಪುಗಳ ನಡುವೆ ಏರ್ಪಡುವ ಪಾರಸ್ಪರ್ಯಕ್ರಿಯೆ ಅನುಶೀಲನಾರ್ಹವಾದುದು. ಎಲ್ಲ ಭಾರತೀಯ ಭಾಷೆಗಳಲ್ಲೂ ಗಾದೆ ಒಗಟುಗಳ ಕ್ರಮಬದ್ಧ ಸಂಗ್ರಹಗಳು ಈಗ ಬೆಳಕು ಕಂಡಿವೆ.

ಭೌತಿಕ ಸಂಸ್ಕೃತಿ : ಶಾಬ್ದಿಕ ಕಲೆಗೆ ವೈದೃಶ್ಯವಾಗಿರುವ ಜಾನಪದದ ಮತ್ತೊಂದು ಮುಖವೆಂದರೆ ಭೌತಿಕ ಸಂಸ್ಕೃತಿ. ಇದು ಭೌತಿಕ ವಸ್ತುವಿಷಯಗಳಿಗೆ ಸಂಬಂಧಿಸಿದ ಜನಪದ ಗ್ರಹಿಕೆಯನ್ನು ಕುರಿತಿರುತ್ತದೆ. ತಲೆಮಾರಿನಿಂದ ತಲೆಮಾರಿಗೆ ಸಾಂಪ್ರದಾಯಿಕ ನಿದರ್ಶನಗಳ ಮೂಲಕ ಸಾಗಿಬರುವ ಎಲ್ಲ ಬಗೆಯ ತಂತ್ರ ಕೌಶಲಗಳನ್ನು ಇದು ಒಳಗೊಳ್ಳುತ್ತದೆ. ಜಾನಪದದ ಈ ಮುಖ ಇತರ ಪ್ರಕಾರಗಳಂತೆ ಶ್ರುತಿದಾಯಕವಾಗಿರದೆ ದೃಗ್ಗೋಚರವಾಗಿರುತ್ತದೆ. ಭೌತಿಕ ಸಂಸ್ಕೃತಿಯ ವಿದ್ಯಾರ್ಥಿ ಸಂಪ್ರದಾಯ ನಿಷ್ಠ ಸಮಾಜಗಳಲ್ಲಿ ಹೇಗೆ ಸ್ತ್ರೀ ಪುರುಷರು ಸಾಂಪ್ರದಾಯಿಕ ರೀತಿ ರಿವಾಜು ಮತ್ತು ವಾಸ್ತು ನಿಯಮಗಳನುಸಾರ ಮನೆಗಳನ್ನು ನಿರ್ಮಿಸಿಕೊಳ್ಳುತ್ತಾರೆ; ಉಡುಗೆ ತೊಡುಗೆಗಳನ್ನು ತಯಾರಿಸಿಕೊಳ್ಳುತ್ತಾರೆ; ಅಡುಗೆಯನ್ನು ಅಣಿಗೊಳಿಸಿಕೊಳ್ಳುತ್ತಾರೆ; ತೋಟಗಾರಿಕೆ, ಮೀನುಗಾರಿಕೆಗಳನ್ನು ನಿರ್ವಹಿಸುತ್ತಾರೆ; ಮಣ್ಣಿನ ಕುಡಿಕೆಗಳನ್ನು ತಯಾರಿಸಿಕೊಳ್ಳುತ್ತಾರೆ; ಸಾಧನ ಸಲಕರಣೆಗಳನ್ನು ಅತ್ಯಾಧುನಿಕಗೊಳಿಸಿಕೊಳ್ಳುತ್ತಾರೆ; ಪೀಠೋಪಕರಣಗಳನ್ನು ಮತ್ತು ಮನೆ ಬಳಕೆ ವಸ್ತುಗಳನ್ನು ವಿನ್ಯಾಸಗೊಳಿಸಿಕೊಳ್ಳುತ್ತಾರೆ ಎಂಬುದನ್ನು ತಿಳಿಯುವ ಕುತೂಹಲ ತೋರುವುದು ಸಹಜ.

ಭೌತಿಕ ಸಂಸ್ಕೃತಿಯ ವಿದ್ಯಾರ್ಥಿ ಯಾಂತ್ರೀಕರಣಗೊಂಡ ಕೈಗಾರಿಕೆಯೊಡನೆ ಸಾಗಿ ಬಂದ ಹಾಗೂ ಮೊದಲಿನಿಂದ ಪರಂಪರಾಗತವಾಗಿ ವಹನಗೊಂಡ ಈ ಬಗೆಯ ಜನಪದ ನಡಾವಳಿಯನ್ನು ತಿಳಿಯುವುದರೊಂದಿಗೆ ಜನಪದ ಹಾಗೂ ಆಧುನಿಕ–ಎರಡೂ ಪರಂಪರೆಗಳನ್ನು ಹೋಲಿಸಿ ನೋಡುವ ಮತ್ತು ಅವುಗಳ ನಡುವಿನ ಸಂಬಂಧಗಳನ್ನು ಸ್ಥಾಪಿಸುವ ಯತ್ನ ಮಾಡುತ್ತಾನೆ. ಉದಾಹರಣೆಗೆ ಜನಪದ ವಾಸ್ತುವಿನ ಒಬ್ಬ ವಿದ್ಯಾರ್ಥಿ ಒಂದು ಗೊತ್ತಾದ ಸಾಂಸ್ಕೃತಿಕ ವಲಯದ ಒಟ್ಟಾರೆ ಜನಪದ ವಾಸ್ತುವಿನ ಕೆಲವು ರೀತಿ ನೀತಿಗಳ ಭೇದವನ್ನು ಗ್ರಹಿಸಬಲ್ಲ. ಅಲ್ಲದೆ ಅದೇ ಪ್ರದೇಶದ ಈಗಿನ ವಾಸ್ತು ಶೈಲಿಗನುಗುಣವಾಗಿ ಅವುಗಳ ಮಾರ್ಪಾಟಾದ ಸುಧಾರಿತ ಆವೃತ್ತಿಗಳನ್ನು ಪತ್ತೆ ಮಾಡಿ ಅತ್ಯಾಧುನಿಕ ನಾಗರಿಕತೆಯ ಈ ದಿನಗಳಲ್ಲೂ ಆ ವಿನ್ಯಾಸಗಳು ಹೇಗೆ ಉಳಿದು ಬಂದಿವೆ ಎಂಬುದನ್ನು ಸಿದ್ಧಮಾಡಿ ತೋರಿಸಬಲ್ಲ. ಇದೇ ತೆರನ ಪರಿಶ್ರಮದಿಂದ ಅವನು ಆಹಾರ, ಸಾಧನ ಸಲಕರಣೆಗಳು, ಕೃಷಿ ಉತ್ಪಾದನಾ ವಿಧಾನಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅದೇ ಬಗೆಯ ಫಲಿತಗಳನ್ನು ತಂದುಕೊಡಬಹುದು. ಭಾರತದಲ್ಲಿ ಈ ಬಗೆಯ ಹೆಚ್ಚಿನ ಕೆಲಸಗಳನ್ನು ಸಾಂಸ್ಕೃತಿಕ ಮಾನವಶಾಸ್ತ್ರಜ್ಞರೇ ಮಾಡಿದ್ದಾರೆ. ಆದರೆ ಜಾನಪದೀಯ ದೃಷ್ಟಿ ಅವರ ಉದ್ದೇಶ ವಾಗಿರಲಿಲ್ಲ. ಉದಾಹರಣೆಗೆ ತೀವ್ರ ಮಾನವಶಾಸ್ತ್ರೀಯ ಪ್ರಯತ್ನದಿಂದಾಗಿ ಈ ಉಪಖಂಡದ ತೊಡುಗೆಗಳು, ವಾಸ್ತುಶಿಲ್ಪ ಮತ್ತು ಆಹಾರಾಭ್ಯಾಸಗಳ ಬಗೆಗೆ ತಕ್ಕಮಟ್ಟಿನ ಕೆಲಸ ನಡೆದಿದೆ. ಭಾರತದ ನಿಜವಾದ ಜಾನಪದ ಅಧ್ಯಯನ ಆಗಬೇಕಾದರೆ ಕೇರಳದ ಕರಾವಳಿ ಮೀನುಗಾರರು, ಮಿರ್ಜಾಪುರದ ಚಾಪೆ ಹೆಣೆಯುವವರು, ಮಣಿಪುರದ ಪಟಗಳು, ಅಸ್ಸಾಮಿನ ಕುಂಬಾರಿಕೆ ಮತ್ತು ಆಟಿಕೆಗಳ ತಯಾರಕರು, ರಾಜಸ್ಥಾನದ ಕೌದಿಯವರು ಮತ್ತು ಬಣ್ಣಗಾರರು, ಕಾಶ್ಮೀರದ ದೋಣಿ ಕೆಲಸದವರು, ಕರ್ನಾಟಕದ ಗುಂಡಿಗಾರರು, ಸಂಬಾಲ್‌ಪುರದ ರೇಷ್ಮೆ ನೇಯ್ಗೆಗಾರರು, ಮಣಿಪುರದ ತಂಖುಲ್ ನಾಗಾಗಳು ಇವೇ ಮುಂತಾದ ವಿಷಯಗಳ ಬಗೆಗೆ ವಿಶೇಷ ಗ್ರಂಥಗಳು ಪ್ರಕಟವಾದರೆ ಭಾರತೀಯ ಜಾನಪದ ವಿದ್ವತ್ತು ಬೆಳೆದೀತು. ಈ ಎಲ್ಲವೂ ಭಾರತೀಯ ಜನಪದ ಸಂಸ್ಕೃತಿಯ ಅಸಾಧಾರಣ ಪ್ರತಿಭೆಗಳೇ ಆಗಿವೆ. ರಭಸ ಗತಿಯ ಕೈಗಾರಿಕಾ ಬೆಳವಣಿಗೆಯಿಂದಾಗಿ ಈ ಜಾನಪದ ವಿಶೇಷಗಳು ಮೂಲೆಗುಂಪಾಗುತ್ತಿವೆ. ಅದೇನೇ ಇರಲಿ. ಭಾರತದಂಥ ಸಂಪ್ರದಾಯನಿಷ್ಠ ಸಮಾಜದ ಬದುಕು ಮತ್ತು ಸಂಸ್ಕೃತಿ ಅನನ್ಯವಾದುದೇ ಆಗಿದೆ ; ಅದರ ಸಾಮರ್ಥ್ಯ ಶಕ್ತಿ ಬಲವಾದುದೇ ಆಗಿದೆ.

ಕಲೆ ಮತ್ತು ಕಸುಬುಗಳು ಭೌತಿಕ ಸಂಸ್ಕೃತಿಯ ಪ್ರಧಾನ ಅಂಗಗಳು. ಆನಂದ ವನ್ನು ನೀಡುವುದರೊಂದಿಗೆ ಅವು ಸಾಮಾಜಿಕ ಹಾಗೂ ಆರ್ಥಿಕ ಗುರಿಯನ್ನು ಸಾಧಿಸಲು ಸಹಾಯಕವಾಗಿವೆ. ನಮ್ಮ ದೇಶದ ಇತರ ಕಲಾ ಪ್ರಕಾರಗಳೊಂದಿಗೆ ಸಾಗಿ ಬಂದಿದ್ದರೂ ಇವು ಇನ್ನೂ ಅರ್ಹ ಗಮನ ಸೆಳೆದುಕೊಂಡಿಲ್ಲ. ಇಂದಿಗೂ ನಮ್ಮ

ಸಂಸಜ್ಜಿತ ವಸ್ತುಸಂಗ್ರಹಾಲಯಂಗಳು, ಭಂಡಾರಗಳು ಇವುಗಳ ಪ್ರದರ್ಶನಕ್ಕೆ ಮನಸ್ಸೇ ಮಾಡಿಲ್ಲ.

ನಮ್ಮ ದೇಶದಲ್ಲಿ ಜನಪದ ಕಲಾಪ್ರಕಾರಗಳು ರೂಪ, ವೈವಿಧ್ಯ ಮತ್ತು ಕಾರ್ಯದ ದೃಷ್ಟಿಯಿಂದ ವಿಸ್ತಾರ ಹರಹನ್ನು ಹೊಂದಿವೆ. ಮನೆಗಳ ಗೋಡೆ, ಮರಮುಟ್ಟುಗಳ ಮೇಲಿನ ಚಿತ್ತಾರಗಳು ಸೌಂದರ್ಯಾತ್ಮಕ ಹಾಗೂ ಮತಾಚರಣಾತ್ಮಕ ಮಹತ್ವ ಉಳ್ಳವಾಗಿವೆ. ಈ ಚಿತ್ತಾರಗಳ ಆಶಯಂಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾದರೂ ರಾಚನಿಕವಾಗಿ ಅವು ಏಕತೆಯನ್ನು ಸಾಧಿಸುತ್ತವೆ. ಉದಾಹರಣೆಗೆ ಹಾವು ಮತ್ತು ಗುಬ್ಬಚ್ಚಿ ಆಶಯ ದಕ್ಷಿಣ ಮತ್ತು ಪೂರ್ವ ತೀರದ ಪ್ರದೇಶಗಳಲ್ಲಿ ಸಾಮಾನ್ಯವಾಗಿದ್ದರೆ ಉತ್ತರದ ಬಯಲು ಪ್ರದೇಶಗಳಲ್ಲಿ ಪ್ರಾಣಿ, ಸಸ್ಯ ಮತ್ತು ಹೂವಿನ ಆಶಯಂಗಳು ಪ್ರಧಾನವಾಗಿವೆ. ರಂಗೋಲಿ, ಮೆಹಿಂದಿ ಅಲಂಕಾರಗಳು ಈ ತೆರನ ಕಲೆಗೆ ಉತ್ತಮ ನಿದರ್ಶನಗಳೆನಿಸಿವೆ.

ಸಾಮಾಜಿಕ ಜನಪದ ಸಂಪ್ರದಾಯಂಗಳು

ಭೌತಿಕ ಸಂಸ್ಕೃತಿಗೆ ಹತ್ತಿರವಿರುವ ಜಾನಪದದ ಮತ್ತೊಂದು ಮಹತ್ವದ ಕ್ಷೇತ್ರವೆಂದರೆ ಸಾಮಾಜಿಕ ಜನಪದ ಸಂಪ್ರದಾಯಂಗಳ ಕ್ಷೇತ್ರ, ವ್ಯಕ್ತಿಗತ ಕೌಶಲ ಮತ್ತು ಬುದ್ಧಿ ಸಾಮರ್ಥ್ಯಗಳಿಗಿಂತ ಗುಂಪು ಚಟುವಟಿಕೆಗಳಿಗೆ ಇಲ್ಲಿ ಹೆಚ್ಚು ಒತ್ತು ಇರುತ್ತದೆ (ಡಾರ್ಸನ್, ೧೯೭೨, ೩). ಈ ಕ್ಷೇತ್ರದ ಶೋಧಗಳು ಗ್ರಾಮಾಂತರ ಮತ್ತು ಗುಡ್ಡಗಾಡು ಪ್ರದೇಶ ಹಾಗೂ ಕೈಗಾರಿಕಾ ವಲಯದಲ್ಲಿರುವ ಜನರ ಕೌಟುಂಬಿಕ ಹಾಗೂ ಸಾಮುದಾಯಿಕ ಸಂಪ್ರದಾಯಾಚರಣೆಗಳಿಗೆ ನೇರವಾಗಿ ಸಂಬಂಧಪಡುತ್ತವೆ. ಮುಖ್ಯವಾಗಿ ಮಾನವ ಜೀವನ ಚಕ್ರದ ಬಹು ಮುಖ್ಯ ಘಟ್ಟಗಳಾದ ಹುಟ್ಟು, ಪ್ರೌಢ ಸಂಸ್ಕಾರ, ವಿವಾಹ ಮತ್ತು ಸಾವು ಹಾಗೂ ಈ ಬಗೆಯ ಇತರ ವಿಧಿಗಳಿಗೆ ಹೆಚ್ಚು ಮಹತ್ವವಿರುತ್ತದೆ, ಹಿಂದೂ ಜೀವನದಲ್ಲಿ ಇವಕ್ಕೆ ವಿಶೇಷ ಮಹತ್ವ ಕಲ್ಪಿತವಾಗಿರುವುದರಿಂದ ಇವು ಹೆಚ್ಚು ವ್ಯಾಪಕವಾಗಿ ಬೇರುಬಿಟ್ಟಿವೆ. ಈ ವಿಧಿ ಆಚರಣೆಗಳೊಂದಿಗೆ ಬೆರೆತಿರುವ ಸಾಹಿತ್ಯರೂಪಗಳು ಮೌಖಿಕ ಸಾಹಿತ್ಯ ವಿಭಾಗದಲ್ಲಿ ಅಧ್ಯಯನಕ್ಕೊಳಗಾದರೆ ಸಾಮಾಜಿಕ ಸಂಪ್ರದಾಯ ಮತ್ತು ಮತಾಚರಣಾತ್ಮಕ ಸಂಪ್ರದಾಯಾಚರಣೆಗಳು ಸಾಮಾಜಿಕ ಜನಪದ ಸಂಪ್ರದಾಯ ವಿಭಾಗದಲ್ಲಿ ಅಧ್ಯಯನಕ್ಕೆ ಒಳಪಡುತ್ತವೆ.

ಇದೇ ರೀತಿಯಾಗಿ ಹೋಳಿ, ದೀಪಾವಳಿ, ದುರ್ಗಾಪೂಜೆ, ಗೌರಿ–ಗಣೇಶ, ಪೊಂಗಲ್, ಓಣಂನಂತಹ ನೂರಾರು ಹಬ್ಬಗಳೊಡನೆ ಮತಾಚರಣೆ ಮತ್ತು ಸಂಪ್ರದಾಯ ಜೊತೆಗೂಡಿದ್ದು ಈ ಹಬ್ಬಾಚರಣೆಗಳು ಸಾಮಾಜಿಕ ಜನಪದ ಸಂಪ್ರದಾಯದ ಬಹು ಮುಖ್ಯ ಭಾಗವಾಗಿ ಪರಿಣಮಿಸಿವೆ. ವಿಧಿ ಉಪಾಸನೆಗಳಂತೆ ಹಬ್ಬ ಹುಣ್ಣಿಮೆಗಳು ಕೂಡ ಸಾಹಿತ್ಯಿಕ ಮತ್ತು ಮತಾಚರಣಾತ್ಮಕ ಸಂಬಂಧ

ಹೊಂದಿವೆ. ಬಹುತೇಕ ಹಬ್ಬಗಳು ಕೃಷಿ ಮೂಲದವಾದ್ದರಿಂದ ಋತುಮಾನಗಳನ್ನನು ಸರಿಸಿ ಬರುತ್ತವೆ.

ಸಾಮಾಜಿಕ ಸಂಪ್ರದಾಯದ ಧಾರ್ಮಿಕ ಮುಖವಂತೂ ವಿವಿಧ ಆಯಾಮ ಗಳುಳ್ಳ ಸಂಕೀರ್ಣ ಸ್ವರೂಪದ್ದು. ಈ ಮುಖವು ಮುಖ್ಯವಾಗಿ ನಾವು ನಮ್ಮ ಸಮಾಜದಲ್ಲಿ ಹೊಂದಿರುವ ಜಾತಿ ಶ್ರೇಣೀಕರಣವನ್ನು ಒಳಗೊಳ್ಳುತ್ತದೆ. ಧಾರ್ಮಿಕ ಶ್ರೇಣೀಕರಣದೊಡನೆ ಜಾತಿ ಶ್ರೇಣೀಕರಣವು ಹೊಂದಿರುವ ಆಂತರಿಕ ಸಂಬಂಧದ ಸೂಕ್ಷ್ಮಗಳನ್ನೂ ಅದು ಒಳಗೊಳ್ಳುತ್ತದೆ. ಉದಾಹರಣೆಗೆ ವ್ಯಾಪಕವಾಗಿ ಹಿಂದೂ ದೈವಗಳನ್ನು ಆರಾಧಿಸುವಂತೆಯೇ ಗಣನೀಯ ಸಂಖ್ಯೆಯ ಜನ ಆರಾಧಿಸುವ ಅತ್ಯಂತ ಪ್ರಾಚೀನವಾದ ಇತರ ಆರಾಧನಾಕ್ರಮಗಳೂ ಇವೆ. ಮಾರ್ಗಪರಂಪರೆ ಮತ್ತು ದೇಸಿ ಪರಂಪರೆಗಳ ನಡುವೆ ತೀವ್ರ ಸಂಸ್ಕೃತೀಕರಣ ಪ್ರಕ್ರಿಯೆ ನಡೆಯುತ್ತಿದ್ದರೂ ಒಂದರಿಂದ ಮತ್ತೊಂದನ್ನು ಪ್ರತ್ಯೇಕಿಸುವ ಅಂಶಗಳನ್ನು ಗುರುತಿಸಬಹುದು. ಈ ತೀವ್ರ ಸಂಸ್ಕೃತೀಕರಣ ಪ್ರಕ್ರಿಯೆ ಹಾಗೂ ಸ್ಥಳಜನ್ಯ ಸಾಂಸ್ಕೃತಿಕ ವಿಶೇಷಗಳ ಉಳಿವಿಗೆ ಕರಾವಳಿ ಭಾರತದ ಭೂತ ಮತ್ತು ತೈಯ್ಯಂ ಆರಾಧನೆ ಒಂದು ಉತ್ತಮ ನಿದರ್ಶನ ವಾಗಿದೆ.

ಅದೇ ರೀತಿಯಾಗಿ, ಪ್ರಧಾನ ವಾಹಿನಿಯೊಂದಿಗೆ ನಿಕಟ ಸಂಪರ್ಕ ಹೊಂದಿಲ್ಲದ ದೇಶದ ಅನೇಕ ಬುಡಕಟ್ಟು ಗುಂಪುಗಳು ಕೂಡ ಸ್ಥಳಜನ್ಯ ಆರಾಧನಾ ರೀತಿಗಳನ್ನು ಉಳಿಸಿಕೊಂಡು ಬಂದಿವೆ. ಕಾಲ ಕಾಲಕ್ಕೆ ಆವಿರ್ಭವಿಸಿದ ಧಾರ್ಮಿಕ ಚಿಂತನೆಯ ಹೊಸ ಅಲೆಗಳು ಹೊಸ ಉಪವಿಭಾಗಗಳನ್ನು ಹುಟ್ಟು ಹಾಕಿದ್ದು ಈ ನಾಡಿನ ಜಾತಿ ಪದ್ಧತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸಿವೆ. ಈ ಮತ್ತು ಇತರ ಸಂಗತಿಗಳು ಸಾಮಾಜಿಕ ಜನಪದ ಸಂಪ್ರದಾಯದ ವಿದ್ಯಾರ್ಥಿಯ ಮುಖ್ಯ ಕಾಳಜಿಗಳಾಗಿವೆ.

ಪ್ರದರ್ಶನಾತ್ಮಕ ಜನಪದ ಕಲೆಗಳು

ಜಾನಪದ ಅಧ್ಯಯನದ ಮತ್ತೊಂದು ಮಹತ್ವದ ಕ್ಷೇತ್ರ ಪ್ರದರ್ಶನಾತ್ಮಕ ಜನಪದ ಕಲೆಗಳು. ಈ ಕ್ಷೇತ್ರ ಮುಖ್ಯವಾಗಿ ಪರಂಪರಾಗತ ಸಂಗೀತ, ನೃತ್ಯ ಮತ್ತು ನಾಟಕಗಳಿಗೆ ಸಂಬಂಧಿಸುತ್ತದೆ. ಆಧುನಿಕ ಪರಿಕಲ್ಪನೆಯ ಪ್ರಕಾರ, 'ಪ್ರದರ್ಶನ' (Performance) ಜಾನಪದದ ಎಲ್ಲ ಬಗೆಗಳಲ್ಲೂ ಅಂತರ್ಗತವಾಗಿ ಬೆರೆತು ಬಂದಿರುತ್ತದೆ. ಈ ಮಾಥವ ಅನುಸಾರ ಜಾನಪದದ ಪ್ರತಿಯೊಂದು ಪ್ರಕಾರವೂ ಪ್ರಸ್ತುತಪಡಿಸಿದಾಗ ಪ್ರದರ್ಶನವೇ ಆಗಿರುತ್ತದೆ. ಅದೇನೇ ಇರಲಿ, ಇಲ್ಲಿ ತಲೆಮಾರಿ ನಿಂದ ತಲೆಮಾರಿಗೆ ಕೊಂಡೊಯ್ಯಲಾಗುವ ಪ್ರಜ್ಞಾಪೂರ್ವಕವಾಗಿ ಪ್ರಸ್ತುತಪಡಿಸ ಲಾಗುವ ನೃತ್ಯ, ನಾಟಕ, ಸಂಗೀತ ಇತ್ಯಾದಿ ಸಮೂಹ ಕಲೆಗಳನ್ನು ಪ್ರದರ್ಶನಾತ್ಮಕ ಕಲೆಗಳೆಂದು ಕರೆಯಬಹುದು.

ಈ ಕ್ಷೇತ್ರದ ಬಹು ಮುಖ್ಯ ವಿಭಾಗವೆಂದರೆ ಪರಂಪರಾಗತ ಸಂಗೀತ. ಇದು ಬರಹ ಅಥವಾ ಮುದ್ರಿತ ಸಂಗೀತ ಎಳೆಗಳ ಮೂಲಕ ಪ್ರವಹಿಸುವುದಕ್ಕಿಂತ ಕರ್ಣಾಕರ್ಣಿಯಾಗಿ ಸಾಗಿ ಸ್ಮರಣೆಯ ಮೂಲಕ ಪ್ರದರ್ಶನಗೊಳ್ಳುವಂಥದು. ಜನಪದ ಪ್ರದರ್ಶಕ ಕಲಾ ಪ್ರಕಾರಗಳ ಪೈಕಿ ಸೀಮಿತ ಅಸ್ತಿತ್ವವನ್ನು ಪಡೆದಿದ್ದರೂ ಪ್ರಕಾರಗಳ ಗಡಿಯನ್ನು ದಾಟಿ ಹೋಗುವಂಥದು ಮತ್ತು ಇತರ ಅನೇಕ ಪ್ರಕಾರಗಳ ಭಾಗವಾಗಿ ರೂಪಗೊಳ್ಳುವಂಥದು. ಉದಾಹರಣೆಗೆ ಜನಪದ ನೃತ್ಯ, ಜನಪದ ನಾಟಕ, ನೃತ್ಯ ನಾಟಕ, ಮೌಖಿಕ ಕಾವ್ಯಗಳು ಸಂಗೀತದ ಕೆಲವು ಅಂಶಗಳನ್ನು ತಮ್ಮೊಡನೆ ಕೊಂಡೊಯ್ಯುವುದು ಸ್ವಾಭಾವಿಕ.

ಭಾರತದ ಜನಪದ ಸಂಗೀತ ಪರಂಪರೆಯ ಕ್ಷೇತ್ರದಲ್ಲಿ ಹೆಚ್ಚು ಗಂಭೀರವಾದ ಕೆಲಸ ನಡೆದೇ ಇಲ್ಲ. ಪಶ್ಚಿಮದಲ್ಲಿ ಜಾನಪದ ವಿಜ್ಞಾನದ ಶಾಖೆಯಾಗಿ ಬಹು ಚೆನ್ನಾಗಿ ಬೆಳೆದಿರುವ 'ಜನಪದ ಸಂಗೀತ ವಿಜ್ಞಾನ' (Ethnomusicology) ನಮ್ಮಲ್ಲಿ ಇನ್ನೂ ಸ್ಪಷ್ಟ ರೂಪು ತಳೆದಿಲ್ಲ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಹಾಗೂ ಆಯಾ ರಾಜ್ಯಗಳ ಸಂಗೀತ ನಾಟಕ ಅಕಾಡೆಮಿಗಳು ನಮ್ಮ ದೇಶದ ವಿವಿಧ ಪ್ರದೇಶದ ಜನಪದ ಸಂಗೀತ ಭಂಡಾರವನ್ನು ದಾಖಲಿಸುವ ಕೆಲಸ ಆರಂಭಿಸಿವೆ. ದೆಹಲಿ, ರಾಜಸ್ಥಾನ, ಮಹಾರಾಷ್ಟ್ರ ಮತ್ತು ಕರ್ನಾಟಕದ ಖಾಸಗಿ ಸಂಸ್ಥೆಗಳೂ ಈ ದಿಸೆಯಲ್ಲಿ ಕೆಲಸ ಆರಂಭಿಸಿವೆ. ಆದರೂ ಈ ಪ್ರಯತ್ನಗಳು ವಿಸ್ತಾರ ಹರಹಿನ ಜನಪದ ಸಂಗೀತ ಕ್ಷೇತ್ರಕ್ಕೆ ಸರಿಸಾಟಿಯಾಗಿಲ್ಲ.

ಜನಪದ ಸಂಗೀತ ಕ್ಷೇತ್ರದಂತೆ, ಜನಪದ ನೃತ್ಯಗಳ ಕ್ಷೇತ್ರವೂ ತುಂಬ ವಿಸ್ತಾರವಾದುದು. ಬಹಳಷ್ಟು ಸಂದರ್ಭಗಳಲ್ಲಿ ಅವು ಜೋಡಿಯಾಗಿ ಸಾಗುತ್ತವಲ್ಲದೆ ಅನೇಕ ಅಂಶಗಳನ್ನು ಸಮಾನವಾಗಿ ಹಂಚಿಕೊಳ್ಳುತ್ತವೆ. ಈ ಕಲಾ ಪ್ರಕಾರಗಳು ಜಾನಪದ ಅಭ್ಯಾಸಿಯ ತೀವ್ರ ಲಕ್ಷ್ಯವನ್ನು ಬಯಸುತ್ತವೆ. ಕಲೆಗಳ ಒಟ್ಟಾರೆ ಪ್ರದರ್ಶನಕ್ಕೆ ಅಗತ್ಯವಾದ ರಂಗಸಜ್ಜಿಕೆ, ಸಂಗೀತೋಪಕರಣಗಳು, ವೇಷಭೂಷಣ, ಶ್ರೋತೃವರ್ಗ—ಇವು ಹೇಗೆ ಪೂರಕವಾಗಿ ಅಳವಟ್ಟಿವೆ ಎಂಬುದು ಅಭ್ಯಾಸಿಯ ಕಾಳಜಿಯಾಗುತ್ತದೆ.[1] ಕಲೆಗಳನ್ನು ಕುರಿತು ಅಧ್ಯಯನ ಕೈಕೊಳ್ಳುವವರು ಕಲಾವಿದರ ನೃತ್ಯ ಪ್ರದರ್ಶನಗಳ ರೂಪ, ಅವರ ವೇಷಭೂಷಣಗಳು, ರಂಗಸಜ್ಜಿಕೆಯ ರಚನೆ, ಶ್ರೋತೃ ಮತ್ತು ಕಲಾವಿದರ

---

1. ಉತ್ತರ ಪ್ರದೇಶದ ರಾಸಲೀಲಾ, ರಾಮಲೀಲಾ, ನೌಟಂಕಿ, ಪಂಜಾಬಿನ ಭಾಂಗ್ರ, ಬಂಗಾಲದ ಚೌ, ಮಧ್ಯಪ್ರದೇಶದ ಮಾಂಚ, ಮಹಾರಾಷ್ಟ್ರದ ತಮಾಷಾ, ತಮಿಳು ನಾಡಿನ ಕರಗಂ, ಕೇರಳದ ತೆಯ್ಯಂ, ಕಥಕಳಿ, ಮೋಹಿನಿಯಾಟ್ಟಂ, ಅಸ್ಸಾಮಿನ ಬಿಹು, ಕರ್ನಾಟಕದ ಬೀಸುಕಂಸಾಳೆ, ಯಕ್ಷಗಾನ, ವೀರಗಾಸೆ ಮುಂತಾದ ನೃತ್ಯಗಳನ್ನು ಕುರಿತು ಅಧ್ಯಯನ ನಡೆಸುವವರು ಸಮಗ್ರ ಹಿನ್ನೆಲೆಯಲ್ಲಿ ಪ್ರದರ್ಶನವನ್ನು ನೋಡಲು ಯತ್ನಿಸಬೇಕು.

ನಡುವಿನ ಮಧುರ ಸಂಬಂಧದ ಬಗೆಗೆ ವಿವೇಚನೆ ನಡೆಸದೆ ಹೋದರೆ ಅಂಥ ಅಧ್ಯಯನ ಅಸಮಗ್ರವಾಗುತ್ತದೆ. ಒಟ್ಟು ಪ್ರದರ್ಶನವನ್ನು ಅಖಂಡವಾಗಿ ನೋಡುವ ಪ್ರಯತ್ನ ಉತ್ತಮ ಅಧ್ಯಯನಕ್ಕೆ ಅಡಿಪಾಯ ಹಾಕಿಕೊಡುತ್ತದೆ.

ಜನಪದ ಪ್ರದರ್ಶನಾತ್ಮಕ ಕಲೆಗಳ ಕ್ಷೇತ್ರವಲ್ಲಿ ನಾಟಕ ಬಹು ಮುಖ್ಯವಾದ ಕ್ಷೇತ್ರ. ಜಾನಪದ ಅಧ್ಯಯನದಲ್ಲಿ ನಾಟಕಗಳ ಸಂಬಂಧವಾಗಿ ನಡೆದಿರುವ ಚರ್ಚೆ ಅತ್ಯಲ್ಪವಾದುದು. ಬಹುಕಾಲದವರೆಗೆ ಅದನ್ನು ಜಾನಪದದ ಒಂದು ಗಂಭೀರ ಪ್ರಕಾರ ವಾಗಿ ಪರಿಗಣಿಸದೆ ಇದ್ದುದೇ ಅದಕ್ಕೆ ಕಾರಣ ಹಬ್ಬಗಳು ಮತ್ತು ಮತಾಚರಣೆಗಳ ಸಂದರ್ಭಗಳಲ್ಲಿ ಏರ್ಪಡುವ ಪ್ರದರ್ಶನಗಳ ಭಾಗವಾಗಿಯಷ್ಟೇ ಗಮನಿಸಲಾಗಿದೆ. ಪೂರ್ಣ ಪ್ರಮಾಣದ ಅಧ್ಯಯನ ನಡೆಸುವಾಗ ಯಾವುದೇ ಬಗೆಯ ನಾಟಕವಾಗಿರಲಿ, ಮೊಗವಾಡಗಳು, ವೇಷಭೂಷಣಗಳು, ನಾಟಕವಾಡುವ ಸ್ಥಳ, ಸಾಂಪ್ರದಾಯಿಕ ಶೈಲಿಕೃತ ಕ್ರಿಯೆಗಳನ್ನು ಮೊದಲು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಆಟ ಚಟುವಟಿಕೆಯಾಗಿ ಅದು ಹೇಗೆ ಆಟ, ನೃತ್ಯ ಮತ್ತು ಮತಾಚರಣೆಗಳೊಡನೆ ನಿಕಟ ಸಂಬಂಧ ಸಾಧಿಸಿದೆ ಎಂಬುದನ್ನು ನೋಡಬೇಕಾಗುತ್ತದೆ. ಪ್ರದರ್ಶನ, ಶ್ರೋತೃಸಂಬಂಧ ಹಾಗೂ ಪ್ರಸರಣ ವಿಧಿವಿಧಾನದಲ್ಲಿ ಬರಹ ರೂಪದ ನಾಟಕಗಳಿಂದ ಭಿನ್ನವಾಗಿರುವುದೇ ಜನಪದ ನಾಟಕದ ವೈಶಿಷ್ಟ್ಯ.

ಭಾರತೀಯ ಜನಪದ ನಾಟಕಗಳ ಪರಂಪರೆ ದೊಡ್ಡದು. ಮೊದಲೇ ಹೇಳಿರು ವಂತೆ, ಜನಪದ ನಾಟಕದ ಬಹುತೇಕ ಪ್ರಕಾರಗಳು ಹಬ್ಬಗಳು ಮತ್ತು ಆಚರಣೆಗಳೊಡನೆ ಬೆರೆತಿವೆ; ಸಂಗೀತ ಮತ್ತು ನೃತ್ಯಗಳೊಡನೆ ನಿಕಟ ಸಂಬಂಧ ಹೊಂದಿವೆ. ಶಾಸ್ತ್ರೀಯ ನೃತ್ಯ, ನಾಟಕ ಮತ್ತು ಸಂಗೀತ ಪ್ರಕಾರಗಳೊ ನಗರ ಆವರಣದ ವಸ್ತು ಸಂಗತಿಗಳು. ಪ್ರಾಚೀನ ಕಾಲದಲ್ಲಿ ಕೂಡ ಈ ಪ್ರಕಾರಗಳು ಅರಮನೆ ಮತ್ತು ದೇವರಗುಡಿಗಳಲ್ಲಷ್ಟೇ ವಿಜೃಂಭಿಸಿದವು. ಗ್ರಾಮೀಣ ಭಾರತ ಈ ಶಿಷ್ಟ ಕಲಾಪ್ರಕಾರಗಳನ್ನು ಯಾವತ್ತೂ ಯಥಾವತ್ತಾಗಿ ಸ್ವೀಕರಿಸಲಿಲ್ಲ. ತಮ್ಮದೇ ಆದ ಜನಪದ ಕಲಾ ಪ್ರಕಾರಗಳನ್ನು ಸಂರಕ್ಷಿಸುತ್ತಾ, ಅವನ್ನು ಶ್ರೀಮಂತಗೊಳಿಸುತ್ತಾ ಅವುಗಳೊಡನೆ ಬದುಕುತ್ತಾ ಬಂದಿದ್ದಾ ರಷ್ಟೆ. ಜನಪದ ನಾಟಕದ ಕತೆಯೂ ಇದೇ ಆಗಿದೆ. ಇಷ್ಟಾದರೂ ಈ ಎರಡೂ ಪರಂಪರೆಗಳ ನಡುವೆ ಸಾಕಷ್ಟು ಸಂಪರ್ಕ ಇದ್ದೇ ಇದೆ. ಶಿಷ್ಟ ಪರಂಪರೆಯ ಸಂಪರ್ಕ ದಿಂದಾಗಿ 'ಯಕ್ಷಗಾನ' ಮತ್ತು 'ಕಥಕಳಿ'ಗಳಲ್ಲಿ ಈಗ ನಯಗಾರಿಕೆ ಅಥವಾ ಶಾಸ್ತ್ರೀ ಯತೆಯ ಪದರ ಗೋಚರಕ್ಕೆ ಇರುವಂತಾಗಿದೆ. ಮಾರ್ಗ ಹಾಗೂ ದೇಶೀ ಪರಂಪರೆಗಳ ಸಾಹಚರ್ಯಕ್ಕೆ ಅತ್ಯುತ್ತಮವಾದ ಮತ್ತೊಂದು ನಿದರ್ಶನವೆಂದರೆ ಉತ್ತರ ಕರ್ನಾಟಕದ 'ಸಂಗ್ಯಾ ಬಾಳ್ಯಾ' ನಾಟಕ. ಆಧುನಿಕ ನಾಟಕಕಾರರು ಮತ್ತು ಸಾಹಿತ್ಯಿಕ ವಿದ್ವಾಂಸರು ತಮ್ಮ ರಚನೆಗಳಲ್ಲಿ ಈ ಯುಗಧರ್ಮಕ್ಕೆ ಸಂಗತವಾದ ಅರ್ಥ ಮತ್ತು ರೂಪಕಗಳನ್ನು ಜೋಡಿಸಲು ದೇಸೀ ಪರಂಪರೆಯತ್ತ ನೋಡಲಾರಂಭಿಸಿರುವ ಈ ಹೊತ್ತಿನಲ್ಲಿ ಎರಡೂ ಪರಂಪರೆಗಳ ಸಾಹಸಕಾರ್ಯ ಹೆಚ್ಚು ಅರ್ಥಪೂರ್ಣವೆನಿಸಿಕೊಳ್ಳುತ್ತಿದೆ. ಆದ್ದರಿಂದಲೆ

ಆಧುನಿಕ ನಾಟಕ ಪ್ರಯೋಗಾರ್ಥಿಗಳು ಜನಪದ ನಾಟಕದ ವಸ್ತು ಮತ್ತು ಪಾತ್ರ ಚಿತ್ರಣಗಳಿಂದಷ್ಟೇ ಆಕರ್ಷಿತರಾಗದೆ ರಂಗಸಜ್ಜಿಕೆ. ವೇಷಭೂಷಣ, ನಂಡಿಗಟ್ಟು ಹಾಗೂ ಜನಪದ ಪರಂಪರೆಯ ಇತರ ಅಂಶಗಳನ್ನೂ ದುಡಿಸಿಕೊಳ್ಳುತ್ತಿರುವುದು ಆಧುನಿಕ ಸಂದರ್ಭದಲ್ಲಿ ಮಹತ್ವದ್ದಾಗಿ ಕಾಣುತ್ತಿದೆ (ಹಂಡೂ, ೧೯೮೯, ೨೯).

ಭಾರತೀಯ ಸಂಗೀತ ಮತ್ತು ನಾಟಕದ ಅನೇಕಾನೇಕ ಆಕರ್ಷಕ ಪ್ರಕಾರಗಳನ್ನು ನೃತ್ಯನಾಟಕಗಳೆಂದು ಗುರುತಿಸಲಾಗುತ್ತಿದ್ದು ನೃತ್ಯ ಮತ್ತು ನಾಟಕ—ಎರಡರ ಅಂಶ ಗಳನ್ನೂ ಒಳಗೊಂಡಿದೆ ಎಂಬ ಗ್ರಹಿಕೆಯಿಂದ ಇದನ್ನು ಒಂದು ಹೊಸ ಪ್ರಕಾರವಾಗಿ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಉದಾಹರಣೆಗೆ ಕರ್ನಾಟಕದ ಯಕ್ಷಗಾನ, ಕೇರಳದ ಕಥಕಳಿ, ಮಹಾರಾಷ್ಟ್ರದ ತಮಾಷಾ, ಆಂಧ್ರಪ್ರದೇಶದ ವೀದಿನಾಟಕಂ, ತಮಿಳು ನಾಡಿನ ತೆರುಕ್ಕೂತ್ತು—ಭಾರತದ ಕೆಲವು ಪ್ರಸಿದ್ಧ ನೃತ್ಯನಾಟಕಗಳಾಗಿವೆ.

ಡಾ. ರಾಮೇಗೌಡ

ಜನಪದ ಗೀತೆ

ಅನಕ್ಷರಸ್ಥ ಜನಸಮೂಹದ ನಡುವೆ ವಾಕ್ಸಂಪ್ರದಾಯದ ಮೂಲಕ ಹರಿದು ಬಂದಿರುವ ಒಂದು ಗುಂಪಿನ ಕಾವ್ಯ ಮತ್ತು ಸಂಗೀತಗಳ ಸಮಾವೇಶದಿಂದಾದುದು ಜನಪದ ಗೀತೆ. ಈ ಗುಂಪು ಪ್ರಧಾನವಾಗಿ ಗ್ರಾಮೀಣ ಸಮುದಾಯವಾಗಿದ್ದು, ಪ್ರಾಚೀನ ಸಂಸ್ಕೃತಿಯೊಂದನ್ನು ಉಳಿಸಿಕೊಂಡು ಬಂದುದಾಗಿರುತ್ತದೆ. ಆದ್ದರಿಂದ ಜನಪದ ಗೀತೆ ನಾಗರಿಕ ಮನಸ್ಸಿನ ಅಭಿವ್ಯಕ್ತಿಯಲ್ಲ. ಗ್ರಾಮೀಣರ ಸುಖದುಃಖಗಳನ್ನು, ಸಮಸ್ಯೆ ಕ್ಲೇಶಗಳನ್ನು ಹೇಳುವಂಥದು. ಇಲ್ಲಿನ ಮನೋಭಾವ ತೀವ್ರ ಮಾನವೀಯ. ರಾಗ ಮತ್ತು ಪದರಚನೆಯ ಸುಮಧುರ ಬಂಧವೇ ಇದರ ಲಕ್ಷಣ. ಸರಳತೆ ಮತ್ತು ಸ್ಪಷ್ಟತೆ ಇದರ ಮತ್ತೆರಡು ಲಕ್ಷಣಗಳು. ಜನಪದ ಗೀತೆಯಲ್ಲಿ ಅಭಿಜಾತ ಕಲೆಯ ತಾಂತ್ರಿಕ ಸೂಕ್ಷ್ಮತೆ ಇರದಿದ್ದರೂ, ಅದರಂತೆಯೇ ಇದೂ ಹೆಚ್ಚಿನ ಸ್ಥಾನವನ್ನು ಪಡೆದುಕೊಳ್ಳ ಬಲ್ಲುದು.

ಜನಪದ ಗೀತೆ ಯಾವುದನ್ನೆ ವಿವರಿಸಲಿ ಅದನ್ನು ನೇರವಾಗಿ ಹೇಳುತ್ತದೆ. ಅದನ್ನು ಪ್ರಯತ್ನಪೂರ್ವಕವಾಗಿ ಕಲಾತ್ಮಕಗೊಳಿಸುವುದಾಗಲಿ ಅಥವಾ ಕಾವ್ಯದ ಪರಿಣಾಮ ಗಳನ್ನು ತರಬೇಕೆಂಬುದಾಗಲಿ ಇರುವುದಿಲ್ಲ. ಆದ್ದರಿಂದ ಜನಪದ ಗೀತೆಯ ಶುದ್ಧ ಸಾಹಿತ್ಯಿಕ ಪರಿಶೀಲನೆ ಲಾಭದಾಯಕವಾಗುವುದಿಲ್ಲ. ಇಲ್ಲಿ ಸಾಹಿತ್ಯಿಕ ಮೌಲ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ, ಚಾರಿತ್ರಿಕ ಹಾಗೂ ಮನಶ್ಶಾಸ್ತ್ರೀಯ ಮೌಲ್ಯಗಳೇ ನಮ್ಮ ಗಮನ ಸೆಳೆಯುವಂಥವು. ಇದರಿಂದ ಜನಪದರ ಮನೋಭಾವಗಳನ್ನು ನಿರ್ಧರಿಸಲು ಸಾಧ್ಯ ವಾಗುತ್ತದೆ.

ಜನಪದ ಗೀತಸಾಹಿತ್ಯ ಪ್ರಮುಖವಾಗಿ ಗೀತೆ ಮತ್ತು ಲಾವಣಿಗಳೆಂದು ಎರಡು ಬಗೆಯಾಗುತ್ತದೆ. ಮೊದಲನೆಯದು ಭಾವಗೀತಾತ್ಮಕವಾದರೆ, ಎರಡನೆಯದು ಕಥಾತ್ಮಕವಾಗುತ್ತದೆ. ಒಂದು ಭಾವನಿಷ್ಠವಾದರೆ, ಮತ್ತೊಂದು ವಸ್ತುನಿಷ್ಠ. ಎರಡೂ ಹಾಡಲ್ಪಡುವಂಥವು. ಎರಡರ ರಚನಕಾರರೂ ಇಂದು ಅನಾಮಧೇಯರಾದರೂ, ಎರಡನೆಯದರ ರಚನಕಾರ ಹೆಚ್ಚು ಸಂಶಿಕ್ಷಿತ ಕಲಾವಂತನೆಂದು ಅಭಿಪ್ರಾಯ. ಮೊದಲನೆಯ ರಚನೆ ಎರಡನೆಯದಕ್ಕಿಂತ ಪುರಾತನವಾದುದೆಂದು ಹೇಳುತ್ತಾರೆ.

ಮೊದಲ ಗುಂಪಿನ ಗೀತೆಗಳು ಬದುಕಿನ ಚಟುವಟಿಕೆಗಳೊಡನೆ ಹೆಚ್ಚು ಸಂಬಂಧಪಡುವು ದರಿಂದ ಇವನ್ನು ಕ್ರಿಯಾತ್ಮಕ ಗೀತೆಗಳೆಂದು ಕರೆಯಬಹುದಾಗಿದೆ. ಆದರೆ ಎರಡನೆಯ ಗುಂಪಿನ ಗೀತೆಗಳು ಈ ಬಗೆಯ ಯಾವುದೇ ಸಾಂಪ್ರದಾಯಿಕ ಸಂದರ್ಭಗಳನ್ನು ಹೆಚ್ಚಾಗಿ ಅಪೇಕ್ಷಿಸುವುದಿಲ್ಲ. ಇಷ್ಟಾದರೂ ಕ್ರಿಯಾತ್ಮಕ ಗೀತೆಯೊಂದು ಅದೇ ಕಾಲದಲ್ಲಿ ಸೌಂದರ್ಯಬೋಧೆಯನ್ನುಂಟುಮಾಡಬಾರದೆಂದೇನೂ ನಿಯಮವಿಲ್ಲ.

ಸಾಮಾನ್ಯವಾಗಿ ಜನಪದ ಗೀತೆಗಳನ್ನು ರಚಿಸುವುದಕ್ಕೆ ಮತ್ತು ಹಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಔಪಚಾರಿಕ ಬೋಧನತಂತ್ರವೊಂದು ಇರುವುದಿಲ್ಲ. ಅವು ಕಿವಿಯ ಮೂಲಕ ಕಲಿತುಕೊಂಡವು ಮತ್ತು ಹಾಗೆಯೇ ತಲೆಮಾರಿನಿಂದ ತಲೆಮಾರಿಗೆ ಸಾಗಿದವು. ಅವುಗಳ ರೂಪ ಅಥವಾ ರಚನೆಯನ್ನು ಕುರಿತಾದ ಯಾವುದೇ ಬುದ್ಧಿ ಪೂರ್ವಕ ಅರಿವು ಜನಪದ ಗಾಯಕರಿಗೆ ಇರುವುದಿಲ್ಲ. ಅವರ ಮನಸ್ಸಿನಲ್ಲಿ ಯಾವುದೇ ಸೌಂದರ್ಯಾತ್ಮಕ ಅಥವಾ ವಿಶ್ಲೇಷಕ ಸಿದ್ಧಾಂತವೂ ಇರುವುದಿಲ್ಲ. ತಾಂತ್ರಿಕವಾಗಿ ಶಿಷ್ಟ ವಾಗಿ ಹೋಗಿರುವ ನಮ್ಮ ಸಂಗೀತದ ಅನುಷ್ಠಾನದ ಕಲಿಕೆ ಹಾಗೂ ಪೂರ್ವಾಭ್ಯಾಸಗಳ ಲಕ್ಷಣಗಳಾವುವೂ ಇಲ್ಲಿ ಕಂಡುಬರುವುದಿಲ್ಲ.

ಜನಪದ ಗೀತೆ ಗುಂಪಿನ ಸಾಮಾನ್ಯ ಸದಸ್ಯರೂ ಭಾಗವಹಿಸಬಹುದಾದ ಒಂದು ಕಲೆ, ಆದರೆ ಇದು ಶಿಷ್ಟ ಸಂಗೀತ ಅಥವಾ ಸಾಹಿತ್ಯದಲ್ಲಿ ಅಷ್ಟಾಗಿ ಸಾಧ್ಯವಿರುವುದಿಲ್ಲ. ಜನಪದ ಸಮೂಹದ ಪ್ರತಿಯೊಬ್ಬನೂ ಗೀತೆಗಳನ್ನು ಬಲ್ಲವನಾಗಿರುತ್ತಾನೆ, ಅವನ್ನು ಹಾಡುವವನಾಗಿರುತ್ತಾನೆ ; ಅಥವಾ ಕಡೆಯ ಪಕ್ಷ ಅವನ್ನು ಆಲಿಸಿರುತ್ತಾನೆ. ಹಾಗೂ ಅವನ್ನು ಕುರಿತು ಬಹಳವಾಗಿ ತಿಳಿದಿರುತ್ತಾನೆ. ಅನೇಕ ಸಂದರ್ಭಗಳಲ್ಲಿ ಹಾಡುವ ಒಂದು ಗುಂಪೇ ಇದ್ದು, ಅಷ್ಟು ಪ್ರಮುಖರಲ್ಲದ ಹಾಡುಗಾರರೂ ಭಾಗವಹಿಸಲು ಅವಕಾಶ ಗಳಿರುತ್ತವೆ. ಆದರೆ ಒಬ್ಬ ಹಾಡುಗಾರರನ್ನು ಅವನ ಗುಂಪಿನ ಅತ್ಯಂತ ಪ್ರಮುಖ ಹಾಡುಗಾರನನ್ನಾಗಿ ಮಾಡುವುದಾದರೂ ಯಾವುದು ? ಉತ್ತಮ ಕಂಠಶ್ರೀ ಅನೇಕವೇಳೆ ಗ್ರಾಹ್ಯ ವಿಷಯವಾದರೂ, ಅವಶ್ಯವಾದುದೇನಲ್ಲ ; ಉತ್ತಮ ಜ್ಞಾಪಕಶಕ್ತಿ ಇದ್ದರೆ ಸಾಕು. ಆದ್ದರಿಂದ ಗಾಯಕರ ಅಸಾಧ್ಯ ನೆನಪಿನ ಶಕ್ತಿಯನು ಕುರಿತು ಸೂತ್ರವೊಂದನ್ನು ರೂಪಿಸಬಹುದು : " He can sing all night and never repeat "[1] ಅಮೆರಿಕದ ಹಾಡುಗಾರನೊಬ್ಬನನ್ನು ಹೀಗೆ ಸ್ತುತಿಸಲಾಗಿದೆ. ಈ ಮಾತನ್ನು ಜಗತ್ತಿನ ಎಲ್ಲ ಗಾಯಕರಿಗೂ ಕಲಾವಿದರಿಗೂ ಅನ್ವಯಿಸಬಹುದು.

ಶಿಷ್ಟ ಕಲೆಯಲ್ಲಿ ಕಲಾವಿದ, ವಿಮರ್ಶಕ ಹಾಗೂ ಸಾಮಾನ್ಯರ ನಡುವೆ ಭಿನ್ನತೆ ಇರುತ್ತದೆ. ಕಾವ್ಯದಲ್ಲಿ ಕವಿ, ಗಮಕಿ (ಕೆಲವೊಮ್ಮೆ) ಮತ್ತು ಸಹೃದಯ ಇರುತ್ತಾರೆ. ಸಂಗೀತದಲ್ಲಿ ರಚನಕಾರ, ಸಂಗೀತಗಾರ ಮತ್ತು ಶ್ರಾವಕ ಇರುತ್ತಾರೆ. ಆದರೆ ಜನಪದ

---

1. *Standard Dictionary of Folklore, Mythology and Legend*- Ed. : Maria Leach. p. 1034 (One Volume Edition), 1975.

ಗೀತೆಗಳಲ್ಲಿ ಈ ಮಟ್ಟುಗಳಲ್ಲಿ ಹೆಚ್ಚು ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಇವುಗಳಲ್ಲಿ ಗಾಯಕರಿಗೂ ಶ್ರೋತೃವಿಗೂ ಇರುವ ಅಂತರ ಸೂಕ್ಷ್ಮವಾದುದು. ಹಾಡುಗಾರ ಒಬ್ಬನೇ ಆಗಿರಬಹುದು ಅಥವಾ ಒಂದು ಗುಂಪು ಆಗಿರಬಹುದು. ಹಾಗೆಯೇ ಸೃಷ್ಟಿಕರ್ತ ಮತ್ತು ಹಾಡುಗಾರನಿಗಿರುವ ವ್ಯತ್ಯಾಸವೂ ತುಂಬ ಸೂಕ್ಷ್ಮವಾದುದು. ಸಾಮಾನ್ಯವಾಗಿ ಜನಪದ ಗೀತೆಯೊಂದರ ಮೂಲ ರಚನಕಾರ ನಮಗಿಂದು ಗೊತ್ತಿಲ್ಲ. ಈ ಕಲೆ ಪ್ರತಿ ತಲೆಮಾರಿನಲ್ಲಿಯೂ ಹೊಸ ಸೃಷ್ಟಿಗಳನ್ನು ಅವಲಂಬಿಸಿರುವುದು ಅಪರೂಪ. ಹೊಸದಾಗಿ ಸೃಷ್ಟಿಯಾಗುವ ಗೀತೆಗಳ ಸಂಖ್ಯೆ ಯಾವಾಗಲೂ ಕಡಿಮೆಯೇ. ಜನಪದ ಗೀತೆ ಶಿಷ್ಟ ಕಾವ್ಯದ ಹಾಗೆ ಸೃಷ್ಟಿಯಾಗುವುದಿಲ್ಲ. ಇದು ಬೆಳೆಯುವಾಗ ಈಗಾಗಲೇ ಅಸ್ತಿತ್ವದಲ್ಲಿರುವ ಮೂಲವಸ್ತುವಿನ ಪುನರ್‌ಸೃಷ್ಟಿ ಕ್ರಿಯೆಯನ್ನು ಬಳಸಿಕೊಳ್ಳುತ್ತದೆ. ಇದರಲ್ಲಿಯೂ ಇಡೀ ಸಮಾಜವೇ ಭಾಗವಹಿಸುತ್ತದೆ ಎಂದಲ್ಲ, ಆ ಸಮಾಜದ ಒಳಗಡೆಯೆ ಇರುವ ಮತ್ತು ಈ ಕ್ರಿಯೆಯಲ್ಲಿ ಕ್ರಿಯಾಶೀಲರಾಗಿರುವ ವ್ಯಕ್ತಿಗಳಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಗಾಯಕರು ತಮ್ಮ ಎಷ್ಟೋ ಮಾರ್ಪಾಡುಗಳನ್ನು ಗೊತ್ತಿದ್ದೊ ಗೊತ್ತಿಲ್ಲದೆಯೊ ಸೇರಿಸುವರು. ಈ ವ್ಯತ್ಯಾಸಗಳೇ ಕ್ರಮೇಣ ಭಿನ್ನ ಪಾಠ, ರೂಪಾಂತರಗಳಾಗಿ, ಪ್ರಾದೇಶಿಕ ವ್ಯತ್ಯಯಗಳಾಗಿ, ಗೀತ ಸಂಪ್ರದಾಯಗಳಾಗಿ ಬೆಳೆಯುವುದಕ್ಕೆ ಮತ್ತು ಹೊಸ ಪಠ್ಯ, ಮಟ್ಟುಗಳಾಗಿ ಬೇರ್ಪಡುವುದಕ್ಕೆ ಕಾರಣವಾಗುತ್ತವೆ. ಈ ಸೃಷ್ಟಿಕ್ರಿಯೆ ಒಬ್ಬನಿಂದ ಪ್ರಾರಂಭವಾದುದಲ್ಲ, ಒಬ್ಬನಿಂದ ಮುಕ್ತಾಯವಾಗುವುದೂ ಅಲ್ಲ ; ಅದು ಅನೇಕ ವ್ಯಕ್ತಿಗಳ ನಡುವೆ ಹಾಗೂ ತಲೆಮಾರುಗಳ ನಡುವೆ ಹರಡಿಕೊಳ್ಳುವಂಥದು. ಸಂಪ್ರದಾಯವೊಂದು ಜೀವಂತವಾಗಿರುವತನಕ ಇದಕ್ಕೆ ನಾಶವಿಲ್ಲ. ಜನಪದ ಗೀತೆ ಏಕಾಗಿ ಅನಾಮಧೇಯ ಮತ್ತು ಅದಕ್ಕೆ ನಿಜವಾದ ಜನ್ಮದಾತೃ ಏಕೆ ಇಲ್ಲ ಎಂಬುದಕ್ಕೆ ಇದು ಕಾರಣವನ್ನು ತಿಳಿಸುತ್ತದೆ.

ಜನಪದಗೀತೆ ಸಂಗೀತಕಲೆಯೂ ಹೌದು. ಶಿಷ್ಟಸಂಗೀತದಲ್ಲಿ ಇರುವ ಹಾಗೆ ಇದರ ರೂಪ ಮತ್ತು ವಿಷಯಗಳನ್ನು ನಿಗದಿಗೊಳಿಸಿಲ್ಲ. ಒಂದು ಪ್ರದೇಶದ ತುಂಬ ಹರಡಿದ ಮಟ್ಟುಗಳು ಬೇರೆ ಬೇರೆ ಸ್ಥಳಗಳಲ್ಲಿನ ತಮ್ಮ ಪಾಠಾಂತರಗಳಲ್ಲಿ ಸಾಕಷ್ಟು ವ್ಯತ್ಯಾಸವನ್ನು ತೋರಿವೆ. ಅನೇಕಸಾರಿ ಒಂದೇ ಜನಸಮುದಾಯದ ಗಾಯಕರು ಮಟ್ಟಿಗೆ ಭಿನ್ನರೂಪವನ್ನು ಕೊಡುವುದಿದೆ. ಇದಲ್ಲದೆ ಮಟ್ಟು ಬೇರೆ ಬೇರೆ ಪದ್ಯಗಳಿಗೆ ಪುನರಾವರ್ತನೆಗೊಂಡಾಗ ಉಂಟಾದ ವ್ಯತ್ಯಾಸಗಳು ಗೀತೆಯ ಪಾಠಗಳಲ್ಲಿ ನಿರೀಕ್ಷಿಸಬಹುದಾದ ಭಿನ್ನತೆಗಳಿಗಿಂತ ಹೆಚ್ಚಿನದವಾಗಿರುತ್ತವೆ. ಜನಪದ ಗಾಯಕರು ಮಟ್ಟೊಂದನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ರೀತಿಯಾಗಿಯೇ ಹಾಡಿದರೂ ಆಶ್ಚರ್ಯಪಡಬೇಕಾಗಿಲ್ಲ. ಮಟ್ಟಿನ ಹೊಸ ರೂಪಗಳು ಅಥವಾ ಹೊಸ ಮಟ್ಟುಗಳು ಹಳೆಯ ಮಟ್ಟುಗಳಿಂದ ಕವಲೊಡೆಯಬಹುದು. ಆದರೆ ಇವು ಮಟ್ಟಿನ ಮೂಲವಸ್ತುವಿನ ಆಧಾರದ ಮೇಲೆ ಆದ ವ್ಯತ್ಯಯಗಳೇ ವಿನಾ, ಅನಿರೀಕ್ಷಿತ ಹೊಸ ಬದಲಾವಣೆಗಳಲ್ಲ. ಕೆಲವು ವೇಳೆ ಈ ಮಟ್ಟು ಸಾಹಿತ್ಯಿಕ ಮೂಲವೊಂದರಿಂದ ತೆಗೆದುಕೊಂಡಿರುವ ಸಾಧ್ಯತೆ ಇರುತ್ತದೆ. ಆದರೆ ಇದು

ತೀರ ಪ್ರಾಚೀನ ಗೀತೆಗಳಿಗೆ ಅನ್ವಯಿಸುವುದಿಲ್ಲ. ಆಮೇಲಿನ ಜನಪದಗೀತೆಗಳು ಹಿಂದಿನ ಗೀತೆಗಳ ಮಟ್ಟನ್ನು ಹೊಂದಿಸಿಕೊಂಡಿರುವುದನ್ನೂ ಕಾಣುತ್ತೇವೆ. ಹಾಗೆ ಆಗುವುದು ಆ ಮಟ್ಟುಗಳು ಗಾಯಕರಿಗೆ ಪರಿಚಿತವಾಗಿದ್ದಾಗ ಮಾತ್ರ.

ಜನಪದ ಗಾಯಕ ಪದ್ಯದಿಂದ ಪದ್ಯಕ್ಕೆ ಪುನರಾವರ್ತನೆಯಾಗುವ ಮಟ್ಟಿನ ವ್ಯತ್ಯಾಸಗಳ ಬಗ್ಗೆ ಅಷ್ಟೇನೂ ಎಚ್ಚರಿಕೆ ವಹಿಸುವಂತೆ ಕಾಣುವುದಿಲ್ಲ. ಇದು ಗೀತೆಯ ಲಯ, ಧಾಟಿ ಮತ್ತು ರಚನೆಯ ಮೇಲೆ ಕೂಡ ಪ್ರಭಾವ ಬೀರುತ್ತದೆ. ಆದರೆ ಮಟ್ಟಿಗೆ ಮೂಲ ಮಾದರಿ ಮಾತ್ರ ಅಖಂಡವಾಗಿ ಉಳಿಯುತ್ತದೆ. ಆದ್ದರಿಂದ ಪ್ರಸಿದ್ಧ ಮಟ್ಟುಗಳಲ್ಲಿನ ಪ್ರಾದೇಶಿಕ ವ್ಯತ್ಯಯಗಳಲ್ಲಿ ನಮ್ಮಂತೆ ಬಹುಮುಖ್ಯ ವಿಷಯವಾಗುತ್ತದೆ.

ನೆರೆಹೊರೆಯ ಜನರಿಗೆ ಎಲ್ಲಿ ಆತ್ಮೀಯ ಸಂಪರ್ಕ ಏರ್ಪಟ್ಟಿರುತ್ತದೆಯೊ, ಅದರಲ್ಲಿಯೂ ವಿಶೇಷವಾಗಿ ಎಲ್ಲಿ ಅವರು ಪರಸ್ಪರ ಸೇರಿ ಹೋಗಿರುತ್ತಾರೊ ಅಂಥ ಕಡೆಗಳಲ್ಲಿ ಮಟ್ಟುಗಳ ಪರಸ್ಪರ ವಿನಿಮಯ ಹೆಚ್ಚಾಗಿ ನಡೆದಿರುತ್ತದೆ. ಅಷ್ಟು ಮಾತ್ರವಲ್ಲದೆ, ಮಟ್ಟುಗಳ ಮೂಲಾಧಾರಗಳನ್ನು ಹುಡುಕುವುದು ಕಾಲಾನಂತರ ಕಷ್ಟವಾಗುತ್ತದೆ. ಒಂದು ಸಮೂಹದ ಧಾಟಿಯ ಲಕ್ಷಣಗಳು ಇನ್ನೊಂದು ಸಮೂಹದ ಧಾಟಿಯ ಮೇಲೆ ದಾಳಿ ಮಾಡುವುದರಿಂದ, ಸಮೂಹವೊಂದರ ಜನಪದಗೀತೆಯ ಸಂಗೀತಾತ್ಮಕ ವಿವರಣೆ ಕಷ್ಟವೆನಿಸಿಬಿಡುವುದು.

ಜನಪದಗೀತೆಯ ರೂಪ ತೀರ ಸರಳವಾದುದು. ಸಾಮಾನ್ಯವಾಗಿ ಚಿಕ್ಕರೂಪಗಳಲ್ಲಿ ಬಳಕೆಯಲ್ಲಿದೆ. ಪದ್ಯದಲ್ಲಿ ನಿಯಮಿತ ಸಂಖ್ಯೆಯ ಸಾಲುಗಳು ಒಂದು ಘಟಕವಾಗಿ ಕಾಣಿಸುತ್ತಿದ್ದು, ಗೀತೆಯ ಉದ್ದಕ್ಕೂ ಅವು ಪುನರಾವರ್ತನೆಗೊಳ್ಳುತ್ತವೆ. ಭಿನ್ನರೂಪಗಳನ್ನು ಗುರುತಿಸುವುದು ಪದ್ಯದಲ್ಲಿನ ಸಾಲುಗಳ ಸಂಖ್ಯೆಯಿಂದ ಮತ್ತು ಪದ್ಯರಚನೆಯ ಮಾದರಿಯನ್ನು ರೂಪಿಸುವ ಲಕ್ಷಣಗಳಿಂದ, ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಸಾಲು ಪರಿಚಿತವಾದುದು. ನಮ್ಮ ಬಹುತೇಕ ಜನಪದ ಗೀತೆಗಳು ತ್ರಿಪದಿಯಲ್ಲಿರುವುದನ್ನು ನೆನಪುಮಾಡಿಕೊಳ್ಳಬಹುದು. ಹಾಡುವಾಗ ಇದು ಚೌಪದಿರೂಪ ತಾಳುವುದನ್ನೂ ಗಮನಿಸಬೇಕು. ಪದ್ಯದ ಸಾಲಿನ ವ್ಯವಸ್ಥೆ ಎರಡು ಸಾಮಾನ್ಯ ತತ್ತ್ವಗಳನ್ನು ಅನುಸರಿಸಿರುತ್ತದೆ : ಶಿಷ್ಟಕಾವ್ಯದಲ್ಲಿ ನಮಗೆ ಬಹುತೇಕ ಪರಿಚಿತವಿರುವ ಛಂದೋಬದ್ಧ ನಿಯತ ಪಾದಗಳಿಂದಾದುದು ಒಂದು ; ಪಾದವೊಂದನ್ನು ರೂಪಿಸುವ ಸ್ವರಭಾರ ಅಥವಾ ಮಾತ್ರೆಯ ವೈದೃಶ್ಯಗಳು ಪಾತ್ರವಹಿಸುವುದರ ಬದಲು ಅಕ್ಷರಗಳ ನಿರ್ದಿಷ್ಟ ಸಂಖ್ಯೆಯಿಂದಾದುದು ಮತ್ತೊಂದು.[2] ಜನಪದಗೀತೆಯಲ್ಲಿ ಪಾದವೊಂದು ಬಹಳಷ್ಟು ಅಸ್ಥಿರವಾದುದು : ಅಕ್ಷರ ಸಂಖ್ಯೆ ಬೇಕಾದ ಹಾಗೆ ಬದಲಾಗಬಹುದಾದದ್ದು. ಕೆಲವು ಭಾಷೆಗಳಲ್ಲಿ ಪಾದವೇ ಮುಖ್ಯವಾಗಿರಬಹುದು, ಇನ್ನು ಕೆಲವು ಭಾಷೆಗಳಲ್ಲಿ ಅಕ್ಷರಗಳೇ ಪ್ರಧಾನವಾಗಿರಬಹುದು. ಇಲ್ಲವೆ, ಇವೆರಡೂ ಒಟ್ಟಿಗೆ ಮುಖ್ಯವೆನಿಸಬಹುದು ಒಟ್ಟಿನಲ್ಲಿ

---

2 Ibid, p 1038

ಪದ್ಯಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು : ಒಂದು—ಪ್ರತಿಸಾಲಿನಲ್ಲಿಯೂ ಒಂದೇ ರೀತಿಯ ಛಂದೋಬದ್ಧರಚನೆ ಇರುವಂಥದು; ಎರಡು—ಅದು ಇಲ್ಲದಿರುವಂಥದು.[3]

ಪದ್ಯಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡಲು ಮತ್ತು ವೈವಿಧ್ಯಪೂರ್ಣವಾಗಿ ವರ್ತಿಸಲು ಪುನರಾವರ್ತನ ಧ್ವನಿಮೌಲ್ಯಗಳಾದ ಪ್ರಾಸ, ಅನುಪ್ರಾಸ, ಧ್ವನಿಸಾಮ್ಯ ಮುಂತಾದ ರಚನೆಗಳು ಕಾರಣವಾಗಿದೆ. ಧ್ವನಿಮೌಲ್ಯದ ಈ ತತ್ತ್ವ ಸಾಲೊಂದನ್ನು ಅಥವಾ ಸಾಲಿನ ಭಾಗವೊಂದನ್ನು ಪುನರಾವರ್ತಿಸುವುದರಲ್ಲಿ ಮತ್ತು ಪಲ್ಲವಿಗಳಲ್ಲಿ ಕೂಡ ಕೆಲಸಮಾಡುತ್ತದೆ. ಪದ್ಯದ ಅಂತ್ಯದಲ್ಲಿ ಆಗಾಗ್ಗೆ ಪಲ್ಲವಿ ಬರುವುದಿದೆ. ಲಯ ಒಂದು ನಿಯಮದಂತೆ ಇರುವುದಾದರೂ, ಪ್ರಾಸಗಳು ಸರಿಯಾಗಿರುತ್ತವೆ ಎನ್ನಲಾಗುವುದಿಲ್ಲ. ಪಲ್ಲವಿಗಳು ಸಾಮಾನ್ಯವಾಗಿ ಅರ್ಥರಹಿತ, ಆಲಂಕಾರಿಕ ಅಕ್ಷರಗಳಾಗಿರುತ್ತವೆ. ಆದರೆ ಅವು ಅರ್ಥಸಹಿತವಾಗಿದ್ದಾಗ ಗೀತೆಯೊಡನೆ ಕೆಲವಂಟ್ಟಿಗೆ ಕಾರ್ಯನಿರ್ವಹಿಸುತ್ತವೆ. ಕೆಲವೊಮ್ಮೆ ಜನಪ್ರಿಯ ಪಲ್ಲವಿಯೊಂದನ್ನು ಶಿಷ್ಟ ಸಂಗೀತಕ್ಕೆ ಅಳವಡಿಸಿಕೊಳ್ಳುವುದನ್ನೂ ನೋಡುತ್ತೇವೆ.

ಸಂಗ್ರಹಕಾರರಿಗೆ ಮೇಲಿಂದ ಮೇಲೆ ಗಮನಕ್ಕೆ ಬಂದಿರುವ ಅಂಶವೆಂದರೆ, ಗೀತೆಯ ಭಾಗವನ್ನು ಹಾಡುಗಾರರು ಹಾಡದೆಯೇ ಹೇಳಿಕೊಡುವುದು ಕಷ್ಟವಾದುದು ಮತ್ತು ಹಾಡಲೇಬೇಕಾದ ಆವಶ್ಯಕತೆ ತಲೆದೋರುವುದು. ಸ್ಕಾಟ್ಲೆಂಡಿನ ಉತ್ತರ ಭಾಗದ ವೃದ್ಧ ಮಹಿಳೆಯೊಬ್ಬಳ ಲಾವಣಿಗಳನ್ನು ಸಂಗ್ರಹಿಸುವುದಕ್ಕಾಗಿ ಸರ್ ವಾಲ್ಟರ್ ಸ್ಕಾಟ್ ಹೋದಾಗ ಅವನಿಗೆ ಆ ವೃದ್ಧೆ ಹೇಳಿದಳಂತೆ : "They were made for singing and no for reading."[4] ಜನಪದ ಗಾಯಕನಿಗೆ ಕಾವ್ಯ ಮತ್ತು ಮಟ್ಟು ಒಂದು ಅಖಂಡ ಘಟಕ. ಆದರೆ ಈ ಕಟ್ಟು ಒಡೆಯಲಾಗದುದೇನೂ ಅಲ್ಲ. ಒಂದೇ ಕಾವ್ಯವನ್ನು ದೇಶದ ವಿವಿಧ ಭಾಗಗಳಲ್ಲಿ ಅಥವಾ ಒಂದೇ ಪ್ರದೇಶದಲ್ಲಿ ಕೂಡ ಅನೇಕ ವೇಳೆ ಬೇರೆ ಬೇರೆ ಮಟ್ಟುಗಳಿಂದ ಹಾಡುವುದನ್ನು ನೋಡಿದಾಗ, ಗ್ರಂಥಭಾಗವನ್ನು ಅದರ ಮಟ್ಟಿನಿಂದ ಬೇರ್ಪಡಿಸಿ ಅದರ ಜಾಗದಲ್ಲಿ ಬೇರೊಂದನ್ನು ಸೇರಿಸಬಹುದೆನಿಸುತ್ತದೆ. ಜನಪದ ಗಾಯಕರು ಸಾಮಾನ್ಯವಾಗಿ ಗ್ರಂಥಭಾಗವೊಂದನ್ನು ಹಾಡುವ ಮಟ್ಟು ಸ್ಮರಣೆಗೆ ಬಾರದೆ ಹೋದಾಗ ತಮಗೆ ಪ್ರಿಯವಾದ ಮಟ್ಟುಗಳನ್ನು ಸೇರಿಸಿ ಹಾಡಿಬಿಡುವುದುಂಟು. ಆದ್ದರಿಂದ, ಗಾಯಕರ ಪ್ರಜ್ಞೆ, ಮಟ್ಟಿಗಿಂತ ಹೆಚ್ಚಾಗಿ ಗ್ರಂಥದಲ್ಲಿ ನೆಟ್ಟಿರುತ್ತದೆ ; ಮಟ್ಟು ಅಮೂರ್ತವಾದುದೆಂಬ ಕಲ್ಪನೆ ಇದಕ್ಕೆ ಕಾರಣವಿರಬಹುದು.

ಜನಪದ ಗೀತೆಯಲ್ಲಿ ಸಂಗೀತವಾದ್ಯಗಳ ಪಾತ್ರ ಅಪ್ರಧಾನವಾದರೂ, ಕುತೂಹಲಕಾರಿಯಾದುದು. ಇಷ್ಟಾದರೂ ಈ ವಿಷಯ ಗಮನ ಸೆಳೆಯುವುದು, ಸ್ವಲ್ಪವೇ.

---

3. Ibid. p. 1038
4. Quoted, Ibid. p. 1039

ಬಹುತೇಕ ಜನಪದ ಸಮೂಹಗಳಲ್ಲಿ ಸ್ವತಂತ್ರವಾದ ವಾದ್ಯಸಂಗೀತ ರೂಪಗೊಂಡಿರು ವುದೂ ತೀರ ಕಡಿಮೆ. ಜನಪದ ಗೀತೆಯ ಜೊತೆಯಲ್ಲಿ ವಾದ್ಯಸಂಗೀತವನ್ನು ಉಪಯೋಗಿಸುವುದು ಸಾರ್ವತ್ರಿಕವಾದುದೇನೂ ಅಲ್ಲ. ಹಂಗೇರಿಯಂಥ ಕೆಲವು ದೇಶಗಳಲ್ಲಿ ಇದು ಗೊತ್ತೇ ಇಲ್ಲ.[5] ಇತರ ಕಡೆಗಳಲ್ಲಿ ಗೀತೆಗಳ ನಿರ್ದಿಷ್ಟ ವರ್ಗಗಳಿಗೆ ಮಾತ್ರ ಬಳಸಲಾಗುತ್ತದೆ. ಒಟ್ಟಾರೆ, ಬಹುತೇಕ ಜನಪದ ಗೀತೆಗಳನ್ನು ಯಾವುದೇ ಪಕ್ಕವಾದ್ಯವಿಲ್ಲದೆ ಹಾಡಲಾಗುತ್ತದೆ.

೨

ಜನಪದಗೀತೆ ಜನ್ಮತಾಳಿದ ರೀತಿ ಕುರಿತ ಸಮಸ್ಯೆ ಒಂದು ಸವಾಲಾಗಿ ಪರಿಣಮಿಸಿದೆ. ಚಾರಿತ್ರಿಕ ವಿಧಾನದ ಮೂಲಕ ಸಾಕ್ಷ್ಯಾಧಾರಗಳನ್ನು ಒದಗಿಸಿ ಇದನ್ನು ಅನ್ವೇಷಿಸುವುದು ಅಸಾಧ್ಯವಾಗಿರುವುದೇ ಇದಕ್ಕೆ ಕಾರಣ. ಕೆಲವು ಗೀತೆಗಳು ಅಥವಾ ನುಡಿಗಳು ಸ್ಮರಣೆಯಲ್ಲಿ ಬಂದಿರಬಹುದು ಮತ್ತು ತಲೆಮಾರಿನಿಂದ ತಲೆಮಾರಿಗೆ ಹರಿದಿರಬಹುದು. ಆದರೆ ಇವೂ ಕೂಡ, ಅಗತ್ಯವಾಗದೆ ಹೋದಾಗ ಅಥವಾ ಅವುಗಳ ಜಾಗದಲ್ಲಿ ಇತ್ತೀಚಿನವು ಪಲ್ಲಟಿಸಿದಾಗ ಅಥವಾ ಭಾಷೆ ಅವುಗಳನ್ನು ತಿಳಿಯಲಾಗದ ಹಾಗೆ ವ್ಯತ್ಯಾಸ ಮಾಡಿದಾಗ, ನಾಶವಾಗಿಬಿಡುತ್ತವೆ. ಆದ್ದರಿಂದ ಪ್ರಾಚೀನ ಗೀತೆಯ ಇತಿಹಾಸವನ್ನು ರಚಿಸಬೇಕಾದರೆ, ಸಮಸ್ಯೆಗೆ ಬೇರೆ ರೂಪವನ್ನೇ ಕೊಡಬೇಕಾಗುವುದು. ನಮಗೆ ದೊರೆಯುವ ಪುರಾತನವೆನಿಸುವ ಗೀತೆಗಳು ಆಧುನಿಕ ಗೀತೆಗಳಿಗಿಂತ ಕಡಿಮೆ ವ್ಯವಸ್ಥಿತವಾದವು ಮತ್ತು ವಿಸ್ತಾರವಿಲ್ಲದವು. ಅಲ್ಲದೆ, ಹಳೆಯ ಶಿಲಾಯುಗಕ್ಕೆ ಅನೇಕ ವಿಷಯಗಳಲ್ಲಿ ಸಂಬಂಧಿಸಿದ ಪರಿಸ್ಥಿತಿಗಳ ಉತ್ಪನ್ನಗಳೂ ಪುರಾತನ ಸರಳತೆಯಲ್ಲಿ ಜೀವಿಸುತ್ತಿರುವ ಸಮಾಜಗಳ ದೃಷ್ಟಿಯನ್ನು ಪ್ರತಿಬಿಂಬಿಸುವಂಥವೂ ಆಗಿವೆ. ಈ ಗೀತೆಗಳು ಅನಂತರದ ಗೀತೆಗಳಂತೆ ವಿಶೇಷಿತ ರೂಪಗಳನ್ನು ಹೊಂದಿದಂಥವುಗಳಲ್ಲ. ಅವು ಅತ್ಯಂತ ಪ್ರಾಥಮಿಕ ಸ್ಥಿತಿಯಲ್ಲಿ ಜೀವಿಸುತ್ತಿದ್ದ ಮಾನವ ಜೀವಿಗಳ ವಿಷಯವನ್ನು ಪ್ರಕಟಪಡಿಸುತ್ತವೆ. ಚಾರಿತ್ರಿಕ ಪುರಾತನ ಗೀತೆಯನ್ನು ಕಾಣಲಾಗದಿದ್ದರೂ, ಪುರಾತನ ರೀತಿಯಲ್ಲಿಯೇ ಬದುಕುತ್ತಿರುವ ಇಂದಿನ ಜನರ ಪುರಾತನ ಗೀತೆಯನ್ನು ಕಾಣಬಹುದು. ಇದು ಪುರಾತನ ಸಮಾಜ ಮತ್ತು ಸಂಸ್ಕೃತಿಯನ್ನು ಇಂದು ಜೀವಂತವಿರುವ ಪುರಾತನ ಸಮಾಜ ಮತ್ತು ಸಂಸ್ಕೃತಿಗಳಿಂದ ಪುನರ್ರಚಿಸಿಕೊಳ್ಳುವ ಹಾಗೆ, ವಾಸ್ತವವಾಗಿ, ನಮ್ಮ ಊಹೆಗಳೆಲ್ಲ ಇವುಗಳ ಮೇಲೆಯೇ ನಿಂತಿರುವಂಥದು.

ಜನಪದಗೀತೆ ರೂಪಿತವಾದುದು ಅದು ಹುಟ್ಟಿದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಂದಲೇ.[6] ಇದಕ್ಕೆ ಕಾರಣರಾದ ಜನರ ಪರಿಸ್ಥಿತಿಗಳು ನಮಗೆ ತಿಳಿದಂತೆ ಅತ್ಯಂತ ಸರಳವಾದುದು. ಸಿ. ಎಂ. ಬೌರಾ ಅವರು ಜನಪದಗೀತೆಗಳ ಉಗಮವನ್ನು

5. Ibid, p. 1046
6. C. M. Bowra, *Primitive Song*, p. 4

ಪುರಾತನ ಜನರು ಬೇಟೆಯಾಡುತ್ತಿದ್ದ ಪರಿಸ್ಥಿತಿಯಿಂದಲೇ ಹೊರಡಿಸಲು ಪ್ರಯತ್ನಿಸಿದ್ದಾರೆ. ಈ ಜನರು ಮೊದಲಿಗೆ ಬೇಟೆಯಾಡುತ್ತಿದ್ದರು ಮತ್ತು ಫಲಸಂಚಯಿಸುತ್ತಿದ್ದರು. ಅವರಿಗೆ ನಿಶ್ಚಿತ ವಾಸಸ್ಥಾನಗಳಿರಲಿಲ್ಲ. ಆಹಾರದ ಸ್ಥಳಗಳು ವ್ಯತ್ಯಾಸ ಹೊಂದಿದಂತೆ ವಾಸಸ್ಥಾನಗಳೂ ಬದಲಾಗುತ್ತಿದ್ದವು. ಆದ್ದರಿಂದ ಅವರ ವಸತಿಗಳು ಸರಳವಾಗಿದ್ದುವಲ್ಲದೆ, ತಾತ್ಕಾಲಿಕ ವ್ಯವಸ್ಥೆಯುವು ಕೂಡ ಆಗಿದ್ದುವು. ಈ ಎಲ್ಲ ಜನರೂ ಸದೃಶವಾದ ಸಾಮಾಜಿಕ ರಚನೆಯನ್ನು ಹೊಂದಿದ್ದರು. ಇದರ ಮೂಲಭೂತವಾದ ಘಟಕ ಕುಟುಂಬವಾಗಿದ್ದು, ಕೆಲವು ಕುಟುಂಬಗಳು ಗುಂಪಿನ ರೂಪದವಾಗಿದ್ದುವು. ರಚನೆಯ ಈ ಸರಳತೆ ಹೆಚ್ಚು ಮುಖ್ಯವಾದುದು. ಜನರ ಸದೃಶ ಪದ್ಧತಿಗಳನ್ನು ಜನಾಂಗದಿಂದಾಗಲಿ ಅಥವಾ ಗೀತೆಗಳಿಂದಾಗಲಿ ವಿವರಿಸಲು ಸಾಧ್ಯವಾಗುವುದಿಲ್ಲ. ಪುರಾತನ ಮಾನವನ ಗೀತೆಗಳು ಅವನ ಈ ಆರ್ಥಿಕ ಪರಿಸ್ಥಿತಿಗಳಿಂದ ಉದಯವಾದವುಗಳು. ಈ ಹಂತದಲ್ಲಿ ಹೇಳುವುದಾದರೆ, ಅವಿನ್ನೂ ಪುರಾತನ ರೀತಿಯಲ್ಲಿಯೇ ಬದುಕುತ್ತಿರುವ ಇಂದಿನ ಎಷ್ಟೋ ಜನರ ಮಾನಸಿಕತೆಯನ್ನು ಪ್ರತಿಬಿಂಬಿಸುತ್ತವೆ. ಆದಿವಾಸಿಗಳ ಬೇಟೆಯ ಆರ್ಥಿಕಸ್ಥಿತಿ ಒಂದೇ ರೀತಿ ಇದ್ದರೂ, ಸಾಮಾಜಿಕ ಚೌಕಟ್ಟಿನೊಳಗೆ ಆಧುನಿಕವೆನಿಸುವ ಕೆಲವು ಬೆಳವಣಿಗೆಗಳು ಆಗಿರುವುದಿದೆ. ಈ ವಿಷಯಗಳು ಪುರಾತನಗೀತೆಯ ಲಕ್ಷಣವನ್ನು ಬಾಧಿಸದಿರಬಹುದು, ಅದರ ಉದಯವಾದಾಗಿನ ಭೌತಿಕ ಪರಿಸ್ಥಿತಿಗಳನ್ನು ಕಲಕದಿರಬಹುದು. ಆದರೆ ಹೊಸ ವಿಷಯಗಳು ಪ್ರವೇಶಿಸಿರಬಹುದಾದ ಸಾಧ್ಯತೆಯ ಬಗ್ಗೆ ನಮಗೆ ನಿಸ್ಸಂದೇಹವಾಗಿಯೂ ಎಚ್ಚರಿಕೆ ನೀಡುತ್ತವೆ. ಈ ಗೀತೆಗಳನ್ನು ವಿವರಿಸುವಾಗ ಅವು ನಿಜವಾಗಿಯೂ ಎಷ್ಟರಮಟ್ಟಿಗೆ ಪುರಾತನ ಎಂದು ನೋಡಬೇಕಾಗುತ್ತದೆ. ಅವು ಏನು ಹೇಳುತ್ತವೆ ಎಂಬುದನ್ನು ಗಮನಿಸಿದಾಗ, ಅವುಗಳ ಗಾಯಕರ ಮೂಲಭೂತ ಅಗತ್ಯಗಳಿಂದ ಉದಯಿಸಿದವು ಎಂಬ ವಿಷಯ ಗೊತ್ತಾಗುವುದು. ಗೀತೆಯೊಂದರ ವಸ್ತು ಅಥವಾ ವಿವರಗಳು ಎಷ್ಟೇ ಆಕರ್ಷಕವಾಗಿದ್ದರೂ, ಅದು ತನ್ನ ಸಾಮಾಜಿಕ ಸನ್ನಿವೇಶವನ್ನು ಹೊತ್ತಿರುವಂತೆ ಮತ್ತು ಅದಕ್ಕಾಗಿ ಹೇಳುತ್ತಿರುವಂತೆ ಕಾಣುತ್ತದೆ; ಇದರ ಹಿನ್ನೆಲೆಯಲ್ಲಿ ಪುರಾತನ ಪರಿಸ್ಥಿತಿಗಳು ಕೆಲಸಮಾಡುತ್ತಿರುವಂತೆ ಕಂಡುಬರುವುದು.[7] ಇದನ್ನು ಸಾದರಪಡಿಸುವುದು ಕಷ್ಟವೇನಲ್ಲ. ಬೇರೆ ಬೇರೆ ಜನತೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ವಿಷಯಗಳನ್ನು ಪರಸ್ಪರ ಹೋಲಿಸುವುದರಿಂದ ಅವುಗಳು ಯಾವುದರಲ್ಲಿ ಸಮಾನವಾಗಿವೆ ಎಂಬುದನ್ನು ತಿಳಿಯಬಹುದಾಗಿದೆ.

ಪುರಾತನಗೀತೆಯಲ್ಲಿ ಪದಗಳು ಸಂಕೀರ್ಣ ಘಟಕದ ಒಂದು ಭಾಗ ಮಾತ್ರ. ಮೊದಲಿಗೆ ಅವು ಹಾಡುವಂಥವು. ಈ ಹಾಡುವಿಕೆ ಸರಳವಾದ ಮಟ್ಟಿನಿಂದ ಗುರುತಿಸಿಕೊಳ್ಳುತ್ತದೆ. ಪ್ರತಿಯೊಂದು ಜನತೆಯೂ ಇಂಥ ಮಟ್ಟುಗಳ ರಚನೆಯಲ್ಲಿ ತನ್ನದೇ ದಾರಿಯನ್ನು ಅನುಸರಿಸಿದರೂ, ಕ್ರಮಬದ್ಧ ನಿಯಮಗಳನ್ನು ಪಾಲಿಸುವುದಿಲ್ಲ ಎಂದಲ್ಲ.

7. Ibid, p. 18

ಕೆಲವು ವೇಳೆ ಅವು ವಾದ್ಯಗಳಿಂದ ಕೂಡಿರುತ್ತವೆ, ಕೆಲವು ವೇಳೆ ಇಲ್ಲ. ಈ ಮಟ್ಟುಗಳು ಚಿಕ್ಕವು ಮತ್ತು ಸುಲಭವಾಗಿರುವಂಥವು. ಕಲಿಯುವುದಕ್ಕೆ ಇದು ಅನುಕೂಲ. ಈ ಪರಿಮಿತ ವ್ಯಾಪ್ತಿಯಿಂದ ಅವುಗಳ ಆಕರ್ಷಣೆಗೆ ಪರಿಣಾಮಕ್ಕೆ ತೊಂದರೆಯಾಗುತ್ತದೆ ಎಂದು ಅರ್ಥವಲ್ಲ. ಹಾಡುವಿಕೆ ಕೆಲವು ವೇಳೆ ಕ್ರಿಯೆಯೊಂದರಿಂದ ಕೂಡಿರುತ್ತದೆ; ಮುಖ್ಯವಾಗಿ ಇದು ನೃತ್ಯ. ಇದರಲ್ಲಿ ವಿವಿಧ ಮಾದರಿಯಲ್ಲಿ ಆಂಗಿಕ ಚಲನೆಗಳು ಪುನರಾವರ್ತನೆಗೊಳ್ಳುತ್ತವೆ. ಪದಗಳು, ಸಂಗೀತ ಮತ್ತು ಚಲನೆ ಒಂದೇ ಘಟಕವಾಗಿ ಕೆಲಸಮಾಡುತ್ತವೆ. ಪ್ರತಿಯೊಂದನ್ನೂ ಇನ್ನೊಂದರ ಜೊತೆಯಲ್ಲಿ ಕೆಲಸಮಾಡುವಾಗ ಅಳೆಯಬಹುದು.

ಜನಪದಗೀತೆ ಛಂದೋಬದ್ಧ ಕ್ರಿಯೆಯಿಂದ ಉದ್ಭವವಾದದ್ದು. ಈ ಕ್ರಿಯೆ ಛಂದೋಬದ್ಧ ಪದಗಳಿಗಿಂತ ಹಳೆಯದು. ಮೇಳಗೀತೆಗಳು ಬಹುತೇಕವಾಗಿ ಈ ಕ್ರಿಯೆಗೆ ಹತ್ತಿರದವು. ಕ್ರಿಯೆಗೆ ಸಂಬಂಧಿಸಿದಂತೆ ನೃತ್ಯ ಮತ್ತಿತರ ರೂಪಗಳು ಆದಿವಾಸಿಗಳಲ್ಲಿ ಸಾರ್ವತ್ರಿಕವಾಗಿ ಕಂಡುಬರುತ್ತವೆ. ಮೇಳಗೀತೆ ಸಾಮಾನ್ಯವಾಗಿ ನಾಟಕಕ್ರಿಯೆಯನ್ನು ಹೇಳುತ್ತದೆ. ಗೀತೆ ಛಂದೋಬದ್ಧ ಚಲನೆಗಳ ಮೇಲೆ ಆಧರಿತವಾದುದು, ಅದು ನೃತ್ಯ ಅಥವಾ ಮೂಕಾಭಿನಯ ಅಥವಾ ಎರಡರ ರೂಪವನ್ನೂ ತಾಳಬಹುದು; ಪದಗಳು ಅವುಗಳಿಗೆ ಸೇರಿ ಛಂದೋಬದ್ಧವಾಗಿ ಹೊಂದಿಕೊಂಡಾಗ ಕಾವ್ಯ ಪ್ರಾರಂಭವಾಗುತ್ತದೆ.[8] ಪದಗಳು ಕ್ರಿಯೆಯನ್ನು ಹೊತ್ತಿಸಿದರೆ, ಕ್ರಿಯೆ ಪದಗಳಿಗೆ ಶರೀರವನ್ನು ಕೊಡುತ್ತದೆ ಎಂಬ ಮಾತೂ ಇದೆ.

ಪುರಾತನಗೀತೆ ಪ್ರಾಥಮಿಕ ಆಚರಣೆಯೊಂದರಿಂದ ಹುಟ್ಟಿದ ಸಾಮುದಾಯಿಕ ಚಟುವಟಿಕೆ. ಸಾಮಾಜಿಕ ಜೀವನದಲ್ಲಿ ಆಚರಣೆಗಳು ಪ್ರಧಾನ ಪಾತ್ರ ವಹಿಸುವ ಕಡೆಯಲ್ಲೆಲ್ಲ ಅವುಗಳ ಪ್ರಮುಖ ಭಾಗವಾಗಿ ಗೀತೆ ಕಾಣಿಸಿಕೊಂಡಿದೆ. ಅತಿಮಾನುಷವಾದುದನ್ನು ಸಂವಹನಿಸುವುದಕ್ಕೆ ಮಾತ್ರವಲ್ಲದೆ, ಸಂತೋಷ ದುಃಖ ಮತ್ತಿತರ ಭಾವಾವೇಗಗಳನ್ನು ವ್ಯಕ್ತಪಡಿಸುವುದಕ್ಕೂ ಇದು ಉಪಯೋಗವಾಗಿದೆ. ಮೇಳಗೀತೆ ಬಹುತೇಕ ಪುರಾತನ ಸಮಾಜಗಳಲ್ಲಿ ಅತ್ಯಂತ ಜನಪ್ರಿಯ ರೂಪ. ಕೆಲವು ಗೀತೆಗಳು ಗಂಡಸರಿಗೆ, ಹೆಂಗಸರಿಗೆ ಅಥವಾ ಮಕ್ಕಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿದ್ದರೂ, ಇದು ತತ್ವವೇನಲ್ಲ. ಆದ್ದರಿಂದ ಸಾಮಾನ್ಯಪ್ರಜ್ಞೆಯೊಂದರ ಧ್ವನಿಯನ್ನು ಈ ಎಲ್ಲದರಲ್ಲಿ ಕಾಣಬಹುದಾಗಿದೆ. ಜನಪದ ಗಾಯಕರೆಲ್ಲ ಒಂದು ಶಿಸ್ತಿಗೆ ಒಳಪಟ್ಟವರು ಮತ್ತು ಒಂದೇ ಬಗೆಯ ಜೀವನರೀತಿಯಿಂದ ರೂಪಿತವಾದವರು; ಪುರಾತನ ಸಾಮಾಜಿಕ ಘಟಕದಲ್ಲಿ ಕೆಲವೇ ಕೆಲವು ಜನರಿದ್ದು, ಅವರು ಪರಸ್ಪರ ಅರಿತಿದ್ದರು; ಪುರಾತನ ಮಾನವ ನಾಗರಿಕ ಮಾನವನಿಗಿಂತ ಕಡಿಮೆ ಪ್ರಜ್ಞೆಯುಳ್ಳವನು.[9] ಪುರಾತನಗೀತೆಯಲ್ಲಿ 'ಸಾಮಾನ್ಯಪ್ರಜ್ಞೆ'

---

8. Ibid, p. 30
9. Ibid, p. 32–33

ಯೊಂದಿದೆ ಎನ್ನುವುದಕ್ಕೆ ಇವೆಲ್ಲ ಕಾರಣಗಳಾಗುತ್ತವೆ. ಪುರಾತನ ಮಾನವನಿಗೆ ವೈಯಕ್ತಿಕ ಅನಿಸಿಕೆಗಳು ಇರಲಿಲ್ಲವೆಂದಲ್ಲ. ಸಾಮಾನ್ಯವಾಗಿ ಅವನ್ನು ಇತರರೊಡನೆ ಹಂಚಿಕೊಳ್ಳುತ್ತಿದ್ದುದೇ ಹೆಚ್ಚು. ಆದರೆ ವ್ಯವಸ್ಥೆ ಮುಖ್ಯವಾಗಿತ್ತೇ ಹೊರತು, ವ್ಯಕ್ತಿಯಲ್ಲ. ಹೀಗೆ ಸಮಾಜ ಪ್ರಧಾನವಾಗಿ ವ್ಯಕ್ತಿ ಅಧೀನವಾಗಿದ್ದಾಗ, ವ್ಯಕ್ತಿ ಇಂದಿಗಿಂತ ಕಡಿಮೆ ಪ್ರಜ್ಞೆಯುಳ್ಳವನಾಗಿರುವುದಕ್ಕೆ ಕಾರಣವಾಗಿತ್ತು. ಇಂತಹ ಪರಿಸ್ಥಿತಿಗಳು ಜನಪದಗೀತೆಯ ಮೇಲೆ ಸಹಜವಾಗಿಯೇ ಪ್ರಭಾವ ಬೀರಿವೆ ಮತ್ತು ಅದರ ಸೃಷ್ಟಿಯ ಕೆಲ ಲಕ್ಷಣಗಳಿಗಾದರೂ ಹೊಣೆಯಾಗಿವೆ.

ಪುರಾತನಗೀತೆಗಳು ಯಾವುದೇ ಬರವಣಿಗೆಯ ಸಹಾಯವಿಲ್ಲದೆ ರಚಿತವಾದಂಥವು. ಅಂದಮಾತ್ರಕ್ಕೆ ಇವು ಯಾವಾಗಲೂ ಆಶುರಚನೆಗಳೆಂದು ಅರ್ಥವಲ್ಲ. ಕೆಲವು ಇಂಥ ರಚನೆಗಳು ಇರಬಹುದು. ಇಂಥ ಸಂದರ್ಭದಲ್ಲಿ ಇವು ಅನಿರೀಕ್ಷಿತವಾದ ಮತ್ತು ಆಶ್ಚರ್ಯಕರವಾದ ಸಂದರ್ಭಕ್ಕೆ ಪ್ರತಿಕ್ರಿಯೆಗಳಾಗಿರುತ್ತವೆ; ಆಗ ಇವು ಭಾವನಾದ್ವಾರಗಳಾಗಿ ಕೆಲಸಮಾಡುತ್ತವೆ. ಆದಿವಾಸಿಗಳು ಬಾಲ್ಯಾವಸ್ಥೆಯಿಂದ ಗೀತೆಯಲ್ಲಿ ತರಬೇತಿ ಹೊಂದಿದವರಾದ್ದರಿಂದ, ಹೀಗೆ ಹೊರಹೊಮ್ಮುವುದು ಅಚ್ಚರಿಯೇನಲ್ಲ. ಆದರೆ ಎಲ್ಲ ಸಮಯದಲ್ಲೂ ಎಲ್ಲ ಕಾಲದಲ್ಲೂ ಗೀತೆ ಆಶುರಚನೆಯಾಗಿಯೇ ಉಳಿಯುವುದಿಲ್ಲ. ಒಮ್ಮೆ ಗೀತೆ ರಚಿತವಾಯಿತೆಂದರೆ, ಅದನ್ನು ಇತರರಿಗೆ ಸಂವಹನಿಸುವುದೂ ಕಲಿಸುವುದೂ ಸುಲಭ. ಧಾರ್ಮಿಕ ಸಂದರ್ಭಗಳಲ್ಲಿ ಹಿರಿಯರಾದವರು ಇದರ ಪ್ರಧಾನ ಪಾತ್ರವಹಿಸುವುದಲ್ಲದೆ, ತಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ಕಿರಿಯರಿಗೆ ಹೇಳಿಕೊಡಲಾಗುವುದು ಆದರೆ ಲೌಕಿಕ ಗೀತೆಗಳು ಇಂತಹ ಪ್ರಾಮುಖ್ಯತೆಯನ್ನು ಹೊಂದಿರಲಾರವೆಂದು ಬೌರಾ ಅವರ ಅಭಿಪ್ರಾಯ.[10] ಆದರೆ ಲೌಕಿಕಗೀತೆಗೆ 'ಧಾರ್ಮಿಕ ಸಂದರ್ಭ'ವೊಂದು ಇಲ್ಲದಿದ್ದರೂ, ಅದರ 'functional' ಗುಣ ಅದನ್ನು ನಿರ್ಧರಿಸುತ್ತದೆ. ಇವುಗಳನ್ನೂ ಬದುಕಿನ ಕೆಲವು ಚಟುವಟಿಕೆಗಳೊಡನೆ ಹಾಡಲಾಗುವುದರಿಂದ, 'ಕಲಿಯುವ ಲಕ್ಷಣ' ಇಲ್ಲಿಯೂ ಇರುತ್ತದೆ. ಇವು ಪ್ರಚಲಿತವಾಗಿರುವುದಕ್ಕೆ ಇದು ಮುಖ್ಯಕಾರಣವೆಂದು ಕಾಣುತ್ತದೆ.

ಗೀತೆಯ ರಚನಕಾರ ಮುಖಂಡನೂ ಆಗಿರುತ್ತಾನೆ. ನಿರ್ವಹಣೆಯ ಪೂರ್ಣ ಜವಾಬ್ದಾರಿ ಅವನದೇ. ಪ್ರಮುಖವಾದ ಸಾಲುಗಳನ್ನು ಅವನು ಹಾಡುತ್ತಾನೆ. ಅವನು ಕೊನೆಯ ಸಾಲನ್ನು ಹಾಡಿದಾಗ, ಅದನ್ನು ಉಳಿದವರು ಪಲ್ಲವಿಯಾಗಿ ಪುನರಾವರ್ತಿಸುತ್ತಾರೆ. ಪುರಾತನಗೀತೆಯೊಂದನ್ನು ಸಾಮಾನ್ಯವಾಗಿ ಈ ರೀತಿಯಲ್ಲಿ ನಿರ್ವಹಿಸಲಾಗುವುದು. ಕೆಲವು ವೇಳೆ ಮುಖಂಡ ನೃತ್ಯ ಮಾಡುವನು. ಕೆಲವು ಜನತೆಗಳಲ್ಲಿ ನೃತ್ಯಗೀತೆಗಳನ್ನು ಒಬ್ಬ ಅಥವಾ ಇಬ್ಬರು ಹಾಡುವರು. ಮುಖಂಡ ನಿಜವಾದ ರಚನಕಾರನಾಗಿರದೆ ಕೇವಲ ಕಲಿತವನಾಗಿದ್ದಾಗ ಕೂಡ, ರಚನಕಾರನ

---

10. Ibid. p. 41

ಪಾತ್ರವನ್ನೇ ವಹಿಸುತ್ತಾನೆ. ಮೂಲದಲ್ಲಿ ಪಲ್ಲವಿ ಗೀತೆಯ ಭಾಗವಾಗಿದ್ದು ಗಾಯಕ ಜೊತೆಯಲ್ಲಿ ಹಾಡುವುದಕ್ಕಾಗಿ ರಚಿಸಿದ್ದು. ಪಲ್ಲವಿ ಅಂತ್ಯದಲ್ಲಿಯೇ ಬರಬೇಕೆಂಬುದಿಲ್ಲ, ಅದು ಪದ್ಯದ ಆರಂಭದಲ್ಲಿಯೇ ಬಂದು ಗೀತೆಯೇನೆಂಬುದನ್ನು ಸೂಚಿಸಬಹುದು. ಇಂತಹ ಪಲ್ಲವಿಗಳು ಜಗತ್ತಿನಾದ್ಯಂತ ಕಂಡುಬಂದಿದ್ದು, ಎಲ್ಲ ಬಗೆಯ ಕಾವ್ಯದಲ್ಲೂ ಸ್ಥಾನ ಪಡೆದಿವೆ ಪ್ರದರ್ಶನಗಳನ್ನು ಸಾಮುದಾಯಿಕ ಆಸಕ್ತಿಗೆ ಒಳಪಡಿಸುವುದೇ ಪಲ್ಲವಿ ಸಹಿತವಾದ ಗೀತೆಗಳ ರಚನೆಯ ಉದ್ದೇಶವಾಗಿವೆ.

ಜನಪದಗೀತೆಯ ರಚನೆಯ ಎರಡು ಧೋರಣೆಗಳನ್ನು ಒಟ್ಟಾರೆ ಹೀಗೆ ಸಂಗ್ರಹಿಸ ಬಹುದು. ಇದು ಮೊದಲು ರಚಿತವಾದುದು ಒಬ್ಬ ವ್ಯಕ್ತಿಯಿಂದ ಎಂಬುದರಿಂದ ವೈಯಕ್ತಿಕ ವ್ಯಕ್ತಿತ್ವವನ್ನು ಹೊಂದಿದೆ ಎನ್ನುವುದು ಒಂದು. ಅವನು ಕೆಲವೊಮ್ಮೆ ಸಾಹಿತ್ಯಿಕ ಮೂಲದವನಿರಬಹುದು, ಕೆಲವು ವೇಳೆ ಇಂದಿಗೂ ಅಸ್ಪಷ್ಟವಾಗಿಯೇ ಉಳಿದಿರುವ ಸಮೂಹದ ಸಾಮಾನ್ಯ ಮನುಷ್ಯನೊಬ್ಬನಾಗಿರಬಹುದು. ಇದರ ರಚನೆ ಆಶು ಆಗಿರಬಹುದು ಎಂದು ಹೇಳಬಹುದಾದರೂ, ಅದು ಅನಿವಾರ್ಯವೇದಲ್ಲ. ಜನಪದಗೀತೆ 'ಸಾಮೂಹಿಕ'ವಾದುದು ಎಂಬುದು ಇನ್ನೊಂದು. ಗೀತೆಯ ಪಠ್ಯ ಸಾಕಷ್ಟು ನಿಶ್ಚಿತವಾದುದಾಗಿರದೆ ಮಾರ್ಪಾಡುಗಳೂ ಜೋಡಣೆಗಳೂ ಸುಲಭವಾಗಿ ನಡೆಯುತ್ತವೆ ಎಂಬುದು ಇದಕ್ಕೆ ಕಾರಣ. ಇದು 'ಸಾಮೂಹಿಕ ಸೃಷ್ಟಿ' ಎನ್ನುವುದಕ್ಕೆ ಇನ್ನೊಂದು ಅರ್ಥವಿದೆ. ನಿರ್ದಿಷ್ಟಗೀತೆಯೊಂದಕ್ಕೆ ಒಬ್ಬನಿಗಿಂತ ಹೆಚ್ಚು ರಚನಕಾರರಿದ್ದು, ಪ್ರತಿಯೊಬ್ಬನೂ ಒಂದು ಅಥವಾ ಎರಡು ಪದ್ಯಗಳಿಗೆ ಕಾರಣವಿರಬೇಕು. ಇದು ಸಂಚಿತ ಗೀತೆಯಲ್ಲಂತು ಸತ್ಯವಾದುದು. ಒಟ್ಟಿನಲ್ಲಿ, ಜನಪದಗೀತೆಯ ಉಗಮ ಕುರಿತು 'ವ್ಯಷ್ಟಿಮೂಲ' ಮತ್ತು 'ಸಮಷ್ಟಿಮೂಲ' ಸಿದ್ಧಾಂತಗಳೆರಡು ಪ್ರಚಾರದಲ್ಲಿವೆ ಎಂದು ಅರ್ಥವಾದಂತಾಯಿತು.

ಜನಪದಗೀತೆಗಳ ಪ್ರಸಾರ ಜನಪದ ಕಥೆಗಳ ಪ್ರಸಾರಕ್ಕಿಂತ ಸುಲಭವಾದುದೆಂದು ಅಲೆಗ್ಸಾಂಡರ್ ಕ್ರಾಪ್ಪೆಯವರು ಅಭಿಪ್ರಾಯಪಡುತ್ತಾರೆ.[11] ಇದಕ್ಕೆ ಅವರು ಕೊಡುವ ಕಾರಣ ಅದರಲ್ಲಿನ ಸಂಗೀತ. ಆದರೆ ಜನಪದ ಕಥೆಗಳಲ್ಲಿನ ಸರಳತೆ, ಗದ್ಯಗುಣ ಮತ್ತು ಪುನರಾವರ್ತಿತ ಆಶಯಗಳು ಮತ್ತು ಅತಿಮಾನುಷ ಅಂಶಗಳಿಂದಾಗಿ ಜನಪದಗೀತೆಯೊಂದಕ್ಕಿಂತ ಕಥೆ ಸುಲಭವಾಗಿ ಪ್ರಸಾರಗೊಳ್ಳುತ್ತದೆ ಎಂದು ಹೇಳಬೇಕಾಗುತ್ತದೆ. ಹಾಗೆ ನೋಡಿದರೆ, ಪ್ರಾದೇಶಿಕ ಗುಣಗಳು ಹೆಚ್ಚು ಅಂಟಿಕೊಳ್ಳುವುದು ಜನಪದಗೀತೆಯಲ್ಲೇ ಹೊರತು ಜನಪದ ಕಥೆಯಲ್ಲಲ್ಲ. ಹೀಗೆ ಪ್ರಸಾರವಾಗುವಾಗ, ಉಚ್ಚ ವರ್ಗದವರ ಸಾಹಿತ್ಯ ಕೆಳವರ್ಗದವರ ಜನಪದಗೀತೆಯ ಮೇಲೆ ಹೆಚ್ಚು ಕಡಿಮೆ ಪರಿಣಾಮ ಬೀರುವುದು ಸಾಧ್ಯವಿರುತ್ತದೆ. ಹೀಗೆ ಹೇಳುವಾಗ ಉಚ್ಚ ವರ್ಗದವರ ಸಾಹಿತ್ಯಕ್ಕೆ ಪ್ರೇರಣೆ ಎಲ್ಲಿಂದ ಬಂತೆಂಬುದರ ಕಡೆಗೂ ಗಮನಹರಿಸಬೇಕಾಗುವುದು.

---

11. Alexander H. Krappe, *The Science of Folklore*, p. 155

೩

ಜನಪದಗೀತೆಗಳನ್ನು ಅವುಗಳಲ್ಲಿನ ವಸ್ತು ಮತ್ತು ಭಾವಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಕಾರಗಳಾಗಿ ಗುರುತಿಸಬಹುದು. ಸಮಯ, ಸಂದರ್ಭ, ಕಟ್ಟುಕಟ್ಟಳೆ ಮುಂತಾದವುಗಳಿಗೆ ಸೀಮಿತವಾದ ವಿಶೇಷ ಜನಪದಗೀತೆಗಳು ಇರುತ್ತವೆ. ಕೆಲವು ವರ್ಗಗಳು ವಯಸ್ಸನ್ನು ಅನುಸರಿಸಬಹುದು. ಉದಾಹರಣೆಗೆ, ಮಕ್ಕಳ ಗೀತೆಗಳನ್ನು ವಯಸ್ಕರು ಹಾಡುವುದು ಅಪರೂಪ. ಪ್ರೇಮಗೀತೆಗಳನ್ನು ಮುದುಕರು ಹಾಡುವುದು ಉಚಿತವಾಗಲಾರದು. ಸೋಬಾನೆಯಂಥ ಸಾಮಾಜಿಕ ಪದ್ಧತಿಯ ಹಾಡುಗಳು ಹೆಂಗಸರಿಗಷ್ಟೇ ಮೀಸಲು. ಈ ರೀತಿ ಹೆಂಗಸರಿಗಷ್ಟೇ ಮೀಸಲಾದ ಹಾಡುಗಳು ಎಲ್ಲ ಸಮಾಜಗಳಲ್ಲಿಯೂ ಕಾಣಬರುತ್ತವೆ. ಇದು ನಮ್ಮಲ್ಲಿರುವಂತೆ ಬಾಲ್ಟಿಕ್ ರಾಜ್ಯ ಗಳಲ್ಲಿಯೂ ಇದೆ. ಆಫ್ರಿಕ ಮತ್ತು ಆಸ್ಟ್ರೇಲಿಯ ಮೂಲನಿವಾಸಿಗಳಲ್ಲಿಯೂ ಇದೆ. ಒಟ್ಟಿನಲ್ಲಿ ಹೆಂಗಸರು ಹಾಡುವ ಗೀತೆಗಳನ್ನು ಹೆಂಗಸರ ಹಾಡುಗಳೆಂದೂ, ಗಂಡಸರು ಹಾಡುವ ಗೀತೆಗಳನ್ನು ಗಂಡಸರ ಹಾಡುಗಳೆಂದೂ ಕರೆಯಬಹುದೆಂದು ತೋರುತ್ತದೆ.

ಜನಪದಗೀತೆಯನ್ನು ವ್ಯಕ್ತಿಜೀವನದ ಬಾಲ್ಯ, ಯೌವನ, ಮದುವೆ, ಮುಪ್ಪು, ಸಾವು ಮೊದಲಾದ ಪ್ರಮುಖ ಕಾಲಗಳಲ್ಲಿ ಮತ್ತು ಗುಂಪಿನ ಅನೇಕ ಪ್ರಮುಖ ಚಟು ವಟಿಕೆಗಳಲ್ಲಿ ಹಾಡಲಾಗುತ್ತದೆ. ಹೀಗೆ ಜೀವನದ ವಿವಿಧ ಘಟ್ಟಗಳಿಗೆ ಸಂಬಂಧಿಸಿದ ಹಾಡುಗಳು ಅನೇಕವಾಗಿ ದೊರೆಯುತ್ತವೆ ಜನಪದಗೀತೆ ಕಾಣುವಲ್ಲೆಲ್ಲ ಕಾಣುವುದು ಮಕ್ಕಳಿಗೆ ಸಂಬಂಧಿಸಿದ ಹಾಡುಗಳು. ತಾಯಿ ತೊಟ್ಟಿಲು ತೂಗುವಾಗ ಇವುಗಳನ್ನು ಹಾಡುವುದರಿಂದ, ಇವುಗಳನ್ನು ಜೋಗುಳಗಳು ಅಥವಾ ತೊಟ್ಟಿಲ ಹಾಡುಗಳೆಂದು ಕರೆಯಲಾಗುತ್ತದೆ ಇಂಥ ಗೀತೆಗಳು ಸ್ವಾಭಾವಿಕವಾಗಿಯೇ ಕೋಮಲಭಾವಗಳನ್ನು ಹೊಂದಿರುತ್ತವೆ. ಇವು ಮಕ್ಕಳ ಹಾಗೆಯೇ ಮುಗ್ಧವಾದವು, ನಿರ್ಮಲವಾದವು. ಅನೇಕ ವೇಳೆ ಇವು ಮಗುವಿನ ಮನೋಭಾವಗಳನ್ನು ತೆರೆಯುವುದಲ್ಲದೆ, ಮಗುವಿನ ಕಲ್ಪನೆಗೆ ಹತ್ತಿರವಾದ ಸರಳ ಕಥಾನಕಗಳನ್ನೂ ಚಿತ್ರಿಸುತ್ತವೆ. ಇವು ಬಹುಮಟ್ಟಿಗೆ ಸಂತೋಷಕರವಾದ ತರ್ಕಬದ್ಧವಲ್ಲದ ಘಟನೆಗಳಾಗಿರುತ್ತವೆ. ಹೀಗೆ ಮಗುವನ್ನು ಕನಸಿನ ಮತ್ತು ಭ್ರಾಮಕ ಮಾಂತ್ರಿಕ ಜಗತ್ತೊಂದಕ್ಕೆ ಕೊಂಡೊಯ್ಯುತ್ತವೆ. ತೊಟ್ಟಿಲ ಹಾಡುಗಳು ಬಹುತೇಕವಾಗಿ ಭಾವಗೀತಾತ್ಮಕವಾದ ಉತ್ಸಾಹಪೂರ್ಣವೂ ಉತ್ಪ್ರೇಕ್ಷಿತವೂ ಆದ ಕವಿತೆಗಳು. ಇವು ಪಲ್ಲವಿಯಂತಹ ಸಂಗೀತದಿಂದ ಬೆಳೆದವುಗಳು.

ಜನಪದಗೀತೆಗಳಲ್ಲಿ ಪ್ರಕೃತಿಗೀತೆಗಳದೂ ಒಂದು ಭಾಗ. ಜನಪದರು ಬಡತನದಲ್ಲಿ ಅದ್ದಿಹೋದವರು. ಆದರೆ ಅವರ ಗೀತೆಗಳಲ್ಲಿ ಈ ಯಾವುದೇ ಕಹಿ ಕಂಡುಬರುವುದಿಲ್ಲ. ಭೂಮಿತಾಯಿಯ ಮಕ್ಕಳಾದ ಇವರ ಜೀವನ ಆಕೆಯ ಅನುಗ್ರಹದ ಮೇಲೆ ನಿಂತಿರು ವಂಥದು. ಇದು ಹಲವು ಗೀತೆಗಳ ಹುಟ್ಟಿಗೆ ಕಾರಣವಾಗಿದೆ. ಇಲ್ಲಿಯ ಗೀತೆಗಳು ಪ್ರಕೃತಿಯನ್ನು ನಿಕಟವಾಗಿ ಪರಿಚಯಿಸುತ್ತಿದ್ದು, ಇವುಗಳಲ್ಲಿನ ಭಾವನೆಗಳಿಗೆ ಪ್ರಕೃತಿಯೇ

ಕಾರಣವಾಗಿದೆ. ಪ್ರಣಯ ಗೀತೆಗಳಿಗೆ ಭಾವಾತ್ಮಕ ಸ್ಫೂರ್ತಿಯನ್ನು ಒದಗಿಸುವುದಕ್ಕೆ ಕೂಡ ಪ್ರಕೃತಿ ಸಹಾಯ ಮಾಡುತ್ತದೆ.

ರೈತರು ಋತುಮಾನಗಳ ವ್ಯತ್ಯಾಸಗಳನ್ನು ಭಯಚಕಿತರಾಗಿ ಕಾಯುತ್ತಿದ್ದು ಅವನ್ನು ನೃತ್ಯ ಮತ್ತು ಗೀತೆಗಳಿಂದ ಆಚರಿಸುತ್ತಾರೆ. ಈ ಎಲ್ಲ ಪ್ರಕೃತಿ ಹಬ್ಬಗಳು ಭೂಮಿಯ ಫಲಶಕ್ತಿ ಆಶಯವನ್ನು ಹೊಂದಿರುತ್ತವೆ.[12] ಮಳೆಗಳ ಫಲಶಕ್ತಿ ಆಶಯ ಮಾನವಾನುಭವದಲ್ಲಿ ಸಂಕೇತವಾಗಿ ಉಪಯೋಗವಾಗಿರುವುದನ್ನು ಹಲವಾರು ಗೀತೆಗಳಲ್ಲಿ ನೋಡುತ್ತೇವೆ. ಕೆಲವಲ್ಲಿ ಸುಗ್ಗಿ ದೇವತೆಯ ಕಲ್ಪನೆಯಿದ್ದು, ಸಮೃದ್ಧ ಬೆಳೆಗೆ ಆವನ ಅನುಗ್ರಹ ಅಗತ್ಯವಿರುತ್ತದೆ.

ಋತುಗಳನ್ನು ಅನೇಕ ರೀತಿಗಳಲ್ಲಿ ಆಚರಿಸಲಾಗುತ್ತದೆ. ಪ್ರತಿಯೊಂದು ಋತುವೂ ಜನಪದ ಮನಸ್ಸಿನ ಮೇಲೆ ತನ್ನದೇ ಆದ ಪ್ರಭಾವವನ್ನು ಒತ್ತುವುದಲ್ಲದೆ, ಪ್ರಕೃತಿಯು ಋತುಗೀತೆಗಳ ಉಗಮಕ್ಕೆ ಕಾರಣವಾಗುತ್ತದೆ. ಇಂಥ ಕೆಲವು ಗೀತೆಗಳಲ್ಲಿ ಪ್ರಣಯ ವಸ್ತುವಾಗಿರುತ್ತದೆ. ಕೆಲವೆಡೆ ಎರಡು ಬಗೆಯ ಋತುಗೀತೆಗಳನ್ನು ಕಾಣುತ್ತೇವೆ; ಚೈತ್ರದಲ್ಲಿ ಹಾಡುವಂಥವು ಮತ್ತು ಮಳೆಗಾಲದಲ್ಲಿ ಹಾಡುವಂಥವು. ಮಳೆಗೀತೆಗಳು ಅನೇಕವೇಳೆ ಪ್ರಣಯ ಮತ್ತು ಲೈಂಗಿಕ ವಿಷಯವನ್ನು ವಸ್ತುವಾಗಿ ಹೊಂದಿರುತ್ತವೆ. ಜನಪದರು ಮೋಡ ಮತ್ತು ಮಳೆಗಳನ್ನು ಪ್ರಣಯಕ್ರಿಯೆಯ ಸಾಂಪ್ರದಾಯಿಕ ಸಂಕೇತಗಳಾಗಿ ಸಾಮಾನ್ಯವಾಗಿ ನಂಬಿರುತ್ತಾರೆ. ಮಳೆ ಮತ್ತು ಬಿರುಗಾಳಿಯು ಸಂಕೇತ ಲೈಂಗಿಕ ಹಂಬಲವನ್ನು ಉದ್ದೀಪಿಸುವುದಾಗಿರುತ್ತದೆ. ನದಿ ತನ್ನೆಲ್ಲ ದೃಶ್ಯಪರಂಪರೆಯಿಂದ ರಮಣೀಯ ಹಾಗೂ ರಂಜನೀಯ ಗೀತೆಗಳ ಸಮೃದ್ಧನಿಧಿಗೆ ಸ್ಫೂರ್ತಿಶಕ್ತಿಯಾಗಿದೆ. ಹಾಗೆಯೇ ಹಕ್ಕಿಗಳು, ಹೂಗಳು, ಹಿಮ, ಬೆಟ್ಟ, ಹುಲಿ ಮೊದಲಾದವುಗಳು ಗೀತೆಗಳಿಗೆ ವಸ್ತುವನ್ನು ನೀಡಿವೆ.

ಪ್ರಣಯಕ್ಕೆ ಸಂಬಂಧಿಸಿದ ಮತ್ತು ಮದುವೆ ಮುಂತಾದ ಸಾಮಾಜಿಕ ಪದ್ಧತಿಗಳಿಗೆ ಸಂಬಂಧಿಸಿದ ಹಾಡುಗಳು ಅನೇಕವಿವೆ. ಜನಪದಗೀತೆಗಳಲ್ಲಿ ಪ್ರಣಯ ಪ್ರಧಾನ ವಸ್ತುವಾಗಿದೆ. ಜನಪದರ ಮನಸ್ಸು ಪ್ರಕೃತಿಯ ಶಾಂತ ಸಂಪರ್ಕದಿಂದ ಪೋಷಿತವಾಗಿರುತ್ತದೆ ಮತ್ತು ಅವರ ಅನುಭವ ಅದರಿಂದ ಬೆಳೆದಿರುತ್ತದೆ. ಕ್ರಿಯೆಯನ್ನು ಪ್ರಕೃತಿಯ ವಸ್ತುಗಳೊಡನೆ ಹೋಲಿಸಲಾಗುತ್ತದೆ. ಅನೇಕವೇಳೆ ಮನಶ್ಶಾಸ್ತ್ರೀಯ ಅನುರೂಪತೆ ಇದಾಗಿರುತ್ತದೆ.

ಭಾರತೀಯ ಜನಪದ ಕಾವ್ಯದಲ್ಲಿ ಬಾಲೆಯೊಬ್ಬಳನ್ನು ಹಲವುಸಾರಿ ಎಳೆಯ ಬಿದಿರಿಗೆ ಹೋಲಿಸಲಾಗುತ್ತದೆ, ಬಾಳೆಯಗಿಡ ಎರಡನೆಯದಾಗುತ್ತದೆ.[13] ಪಕ್ಷಿಗಳು ಪ್ರತಿಮೆಗಳಾಗಿ ಕಾಣಿಸಿಕೊಳ್ಳುವುದಲ್ಲದೆ, ನಂಬಿಕೆಯ ಸಾಕಾರರೂಪಗಳಾಗಿಯೂ

12. Hem Barua *Folk Songs of India*, p. 2
13. Ibid, p. 16, 17

ಪರಿಗಣಿತವಾಗುತ್ತವೆ. ಅನೇಕಸಾರಿ ಇವು ಪ್ರಣಯ ರಾಯಭಾರಿಗಳಾಗಿ ಕೆಲಸಮಾಡು ತ್ತವೆ. ಶಿಷ್ಟಪುರಾಣ ಪ್ರಣಯ ಕಾವ್ಯಗಳಲ್ಲಿ ಹಂಸ ಗೌರವಸ್ಥಾನಗಳಿಸಿದರೆ, ಜನಪದ ಕಾವ್ಯದಲ್ಲಿ ಗಿಳಿ ಅಂಥ ಸ್ಥಾನವನ್ನು ಪಡೆದುಕೊಳ್ಳುವುದು. ವ್ಯಾಪಕವಾಗಿ ಬಳಸಲಾಗಿ ರುವ ಇನ್ನೊಂದು ಪ್ರತಿಮೆ ದುಂಬಿಯದು. ಜನಪದ ಕಾವ್ಯದಲ್ಲಿ ದುಂಬಿ ಪ್ರಿಯತಮ ನಾದರೆ, ಮಧು ಪ್ರಿಯತಮೆಯಾಗುತ್ತದೆ. ಈ ಕಲ್ಪನೆ ಶಿಷ್ಟಕಾವ್ಯದಲ್ಲಿಯೂ ಜನಪ್ರಿಯ ವಾಗಿದೆ. ಜನಪದ ಹಬ್ಬಗಳು ಇಂಥ ಪ್ರಣಯ ಪ್ರಚೋದನೆಯ ಕೇಂದ್ರಗಳಾಗಿರುತ್ತವೆ. ಪ್ರಣಯದಲ್ಲಿ ಸಂಗೀತ ಪ್ರಧಾನ ಪಾತ್ರ ವಹಿಸುತ್ತದೆ; ಡೋಲು, ನಗಾರಿ, ಕಹಳೆ, ಕೊಳಲು ಮುಂತಾದವುಗಳು ಇದರಲ್ಲಿ ಮುಖ್ಯವಾದವು. ಪ್ರಣಯವೆಂದರೆ ಸಮಾಗಮದ ಇಚ್ಛೆಯೇ ಆಗಿದೆ. ಸಾಮಾನ್ಯವಾಗಿ ಇದಕ್ಕೆ ಕೆಲವು ಸಂದರ್ಶನ ಸ್ಥಳಗಳನ್ನು ಸೂಚಿಸ ಲಾಗಿದೆ: ಬತ್ತದಗದ್ದೆಗಳು, ಕಾಡುಪ್ರದೇಶಗಳು, ಹುಲ್ಲುಮಾಳಗಳು, ನದೀ ದಡಗಳು, ಬಾವಿ ಅಥವಾ ಕೊಳಗಳ ಪಕ್ಕಗಳು.

ಜನಪದಗೀತೆಗಳು ಭಗ್ನಪ್ರಣಯಕ್ಕೆ ಉಜ್ವಲವಾದ ಮತ್ತು ವರ್ಣರಂಜಿತವಾದ ಅಭಿವ್ಯಕ್ತಿಯನ್ನು ನೀಡಿವೆ. ಕಾವ್ಯ ಎನ್ನುವುದು ಹೃದಯದ ತುಂಬು ಅಭಿವ್ಯಕ್ತಿಯೆಂದು ಹೇಳುವುದಾದರೆ, ಅದನ್ನು ಇಂಥ ಗೀತೆಗಳಲ್ಲಿ ನಿಶ್ಚಯವಾಗಿಯೂ ಕಾಣುತ್ತೇವೆ. ಪ್ರಣಯಿಗಳ ರಹಸ್ಯ ಭೇಟಿ ಮತ್ತು ಪಲಾಯನಕ್ಕೆ ಸಂಬಂಧಿಸಿದ ಗೀತೆಗಳು ಕೂಡ ಸಮೃದ್ಧವಾಗಿ ದೊರೆಯುತ್ತವೆ. ಪ್ರಣಯ ಕೆಲವು ವೇಳೆ ಸಾಮಾಜಿಕ ಆದೇಶಗಳನ್ನು ನಿರಾಕರಿಸುವುದುಂಟು. ಜನಪದಗೀತೆಗಳು ನಮ್ಮ ದೇಶದ ಭಿನ್ನ ಸಾಮಾಜಿಕ ರಚನೆಯ ಮೇಲೆ ಬೆಳಕು ಚೆಲ್ಲುವುದು ಅಪರೂಪ. ಈ ಸಾಮಾಜಿಕ ರಚನೆಯಲ್ಲಿ ಕೆಲವು ಮುಕ್ತ ವಾದವುಗಳು, ಸ್ವಚ್ಛಂದವಾದವುಗಳು; ಉಳಿದವು ನಿಷಿದ್ಧತೆಗಳಿಂದ ಕೂಡಿದವುಗಳು.

ಪ್ರಣಯಗೀತೆಗಳಲ್ಲಿ ಕೆಲವು ಉಪವರ್ಗಗಳಿವೆ. ಸಮೂಹಜೀವನ ಬೆಳವಣಿಗೆ ಹೊಂದಿದಾಗ ಇಂಥ ಉಪವರ್ಗಗಳನ್ನು ಸೃಷ್ಟಿಸುವಂತಹ ಮಾದರಿಗಳು ಉದಯ ವಾಗಿರಬೇಕು. ಪ್ರಣಯಗೀತೆಗಳ ಈ ಬಗೆಯ ಉಪವರ್ಗಗಳಲ್ಲಿ 'night visit'ಗೆ ಸಂಬಂಧಿಸಿದವು ಒಂದು ಬಗೆ. ಇನಿಯಳನ್ನು ರಾತ್ರಿಯವೇಳೆ ಸಂಧಿಸುವ ಸಂದರ್ಭವನ್ನು ಕುರಿತ ಪ್ರೇಮಗೀತೆಗಳೇ ಇವು. ಗಂಡ-ಹೆಂಡತಿ ಜೊತೆಯಲ್ಲಿ ವಾಸಮಾಡದೇ ಇದ್ದ ಸಮಾಜದ ಅವಸ್ಥೆಯೊಂದರ ಅವಶೇಷವೆಂದು ಇದನ್ನು ಬಣ್ಣಿಸಲಾಗಿದೆ.[14] ಇದೊಂದು ಪ್ರಾಚೀನ ಉಪವರ್ಗ. ಇಷ್ಟೇ ಪ್ರಾಚೀನವಾದ, ಇದೇ ಸಾಮಾಜಿಕ ಪರಿಸ್ಥಿತಿಯ, ಗಂಡು-ಹೆಣ್ಣುಗಳ ನಡುವೆ ಇದೇ ಸಂದರ್ಭಗಳಿರುವ ಇನ್ನೊಂದು ಉಪವರ್ಗವೆಂದರೆ, 'ಬೀಳ್ಕೊಡುವ ಗೀತೆಗಳು.' ಬೆಳಗಿನ ಸಮಯಗಳಲ್ಲಿ ಪ್ರಣಯಿಗಳು ಬೀಳ್ಕೊಡುವಾಗ ಹಾಡುವ ಗೀತೆಗಳಿವು. ಪ್ರೇಮಿಗಳ ನಡುವಿನ ಸಂಭಾಷಣೆಯನ್ನೂ ಇವು ಹೇಳುತ್ತವೆ. ಹೆಚ್ಚು ಕಡಿಮೆ ಇಷ್ಟೇ ಪ್ರಾಚೀನವಾದವು ಹುಲ್ಲುಗಾವಲಿನ ಹಾಡುಗಳು. ಹಗಲಿನ

---

14. Krappe, *The Science of Folklore*, p. 158

ಪರಿಗಣಿತವಾಗುತ್ತವೆ. ಅನೇಕಸಾರಿ ಇವು ಪ್ರಣಯ ರಾಯಭಾರಿಗಳಾಗಿ ಕೆಲಸಮಾಡುತ್ತವೆ. ಶಿಷ್ಟಪುರಾಣ ಪ್ರಣಯ ಕಾವ್ಯಗಳಲ್ಲಿ ಹಂಸ ಗೌರವಸ್ಥಾನಗಳಿಸಿದರೆ, ಜನಪದ ಕಾವ್ಯದಲ್ಲಿ ಗಿಳಿ ಅಂಥ ಸ್ಥಾನವನ್ನು ಪಡೆದುಕೊಳ್ಳುವುದು. ವ್ಯಾಪಕವಾಗಿ ಬಳಸಲಾಗಿರುವ ಇನ್ನೊಂದು ಪ್ರತಿಮೆ ದುಂಬಿಯದು. ಜನಪದ ಕಾವ್ಯದಲ್ಲಿ ದುಂಬಿ ಪ್ರಿಯತಮನಾದರೆ, ಮಧು ಪ್ರಿಯತಮೆಯಾಗುತ್ತದೆ. ಈ ಕಲ್ಪನೆ ಶಿಷ್ಟಕಾವ್ಯದಲ್ಲಿಯೂ ಜನಪ್ರಿಯವಾಗಿದೆ. ಜನಪದ ಹಬ್ಬಗಳು ಇಂಥ ಪ್ರಣಯ ಪ್ರಚೋದನೆಯ ಕೇಂದ್ರಗಳಾಗಿರುತ್ತವೆ. ಪ್ರಣಯದಲ್ಲಿ ಸಂಗೀತ ಪ್ರಧಾನ ಪಾತ್ರ ವಹಿಸುತ್ತದೆ; ಡೋಲು, ನಗಾರಿ, ಕಹಳೆ, ಕೊಳಲು ಮುಂತಾದವುಗಳು ಇದರಲ್ಲಿ ಮುಖ್ಯವಾದವು. ಪ್ರಣಯವೆಂದರೆ ಸಮಾಗಮದ ಇಚ್ಛೆಯೇ ಆಗಿದೆ. ಸಾಮಾನ್ಯವಾಗಿ ಇದಕ್ಕೆ ಕೆಲವು ಸಂದರ್ಶನ ಸ್ಥಳಗಳನ್ನು ಸೂಚಿಸಲಾಗಿದೆ: ಬತ್ತದಗದ್ದೆಗಳು, ಕಾಡುಪ್ರದೇಶಗಳು, ಹುಲ್ಲುಮಾಳಗಳು, ನದೀ ದಡಗಳು, ಬಾವಿ ಅಥವಾ ಕೊಳಗಳ ಪಕ್ಕಗಳು.

ಜನಪದಗೀತೆಗಳು ಭಗ್ನಪ್ರಣಯಕ್ಕೆ ಉಜ್ವಲವಾದ ಮತ್ತು ವರ್ಣರಂಜಿತವಾದ ಅಭಿವ್ಯಕ್ತಿಯನ್ನು ನೀಡಿವೆ. ಕಾವ್ಯ ಎನ್ನುವುದು ಹೃದಯದ ತುಂಬು ಅಭಿವ್ಯಕ್ತಿಯೆಂದು ಹೇಳುವುದಾದರೆ, ಅದನ್ನು ಇಂಥ ಗೀತೆಗಳಲ್ಲಿ ನಿಶ್ಚಯವಾಗಿಯೂ ಕಾಣುತ್ತೇವೆ. ಪ್ರಣಯಿಗಳ ರಹಸ್ಯ ಭೇಟಿ ಮತ್ತು ಪಲಾಯನಕ್ಕೆ ಸಂಬಂಧಿಸಿದ ಗೀತೆಗಳು ಕೂಡ ಸಮೃದ್ಧವಾಗಿ ದೊರೆಯುತ್ತವೆ. ಪ್ರಣಯ ಕೆಲವು ವೇಳೆ ಸಾಮಾಜಿಕ ಆದೇಶಗಳನ್ನು ನಿರಾಕರಿಸುವುದುಂಟು. ಜನಪದಗೀತೆಗಳು ನಮ್ಮ ದೇಶದ ಭಿನ್ನ ಸಾಮಾಜಿಕ ರಚನೆಯ ಮೇಲೆ ಬೆಳಕು ಚೆಲ್ಲುವುದು ಅಪರೂಪ. ಈ ಸಾಮಾಜಿಕ ರಚನೆಯಲ್ಲಿ ಕೆಲವು ಮುಕ್ತವಾದವುಗಳು, ಸ್ವಚ್ಛಂದವಾದವುಗಳು; ಉಳಿದವು ನಿಷಿದ್ಧತೆಗಳಿಂದ ಕೂಡಿದವುಗಳು.

ಪ್ರಣಯಗೀತೆಗಳಲ್ಲಿ ಕೆಲವು ಉಪವರ್ಗಗಳಿವೆ. ಸಮೂಹಜೀವನ ಬೆಳವಣಿಗೆ ಹೊಂದಿದಾಗ ಇಂಥ ಉಪವರ್ಗಗಳನ್ನು ಸೃಷ್ಟಿಸುವಂತಹ ಮಾದರಿಗಳು ಉದಯವಾಗಿರಬೇಕು. ಪ್ರಣಯಗೀತೆಗಳ ಈ ಬಗೆಯ ಉಪವರ್ಗಗಳಲ್ಲಿ 'night visit'ಗೆ ಸಂಬಂಧಿಸಿದವು ಒಂದು ಬಗೆ. ಇನಿಯಳನ್ನು ರಾತ್ರಿಯವೇಳೆ ಸಂಧಿಸುವ ಸಂದರ್ಭವನ್ನು ಕುರಿತ ಪ್ರೇಮಗೀತೆಗಳೇ ಇವು. ಗಂಡ-ಹೆಂಡತಿ ಜೊತೆಯಲ್ಲಿ ವಾಸಮಾಡದೇ ಇದ್ದ ಸಮಾಜದ ಅವಸ್ಥೆಯೊಂದರ ಅವಶೇಷವೆಂದು ಇದನ್ನು ಬಣ್ಣಿಸಲಾಗಿದೆ.[14] ಇದೊಂದು ಪ್ರಾಚೀನ ಉಪವರ್ಗ. ಇಷ್ಟೇ ಪ್ರಾಚೀನವಾದ, ಇದೇ ಸಾಮಾಜಿಕ ಪರಿಸ್ಥಿತಿಯ, ಗಂಡು-ಹೆಣ್ಣುಗಳ ನಡುವೆ ಇದೇ ಸಂದರ್ಭಗಳಿರುವ ಇನ್ನೊಂದು ಉಪವರ್ಗವೆಂದರೆ, 'ಬೀಳ್ಕೊಡುವ ಗೀತೆಗಳು.' ಬೆಳಗಿನ ಸಮಯಗಳಲ್ಲಿ ಪ್ರಣಯಿಗಳು ಬೀಳ್ಕೊಡುವಾಗ ಹಾಡುವ ಗೀತೆಗಳಿವು. ಪ್ರೇಮಿಗಳ ನಡುವಿನ ಸಂಭಾಷಣೆಯನ್ನೂ ಇವು ಹೇಳುತ್ತವೆ. ಹೆಚ್ಚು ಕಡಿಮೆ ಇಷ್ಟೇ ಪ್ರಾಚೀನವಾದವು ಹುಲ್ಲುಗಾವಲಿನ ಹಾಡುಗಳು. ಹಗಲಿನ

---

14. Krappe, *The Science of Folklore*, p. 158

ಹೊತ್ತು ಬಯಲು ಹೊಲದಲ್ಲಿ ಪುರುಷ ಪ್ರಣಯ ತೋರಿಸುವುದೇ ಇಂತಹ ಹಾಡುಗಳಿಗೆ ಮೂಲ.

ಮದುವೆಯ ಹಾಡುಗಳು ಹೆಂಗಸರು ಹಾಡಬಲ್ಲ ವಿಶೇಷ ಬಗೆಯ ಭಾವಗೀತೆಗಳಾಗಿವೆ. ವಿವಾಹದ ವಿವಿಧ ಆಚರಣೆಗಳಿಗೆ ಸಂಬಂಧಿಸಿದಂತೆ ಈ ಹಾಡುಗಳಿರುತ್ತವೆ. ದಾಂಪತ್ಯ ಜೀವನದ ಹಾಡುಗಳೂ ಇಲ್ಲೇ ಬರುತ್ತವೆ. ವಿವಾಹ ತರುವಾಯ ಹೊಸ ಜೀವನ ಆರಂಭವಾಗುತ್ತದೆ. ಈ ಸಂತೋಷವನ್ನು ಅಭಿವ್ಯಕ್ತಿಸುವ ಮತ್ತು ಎರಡು ಯುವ ಚೇತನಗಳು ಒಂದಾಗುವಲ್ಲಿನ ಸಂವೇದನೆಯನ್ನು ಪ್ರಕಟಿಸುವ ಗೀತೆಗಳು ವಿಶೇಷವಾಗಿ ರಂಜಿಸುತ್ತವೆ. ಇದು ಹೀಗೆಯೇ ಇರದೆ, ಅನೇಕ ಸಮಸ್ಯೆಗಳು ಅವರ ಬದುಕನ್ನು ಆವರಿಸುತ್ತವೆ; ಇದು ಬಹಳಸಾರಿ ಆರ್ಥಿಕ ಸ್ಥಿತಿಗೆ ಸಂಬಂಧಿಸಿದುದಾಗಿರುತ್ತದೆ. ಜನಪದಗೀತೆಗಳಲ್ಲಿ ಇದರ ಸಮರ್ಥ ಅಭಿವ್ಯಕ್ತಿಯನ್ನು ಕಾಣುತ್ತೇವೆ.

ಈ ಹಾಡುಗಳು ಸಾಮಾನ್ಯವಾಗಿ ಹೆಂಗಸರ ಹಾಡುಗಳೆಂದೇ ಪ್ರಸಿದ್ಧವಾಗಿವೆ. ಏಕೆಂದರೆ, ಇವು ಸ್ತ್ರೀ ಹೃದಯವನ್ನು ಕುರಿತವಾಗಿವೆ. ಇವುಗಳಲ್ಲಿ ಕೆಲವು ಅಪರಿಚಿತ ಮನೆಯ ವಾತಾವರಣದಲ್ಲಿ ಇರುವ ಹೆಣ್ಣಿನ ಭಾವಾತ್ಮಕ ಪ್ರತಿಕ್ರಿಯೆಯನ್ನು ಕುರಿತಿರುತ್ತವೆ; ಇನ್ನು ಕೆಲವು ಅವಳ ದಿವ್ಯಯಾತನೆಗಳಿಗೆ ಮೂಕಸಾಕ್ಷಿಗಳಾಗುತ್ತವೆ. ಇವುಗಳ ಜೊತೆಗೆ, ಸಹಾನುಭೂತಿಪರರಲ್ಲದ ಅತ್ತೆಮಾವಂದಿರು, ಮೂದಲಿಸುವ ನಾದಿನಿಯರು, ಅವಿಭಕ್ತ ಕುಟುಂಬದ ರಚನೆ, ಆರ್ಥಿಕ ವ್ಯವಸ್ಥೆ ಮೊದಲಾದವು ಅವಳ ಬಾಳನ್ನು ಮತ್ತಷ್ಟು ತೊಡಕುಗೊಳಿಸುತ್ತವೆ. ಹೆಣ್ಣು ತನಗೆ ಸಮೀಪದ ನೆಂಟರಿಷ್ಟರನ್ನು ಅಪೇಕ್ಷಿಸುವ ಮತ್ತು ಅದರಲ್ಲಿಯೂ ತಾನು ಅಗಲಿ ಬಂದ ತೌರಿನ ಕಲ್ಪನೆಯನ್ನು ಕುರಿತಾಗಿ ಚಿಂತಿಸುವ ಗೀತೆಗಳೂ ಗೋಚರಿಸುತ್ತವೆ. ವೈಯಕ್ತಿಕ ಭಾವನೆಗಳ ರಚನೆಗಳಿವು. ಇವು ತಮ್ಮ ನಾದ ಮತ್ತು ಲಯಗಳಲ್ಲಿ ವ್ಯಥೆಯೊಂದನ್ನು ಹೊತ್ತಿರುತ್ತವೆ. ಇಂಥ ಕೆಲವು ಗೀತೆಗಳು ಕೆಲವೊಂದು ಮಟ್ಟದ ಕ್ರೋಧ ಮತ್ತು ಪ್ರತಿಭಟನೆಯನ್ನೂ ವ್ಯಕ್ತಪಡಿಸುವಂತೆ ತೋರುತ್ತವೆ.

ಕೆಲವು ಮದುವೆ ಹಾಡುಗಳು ಪೌರಾಣಿಕ ಹಿನ್ನೆಲೆಯನ್ನು ಹೇಳುತ್ತವೆ. ಇವು ನೇರವಾಗಿ ಅಥವಾ ಪರೋಕ್ಷವಾಗಿ ಪುರಾಣ ಮಹಾಕಾವ್ಯಗಳ ಐತಿಹ್ಯಗಳನ್ನು ನಿರ್ದೇಶಿಸುತ್ತವೆ. ಉದಾಹರಣೆಗೆ, ರಾಮ–ಸೀತೆ, ಕೃಷ್ಣ–ರುಕ್ಮಿಣಿ, ಶಿವ–ಗೌರಿ (ಗಂಗೆ), ಇತ್ಯಾದಿ. ಗಂಡನ್ನೂ ಗಂಡಿನ ಕಡೆಯವರನ್ನೂ ಹೆಣ್ಣಿನ ಕಡೆಯವರು ಜರಿಯುವ, ಹಾಗೆಯೇ ಹೆಣ್ಣನ್ನೂ ಹೆಣ್ಣಿನ ಕಡೆಯವರನ್ನೂ ಗಂಡಿನ ಕಡೆಯವರು ಜರಿಯುವ ಗೀತೆಗಳು ಎಲ್ಲ ಕಡೆಯಲ್ಲೂ ಸಿಗುತ್ತವೆ. ಈ ಪದ್ಧತಿ ನಮ್ಮಲ್ಲಿ ಹೇಗೋ ಹಾಗೆಯೇ ಯುರೋಪಿನಲ್ಲಿಯೂ ಜೀವಂತವಾಗಿದೆ.

ಜನಪದಗೀತೆಗಳಲ್ಲಿ ಜೀವನದ ಸಾಮಾಜಿಕಾರ್ಥಿಕ ವಿಷಯಗಳು ಕೂಡ ತಮ್ಮದೇ ಆದ ಅಭಿವ್ಯಕ್ತಿಯನ್ನು ಪಡೆದಿವೆ. ಇವುಗಳಲ್ಲಿ ಕೆಲವು ಸಮಾಜದಲ್ಲಿನ ಉತ್ಪನ್ನಕಾರಕ ಸಂಬಂಧಗಳು ಮತ್ತು ಉತ್ಪನ್ನೋಪಕರಣಗಳನ್ನು ಕುರಿತಿವೆ. ಬಹುತೇಕ ಜನಪದ

ಗೀತೆಗಳು ದುಡಿಮೆಯೊಡನೆ ಹುಟ್ಟಿ ಬೆಳೆದವು, ಸ್ವಾಭಾವಿಕವಾಗಿಯೆ ಈ ಗೀತೆಗಳು ಜನರ ಸಾಮಾಜಿಕ-ಆರ್ಥಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ.

ಜನರ ಮುಖ್ಯ ಕಸಬು ಬೇಸಾಯ. ಇದನ್ನು ಬಿಟ್ಟು ಉಳಿದ ಕಸಬುಗಳು ಸಹಾಯಕ ಪ್ರವೃತ್ತಿಯವು. ವಿಶಾಲವಾಗಿ ಹೇಳುವುದಾದರೆ, ಈ ಹಾಡುಗಳು ವ್ಯವಸಾಯ ಮಾದರಿಯ ಆರ್ಥಿಕ ವ್ಯವಸ್ಥೆಗೆ ಹೊಂದಿಕೆಯಾದವುಗಳಾಗಿವೆ. ಇದರ ಸುತ್ತ ವೈವಿಧ್ಯಮಯವೂ ಸಮೃದ್ಧವೂ ಆದ ಗೀತಸಾಹಿತ್ಯ ಹುಟ್ಟಿಕೊಂಡಿದೆ. ಬತ್ತದ ಗದ್ದೆಯ ಹಾಡುಗಳು, ದನಕಾಯುವವರ ಹಾಡುಗಳು, ಮೀನುಗಾರರ ಹಾಡುಗಳು, ಕಮ್ಮಾರರ ಹಾಡುಗಳು ಇತ್ಯಾದಿ ನೋಡಬಹುದು. ಈ ಎಲ್ಲ ಹಾಡುಗಳ ಪ್ರಧಾನತಂತು ಹಳ್ಳಿಯ ವ್ಯವಸಾಯ ಮೂಲ ಆರ್ಥಿಕ ವ್ಯವಸ್ಥೆಯೇ ಆಗಿದೆ.

ಸುಗ್ಗಿ ಚೆನ್ನಾಗಿ ಬರಬೇಕಾದರೆ ಪ್ರಕೃತಿಯ ಅನುಗ್ರಹ ಬೇಕಾಗುತ್ತದೆ. ಆದರೆ ಪ್ರಕೃತಿ ಎಲ್ಲ ಕಾಲದಲ್ಲೂ ಹೀಗೇ ಇರುತ್ತದೆಂದು ಹೇಳಲಾಗುವುದಿಲ್ಲ. ಕೆಲವೊಮ್ಮೆ ಬೇಸಾಯವನ್ನು ಹಾಳುಮಾಡುವಂಥ ಪರಿಸ್ಥಿತಿ ಒದಗಬಹುದು. ಇದನ್ನು ಜನ ತಮ್ಮ ಹಾಡುಗಳಲ್ಲಿ ತೋಡಿಕೊಂಡಿದ್ದಾರೆ. ಹಾಗೆ ಮಾಡುವಾಗ ತಮ್ಮ ಹೃದಯ ಮನಸ್ಸುಗಳೆರಡನ್ನೂ ಅವರಲ್ಲಿ ವ್ಯಕ್ತಪಡಿಸಿದ್ದಾರೆ. ವಾಸ್ತವವಾಗಿ, ಹಾಡುಗಳು ಅವರಿಗೆ ಆಸರೆಯಾಗಿವೆ; ಶ್ರಮದ ಉಪಶಮನಕ್ಕೆ ಕಾರಣಗಳಾಗಿ ಅವರನ್ನು ಉಳಿಸಿವೆ.

ಕೆಲಸದ ಹಾಡುಗಳು ಹಲವು ವಿಧ. ನೆಯ್ಗೆಯ ಹಾಡುಗಳು ಪ್ರಧಾನವಾಗಿ ಹೆಂಗಸರಿಗೆ ಸಂಬಂಧಿಸಿದವುಗಳು. ನಿರ್ದಿಷ್ಟ ಉದ್ಯೋಗಕ್ಕೆ ಅಂಟಿಕೊಂಡಂತೆ ಬರುವ ಲಯಾತ್ಮಕ ಗೀತೆಯಿದು, ಮಗ್ಗದ ಮುಂದೆ ಕುಳಿತು ನೂಲುವಾಗ ಮತ್ತು ನೆಯ್ಯುವಾಗ ಹೆಂಗಸರು ಹಾಡುವ ಗೀತೆಗಳಿವು. ಇದೇ ಮನೋಧರ್ಮದ ಗೀತೆಗಳು ನೀರು ತರುವ ಹೆಂಗಸರ ಗೀತೆಗಳು. ಇವು ಕೂಡ ಕೆಲಸದ ಹಾಡುಗಳೇ. ಪುರಾತನ ಸಮಾಜಗಳಲ್ಲಿ—ಕೆಲಕಾಲದ ಹಿಂದೆ ಗ್ರಾಮೀಣ ಸಮಾಜಗಳಲ್ಲಿ ಕೂಡ—ಬಾವಿಗಳು ಊರಿನಿಂದ ದೂರವಿದ್ದು ನೀರು ತರಬೇಕಾಗಿತ್ತು, ಇದು ಹೆಂಗಸರ ಕೆಲಸವಾಗಿತ್ತು. ಆದ್ದರಿಂದ ಹಳ್ಳಿಯ ಬಾವಿಗಳು ಗಂಡು-ಹೆಣ್ಣುಗಳು ಸಂಧಿಸುವುದಕ್ಕೆ ಸೂಕ್ತ ಸ್ಥಳವಾಗಿದ್ದುವು. ಹೀಗಾಗಿ, ಈ ಕುರಿತ ಗೀತೆಗಳು ಹುಟ್ಟಿಕೊಂಡು ಹರಡಿದವು. ಬೀಸುಕಲ್ಲಿನ ಪದಗಳು ಕೆಲಸದ ಹಾಡುಗಳ ಇನ್ನೊಂದು ಬಗೆ. ಪ್ರಾಚೀನ ಸಮಾಜಗಳಲ್ಲಿ ಕಾಳನ್ನು ಒಡೆಯಲು ಧಾನ್ಯ ಬೀಸಲು ಕೆಲರೀತಿಯ ಸಾಧನವನ್ನು ಬಳಸಲಾಗುತ್ತಿತ್ತು. ಇದು ಹಳೆಯ ಶಿಲಾಯುಗದಷ್ಟು ಹಳೆಯದು. ಇಲ್ಲಿಯೂ ಹೆಂಗಸರದೇ ಪಾತ್ರ. ಈ ಬಗೆಯ ಹಾಡುಗಳು ಎಲ್ಲ ಪ್ರದೇಶಗಳಲ್ಲಿಯೂ, ಪುರಾತನ ಕಾಲಗಳಲ್ಲಿಯೂ ಕಾಣಸಿಗುತ್ತವೆ. ಹೆಂಗಸರ ಕೆಲಸದ ಹಾಡುಗಳಂತೆಯೇ ಗಂಡಸರ ಕೆಲಸದ ಹಾಡುಗಳೂ ಮುಖ್ಯವೇ. ಮಾನವ ಬೇಟೆಯಾಡುವುದರಿಂದ ಹೊಲ ಉಳುವುದರತನಕ ಇಂತಹ ಹಾಡುಗಳು ಬೆಳವಣಿಗೆಯಾಗಿರಬೇಕೆನಿಸುತ್ತದೆ. ಕಳೆದ ಶತಮಾನದ ಕಡೆಯ ಭಾಗದಲ್ಲಿದ್ದ ಜರ್ಮನ್ ವಿದ್ವಾಂಸ Bucher ಎಂಬುವನು ಇವುಗಳಲ್ಲಿ ಗೀತೆಯ ಅತ್ಯಂತ ಪುರಾತನ ಮಾದರಿಯನ್ನು

ಕಾಣಲು ಪ್ರಯತ್ನಿಸಿದ.[15] ಈ ಸಿದ್ಧಾಂತ ಅತಿಶಯೋಕ್ತಿಯಿಂದ ಮುಕ್ತವಾಗಿಲ್ಲ. ಪ್ರಣಯ, ಕೆಲಸಕ್ಕಿಂತ ಸಾಕಷ್ಟು ಹಳೆಯದು. ಆದರೆ ಕೆಲಸದ ಹಾಡುಗಳು ವ್ಯವಸ್ಥಿತ ಕೆಲಸ ಆರಂಭವಾದಂದಿನಿಂದ ಇವೆಯೆಂದು ಹೇಳುವುದು ಸೂಕ್ತವೆನಿಸುತ್ತದೆ.

ಸಾಮಾನ್ಯವಾಗಿ ಕೆಲಸದ ಹಾಡುಗಳನ್ನು ಮೇಳಗೀತೆಗಳೆಂದು ಕರೆಯಬಹುದು. ಮೇಳದಲ್ಲಿ ಮುಮ್ಮೇಳ ಮತ್ತು ಹಿಮ್ಮೇಳಗಳೆಂದು ಎರಡು ಇರುತ್ತವೆ. ಗುಂಪಿನಲ್ಲಿ ಯಾರಾದರೊಬ್ಬರು ಹಾಡಿನ ಪ್ರಧಾನಭಾಗವನ್ನು ಹಾಡಿದರೆ, ಉಳಿದವರು ಅದಕ್ಕೆ 'ಸೊಲ್ಲು' ಕೊಡುತ್ತಾರೆ. ಈ ಕ್ರಮದಲ್ಲಿ ಇಡೀ ಗೀತೆ ಸಾಗುತ್ತದೆ. ಕೆಲಸದ ಹಾಡುಗಳು ಅವುಗಳ ಕೆಲಸದ ಸಂದರ್ಭದಿಂದ ಇಂದು ಮಾಯವಾಗುತ್ತಿವೆ: ಕೇವಲ ಹಾಡುಮಾತ್ರವಾಗಿ ಉಳಿದುಕೊಳ್ಳುತ್ತಿವೆ. ನಾಗರಿಕತೆಯಿಂದಾಗಿ, ಅದರಲ್ಲಿಯೂ ಕೈಗಾರಿಕೀಕರಣದಿಂದಾಗಿ ಈ ಬಗೆಯ ಗೀತೆಗಳು ಬಹು ಬೇಗ ಅಳಿಯುತ್ತಿವೆ. ಇಂಥ ಹಾಡುಗಳನ್ನು ಕೆಲಸದ ಸಂದರ್ಭದಲ್ಲಿ ಹಾಡುವುದು ಹಾಡಿಸುವುದು ಸಂಪ್ರದಾಯವಾಗಿ ಬಂದಿದೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ: ಗೀತೆಗಳನ್ನು ಹಾಡುತ್ತಿದ್ದರೆ ಶ್ರಮ ಗೊತ್ತಾಗದೆ ಕೆಲಸ ಸಂಗಮವಾಗಿ ಸಾಗುತ್ತದೆ ಎಂಬುದು ಒಂದು; ಬೆಳೆ ಚೆನ್ನಾಗಿ ಬೆಳೆಯುತ್ತದೆ ಎಂಬ ನಂಬಿಕೆ ಮತ್ತೊಂದು. ಬೇಸಾಯದ ಸಮಯದಲ್ಲಿ ಇವನ್ನು ಹಾಡಿದರೆ ದುಷ್ಟ ಶಕ್ತಿಗಳಿಂದ ಬೆಳೆ ರಕ್ಷಿತವಾಗುತ್ತದೆ ಎಂಬ ಉತ್ಪನ್ನಕಾರಕ ಮಾಂತ್ರಿಕತೆಯೂ ಇದೆ. ಈ ಬಗೆಯ ಬಹುತೇಕ ಗೀತೆಗಳು ಕ್ರಿಯಾತ್ಮಕ ಗೀತೆಗಳೆಂದು ಹೆಸರಾಗಿವೆ.

ನೃತ್ಯಗೀತೆಗಳೂ ಒಂದು ದೃಷ್ಟಿಯಲ್ಲಿ ಕ್ರಿಯಾತ್ಮಕ ಗೀತೆಗಳ ಸರಹದ್ದಿನಲ್ಲಿ ಬರುತ್ತವೆ. ಇವು ಎರಡು ಸಾಮಾನ್ಯ ಮೂಲಗಳಿಂದ ಬಂದುವುಗಳೆಂದು ಹೇಳಲಾಗಿದೆ.[16] ಒಂದು, ಸರಳ ನೃತ್ಯಗಳು—ಇವು ಹೆಚ್ಚು ಹಳೆಯವು, ಮತಾಚರಣೆಯ ಅರ್ಥವನ್ನು ಸೂಚಿಸುವಂಥವು, ಈಗ ಸಾಮಾನ್ಯವಾಗಿ ಮರೆತುಹೋಗಿರುವಂಥವು; ಎರಡು. ಇತರ ನೃತ್ಯಗಳು—ಹಲವು ವೇಳೆ ಜಟಿಲವಾದವು. ನಗರ ಪ್ರಭಾವಗಳ ಮೂಲಕ ಬಂದವು. ಬಹುಪಾಲು ಮನರಂಜನೆಗಾಗಿ ಹಾಡುವಂಥವು. ಇಲ್ಲಿಯೇ ಸಾಕಷ್ಟು ಪ್ರಾಚೀನವಾದ ಆಚರಣಾತ್ಮಕಗೀತೆಗಳನ್ನು (ritual songs) ನೆನೆಯಬಹುದು. ಇವುಗಳನ್ನು ನೃತ್ಯಗೀತೆಗಳಿಂದ ತತ್ವಶಃ ಬೇರ್ಪಡಿಸುವುದು ಕಷ್ಟ. ಆಚರಣಾತ್ಮಕ ನೃತ್ಯ (ritual dance) ಇಂದು ಬಹುಮಟ್ಟಿಗೆ ಅದೃಶ್ಯವಾಗಿರುವ ವಿಚಾರ. ಆಚರಣಾತ್ಮಕ ಗೀತೆ ಮೂಲತಃ ಆಚರಣಾತ್ಮಕ ನೃತ್ಯದೊಡನೆ ಬಂದುದು. ಆಚರಣಾತ್ಮಕ ಗೀತೆ ಉಳಿದು ಬಂದಿರುವುದು ಮದುವೆಯ ಹಾಡುಗಳ ರೂಪದಲ್ಲಿ ಮಾತ್ರ. ಮೊದಲು ಗ್ರಾಮೀಣ ವಿವಾಹ ಹೆಚ್ಚು ಸಂಕೀರ್ಣ ವಿಷಯವಾಗಿತ್ತೆಂಬುದನ್ನು ಗಮನಿಸಬೇಕು. ಆಚರಣಾತ್ಮಕ ಗೀತೆಗಳ ಬಳಕೆ ಬೀಜ ಬಿತ್ತುವ ಸಮಯದ ಪದ್ಧತಿಯಾಗಿತ್ತು ಕೂಡ. ಇಲ್ಲಿಯೂ 'ಫಲಶಕ್ತಿ' (fertility)

---

15. Ibid, p. 165.

16. *Standard Dictionary of Folklore, Mythology and Legend,* p 1035

ಭಾವನೆಯನ್ನೇ ಕಾಣಬಹುದು. ಈ ಗೀತೆಗಳು ಹೊಸ ಸಸ್ಯಗಳ ಬೆಳವಣಿಗೆಯ ಪ್ರಚೋದನೆಗೆ ಸಂಬಂಧಿಸಿದವಾಗಿವೆ.

ಮೇಲೆ ಹೇಳಲಾದ ಕ್ರಿಯಾತ್ಮಕ ಗೀತೆಗಳಿಗೆ ಪ್ರತಿಯಾಗಿ ಎಲ್ಲ ಪ್ರದೇಶಗಳಲ್ಲಿಯೂ ಶುದ್ಧವಾಗಿ ಮನರಂಜನೆಗೆ, ಆನಂದಕ್ಕೆ ಹಾಡುವ ಗೀತೆಗಳಿರುತ್ತವೆ. ಇವು ಯಾವುವೂ ಸಾಮಾಜಿಕ ಅಥವಾ ಸಾಮೂಹಿಕ ಉದ್ದೇಶಗಳನ್ನು ನಿರ್ವಹಿಸುವುದಿಲ್ಲ. ಸಮೃದ್ಧವೂ ವೈವಿಧ್ಯಪೂರ್ಣವೂ ಆದ ಈ ವಿವಿಧ ಪ್ರಕಾರಗಳನ್ನು ನೋಡಿದಾಗ, ಮನರಂಜನೆಗೆ ಉಪಯೋಗವಾಗುವುದಕ್ಕಿಂತ ಹೆಚ್ಚಾಗಿ ಇಂದು ಜನಪದಗೀತೆ ಪ್ರಧಾನವಾಗಿ ಕ್ರಿಯಾತ್ಮಕ ಎಂದು ಹೇಳುವುದು ಕಠಿಣವಾಗುತ್ತದೆ.

ಒಂದು ಕಾಲದಲ್ಲಿ ಜನಪದ ಗೀತೆ ಹೆಚ್ಚು ಕ್ರಿಯಾತ್ಮಕ ಲಕ್ಷಣದಿಂದ ಕೂಡಿದ್ದುದು ನಿಜ. ಈ ಊಹೆಗೆ ಹಲವಾರು ಕಾರಣಗಳಿವೆ. ಕ್ರಿಯಾತ್ಮಕ ಗೀತೆಗಳು ಇತರ ಸಮೂಹ ಗಳಿಗಿಂತ ಬಹಳ ಸಾರಿ ಸರಳ, ಕಡಿಮೆ ಕಲಾತ್ಮಕ ಹಾಗೂ ವಿಷಯದಲ್ಲಿ ಕಡಿಮೆ ವೈವಿಧ್ಯತೆ ಇರುವಂಥವು. ಪಾಠ ಮತ್ತು ಮಟ್ಟುಗಳಲ್ಲಿಯೂ ಇದೇ ರೀತಿ. ಇವು ನಗರದಿಂದ ಪ್ರಭಾವಿತವಾಗಿರುವುದು ಕಡಿಮೆ. ಜನಪದಗೀತೆಯಲ್ಲಿ ಇವು ಆರ್ಷೇಯ ಬೆಳವಣಿಗೆ ಗಳನ್ನು ಪ್ರತಿನಿಧಿಸಬಹುದು. ಇಷ್ಟಾದರೂ ಕ್ರಿಯಾತ್ಮಕ ಮತ್ತು ಕ್ರಿಯಾತ್ಮಕವಲ್ಲದ ಗೀತೆಗಳ ನಡುವಿನ ಪ್ರತ್ಯೇಕತೆಯ ವಿಷಯ ಇನ್ನೂ ಸಂದಿಗ್ಧವಾಗಿಯೇ ಉಳಿದಿದೆ.

ಈ ಎಲ್ಲ ಗೀತಪ್ರಕಾರಗಳು ಮತ್ತು ಅವುಗಳ ವಿವಿಧ ಉಪಯೋಗಗಳು ಜನಪದ ಸಮೂಹವೊಂದರ ಜೀವನ ಮತ್ತು ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಬಹುದಾಗಿದೆ. ಜನಪದಗೀತೆಯ ವಿಷಯ ಹಾಗೂ ಶೈಲಿ ಇಂದಿನ, ಹಿಂದಿನ ಸಮಾಜದ ಸಾಮಾಜಿಕ ಹಿನ್ನೆಲೆಯನ್ನು ಅಭಿವ್ಯಕ್ತಿಸುತ್ತದೆ ಎಂದು ಹೇಗೆ ಹೇಳಲು ಸಾಧ್ಯ ? ಇದಕ್ಕೆ ಪ್ರಾಚೀನ ಸಿದ್ಧಾಂತಕಾರರು ಮತ್ತು ಸಂಗ್ರಹಕಾರರು ಕೆಲವೊಂದು ಕಾಲ್ಪನಿಕ ಉತ್ತರಕ್ಕೆ ಅವಕಾಶ ಕೊಟ್ಟಿದ್ದಾರೆ. ಮನುಷ್ಯನ ಪ್ರಾಕೃತಿಕ ಪರಿಸರಕ್ಕೆ ತೀರ ಹತ್ತಿರವಾಗಿ ಜೀವಿಸುವುದರಿಂದ ಅವನನ್ನು ಹೆಚ್ಚು ಪ್ರಾಕೃತಿಕ ಮನುಷ್ಯ ಎಂದು ಯೋಚಿಸಲಾಗಿದೆ. ಅವನು ಮಣ್ಣಿಗೆ ಹತ್ತಿರದವನಾದಂತೆ, ಅವನು ತನ್ನ ಜೀವನವನ್ನು ಗ್ರಹಿಸುವುದರಲ್ಲಿಯೂ ಅಂಥದೇ ಸಾಮೀಪ್ಯವನ್ನು ಹೊಂದಿದ್ದನೆಂದು ಹೇಳಲಾಯಿತು. ಇಷ್ಟಾದರೂ, ಗೀತೆಗಳಲ್ಲಿ ವ್ಯಕ್ತವಾಗಿರುವ ಸಮೂಹದ ಜೀವನ ಸಂಬಂಧ ಜಟಿಲ ವಾಗಿಯೇ ಉಳಿದುಕೊಳ್ಳುತ್ತದೆ.

ಡಾ. ಜಯಲಕ್ಷ್ಮೀ ಸೀತಾಪುರ

ಲಾವಣಿ

ಜನಪದ ಇತಿಹಾಸಕ್ಕೆ ಸಂಬಂಧವಿರುವ ಜಾನಪದ ಪ್ರಕಾರಗಳಲ್ಲಿ ಮುಖ್ಯವಾಗಿ ಹೆಸರಿಸಬೇಕಾಗಿರುವುದು ಲಾವಣಿ. ಕನ್ನಡದಲ್ಲಿ ಈ ಹೆಸರನ್ನು ಕೇಳಿದ ಕೂಡಲೇ ಕಥನರೂಪದ, ಜಾನಪದ ಮೂಲದ, ಗಾನಯೋಗ್ಯವಾದ ಪ್ರಕಾರವೊಂದು ಹೃದ್ಗೋಚರವಾಗುತ್ತದೆ. ಇಂಗ್ಲಿಷ್‌ನ 'Ballad' ಎಂಬ ಹೆಸರನ್ನು ಕೇಳಿದಾಗಲೂ ಇದೇ ರೀತಿಯ ಭಾವನೆ ಉಂಟಾಗುತ್ತದೆ. ರಷ್ಯನ್ ಭಾಷೆಯ 'Byliny' ಡೇನಿಷ್ ಭಾಷೆಯ 'Vise', ಸ್ಪ್ಯಾನಿಷ್ ಭಾಷೆಯ 'Romance' ಮುಂತಾದ ಪದಗಳಿಗೂ ಇದೇ ಅರ್ಥವಿದೆ. ಆದರೆ ಕನ್ನಡ 'ಲಾವಣಿ' ಪದ ಇಂಗ್ಲಿಷ್‌ನ ಬ್ಯಾಲೆಡ್ಡಿಗೆ ಸಂವಾದಿ ಎನ್ನುವುದು ಕಷ್ಟ. ಪಿರಿಯಾಪಟ್ಟಣದ ಲಾವಣಿಯ ಪ್ರಾರಂಭದಲ್ಲಿ 'ಪಿರಿಯಾಪಟ್ಟಣದ ಲಾವಣಿ ಹೇಳತೀನಿ ಕೇಳಿರಿ ಮಹಾಸಭೆಯೆಲ್ಲ' ಎಂದಿರುವ ವಾಕ್ಯದಿಂದ ಕನ್ನಡದಲ್ಲಿ 'ಲಾವಣಿ' ಒಂದು ನಿರ್ದಿಷ್ಟಾರ್ಥದಲ್ಲಿ ಬಹಳ ಹಿಂದಿನಿಂದ ಬಳಕೆಯಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ ಉತ್ತರ ಕರ್ನಾಟಕದ ಕಲ್ಗಿತುರಾ ಲಾವಣಿ ಸಂಪ್ರದಾಯ ಕೂಡ ಕನ್ನಡದಲ್ಲಿ ಇದು ಒಂದು ವಿಶಿಷ್ಟ ಪ್ರಕಾರವಾಗಿ ಬೆಳೆದು ಬಂದಿದೆ ಎನ್ನುವುದನ್ನು ಖಚಿತಗೊಳಿಸುತ್ತದೆ. ಪ್ರಹ್ಲಾದ ಕುಮಾರ ಭಾಗೋಜಿ ಅವರು "ಲಾವಣಿ ಎಂಬುದನ್ನು ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಸಾಹಿತ್ಯರೂಪಕ್ಕೆ ಮಾತ್ರ ಬಳಸುವುದು ಉಚಿತ"[1] ಎಂದು ಹೇಳಿ ಲಾವಣಿಗಳು (೧) ಕಲ್ಗಿ-ತುರಾಯಿ ಲಾವಣಿ (೨) ಕಥಾಸಾರ ಲಾವಣಿ (೩) ನೀತಿಸಾರ ಲಾವಣಿ (೪) ತತ್ವಸಾರ ಲಾವಣಿ ಎಂಬ ಬಗೆಗಳನ್ನು ಗುರುತಿಸಿದ್ದಾರೆ. ಜಾತ್ರೆಗಳ ವರ್ಣನೆಗಳು ಸಾಮಾಜಿಕ ಘಟನೆಗಳು, ಹಾಸ್ಯವಿನೋದಗಳು ಕೂಡ ಕೆಲವೊಮ್ಮೆ ಈ ಹೆಸರನ್ನು ಪಡೆದುಕೊಳ್ಳುತ್ತವೆ.

ಐತಿಹಾಸಿಕ ಗೀತೆಗಳ ಜೊತೆಗೆ ಪೌರಾಣಿಕ ಗೀತೆಗಳು, ಹುಬ್ಬಳ್ಳಿ ಮಾರ್ಕೆಟ್ ಸುಟ್ಟ ಪದ ಮುಂತಾದವನ್ನು ಲಾವಣಿಗಳೆನ್ನುತ್ತಾರೆ. "ಹೋಳಿಯ ಪದಗಳು, ಗೊಂದಲಿಗರ ಹಾಡುಗಳು, ಕುಮಾರರಾಮನ ಸಾಂಗತ್ಯ ಮೊದಲಾದವು ಲಾವಣಿಯೆಂದು ಹೇಳಲ್ಪಡುವುದಿಲ್ಲ?"[2] ಎಂದಾಗ ಗೊಂದಲ ಉಂಟಾಗುವುದು ಸಹಜ. ಸಂಗೊಳ್ಳಿರಾಯಣ್ಣನ ಕತೆ ಲಾವಣಿಯಾಗಿ, ಕುಮಾರರಾಮನ ಸಾಂಗತ್ಯ ಏಕೆ ಲಾವಣಿ

ಆಗುವುದಿಲ್ಲ ಎಂಬ ಅನುಮಾನ ಬರುತ್ತದೆ. ಮಹಾರಾಷ್ಟ್ರದಲ್ಲಿ ಪೇಶ್ವೆ ಕಾಲದಲ್ಲಿ ಮೊತ್ತಮೊದಲಿಗೆ ಬಳಕೆಯಲ್ಲಿ ಬಂದ 'ಲಾವಣಿ' ಎಂಬ ಪದಕ್ಕೆ ಶೃಂಗಾರಪ್ರಧಾನ ಗೀತೆ ಎಂದು ಅರ್ಥ ಹೇಳುತ್ತಾರೆ. ವೀರರಸ ಪ್ರಧಾನವಾದುದನ್ನು 'ಪೋವಾಡ' ಎನ್ನುತ್ತಾರೆ. ಮರಾಠಿಯ ಸಂಪರ್ಕದಿಂದ ಉತ್ತರ ಕರ್ನಾಟಕದಲ್ಲಿ ಚಾಲ್ತಿಗೆ ಬಂದ 'ಲಾವಣಿ' ಪದ, ಗೀಗೀ ಪದ, ಕಲ್ಗಿ ತುರಾಯಿಗಳಿಗೆ ಅನ್ವಯವಾಗಿ ಅಲ್ಲಿಂದ ದಕ್ಷಿಣ ಕರ್ನಾಟಕಕ್ಕೆ ಬಂದಾಗ ವೀರಗೀತೆಗಳಿಗೆ ಅನ್ವಯವಾಗಿರಬೇಕು. ಹೊರಗಿನಿಂದ ಬಂದ ಪದ ಹೀಗೆ ಭಿನ್ನಾರ್ಥಗಳನ್ನು ಪಡೆದುಕೊಳ್ಳುವುದು ಆಶ್ಚರ್ಯವೇನಿಲ್ಲ.

ಇಂಗ್ಲಿಷ್‌ನ ಬ್ಯಾಲೆಡ್ಡನ್ನು ವ್ಯಾಖ್ಯಾನಿಸಿದವರು ಅದು ಚಿಕ್ಕ ಚಿಕ್ಕ ಪದ್ಯಗಳಲ್ಲಿ ಜನಪ್ರಿಯ ಕಥೆಯನ್ನೊಳಗೊಂಡ ರೋಮಾಂಚಕಾರಿ ಕಥನವೆಂದು ಹೇಳಿದ್ದಾರೆ.[3] ಬ್ಯಾಲೆಡ್ ಒಂದು ವೀರರಸಪ್ರಧಾನ ಗೀತೆ ಎಂಬ ವಿವರಣೆ ಕೊಡುತ್ತ ಉಗಮದ ದೃಷ್ಟಿಯಿಂದ ಅದು ಜಾನಪದೀಯವೆಂದೂ, ಸರಳ ಕಥನ ಕಾವ್ಯವೆಂದೂ ಕ್ರಾಪೆ ವಿವರಿಸಿದ್ದಾರೆ.[4]

ಬ್ಯಾಲೆಡ್ಡಿನ ಲಕ್ಷಣಗಳೆಂದು ಗುರುತಿಸಲಾಗಿರುವ ಕಥನಾಂಶ, ಗೇಯಾಂಶ, ಜಾನಪದೀಯ ಶೈಲಿ ಮತ್ತು ರೂಪ, ಏಕ ಘಟನಾತ್ಮಕತೆ, ವಸ್ತುನಿಷ್ಠೆ, ಘಟನೆ ಮತ್ತು ಸಂಭಾಷಣೆಗಳ ಮೂಲಕದ ಕ್ರಿಯಾತ್ಮಕತೆಗಳನ್ನು[5] ಕನ್ನಡ ಲಾವಣಿಗಳಿಗೂ ಅನ್ವಯಿಸಬಹುದಾಗಿದೆ.

ಮೊದಲ ಬ್ಯಾಲೆಡ್ ಐತಿಹಾಸಿಕ ವಸ್ತುವನ್ನು ಒಳಗೊಂಡಿದ್ದೆಂದು ಹೇಳುವುದು ಕಷ್ಟ. ಮೊದಲ ಬ್ಯಾಲೆಡ್ ಕೃಷಿಕ ಸಮಾಜದಲ್ಲೇ ಉಗಮಗೊಂಡಿರಬೇಕೆಂಬ ಅಭಿಪ್ರಾಯವಿದೆ.[6] ಕ್ರಮೇಣ ಐತಿಹಾಸಿಕ ಸಂಗತಿಗಳು ಬ್ಯಾಲೆಡ್‌ಗಳಿಗೆ ಸಾಮಗ್ರಿಯನ್ನು ಒದಗಿಸಿರಬೇಕು.

ಕನ್ನಡದಲ್ಲಿ 'ಲಾವಣಿ' ಎಂಬ ಪದವನ್ನು ನೂರಾರು ವರ್ಷಗಳಿಂದ ವಿವಿಧ ಅರ್ಥಗಳಲ್ಲಿ ಬಳಸುತ್ತ ಬಂದಿದ್ದಾರೆಂಬುದು ತಿಳಿದುಬರುತ್ತದೆ. "ಲಾವಣಿ ಎಂದರೆ ಕದನ ಹಾಡು, ಸೈನ್ಯ ವಾಟಿಕೆಯಲ್ಲಿ ಉತ್ಸಾಹ ವಿಜೃಂಭಣೆಗಾಗಿ, ವಿಜಯಾನಂದ ವಿವರ್ಧನಕ್ಕಾಗಿ ಕುಣಿಯುತ್ತ ಹಾಡುತ್ತಿದ್ದ ಲಯ ಪ್ರಧಾನವಾದ ರಣಗೀತೆಗಳು ಎನ್ನುತ್ತೇವೆ"[7] ಇದು ದೇವುಡು ಅವರ ಅಭಿಪ್ರಾಯ. ಅವರೇ "ಲಾವಣಿ ಎಂಬುದು ಗರಡಿಯವರು ಹಾಡುವ ಹಾಡು"[8] ಎಂದು ಹೇಳಿದ್ದಾರೆ. ಇದು ಸೀಮಿತವಾದ ಅರ್ಥ ಎಂಬುದು ಸ್ಪಷ್ಟ. "ಲಾವಣಿ ಎನ್ನುವುದು ಛಂದಸ್ಸು ಮತ್ತು ಸಂಗೀತ ಮಿಳಿತವಾದ ಪ್ರಕಾರವೇ ಹೊರತು, ವಸ್ತು ವಿಶಿಷ್ಟ ಪ್ರಕಾರದವಲ್ಲ"[9] ಎಂಬ ಅಭಿಪ್ರಾಯವೂ ಗಮನಾರ್ಹ. ಲಾವಣಿ ಮೊದಲು ಇಂತಹ ಸೀಮಿತ ಅರ್ಥದಲ್ಲಿ ರೂಪಿತವಾಗಿದ್ದರೂ, ಕನ್ನಡ ಜಾನಪದ ಅಧ್ಯಯನದಲ್ಲಿ ಮಾತ್ರ ಅದಕ್ಕೆ ವೀರಗೀತೆ ಎನ್ನುವ ಅರ್ಥದಿಂದ ಹಿಡಿದು ಜನಪದ ಕಥನಗೀತೆ ಎನ್ನುವ ಅರ್ಥದವರೆಗೆ ಪಾರಿಭಾಷಿಕ ಅರ್ಥವ್ಯಾಪ್ತಿ ಲಭಿಸಿದೆ.

ಕನ್ನಡದ ಲಾವಣಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಜಗೌ ಅವರು ಲಾವಣಿಯ ಕೆಲವು ವಿಶಿಷ್ಟ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಿದ್ದಾರೆ. "ಬ್ಯಾಲೆಡ್ಡುಗಳಂತೆ ಇಲ್ಲಿ ಕುಣಿತ ಕಡ್ಡಾಯವಲ್ಲ. ಗೇಯತೆ ಅನಿವಾರ್ಯ. ಛಂದೋವೈವಿಧ್ಯ ಇಲ್ಲಿಯು ಹೆಚ್ಚುಗಾರಿಕೆ. ಒಂದು ಲಾವಣಿಯನ್ನು ಬೇರೆ ಬೇರೆ ರೀತಿಯಾಗಿ ಹಾಡಬಹುದು. ಕಥೆ ಹಠಾತ್ತನೆ ಪ್ರಾರಂಭವಾಗುತ್ತದೆ. ವರ್ಣನೆಗಳ ಭಾರವಿಲ್ಲ. ಸಾಮಾನ್ಯವಾಗಿ ಘಟನೆಗಳು ಹೆಚ್ಚಿಲ್ಲದೆ, ಕ್ರಿಯೆ ವೇಗವಾಗಿ ಗುರಿಯ ಕಡೆಗೆ ಸಾಗುತ್ತದೆ. ನಾಟಕೀಯತೆಯಿಂದ ಲಾವಣಿಗೆ ಕಳೆ ಕಟ್ಟುತ್ತದೆ. ಸಾರ ಸಂಗ್ರಹಣ ಮತ್ತು ಸಂಕ್ಷಿಪ್ತತೆ ಸಾಮಾನ್ಯ ನಿಯಮಗಳು."[10]

ವಿಶ್ವದ ಎಲ್ಲ ಭಾಗಗಳಲ್ಲಿ ಲಭ್ಯವಿರುವ ಜನಪದ ಸಾಹಿತ್ಯದಲ್ಲಿ ಲಾವಣಿಗಳದ್ದೇ ಒಂದು ಪ್ರಮುಖ ವರ್ಗ ಎಂಬುದರಲ್ಲಿ ಸಂದೇಹವಿಲ್ಲ. ಕನ್ನಡ ಜನಪದ ಸಾಹಿತ್ಯದಲ್ಲೂ ಇದೊಂದು ಸತ್ವಯುತ ಭಾಗ. ಲಾವಣಿ ಮೂಲಭೂತವಾಗಿ ಕಥನ, ಪುರಾಣ, ಐತಿಹ್ಯ ಮತ್ತು ಕಟ್ಟುಕಥೆಗಳು ಕೂಡ ಕಥನಗಳೇ. ಆದರೆ ಈ ಕಥನಗಳು ಹಾಡಿನ ಧಾಟಿ ಯಲ್ಲಿರುತ್ತವೆ. ಹಾಡಿನ ರೂಪದಲ್ಲಿರುವ ಜನಪದ ಸಾಹಿತ್ಯದಲ್ಲೂ ಎರಡು ಗುಂಪು ಗಳನ್ನು ಗುರುತಿಸಬಹುದು. ಭಾವಗೀತಾತ್ಮಕವಾದುದು ಒಂದು ಗುಂಪಾದರೆ ಕಥನಾತ್ಮಕ ಗೀತೆಗಳದು ಇನ್ನೊಂದು ಗುಂಪು.

ಕಥನಾತ್ಮಕ ಗೀತೆಗಳಲ್ಲಿ ಲಾವಣಿಗಳನ್ನೇ ಅಲ್ಲದೆ ಖಂಡಕಾವ್ಯಗಳನ್ನು, ಮಹಾ ಕಾವ್ಯಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಬಹುದು. ಒಂದೆರಡು ಘಟನೆಗಳನ್ನೊಳಗೊಂಡ ಕಥನಗೀತೆಗಳನ್ನು ಲಾವಣಿಗಳೆಂದೂ ಹಲವು ಘಟನೆಗಳ ನಿರೂಪಣೆ ಇರುವ ಗೀತೆಗಳನ್ನು ಕಾವ್ಯಗಳೆಂದೂ ಕರೆಯಬಹುದು. ಕಂಠಸ್ಥ ಸಂಪ್ರದಾಯದ ಎಲ್ಲ ಹಾಡಿನ ರೂಪದ ಕಥೆಗಳಿಗೂ ಲಾವಣಿ ಎಂಬ ಪದವನ್ನು ಬಳಸಬಹುದು. ಆದರೆ ಸುದೀರ್ಘಕಾವ್ಯಗಳನ್ನು 'ಫೋಕ್ ಎಪಿಕ್' ಅಥವಾ 'ಜನಪದ ಮಹಾಕಾವ್ಯ' ಎಂದು ಕರೆಯುವುದು ರೂಢಿ ಯಾಗಿದೆ. ಒಂದು ಸಮಗ್ರ ಜೀವನದ ಹಲವು ಘಟನೆಗಳನ್ನು ನಿರೂಪಿಸುವ ದೀರ್ಘ ಕಾವ್ಯಗಳು ಕೂಡ ನಮ್ಮಲ್ಲಿವೆ.

ಲಾವಣಿಗಳಲ್ಲಿ ಭಾವಗೀತಾತ್ಮಕ ರಚನೆಗಳು ಕೂಡ ಕಂಡುಬರುತ್ತವೆ. ಲಾವಣಿ ಗಳನ್ನು ಹಾಡುವುದರಿಂದ ಅವುಗಳ ಆಂತರಿಕ ರಚನೆ ವಸ್ತುನಿಷ್ಠವಾಗಿದ್ದರೂ ಬಾಹ್ಯ ರಚನೆಯಲ್ಲಿ ಭಾವಗೀತಾತ್ಮಕ ಲಕ್ಷಣ ಇದ್ದೇ ಇರುತ್ತದೆ. ಲಾವಣಿಕಾರರು ವಿಶಿಷ್ಟವಾದ ಜನಪ್ರಿಯ ಕಥೆಗಳನ್ನು ಆರಿಸಿಕೊಂಡು ಅಗತ್ಯ ಬಂದಾಗ ಆ ಕಥೆಯನ್ನು ಹಾಡಿನ ರೂಪಕ್ಕೆ ಪರಿವರ್ತಿಸಬಹುದು. ಆದರೆ ಹೀಗೇ ನಡೆಯಬೇಕೆಂಬ ಕಡ್ಡಾಯವಿಲ್ಲ. ಸಂಗೀತ ಮತ್ತು ಸಾಹಿತ್ಯ ಪರಸ್ಪರ ಒಡನಾಡಿಗಳಾಗಿರುವುದರಿಂದ ಅವು ಏಕಕಾಲ ದಲ್ಲಿಯೇ ಸೃಷ್ಟಿಯಾಗುತ್ತವೆ. ಆದರೆ ಲಾವಣಿಗಳಲ್ಲಿ ಸಂಗೀತಕ್ಕಿಂತ ಕಥೆಯೇ ಪ್ರಧಾನ ಎಂದು ಹೇಳಬಹುದು. ತಲೆಮಾರಿನಿಂದ ತಲೆಮಾರಿಗೆ ಹರಿಕಥೆಯ ಸ್ವರೂಪ ಬದಲಾಗು ತ್ತಿರುತ್ತದೆ. ಆದರೆ ಸಂಗೀತ ಮಾತ್ರ ಹೆಚ್ಚಿನ ಬದಲಾವಣೆಗಳಿಗೆ ಒಳಪಡದೆ ಮುಂದು ವರಿಯುತ್ತಿರುತ್ತದೆ. ಏಕೆಂದರೆ ಲಾವಣಿಗಳಿಗೆ ವಿಶಿಷ್ಟವಾದ ಛಂದಸ್ಸು ಇರುವುದರಿಂದ

ಅವು ಹಾಗೇ ಮುಂದುವರಿಯುತ್ತವೆ. ಲಾವಣಿಗಳನ್ನು ಹಾಡುವಾಗ ವಾದ್ಯ ಸಹಕಾರವೂ ಮುಖ್ಯ. ಇದು ವೃತ್ತಿಗಾಯಕರ ಲಾವಣಿಗಳ ವಿಷಯದಲ್ಲಿ ಇನ್ನೂ ಹೆಚ್ಚು. ಆದರೆ ಎಲ್ಲ ಕಥನಗೀತೆಗಳಿಗೂ ವಾದ್ಯ ಸಹಕಾರ ಇರಲೇಬೇಕೆಂಬ ಕಡ್ಡಾಯವಿಲ್ಲ. ಹೆಂಗಸರ ಕಥನ ಗೀತೆಗಳಿಗೆ ವಾದ್ಯ ಸಹಕಾರ ಅಷ್ಟೇನೂ ಆವಶ್ಯಕವಲ್ಲ.

ಲಾವಣಿ ಅನಕ್ಷರಸ್ಥ ಸಮಾಜದಲ್ಲಿ ಮೌಖಿಕ ಪರಂಪರೆಯಲ್ಲಿ ಉಳಿದು ಬರುವಂಥದು. ಆದರ ಮೂಲಕರ್ತೃವನ್ನು ಪತ್ತೆ ಹಚ್ಚುವುದು ಕಷ್ಟ. ಒಂದು ವೇಳೆ ಒಬ್ಬನೇ ಕರ್ತೃ ಇದ್ದರೂ ಕಾಲಕ್ರಮದಲ್ಲಿ ಕವಿ ಮರೆತು ಹೋಗುತ್ತಾನೆ. ಪರಂಪರಾಗತ ವಾಗಿ ಬಹಳಕಾಲ ಪ್ರಸಾರ ಹೊಂದುವುದರಿಂದ ಲಾವಣಿ ಸಾಕಷ್ಟು ಪರಿಷ್ಕಾರಕ್ಕೆ ಒಳಗಾಗುತ್ತದೆ. ಸಮಷ್ಟಿಯ ಮುದ್ರೆ ಬಿದ್ದಾಗ ಲಾವಣಿ ಜನಪ್ರಿಯ ಆಗುತ್ತದೆ. ಜನಪ್ರಿಯತೆಯನ್ನು ಪಡೆಯದ ಲಾವಣಿಗಳು ಜನಜೀವನದಲ್ಲಿ ಬಹಳ ಕಾಲ ಉಳಿಯುಲು ಸಾಧ್ಯವಿಲ್ಲ.

ಲಾವಣಿಯ ಸ್ವರೂಪವನ್ನು ದೇಜಗೌ ಅವರು ಸೂತ್ರೀಕರಿಸಲು ಪ್ರಯತ್ನಿಸಿರು ವಂತೆ ಪಾಶ್ಚಾತ್ಯವಿದ್ವಾಂಸರಲ್ಲಿ ಕೂಡ ಅನೇಕರು ಬ್ಯಾಲೆಡ್ಡನ್ನು ಹೀಗೆ ಸೂತ್ರೀಕರಿಸಲು ಯತ್ನಿಸಿದ್ದಾರೆ.

೧. ಲಾವಣಿ ಕಥನಾತ್ಮಕವಾದುದು
೨. ಲಾವಣಿ ಹಾಡಿನ ರೂಪದಲ್ಲಿರುತ್ತದೆ.
೩. ವಸ್ತು, ಶೈಲಿ ಮತ್ತು ಸ್ವರೂಪಗಳಲ್ಲಿ ಲಾವಣಿ ಜನಪದ ಮೂಲಕ್ಕೆ ಸೇರಿದುದು.
೪. ಲಾವಣಿ ವಸ್ತು ನಿಷ್ಠವಾದುದು. ಕ್ರಿಯೆ, ಸಂಭಾಷಣೆ ಹಾಗೂ ಘಟನೆಗಳ ಮೂಲಕ ಅಂತ್ಯವನ್ನು ತೀವ್ರಗತಿಯಲ್ಲಿ ತಲುಪುವಂಥದು.

ಲಾವಣಿಯಲ್ಲಿ ಕ್ರಿಯೆ, ಪಾತ್ರಪೋಷಣೆ ಮತ್ತು ವಸ್ತು ನಿರ್ವಹಣೆ ಇರುತ್ತವೆ. ಈ ಮೂರರಲ್ಲಿ ಕ್ರಿಯೆಗೆ ಹೆಚ್ಚಿನ ಮಹತ್ತ್ವವಿದೆ. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಕೊಣಮೇಗೌಡ. ಹರದೇಶಿ-ನಾಗೇಶಿ ಮುಂತಾದ ಸಂಪ್ರದಾಯದ ಲಾವಣಿಗಳನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದು. ಸ್ತ್ರೀ ಪುರುಷರು ಹಾಡುವ ಕಿರು ಲಾವಣಿಗಳು ಅಸಂಖ್ಯಾತವಾಗಿವೆ. "ಸರಳವಾದ ಶಕ್ತಿಯುತವಾದ ಸಣ್ಣ ಸಣ್ಣ ಪದ್ಯ ಗಳಿಂದ ಕೂಡಿದ ಜನಪ್ರಿಯುತೆಯೊಂದನ್ನು ಹೇಳುವ ಹಾಡುಗಳೇ ಲಾವಣಿಗಳು" (ಆಕ್ಸ್‌ಫರ್ಡ್ ನಿಘಂಟು) ಎಂಬ ಮಾತು ಕನ್ನಡದ ಸರಳ ರಚನೆಗಳಿಗೂ ಅನ್ವಯುವಾಗು ತ್ತದೆ. ಆದರೆ ಭಾರತೀಯ ಸಂಪ್ರದಾಯದಲ್ಲಿ ಸರಳವಾದ, ಸಣ್ಣ ಸಣ್ಣ ಪದ್ಯಗಳಿಂದ ಕೂಡಿದ ಲಾವಣಿಗಳೇ ಅಲ್ಲದೆ ಸಂಕೀರ್ಣ ಸ್ವರೂಪದ ದೀರ್ಘರಚನೆಗಳು ಕೂಡ ಹೇರಳ ವಾಗಿ ಲಭಿಸುತ್ತವೆ.

ಲಾವಣಿಗಳೆಲ್ಲ ಹಾಡುಗಳೇ ಎಂಬುದು ಸಾಮಾನ್ಯವಾದ ಅಭಿಪ್ರಾಯವಾದರೂ ಕೆಲವೊಮ್ಮೆ ಗದ್ಯಮಿಶ್ರಿತ ರಚನೆಗಳು ಭಾರತೀಯ ಲಾವಣಿ ಸಾಹಿತ್ಯದಲ್ಲಿ ಕಾಣಸಿಗುತ್ತವೆ.

ಕರ್ನಾಟಕ ವೃತ್ತಿಗಾಯಕ ಪರಂಪರೆಯಲ್ಲಿ ಬಹುಪಾಲು ಲಾವಣಿಗಳು ಮತ್ತು ಕಾವ್ಯಗಳಲ್ಲಿ ಹಾಡಿನಷ್ಟೇ ಪ್ರಧಾನವಾಗಿ ಪದ್ಯಗಂಧಿಯಾದ ಗದ್ಯಶೈಲಿ ಕಂಡುಬರುತ್ತದೆ. ಲಾವಣಿ ಪೂರ್ತಿ ಒಂದೇ ಮಟ್ಟು ಇರಬೇಕೆಂದು ಕೂಡ ನಿಯಮವಿಲ್ಲ. ಕೆಲವು ದೀರ್ಘ ರಚನೆಗಳಲ್ಲಿ ಒಂದೊಂದು ಅಧ್ಯಾಯದಲ್ಲಿ ಒಂದೊಂದು ಹಾಡಿನ ಮಟ್ಟು ಕಂಡುಬಂದು ವಿವಿಧ ಮಟ್ಟುಗಳಲ್ಲಿ ಬೇರೆ ಬೇರೆ ಪಲ್ಲವಿಗಳನ್ನು ಅಳವಡಿಸಿಕೊಂಡು ಹಾಡುವುದು ಕೂಡ ಕಂಡುಬರುತ್ತದೆ. ಉದಾಹರಣೆಗೆ ಕಂಸಾಳೆಯವರ ಕಾವ್ಯಗಳಲ್ಲಿ ಗದ್ಯದ ಪ್ರಾಚುರ್ಯವೇ ಹೆಚ್ಚಾಗಿ ಕಂಡುಬರುತ್ತದೆ ಕಂಸಾಳೆಯ ತಾಳಕ್ಕೆ ಅನುಗುಣವಾಗಿ ಗದ್ಯವೂ ಪದ್ಯದ ವಿನ್ಯಾಸದಲ್ಲಿ ಮೂಡಿಬರುತ್ತದೆ.

ಲಾವಣಿಗಳನ್ನೇ ಪರಿಶೀಲಿಸುವಾಗ ವಸ್ತು, ಶೈಲಿ, ಹಾಡುಗಾರಿಕೆ, ಮೇಳ, ವಾದ್ಯಗಳು ಮುಂತಾದವುಗಳ ಜೊತೆಗೆ ಅವುಗಳ ಪ್ರಾದೇಶಿಕ ಹಿನ್ನೆಲೆಯನ್ನು ಗಮನಿಸಬೇಕಾಗುತ್ತದೆ. ಕರ್ನಾಟಕದ ಅಲೆಮಾರಿ ಲಾವಣಿಕಾರರು ಬೇರೆ ಬೇರೆ ಪ್ರದೇಶಗಳಿಗೆ ಹೋಗುವಾಗ ತಮ್ಮ ವಾದ್ಯ, ಬಿರುದು, ಬಾವಲಿ ಮತ್ತು ಜೋಳಿಗೆಗಳೊಂದಿಗೆ ಪ್ರಯಾಣ ಮಾಡುವುದನ್ನು ನೋಡಬಹುದು ತೆಲುಗು ಜಂಗಮರು, ದೊಂಬಿದಾಸರು ಕೂಡ ಇದಕ್ಕೆ ಹೊರತಲ್ಲ.

ಲಾವಣಿಗಳನ್ನು ಹಾಡುವಾಗ ಸಂಗೀತದೊಂದಿಗೆ ಕುಣಿತವೂ ಪಾತ್ರವಹಿಸುತ್ತದೆ. ಚೌಡಿಕೆ ಸಂಪ್ರದಾಯದಲ್ಲಿ ಕುಣಿತ ಮತ್ತು ಸಂಗೀತ ಈ ಎರಡೂ ಸಮಾನ ಪಾತ್ರ ವಹಿಸುವುದನ್ನು ಕಾಣುತ್ತೇವೆ. ಚೌಡಿಕೆಯವರು, ಕುಣಿಯುವುದು ಮಾತ್ರವಲ್ಲದೆ ಕಥೆಗಳನ್ನು ನಾಟಕೀಯವಾಗಿ ಅಭಿನಯಿಸುತ್ತಾರೆ. ಕರಪಾಲಮೇಳವೂ ಈ ರೀತಿಯದೇ. ಸ್ತ್ರೀ ಸಮುದಾಯದ ಸುದೀರ್ಘ ಗೀತೆಗಳಲ್ಲಿ ಕೆಲವನ್ನು ವಿಶೇಷ ಸಂದರ್ಭಗಳಲ್ಲಿ ಹಾಡುತ್ತಾರೆ. ಇಂಥ ಪುಣ್ಯ ಕಥೆಗಳನ್ನು ಹಾಡುವಾಗ, ಮುಖ್ಯಗಾಯಕಿಯೊಬ್ಬಳು 'ಹಿಮ್ಮೇಳಗಾತಿ'ಯರೊಂದಿಗೆ ಕತೆಯನ್ನು ಇಡೀ ರಾತ್ರಿ ಹಾಡುವುದುಂಟು.

ಲಾವಣಿಗಳನ್ನೇ ಹಾಡಿ ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು ಪ್ರಪಂಚದ ಎಲ್ಲ ಭಾಗಗಳಲ್ಲೂ ಕಂಡುಬರುತ್ತಾರೆ. ಪಾಶ್ಚಾತ್ಯ ದೇಶಗಳ ಮಿನಿಸ್ಟ್ರಲ್, ಸ್ಕೊಮರಾಸ್ಕಿ (ರಷ್ಯಾ), ತಂತೀವಾದ್ಯದ ಅಲೆಮಾರಿ ಗಾಯಕರು (ಆಫ್ರಿಕಾ), ಬರಾಗಿ (ಅಸ್ಸಾಮ್), ಭಟ್‌ಧಾದಿ (ಪಂಜಾಬಿ), ಭೋಪ (ರಾಜಸ್ಥಾನ), ಬಾವುಲ್ (ಬಂಗಾಳಿ) ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

ಲಾವಣಿಗಳಲ್ಲಿ ಅನೇಕ ರೀತಿಯ ವಸ್ತುಗಳಿರುತ್ತವೆಂಬುದನ್ನು ಹಲವು ಜನ ವಿದ್ವಾಂಸರು ಒಪ್ಪಿದ್ದಾರೆ. ಐತಿಹಾಸಿಕ ಲಾವಣಿಗಳು ಇವುಗಳಲ್ಲಿ ಬಹು ಮುಖ್ಯ ಸ್ಥಾನವನ್ನು ಪಡೆದಿವೆ ಎಂಬುದು ನಿಜ. ಎಲ್ಲ ಐತಿಹಾಸಿಕ ಲಾವಣಿಗಳಲ್ಲೂ ವೀರರು, ಮಹಾರಾಜರೇ ನಾಯಕರಾಗಿರಬೇಕಾಗಿಲ್ಲ. ರೈತರು ನಾಯಕರಾಗಿರುವ ಸಂಗ್ಯಾ-ಬಾಳ್ಯಾದಂಥವು ಕೂಡ ಐತಿಹಾಸಿಕ ಲಾವಣಿಗಳೆಂದೇ ಪರಿಗಣಿತವಾಗಿವೆ.

ಹಾಡಿನರೂಪದ ಕಥನಾತ್ಮಕವಾದ, ವಸ್ತು, ಶೈಲಿ ಮತ್ತು ರೂಪಗಳಲ್ಲಿ ಜಾನಪದ ಮೂಲಕ್ಕೆ ಸಂಬಂಧಿಸಿದ, ಏಕ ಘಟನೆ ಅಥವಾ ಕೆಲವೇ ಘಟನೆಗಳನ್ನು ಆಧರಿಸಿದ ಪ್ರಕಾರವನ್ನು ಲಾವಣಿ ಎಂದು ಕರೆಯಬಹುದು. ಅಂಥವುಗಳಲ್ಲಿ ಐತಿಹಾಸಿಕ ಕಥಾ ವಸ್ತುವನ್ನೊಳಗೊಂಡ ಲಾವಣಿಗಳನ್ನು ಜಾನಪದದ ಒಂದು ಪ್ರಮುಖ ಚಾರಿತ್ರಿಕ ರೂಪವೆಂದು ಗುರುತಿಸಬಹುದು.

ಕಾವ್ಯಗಳು

ಲಾವಣಿಯನ್ನು ಜನಪದ ಕಾವ್ಯಪ್ರಕಾರದಿಂದ ಭಿನ್ನವಾಗಿ ಗುರುತಿಸುವುದು ಹೇಗೆ ಎಂಬ ಪ್ರಶ್ನೆ ಉದಯಿಸುತ್ತದೆ. ಏಕೆಂದರೆ ಲಾವಣಿ ಕೂಡ ಜನಪದ ಕಾವ್ಯವೇ ಆಗಿದೆ. ಆದರೆ ಪಾರಿಭಾಷಿಕವಾಗಿ ಕೆಲವು ಜನಪದ ಕಾವ್ಯಗಳನ್ನು ಲಾವಣಿ ಎಂಬ ಹೆಸರಿನಿಂದ ಕರೆಯಲಾಗಿದೆ. "ಕಂಠಸ್ಥ ಸಂಪ್ರದಾಯದಲ್ಲಿ ಉಳಿದು ಬಂದು, ಭಾವಗೀತೆಗಿಂತ ವಿಸ್ತಾರವಾದ ಕಥನಾತ್ಮಕವಾದ ವಿಶಿಷ್ಟ ಮಟ್ಟಿನಲ್ಲಿ ಹಾಡಲಾಗುವ ಸಾಂಪ್ರದಾಯಿಕ ಕಥನ ಕವನಗಳನ್ನು 'ಲಾವಣಿ'ಎಂದು ಸೌಲಭ್ಯ ದೃಷ್ಟಿಯಿಂದ ಕರೆಯಬಹುದಾದರೂ ಕೆಲವು ಸುದೀರ್ಘ ರಚನೆಗಳನ್ನು ಬೇರೊಂದು ಹೆಸರಿನಿಂದಲೇ ಗುರುತಿಸುವುದು ಉಚಿತ ವಾಗಿದೆ. ಇಂಗ್ಲಿಷ್ ಲಾವಣಿಗಳ 'ಸಂಕ್ಷಿಪ್ತತೆ' ಕನ್ನಡ ಲಾವಣಿಗಳಿಗೆ ಅನ್ವಯಿಸುವುದಿಲ್ಲ. ಹಾಡುವ ಸಂದರ್ಭಕ್ಕನುಗುಣವಾಗಿ ಕೆಲವು ಲಾವಣಿಗಳನ್ನು ಹಿಗ್ಗಿಸಿಕೊಳ್ಳುವ ಸೌಲಭ್ಯವೂ ಕನ್ನಡ ಲಾವಣಿ ಗಾಯಕರಿಗುಂಟು. ಬಹುಮಟ್ಟಿನ ಲಾವಣಿಗಳು ಸಾಕಷ್ಟು ವಿಸ್ತಾರವಾಗಿಯೇ ಇರುತ್ತವೆ. ಹೆಚ್ಚು ವಿಸ್ತಾರವಲ್ಲದೆ ಆದಷ್ಟು ಕಡಿಮೆ ಅವಕಾಶದಲ್ಲಿ ಮುಗಿಸಬಹುದಾದ ಕಥನ ಕವನಗಳನ್ನು 'ಲಾವಣಿ'ಯ ಚೌಕಟ್ಟಿಗೆ ತರುಕೊಳ್ಳ ಬಹುದು".[11]

ಈ ವಿವೇಚನೆಯಿಂದ ಲಾವಣಿ ಭಾವಗೀತೆಗಿಂತ ವಿಸ್ತಾರವಾದುದು, ಸುದೀರ್ಘ ಕಾವ್ಯಗಳಿಗಿಂತ ಚಿಕ್ಕದು ಎಂಬ ಅಭಿಪ್ರಾಯ ಉಂಟಾಗುತ್ತದೆ. 'ಕಾಳಿಂಗರಾಯ' 'ಕೆರೆಹೊನ್ನಮ್ಮ' ಮುಂತಾದ ಸುದೀರ್ಘ ರಚನೆಗಳು ವಿಶಿಷ್ಟ ಸಂದರ್ಭಗಳಲ್ಲಿ ಹಾಡು ವಂಥವು. ಅನೇಕ ಮಂದಿ ಗಾಯಕರು ಮುಮ್ಮೇಳ ಹಿಮ್ಮೇಳಗಳಲ್ಲಿ ವಾದ್ಯವಿಶೇಷ ಗಳೊಡನೆ ಈ ಕಾವ್ಯಗಳನ್ನು ಹಾಡುತ್ತಾರೆ. ಇಂಥ ವಿಸ್ತಾರವಾದ ಹಾಡ್ಗತೆಗಳನ್ನು ಜನಪದ ಖಂಡಕಾವ್ಯ. ಜನಪದ ಕಾವ್ಯ ಎಂಬ ಹೆಸರುಗಳಿಂದ ಕರೆಯಬಹುದೆಂದು ಜೀ. ಶಂ. ಪರಮಶಿವಯ್ಯ ಅವರು ಅಭಿಪ್ರಾಯಪಟ್ಟಿದ್ದಾರೆ.[12] ಲಾವಣಿ ಮತ್ತು ಖಂಡಕಾವ್ಯಗಳಿಗೆ ಇರುವ ಅಂತರವನ್ನು ಸ್ಪಷ್ಟಪಡಿಸುತ್ತಾ ಜೀ.ಶಂ.ಪ. ಅವರು ಹೀಗೆಂದಿದ್ದಾರೆ : " ಲಾವಣಿಗಳ ವಿಸ್ತೃತರೂಪ ಖಂಡಕಾವ್ಯಗಳು. ಉದ್ದೇಶದಲ್ಲಿ, ವ್ಯಾಪ್ತಿಯಲ್ಲಿ, ಎರಡರ ನಡುವೆ ಸ್ವಲ್ಪಮಟ್ಟಿನ ಅಂತರವನ್ನು ಗುರುತಿಸಬಹುದು. ಎರಡರ ಉದ್ದೇಶವೂ ಕಥೆ ಹೇಳುವುದೇ ಆದರೂ 'ಲಾವಣಿ' ಲೌಕಿಕ ಚೌಕಟ್ಟಿನಲ್ಲಿ

ನಿಲ್ಲುತ್ತದೆ. ಲೌಕಿಕ ಕಥೆಯೇ ಆದರೂ ಖಂಡಕಾವ್ಯ ಪುಣ್ಯಕಥೆ ಎನಿಸಿ ಧಾರ್ಮಿಕ ಆವರಣವನ್ನು ಪಡೆದುಕೊಳ್ಳುತ್ತದೆ."[13]

ಜನಪದ ಕಾವ್ಯಗಳಲ್ಲಿ ಐತಿಹಾಸಿಕ ಕಾವ್ಯಗಳು ಒಂದು ಪ್ರಧಾನವರ್ಗ. ಈ ಐತಿಹಾಸಿಕ ಕಾವ್ಯಗಳಲ್ಲಿ ಅಸಮಗ್ರ ಐತಿಹಾಸಿಕ ಕಾವ್ಯಗಳು, ಸಮಗ್ರ ಐತಿಹಾಸಿಕ ಕಾವ್ಯಗಳು ಮತ್ತು ಅಸ್ಪಷ್ಟ ಐತಿಹಾಸಿಕ ಕಾವ್ಯಗಳು ಎಂಬ ಮೂರು ರೂಪಗಳನ್ನು ಗುರುತಿಸಲಾಗಿದೆ.[14]

ಅಸಮಗ್ರ ಐತಿಹಾಸಿಕ ಕಾವ್ಯಗಳು

ಚಿತ್ರದುರ್ಗದ ಮದಕರಿನಾಯಕ, ಕುಮಾರರಾಮ, ಕೊಮಾರಮಲ್ಲ, ಹರಿಯಾಲ ದೇವಿ ಮುಂತಾದವರ ಬಗ್ಗೆ ಜನಪದ ಕಾವ್ಯಗಳು ಪ್ರಚಾರದಲ್ಲಿವೆ. ಇವುಗಳ ಗಾತ್ರ, ಕಥಾ ಸಂವಿಧಾನ ಮುಂತಾದವನ್ನು ನೋಡಿದಾಗ ಇವು ಅಸಮಗ್ರ ಎನಿಸುತ್ತವೆ. ಕುಮಾರರಾಮನ ಕಥೆ ಕನ್ನಡ ಐತಿಹಾಸಿಕ ಕಾವ್ಯಗಳಲ್ಲಿ ಪ್ರಾಚೀನವಾದುದು ಮಾತ್ರವಲ್ಲದೆ ಹಲವು ಅಧ್ಯಾಯಗಳಲ್ಲಿ ವಿಸ್ತಾರವಾಗಿ ಬೆಳೆದು ಜನಪದ ಮಹಾಕಾವ್ಯ ಎನಿಸಿಕೊಂಡಿದೆ. ಆದರೆ ಈ ಕಾವ್ಯದ ಭಾಗಗಳು ಬಿಡಿಬಿಡಿಯಾಗಿ ಚದುರಿಹೋಗಿ ಇದನ್ನು ಒಂದು ಅಸಮಗ್ರ ಕಾವ್ಯವನ್ನಾಗಿ ಮಾಡಿವೆ. ಮದಕರಿನಾಯಕನ ಕಥೆಯೂ ಇದೇ ಹಾದಿ ಹಿಡಿದಿದೆ. ಮದಕರಿನಾಯಕನ ಬಗ್ಗೆ ಲಭ್ಯವಿರುವ ಎಲ್ಲ ಲಾವಣಿಗಳನ್ನು ಸಂಗ್ರಹಿಸಿ ಅವುಗಳಲ್ಲಿ ಏಕಸೂತ್ರತೆಯನ್ನು ಸಾಧಿಸಲು ಪ್ರಯತ್ನ ಮಾಡಿಯೂ ಅದು ಸಮಗ್ರ ಕಾವ್ಯವಾಗಿ ರೂಪುಗೊಂಡಿಲ್ಲ. ಬೂದಿಹಾಳದ ಕೊಮಾರಮಲ್ಲನ ಕಥೆಯಲ್ಲಿ ಕೂಡ ಉದ್ದಕ್ಕೂ ಇಂಥದೇ ಅಸ್ಪಷ್ಟತೆ ಗೋಚರಿಸುತ್ತದೆ. "ನಾಡಪದಗಳು ಸಂಕಲನದಲ್ಲಿ ಪ್ರಕಟವಾಗಿರುವ 'ಹಸೇನುಸೇನ್' 'ಚಿಂತಾಮಣಿ ರಾಜಕುಮಾರ', 'ಸುಲ್ತಾನನ ದೌಲತ್ತು ಹೋದದ್ದು', 'ಕಾಳಗದ ಪದ' ಮುಂತಾದ ಕೆಲವು ಗೀತೆಗಳು ಸಂಕ್ಷಿಪ್ತವಾಗಿದ್ದರೂ ವಿಸ್ತಾರವಾದ ಲಾವಣಿಗಳ ಮುರಿದ ಚೂರುಗಳಂತೆ ತೋರುತ್ತದೆ. ಇವೆಲ್ಲ ಐತಿಹಾಸಿಕ ವಿಷಯಗಳನ್ನೊಳಗೊಂಡ ಲಾವಣಿಗಳೇ ಆಗಿದ್ದವು ಎಂಬುದು ಸ್ಪಷ್ಟವಾಗುತ್ತದೆ".[15]

ಸಮಗ್ರ ಐತಿಹಾಸಿಕ ಕಾವ್ಯಗಳು

'ಪಿರಿಯಾಪಟ್ಟಣದ ಕಾಳಗ'ವನ್ನು ಸಮಗ್ರ ಐತಿಹಾಸಿಕ ಕಾವ್ಯವೆಂದು ಕರೆಯಬಹುದು. ವಿಸ್ತಾರ, ವೈವಿಧ್ಯತೆ, ವರ್ಣನೆಗಳು, ಕಥಾವಿನ್ಯಾಸ, ಪಾತ್ರಬಾಹುಳ್ಯ ಇದನ್ನು ಒಂದು ಸಮಗ್ರ ಕಾವ್ಯವಾಗಿಸಿವೆ. ದಕ್ಷಿಣ ಕರ್ನಾಟಕದ ಮತ್ತೊಂದು ಜನಪ್ರಿಯ ಸಮಗ್ರ ವೀರಕಾವ್ಯ ಎಂದರೆ ಸರ್ಜಪ್ಪನಾಯಕನ ಕಥೆ. ಚೌಡಿಕೆಯವರಿಂದಾಗಿ ಉಳಿದು ಬಂದಿರುವ ಈ ಕಥೆ ತರೀಕೆರೆ ಪಾಳೆಯಗಾರರಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಒದಗಿಸುತ್ತದೆ. ಕನ್ನಡದಲ್ಲಿ ಜನಪ್ರಿಯವಾಗುವ ಮತ್ತೊಂದು ಸಮಗ್ರ ಜನಪದ ಕಾವ್ಯ ಮಾಗಡಿ ಕೆಂಪೇಗೌಡನ ಕಥೆ.

ಅಸ್ಪಷ್ಟ ಐತಿಹಾಸಿಕ ಕಾವ್ಯಗಳು

ಜಾನಪದದಲ್ಲಿ ಮೌಖಿಕ ಪರಂಪರೆಗೆ ಮನ್ನಣೆ ಇರುವುದರಿಂದ ಪಾಠಾಂತರಗಳಿಗೆ ಅವಕಾಶ ಹೆಚ್ಚು. ಒಂದೊಂದು ತಲೆಮಾರಿಗೂ ಪಾಠಾಂತರಗಳು ಹೆಚ್ಚುತ್ತ ಹೋಗಿ ಇವುಗಳಿಂದ ಮೂಲ ಇತಿಹಾಸವೇ ನೇಪಥ್ಯಕ್ಕೆ ಸರಿಯುವ ಸಾಧ್ಯತೆ ಇದೆ. ಮತಿಘಟ್ಟ ಕೃಷ್ಣಮೂರ್ತಿ ಅವರು ಸಂಪಾದಿಸಿರುವ 'ಲಕ್ಕಣ ಈರಣ್ಣ' (ನಾಡಪದಗಳು), ಕರೀಂಖಾನ್ ಅವರು ಸಂಪಾದಿಸಿರುವ 'ದೊಂಬರ ಚೆನ್ನಿ' (ಜನಪದ ಗೀತೆಗಳು), ಜೀ. ಶಂ. ಪರಮಶಿವಯ್ಯ ಅವರು ಸಂಪಾದಿಸಿರುವ 'ಹೊಸಮಲೆದುರ್ಗ' (ಎರಡು ಜನಪದ ಕಾವ್ಯಗಳು) ಅಸ್ಪಷ್ಟ ಐತಿಹಾಸಿಕ ಕಾವ್ಯಗಳಿಗೆ ಕೊಡಬಹುದಾದ ಉದಾಹರಣೆಗಳು. ಈ ಕಾವ್ಯಕಥೆಗಳನ್ನು ನೋಡಿದಾಗ ಯಾವ ಕಾಲದಲ್ಲೋ ನಡೆದ ಘಟನೆಗಳ ಆಧಾರದಿಂದ ಇವು ರಚನೆಯಾದಂತೆ ತೋರುತ್ತವೆ. ಇಲ್ಲೆಲ್ಲ ವಾಸ್ತವಕ್ಕಿಂತ ಕಲ್ಪನೆಯ ಅಂಶಗಳೇ ಹೆಚ್ಚಾಗಿದ್ದು ಐತಿಹಾಸಿಕ ಘಟನೆಗಳನ್ನು ಆಧಾರ ಸಹಿತವಾಗಿ ನಿರೂಪಿಸುವುದು ಅಸಾಧ್ಯವಾಗಿದೆ. ಹೀಗಾಗಿ ಇಂಥ ಕಾವ್ಯಗಳನ್ನು ಅಸ್ಪಷ್ಟ ಐತಿಹಾಸಿಕ ಕಾವ್ಯಗಳು ಎನ್ನದೆ ವಿಧಿಯಿಲ್ಲ.

ಜನಪದ ಕಾವ್ಯಪ್ರಕಾರಗಳಲ್ಲಿ ಐತಿಹಾಸಿಕ ಕಾವ್ಯಗಳು ಪ್ರಧಾನವಾಗಿದ್ದರೂ ಪೌರಾಣಿಕ ಕಾವ್ಯಗಳು, ಲೌಕಿಕ ಕಾವ್ಯಗಳು, ಅದ್ಭುತ ಕಾವ್ಯಗಳು ಮುಂತಾದವು ಹೇರಳವಾಗಿವೆ. ಈ ಕಾವ್ಯಗಳು ಬೃಹದಾಕಾರವಾಗಿ ಬೆಳೆದು ಒಂದು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರಿಣಾಮಕಾರಿ ಕಾರ್ಯವನ್ನು ನಿರ್ವಹಿಸಲು ತೊಡಗಿದಾಗ ಅಂತಹವನ್ನು 'ಮಹಾಕಾವ್ಯ' ವೆಂಬ ಹೆಸರಿನಿಂದ ಕರೆಯಬಹುದು. ಕನ್ನಡದ ಮಲೆಯ ಮಾದೇಶ್ವರ, ಮಂಟೇಸ್ವಾಮಿ ಕಾವ್ಯ, ಪಿರಿಯಾಪಟ್ಟಣದ ಕಾಳಗ ಮುಂತಾದವು ಈ ಗುಂಪಿಗೆ ಸೇರುತ್ತವೆ.

ಟಿಪ್ಪಣಿಗಳು

1. 'ಲಾವಣಿ'ಜಾನಪದ ಸಾಹಿತ್ಯದರ್ಶನ, ಸಂ. ಡಾ. ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಧಾರವಾಡ, ಪು. 219-20.
2. ಅದೇ.
3. 'A simple spirited poem in short stanzas. narrating some popular story', Oxford English Dictionary.
4. The popular Ballad is a simple narrative poem relating epic events as seen through the medium of a lyrical temperament. popular in origin or by transmission and fitted for oral circulation, "The science of Folklore." p. 173.

5. Mac Edward Leach, Standard Dictionary of Folklore, Mythology and Legend, p. 106.
6. A. B. Friedman, The Ballad Revival, p. 27.
7. ಕರ್ನಾಟಕ ಸಂಸ್ಕೃತಿ, ದೇವುಡು ನರಸಿಂಹಶಾಸ್ತ್ರಿ, ಶಾರದಾ ಪ್ರಕಟನಾಲಯ, ಬೆಂಗಳೂರು, 1961, ಪು. 18.
8. ಅದೇ, ಪು. 16
9. 'ಕವಿ ಬಾಳಗೋಪಾಲನ ಲಾವಣಿಗಳು' ಸಂ. ನಿಂಗಣ್ಣ ಸಣ್ಣಕ್ಕಿ ಗ್ರಂಥಕ್ಕೆ ಮುನ್ನುಡಿ, ಡಾ. ಎಂ. ಎಂ. ಕಲ್ಬುರ್ಗಿ.
10. ಜಾನಪದ ಅಧ್ಯಯನ, 1976, ಪು. 141.
11. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಡಾ. ಜೀ. ಶಂ. ಪರಮಶಿವಯ್ಯ ಪ್ರಸಾರಾಂಗ, ಮೈ.ವಿ.ವಿ. ಮೈಸೂರು. 1979, ಪು. 58–59.
12. ಅದೇ, ಪು. 59.
13. ಅದೇ, ಪು. 59.
14. ಅದೇ, ಪು. 304.
15. ಅದೇ, ಪು. 316-17.

ಡಾ. ಜೀ. ಶಂ. ಪರಮಶಿವಯ್ಯ

ಗದ್ಯ ಕಥನಗಳು

ವಿಶ್ವದ ಜಾನಪದ ಅಧ್ಯಯನದಲ್ಲಿ ಜನಪದ ಕಥೆಗಳಿಗೆ ಅಗ್ರಸ್ಥಾನ ದೊರೆತಿದೆ. ಜಾನಪದದ ಉಳಿದ ಪ್ರಕಾರಗಳು ನಿರ್ಲಕ್ಷಿತವಾದುವೇನೊ ಎಂಬಷ್ಟುವಂಟ್ಟಿಗೆ ಸುಪ್ರಸಿದ್ಧ ವಿದ್ವಾಂಸರೆಲ್ಲರೂ ಕಥಾಕ್ಷೇತ್ರದತ್ತಲೇ ತಮ್ಮ ವಿಶೇಷ ಒಲವನ್ನು ತೋರುತ್ತಾ ಬಂದಿದ್ದಾರೆ. ಜಾನಪದ ಸಂಬಂಧವಾದ, ಮಾನವಶಾಸ್ತ್ರ ಸಂಬಂಧವಾದ ಸಂಶೋಧನೆಗಳಿಗೆ ಜನಪದ ಕಥೆಗಳು ದೊಡ್ಡ ಸಾಮಗ್ರಿ ಎನಿಸಿವೆ. ಜಾನಪದ ಮೂಲವನ್ನು ನಿರ್ಧರಿಸುವಲ್ಲಿ ಅದರ ಪ್ರಸರಣ ಗುಣವನ್ನು ಪರಿಶೀಲಿಸುವಲ್ಲಿ ಅದರ ಐತಿಹಾಸಿಕ ಭೌಗೋಳಿಕ ರೂಪಗಳನ್ನು ಸಂಶೋಧಿಸುವಲ್ಲಿ ಇತರ ಜಾನಪದ ಪ್ರಕಾರ ಗಳಿಗಿಂತ ಕಥೆಗಳದೇ ಮೇಲುಗೈ ಆಗಿದೆ.[1]

ಹೀಗೆ ಜಾನಪದದ ಅತ್ಯಂತ ಪ್ರಮುಖ ಭಾಗವಾದ ಜನಪದ ಕಥಾ ಸಾಮಗ್ರಿಯತ್ತ ವಿದ್ವಾಂಸರ ದೃಷ್ಟಿ ಹರಿಯಲು ಮುಖ್ಯ ಕಾರಣ ಅದರ–ವಿಶ್ವವ್ಯಾಪಕ ಗುಣ.[2] ಶಿಷ್ಟ ಕಥೆಗಳ ಜೊತೆಯಲ್ಲಿ ಅವುಗಳ ಸಂಬಂಧವನ್ನು ಅರಿಯುವುದು, ಅವುಗಳ ಜೀವನ ಚರಿತ್ರೆಯನ್ನು ನಿರ್ಧರಿಸುವುದು, ಜನಜೀವನದ ಮೇಲೆ ಅವುಗಳ ಪ್ರಭಾವ ವನ್ನು ಅಭ್ಯಸಿಸುವುದು, ಅವುಗಳ ಕಲಾತ್ಮಕ ಮೌಲ್ಯಗಳನ್ನು ನಿರ್ಣಯಿಸುವುದು— ಹೀಗೆ ಹಲವು ಮುಖಗಳಲ್ಲಿ ಕತೆಗಳನ್ನು ವಿಶ್ಲೇಷಿಸುವ, ವಿಭಜಿಸುವ, ವಿಮರ್ಶಿಸುವ ಪ್ರಯತ್ನಗಳು ತುಂಬ ಯಶಸ್ವಿಯಾಗಿ ನಡೆದಿವೆ. ಸಂಗ್ರಹಿತವಾಗಿರುವ ಅಪಾರ ಮೂಲ ಸಾಮಗ್ರಿ ಸಾರ್ಥಕ ರೀತಿಯ ಅಭ್ಯಾಸಕ್ಕೆ ಸಹಾಯಕವಾಗಿದೆ.[3]

ಜಾನಪದವನ್ನು ನಾಲ್ಕು ಪ್ರಮುಖ ಅಂಗಗಳಾಗಿ Ralph Steel Boggs ಅವರು ವಿಭಜಿಸಿದ್ದಾರೆ.[4] ಸಾಹಿತ್ಯಿಕ ಬಗೆ, ಭಾಷಿಕ ಬಗೆ, ಕ್ರಿಯಾತ್ಮಕ ಬಗೆ ಹಾಗೂ

1. Alan Dundes—*The Study of Folklore*, p. 53.
2. Stith Thompson—*The Folktale*, p. VII.
3. *Ibid*—p. VII.
4. R. S. Boggs : (i) Literary type
   (ii) Linguistic type

ವೈಜ್ಞಾನಿಕ ಬಗೆಗಳೆಂದು ಜಾನಪದ ಚಿತಂವರ್ಗೀಕರಿಸುವ ಆ ವಿಭಜನೆಯಲ್ಲಿ ಕತೆಗಳು ಸಾಹಿತ್ಯಿಕ ಬಗೆಯ ಸಾಲಿನಲ್ಲಿ ಬರುತ್ತವೆ. ಗೀತೆ ಲಾವಣಿಗಳಿಗಿಂತ ಕತೆಗಳೇ ಅಪಾರ ಸಂಖ್ಯೆಯಲ್ಲಿ ಸಂಗ್ರಹಿತವಾಗಿ ಮೊದಲ ಪಂಕ್ತಿಯಲ್ಲಿ ನಿಲ್ಲುತ್ತವೆ. ಹಲವು ವರ್ಷಗಳ ತಮ್ಮ ಅಭ್ಯಾಸದ ಫಲವಾಗಿ Boggs ಅವರು ಮುಂದೆ ಅತ್ಯಂತ ಶಾಸ್ತ್ರೀಯವಾದ ರೀತಿಯಲ್ಲಿ ಸಮಗ್ರ ಜಾನಪದದ ವಿಭಜನೆಯನ್ನು ವಿವರವಾಗಿ ಪ್ರಕಟಿಸಿದರು. ಜನಪದ ಕಥೆಗಳನ್ನು ಒಂದು ಪ್ರತ್ಯೇಕ ವರ್ಗವನ್ನಾಗಿ ವಿಭಜಿಸಿ 'ಜನಪದ ಗದ್ಯ ಕಥನಗಳು (Prose Narratives) ಎಂದು ಕರೆದರು.[5] ಈ ವಿಭಾಗದಲ್ಲಿ ಗದ್ಯರೂಪದಲ್ಲಿ ನಿರೂಪಿಸಲ್ಪಡುವ ಕಂಠಸ್ಥ ಸಂಪ್ರದಾಯದ ಪುರಾಣ (Myth), ಐತಿಹ್ಯ (Legend), ಕಟ್ಟು ಕತೆಗಳು (Marchen) ಬರುತ್ತವೆ. ಗದ್ಯ ಪದ್ಯ ಮಿಶ್ರಿತವಾದ ಚಂಪೂರೀತಿಯ ಕತೆಗಳೂ ಈ ವರ್ಗದಲ್ಲಿಯೇ ಬರುತ್ತವೆ. ಲಾವಣಿಯು ಪ್ರಧಾನ ಅಂಶ ಕತೆಯೇ ಆದರೂ ಅದು ಹಾಡಿನ ರೂಪದ ಕತೆಯಾದುದರಿಂದ ಈ ವರ್ಗಕ್ಕೆ ಸೇರಿಸಿಲ್ಲ. ಕೇವಲ ಗದ್ಯದಲ್ಲಿ ಹೇಳಲ್ಪಡುವ ಕತೆಗಳನ್ನು ಸೌಲಭ್ಯದೃಷ್ಟಿಯಿಂದ ಒಂದು ಪ್ರತ್ಯೇಕ ವರ್ಗವಾಗಿ ಪರಿಗಣಿಸುವುದು ತುಂಬ ಉಚಿತವಾದುದು.

ಪುರಾಣ, ಐತಿಹ್ಯ ಹಾಗೂ ಸಾಮಾನ್ಯ ಕತೆಗಳ ನಡುವೆ ಗೆರೆ ಎಳೆದಂತೆ ಸ್ಪಷ್ಟವಾದ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗದಿದ್ದರೂ ಸ್ಥೂಲವಿಭಜನೆಗೆ ಸಾಧ್ಯತೆ ಇದ್ದೇ ಇದೆ.

ವ್ಯಕ್ತಿಗಳಿಗೆ, ಸ್ಥಳಗಳಿಗೆ, ಘಟನೆಗಳಿಗೆ ಸಂಬಂಧಿಸಿದಂತೆ ಯಾವುದೋ ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕತೆಗಳು ಐತಿಹ್ಯಗಳು.[6] ನಿಜವಾಗಿ ನಡೆದ ಘಟನೆಗಳೇ ಎಂಬಂತೆ ಪ್ರಕೃತಿಯು ಯಾವುದೋ ಅದ್ಭುತವನ್ನು ವೈಚಿತ್ರ್ಯವನ್ನು ಸಾಕ್ಷಿಯಾಗಿ ತೋರುತ್ತಾ ಆ ಎಡೆಗೆ ಕತೆಗಳು ಆರೋಪಿಸಲ್ಪಡುತ್ತವೆ. ಅಲ್ಲಿ ಯಾವುದೊ ಅತಿಶಯದ ಘಟನೆ ನಡೆದಿರಬೇಕು. ಅಥವಾ ಅಂಥದೇ ಸ್ಥಳಕ್ಕೆ ಇನ್ನೆಲ್ಲಿಯಾದರೂ ಒಂದು ಕತೆ ಆರೋಪಿತವಾಗಿರಬೇಕು. ಐತಿಹ್ಯಗಳು ಅನೇಕ ಸಂದರ್ಭಗಳಲ್ಲಿ ಕಾಲ್ಪನಿಕವೇ ಆದರೂ ಐತಿಹಾಸಿಕ ಸತ್ಯ ಕೆಲವು ಕಡೆಗಳಲ್ಲಾದರೂ ಇದ್ದೇ ಇರುತ್ತದೆ. ಯಾವುದೋ ವಾಸ್ತವಿಕ ಘಟನೆಯ ಆಧಾರದ ಮೇಲೆಯೇ ಈ ಕತೆಗಳು

(iii) Scientific type
(iv) Action type
—*Standard Dictionary of Folklore*, P. 690.

ವಿವರವಾದ ಚರ್ಚೆಗೆ, ನೋಡಿ : ಡಾ. ಹಾ. ಮಾ. ನಾಯಕ, 'ಜಾನಪದ ವೈಜ್ಞಾನಿಕ ಅಧ್ಯಯನ'. ಹೊನ್ನ ಬಿತ್ತೇವು ಹೊಲಕೆಲ್ಲ, ಪು. ೪೯೭.

5. *Ibid*—Vol. II, P. 1138.
6. Kenneth and Mary Clark—*Introducing Folklore*, p. 24.

ಬೆಳೆದುಕೊಂಡಿವೆ ಎನ್ನುವುದು ಕಂಡುಬರುತ್ತದೆ. ಅದಕ್ಕೆ ಪ್ರಕೃತಿಯ ಯಾವುದೋ ವಿಲಕ್ಷಣ ಸ್ವರೂಪ ಸಾಕ್ಷಿಯಾಗಿರುತ್ತದೆ.

ಚನ್ನಪಟ್ಟಣದ ಸಮೀಪದ 'ದೊಂಬನ ಕೊಡುಗೆ'ಗೆ ಸಂಬಂಧಿಸಿದ ಕತೆ ಒಂದು ಐತಿಹ್ಯ. ದೊಂಬನೊಬ್ಬನು ಯಾವುದೋ ಸಂದರ್ಭದಲ್ಲಿ ಒಂದು ಅದ್ಭುತ ಸಾಹಸವನ್ನು ತೋರಿದ ಪ್ರಸಂಗ ಆ ಪ್ರದೇಶಕ್ಕೆ ಆರೋಪಿಸಲ್ಪಟ್ಟಿದೆ. ರೆಕ್ಕೆಯನ್ನು ಕಟ್ಟಿಕೊಂಡು ತಾನು ಎಷ್ಟು ವಿಸ್ತಾರವಾದ ಪ್ರದೇಶಕ್ಕೆ ಹಾರಬಹುದೋ ಅಷ್ಟು ಪ್ರದೇಶವನ್ನು ತನಗೆ ಬಿಟ್ಟುಕೊಡುವಂತೆ ಒಂದು ಷರತ್ತನ್ನು ಒಡ್ಡುತ್ತಾನೆ. ಅದರಂತೆ ಅವನು ಹಾರಿ ವಿಸ್ತಾರವಾದ ಭೂಪ್ರದೇಶವನ್ನು ಪಾಳೆಯಗಾರನಿಂದ ಬಳುವಳಿಯಾಗಿ ಪಡೆಯುತ್ತಾನೆ. ಆ ಪ್ರದೇಶ ಇಂದಿಗೂ ಬರಿದಾಗಿಯೇ ಉಳಿದಿದೆ. ದೊಂಬನ ಕೊಡುಗೆಯನ್ನು ಯಾರೂ ಆಕ್ರಮಿಸಿಕೊಂಡು ವ್ಯವಸಾಯ ಮುಂತಾದುವನ್ನು ಮಾಡಿಲ್ಲ. ಆ ಪ್ರದೇಶ ಹಾಳಾಗಿ ಉಳಿದಿರುವುದಕ್ಕೆ ಹೇಳುವ ಈ ಕತೆ ಆ ಎಡೆಗೆ ಸಂಬಂಧಿಸಿದ ಒಂದು ಐತಿಹ್ಯ. ಆದ್ದರಿಂದ ಐತಿಹ್ಯಗಳು ಗೊತ್ತಾದ ಪ್ರದೇಶದಲ್ಲಿ ನಿಜವಾಗಿ ನಡೆಯಿತು ಎಂದು ಹೇಳಲಾದ ಘಟನೆಗಳನ್ನು ಹೇಳುತ್ತವೆ.[7] ಆದರೆ ಆ ಘಟನೆ ಎಂದು ನಡೆಯಿತು ಎಂದು ನಿರ್ಧರಿಸಲು ಆಧಾರಗಳು ಇರುವುದಿಲ್ಲ. 'ದೊಂಬನ ಕೊಡುಗೆ'ಗೆ ಸಂಬಂಧಿಸಿದ ಕತೆ ಒಂದು ಒಳ್ಳೆಯ ಐತಿಹ್ಯ. ಈ ಕತೆ ಯಾವುದೋ ಒಂದು ಪ್ರದೇಶ ಏಕೆ ಬರಿದಾಗಿ ಉಳಿದಿದೆ ಎಂಬುದನ್ನು ವಿವರಿಸಲು ಪ್ರಯತ್ನಿಸುತ್ತದೆ. ಈ ದೃಷ್ಟಿಯಿಂದ ಇದು ವಿವರಣಾತ್ಮಕ ಕತೆಯೂ (Etiological tale) ಆಗುತ್ತದೆ. ಬಹುಪಾಲು ಐತಿಹ್ಯಗಳು ವಿವರಣಾತ್ಮಕ ಕತೆಗಳೇ ಆಗಿ ನಿಲ್ಲುತ್ತವೆ.

ಬಂಡೆಯೊಂದರ ಮೇಲಿನ ವಿಚಿತ್ರ ಗುರುತು ಏಕಾಯಿತು, ಅಕ್ಕತಂಗಿಯರ ಕೊಳಗಳಲ್ಲಿ ಅಕ್ಕನ ಕೊಳದಲ್ಲಿ ಉಪ್ಪು ನೀರು ಬಂದು ತಂಗಿಯ ಕೊಳದಲ್ಲಿ ಸಿಹಿ ನೀರು ಬರಲು ಕಾರಣವೇನು? ಹೀಗೆ ವಿವರಣೆಯನ್ನು ನಿರೀಕ್ಷಿಸುವ ಕತೆಗಳನ್ನು ವಿವರಣಾತ್ಮಕ ಕತೆಗಳೆಂದು ವರ್ಗೀಕರಿಸಲಾಗುತ್ತದೆ.[8] ಆದರೆ ಎಲ್ಲ ಐತಿಹ್ಯಗಳಿಗೂ ಅದ್ಭುತ ಅಥವಾ ವೈಚಿತ್ರ್ಯಗಳ ಆರೋಪ ಅನಗತ್ಯ. ಪ್ರಕೃತಿಯ ಯಾವ ವೈಲಕ್ಷಣ್ಯವೂ ಇಲ್ಲದ ಯಾವುದೋ ಒಂದು ವಸ್ತುವನ್ನು ತೋರಿ ಕತೆಯನ್ನು ಹೇಳಿದಾಗಲೂ ಅದು ಐತಿಹ್ಯವೇ.

ಹೊನಬಿಲ್ಲ ಚಿನಬಿಲ್ಲನ ಕತೆ, ಧರ್ಮಪುರಿಯ ನೀರಗಂಟಿ ಧರ್ಮನ ಕತೆ ಇವು ಯಾವುದೋ ಕೆರೆಯನ್ನು ತೋರಿ ಹೇಳುವ ಕತೆಗಳು.[9] ಆ ಕೆರೆಗಳು ಇರುವವರೆಗೆ ಆ

---

7. 'This form of tale purports to be an account of an extraordinary happening believed to have actually occurred—'
—Stith Thompson, *Folktale*, P. 5.

8. *Ibid* p. 8.

9. ಜೀ. ಶಂ. ಪರಮಶಿವಯ್ಯ—ಜನಪದ ಸಾಹಿತ್ಯ ಸಮೀಕ್ಷೆ.

ಕತೆಗಳೂ ಇರುತ್ತವೆ. ಅವು ಕಣ್ಮರೆಯಾದರೆ ಆ ಕತೆಗಳೂ ಕರಗಿ ಹೋಗುವುದುಂಟು.[10] ಪ್ರಕೃತಿಯಲ್ಲಿ ಕೆಲವು ಅಸ್ಥಿರ ವಸ್ತುಗಳಿಗೆ ಆರೋಪಿಸಲ್ಪಡುವ ಕತೆಗಳು ಬಹಳ ಕಡಿಮೆ ಯೆಂದೇ ಹೇಳಬೇಕು. ಕಟ್ಟಡಗಳಿಗೆ, ಮರಗಳಿಗೆ ಆರೋಪಿಸಲ್ಪಡುವ ಕತೆಗಳು ಆ ವಸ್ತು ನಾಶವಾದ ಕೂಡಲೇ ತಾವೂ ಬಹಳ ಬೇಗ ಮರೆತುಹೋಗುತ್ತವೆ. ಇಂಥ ಕತೆಗಳನ್ನು ಅಸ್ಥಿರ ಐತಿಹ್ಯಗಳೆಂದು ಕರೆಯಬಹುದು. ನದಿ ಸಮುದ್ರ ಸರೋವರಗಳಿಗೆ, ಬೆಟ್ಟಗುಡ್ಡಗಳಿಗೆ, ಹೊಲ ಬಯಲುಗಳಿಗೆ, ಆರೋಪಿಸಿ ಹೇಳುವ ಕತೆಗಳು ಬಹಳ ಕಾಲ ಉಳಿಯುತ್ತವೆ. ಇವುಗಳನ್ನು ಸ್ಥಿರ ಐತಿಹ್ಯಗಳೆಂದು ಹೇಳಬಹುದು. ಕಾಲನ ದವಡೆಯಲ್ಲಿ ಸಹಸ್ರಾರು ಐತಿಹ್ಯಗಳು ಹುಟ್ಟಬಹುದು, ಕಣ್ಮರೆಯಾಗಬಹುದು. ಆದರೆ ಕೆಲವು ಪ್ರಸಿದ್ಧ ಆಶಯಗಳು ಮಾತ್ರ ಒಂದಲ್ಲೊಂದು ಎಡೆಯಲ್ಲಿ ಮತ್ತೆ ತಲೆಯೆತ್ತಿಕೊಳ್ಳುತ್ತವೆ. ಅವಕ್ಕೆ ಪ್ರಕೃತಿ ಒಂದು ನಿಮಿತ್ತ ಮಾತ್ರ. ಕೆಲವು ಐತಿಹ್ಯಗಳು ಕೆಲವು ಗೊತ್ತಾದ ಪ್ರದೇಶಗಳಿಗೆ ಮಾತ್ರ ಆರೋಪಿಸಲ್ಪಡುತ್ತವೆ. ಅವುಗಳ ವ್ಯಾಪ್ತಿ ಬಹಳ ಕಡಿಮೆ. ಚುಂಚನಗಿರಿಯ ಸಮೀಪದ ಮೇದರ ಕಲ್ಲು ಮೇದನೊಬ್ಬನಿಗೆ ಸಂಬಂಧಿಸಿದ ಒಂದು ದುರಂತ ಚಿತ್ರವನ್ನು ನೀಡುತ್ತದೆ.[11] ಇಂಥ ಕತೆ ಬೇರೆ ಇನ್ನೆಲ್ಲೂ ಲಭ್ಯವಾಗದೆ ಒಂದೇ ಕಡೆಯಲ್ಲಿ ನಿಲ್ಲುವುದರಿಂದ ಇಂಥ ಐತಿಹ್ಯಗಳನ್ನು ಸ್ಥಳೀಯ ಐತಿಹ್ಯಗಳೆಂದು (Local legends) ಕರೆಯಬಹುದು. ಆದರೆ ಕೆಲವು ಐತಿಹ್ಯಗಳು ಸಂಚಾರೀ ಗುಣವನ್ನು ಪಡೆದಿರುತ್ತವೆ. ಒಂದೇ ಬಗೆಯ ಕತೆಗಳು ಹಲವು ಪ್ರದೇಶ ಗಳಲ್ಲಿ ದೊರೆಯುತ್ತವೆ. 'ಕೆರೆಗೆ ಹಾರ'ದ ಆಶಯ (Motif) ಭಾರತದ ಅನೇಕ ಕಡೆ ಗಳಲ್ಲಿ ಕೆರೆಗಳಿಗೆ ಸಂಬಂಧಿಸಿದಂತೆ ದೊರೆಯುತ್ತದೆ. ಈ ರೀತಿಯ ಐತಿಹ್ಯಗಳು ಸಂಚಾರೀ ಐತಿಹ್ಯಗಳು (Migratory legends). ಯೂರೋಪಿನ ಅನೇಕ ಕಡೆ ಗಳಲ್ಲಿ ಕಟ್ಟಡಗಳಿಗೆ ಶಿಶುಬಲಿಯನ್ನು ಕೊಟ್ಟ ಹಿನ್ನೆಲೆಯಲ್ಲಿ ಐತಿಹ್ಯಗಳು ಹುಟ್ಟಿ ಕೊಂಡಿವೆ. ಹಳೆಯ ದೈತ್ಯ ಸೌಧಗಳ ಅಸ್ತಿವಾರವನ್ನು ಅಗೆದು ನೋಡಿದಾಗ ಅಸ್ಥಿಪಂಜರಗಳೂ ದೊರೆತಿವೆ. ಇಂಥ ಸಂದರ್ಭದಲ್ಲಿ ಬೇಕಾದಷ್ಟು ಐತಿಹ್ಯಗಳು ಬೇರೆ ಬೇರೆ ಪ್ರದೇಶಗಳಲ್ಲಿ ಹುಟ್ಟಿಕೊಳ್ಳುತ್ತವೆ.

ಸ್ವರೂಪದಲ್ಲಿ ಐತಿಹ್ಯಗಳು ಬಹಳ ಚಿಕ್ಕವು. ಒಂದು ಅಥವಾ ಎರಡು ಆಶಯ ಗಳಷ್ಟೇ ಅದರ ವ್ಯಾಪ್ತಿ. ತಾವು ಹುಟ್ಟಿದ ನಿಸರ್ಗಕ್ಕೆ ಅಂಟಿಕೊಂಡಿರುವುದು ಅವುಗಳ ವಿಶೇಷ ಲಕ್ಷಣ.[12] ಅನೇಕ ಕಟ್ಟಡಗಳು ಕೆರೆಗಳು ಸೇತುವೆಗಳು ಬೆಟ್ಟಗುಡ್ಡಗಳು ಕೆರೆ ಕಟ್ಟೆ ಬಾವಿ ಸರೋವರಗಳಿಗೆ ಐತಿಹ್ಯಗಳಿರುವಂತೆಯೇ ದೃಷ್ಟಿ ಭ್ರಮೆಗೆ ಸಂಬಂಧಿಸಿದ, ಶ್ರವಣ ಭ್ರಮೆಗೆ ಸಂಬಂಧಿಸಿದ, ಯುದ್ಧಗಳಿಗೆ ಸಂಬಂಧಿಸಿದ ಅನೇಕ ಐತಿಹಾಸಿಕ ಘಟನೆಗಳಿಗೆ, ಸ್ಮಾರಕಗಳಿಗೆ ಸಂಬಂಧಿಸಿದ ಐತಿಹ್ಯಗಳೂ ಇರಬಹುದು.

---

10. Alexander H. Krappe—*The Science of Folklore*, p. 70.
11. ಜೀ. ಶಂ. ಪರಮಶಿವಯ್ಯ—ಮೇದರಕಲ್ಲು ಮತ್ತು ಇತರ ಪ್ರಬಂಧಗಳು. ಪು. 13.
12. Alexander H. Krappe—*The Science of Folklore*, p. 70.

ಹೀಗೆ ಜನಪದ ಕಥೆಗಿಂತ ಚಿಕ್ಕದಾದ ಗದ್ಯಾತ್ಮಕವಾದ ಕೆಲವಾದರೂ ಒಂದು ನಿರ್ದಿಷ್ಟ ಸ್ಥಳಕ್ಕೆ ಆರೋಪಿಸಲ್ಪಡುವ ವಿವರಣಾತ್ಮಕವಾದ, ಊರು ಅಥವಾ ವ್ಯಕ್ತಿಗಳ ಹೆಸರಿಗೆ ಸಂಬಂಧಿಸಿದಂತೆ ನಿಷ್ಪತ್ತ್ಯಾತ್ಮಕವಾದ ಕತೆಗಳು ಐತಿಹ್ಯಗಳು.[13]

ಅನೇಕ ಐತಿಹ್ಯಗಳು ದೇಶಾಂತರ ಖಂಡಾಂತರ ಸಂಚಾರವನ್ನು ಕೈಗೊಳ್ಳಬಹುದು. ಜರ್ಮನಿಯಲ್ಲಿ Wander sage ಎಂದು ಕರೆಯಲ್ಪಡುವ ಈ ಐತಿಹ್ಯಗಳು ವಿಶ್ವದಾದ್ಯಂತ ಲಭ್ಯವಾಗುತ್ತವೆ. ಜನಪದ ಕಥೆಗಳೂ ಇಂಥ ಸಂಚಾರೀ ಗುಣವನ್ನೇ ಪಡೆದರೂ ಯಾವ ನಿರ್ದಿಷ್ಟ ವ್ಯಕ್ತಿಗಾಗಲೀ, ಸ್ಥಳಕ್ಕಾಗಲೀ ಅವು ಆರೋಪಿಸಲ್ಪಡುವುದಿಲ್ಲ; ಆದರೆ ಐತಿಹ್ಯಗಳು ಕೆಲವೇ ಪಾಠಾಂತರಗಳಿಂದ ಕೂಡಿ ಬೇರೆ ಬೇರೆ ಪ್ರದೇಶಗಳಲ್ಲಿ 'ಸ್ಥಳೀಯ' ಎನ್ನುವಂತೆ ಹೊಂದಿಕೊಂಡು ಸಾಕಷ್ಟು ಆಕರ್ಷಕ ಕಥೆಗಳಾಗಿ ಲಭ್ಯವಾಗುತ್ತವೆ.

ಐತಿಹ್ಯಗಳಿಗೂ ಪುರಾಣಗಳಿಗೂ ಅನೇಕ ಸಂದರ್ಭಗಳಲ್ಲಿ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗುತ್ತದೆ.[14] ದೇವತೆಗಳನ್ನೋ ಸಾಂಸ್ಕೃತಿಕ ವೀರರನ್ನೋ ಧಾರ್ಮಿಕ ವ್ಯಕ್ತಿಗಳನ್ನೋ ತನ್ನ ಪ್ರಧಾನ ಪಾತ್ರಗಳನ್ನಾಗಿ ಪಡೆದು ಕೆಲವು ಸಂದರ್ಭಗಳಲ್ಲಿ ವಿವರಣಾತ್ಮಕತೆ ಅದರ ಲಕ್ಷಣವಾಗಿರುವುದೂ ಉಂಟು. ರಾಮಲಕ್ಷ್ಮಣರು, ಪರಶುರಾಮ, ಪಾಂಡವರು ಮುಂತಾದವರಿಗೆ ಸಂಬಂಧಿಸಿದ ಅನೇಕ ಐತಿಹ್ಯಗಳು ಭಾರತದ ನಾನಾ ಕಡೆಗಳಲ್ಲಿ ಲಭ್ಯವಾಗುತ್ತವೆ. ಕರ್ನಾಟಕದಲ್ಲಂತೂ ಇಂಥ ಐತಿಹ್ಯಗಳು ಹೆಚ್ಚು ಸಂಖ್ಯೆಯಲ್ಲಿಯೇ ಲಭ್ಯವಾಗುತ್ತವೆ. ಚುಂಚನಕಟ್ಟೆಯ ಸೀತೆಯ ವಂಡು, ಮೇಲುಕೋಟೆಯ ಧನುಷ್ಕೋಟಿ, ಶಿವಮೊಗ್ಗ ಜಿಲ್ಲೆಯ ರಾಮತೀರ್ಥ ಮುಂತಾದ ಕಡೆಗಳಲ್ಲಿ ರಾಮಾಯಣ ಸಂಬಂಧವಾದ ಐತಿಹ್ಯಗಳನ್ನು ಕಾಣಬಹುದು. ಪಾಂಡವಪುರದ ಕುಂತಿಬೆಟ್ಟ, ನಾಗಮಂಗಲ ತಾಲ್ಲೂಕಿನ ಆಲತಿಗಿರಿ ಮುಂತಾದ ಕಡೆಗಳಲ್ಲಿ ಭಾರತ ಸಂಬಂಧವಾದ ಐತಿಹ್ಯಗಳು ದೊರೆಯುತ್ತವೆ. ತೀರ್ಥಹಳ್ಳಿಯ ಬಳಿಯ ರಾಮತೀರ್ಥ ಪರಶುರಾಮನಿಗೆ ಸಂಬಂಧಿಸಿದ ಕತೆಯನ್ನು ಸಾರುತ್ತದೆ. ಕರ್ನಾಟಕದ ಎಲ್ಲ ಕಡೆಗಳಲ್ಲೂ ಹೆಜ್ಜೆಹೆಜ್ಜೆಗೂ ಇಂಥ ಕತೆಗಳು ಹೇರಳವಾಗಿ ಸಿಗುತ್ತವೆ.[15]

ಸ್ಥಳದೇವತೆಗಳಿಗೆ ಸಂಬಂಧಿಸಿದ ಸುಂದರ ಐತಿಹ್ಯಗಳು ಪ್ರತಿಯೊಂದು ಗ್ರಾಮದಲ್ಲೂ ಲಭ್ಯವಾಗುತ್ತವೆ. ದೇವತೆಗಳು ಬಡವರ ಮದುವೆಗೆ ಒಡವೆಗಳನ್ನು ತಂದಿರಿಸಿ ಕಾರ್ಯ ಮುಗಿದ ಮೇಲೆ ಮತ್ತೆ ಅವನ್ನು ಹಿಂದಕ್ಕೆ ತೆಗೆದುಕೊಳ್ಳುವುದು, ಯಾರೋ ಹಂಗಿಸಿ ನುಡಿದಾಗ ಮತ್ತೆ ಎಂದೆಂದಿಗೂ ಕಾಣಿಸಿಕೊಳ್ಳದಿರುವುದು—ಇಂಥ

---

13. 'Local legends are short, Etiological, Etymological' —*Standard Dictionary of Folklore*, p. 640.

14. *Ibid.*, p. 612.

15. ಜನಪದ ಸಾಹಿತ್ಯ ಸಮೀಕ್ಷೆ, ಪು. ೧೭.

ಕತೆಗಳನ್ನು ಯಾರೋ ದೇವತೆಗೆ ಸಂಬಂಧಿಸಿದಂತೆ ಹೇಳಿದರೂ ಐತಿಹ್ಯದ ಲಕ್ಷಣ ಅದರಲ್ಲಿ ಇದ್ದೇ ಇದೆ. ನಿರ್ದಿಷ್ಟವಾಗಿ ಒಂದು ಸ್ಥಳವನ್ನೋ ದೇವಾಲಯವನ್ನೋ ದೇವತೆಯನ್ನೋ ತೋರಿ ಅಂಥ ಕತೆಗಳನ್ನು ಹೇಳಿದಾಗ ಅವುಗಳನ್ನು ಪುರಾಣಗಳ ಗುಂಪಿಗಾದರೂ ಸೇರಿಸುವ ಐತಿಹ್ಯಗಳ ಗುಂಪಿಗಾದರೂ ಸೇರಿಸುವ ಸಾಧ್ಯತೆ ಇದೆ.

'ಪುರಾಣ' ಎಂಬ ಮಾತು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೆಚ್ಚು ಗೊಂದಲಕ್ಕೆ ಎಡೆಮಾಡಿಕೊಡುವ ಪದ. ಬಹಳ ದಿನಗಳಿಂದ ಅನೇಕ ವಿಧದಲ್ಲಿ ಚರ್ಚಿತವಾಗಿ ಬೇರೆ ಬೇರೆ ಅರ್ಥಗಳಲ್ಲಿ ಆ ಮಾತು ಪ್ರಯೋಗವಾಗುತ್ತಿದೆ. ಜನಪದ ಕಥೆಗಳಿಗೆ ಸೀಮಿತವಾದಂತೆ ಆ ಮಾತನ್ನು ಎಚ್ಚರಿಕೆಯಿಂದಲೇ ಬಳಸಬೇಕಾಗುತ್ತದೆ. ಇತಿಹಾಸಪೂರ್ವಯುಗಕ್ಕೆ ಸಂಬಂಧಿಸಿದುದು ಎಂದು ಭಾವಿಸಲಾದ, ವಿಶ್ವಸೃಷ್ಟಿ ಜನಾಂಗಗಳ ಸೃಷ್ಟಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಕತೆಗಳೂ ಪುರಾಣಗಳೇ. ಹಾಗೆಯೇ ಧಾರ್ಮಿಕ ವ್ಯಕ್ತಿಗಳಿಗೆ ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಕತೆಗಳೂ ಧಾರ್ಮಿಕ ನಂಬಿಕೆಗಳನ್ನು ಸಾರುವ ಘಟನೆಗಳೂ ಜನಪ್ರಿಯ ಪುರಾಣಗಳೇ. 'ಪುರಾಣಗಳು ವಿಜ್ಞಾನ ಪೂರ್ವಯುಗದ ವಿಜ್ಞಾನ' ಎಂದು ಸರ್. ಜಿ. ಎಲ್. ಗೊಮ್ಮೆ ಯವರು ಹೇಳುತ್ತಾರೆ.[16] ಧಾರ್ಮಿಕ ಚೌಕಟ್ಟು ಪವಿತ್ರ ಆವರಣ ಪುರಾಣಗಳ ನೆಲೆಗಟ್ಟು. ಹಾಗೆಯೇ ಅದು ನಿಸರ್ಗದ ರಹಸ್ಯಗಳನ್ನು ವಿವರಿಸುವ ಸ್ವರೂಪವನ್ನು ಪಡೆದುಕೊಂಡು ಮೇಲಿನ ಹೇಳಿಕೆಗೆ ಪೂರಕವಾಗುತ್ತದೆ. ಮೊದಲಿಗೆ ವಿವರಣಾತ್ಮಕ ಕತೆಯೋ ವೀರರ ಕತೆಯೋ ಆಗಿದ್ದು ಪರಿಷ್ಕಾರಗೊಂಡು ಕ್ರಮೇಣ ಪುರಾಣಗಳಾಗಿರುವ ಕತೆಗಳೂ ಉಂಟು.[17]

ಅನೇಕ ಜನಪದ ಕಥೆಗಳು ಗ್ರಿಮ್ ಸಹೋದರರು ಹೇಳುವಂತೆ ಪುರಾಣದ ಒಡೆದ ಚೂರುಗಳು. ಹಾಗೆಯೇ ಪುರಾಣಗಳೂ ಜನಪದ ಕಥೆಗಳಿಂದ ಆಶಯಗಳನ್ನು ಧಾರಾಳವಾಗಿ ಸ್ವೀಕರಿಸಿ ರೂಪಗೊಂಡಿವೆ. ಆರ್ಯ ಪುರಾಣಗಳಿಂದ ಜನಪದ ಕಥೆಗಳು ಹುಟ್ಟಿದುವು ಎಂಬ ಸಿದ್ಧಾಂತದಂತೆಯೇ ನೈಸರ್ಗಿಕ ಕ್ರಿಯೆಗಳ ಸಾಂಕೇತಿಕ ಹಿನ್ನೆಲೆಯನ್ನು ಅನೇಕ ಪುರಾಣಗಳು ಸಾರುತ್ತವೆ ಎಂಬ ಅಂಶವನ್ನು ಅನೇಕರು ಚರ್ಚಿಸಿದ್ದಾರೆ.[18] ಪ್ರತಿಯೊಂದು ಜನಾಂಗವೂ ಧರ್ಮವೂ ತನಗೆ ಸಂಬಂಧಿಸಿದ ಪುರಾಣಗಳನ್ನು ಅಪಾರ ಸಂಖ್ಯೆಯಲ್ಲಿ ಪಡೆದಿರುತ್ತವೆ. ಕೆಲವು ಶಿಷ್ಟ ಧರ್ಮಗಳಲ್ಲಿ ಪುರಾಣಗಳು ಪರಿಷ್ಕಾರ ಗೊಂಡು ಗ್ರಂಥಸ್ಥವಾಗಿರಬಹುದು. ಆದಿವಾಸಿಗಳಲ್ಲಿ ಅನಕ್ಷರಸ್ಥ ಜನಾಂಗಗಳಲ್ಲಿ ಜನಪದ ಕಥೆಗಳಿಗೂ ಪುರಾಣಗಳಿಗೂ ಹೆಚ್ಚು ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗುತ್ತದೆ.

---

16. *Standard Dictionary of Folklore*, p. 778.
17. Stith Thompson—*The Folktale*, p. 15.
18. ಈ ಸಂಬಂಧವಾದ ವಿವರವಾದ ಚರ್ಚೆಗೆ ನೋಡಿ : *The Study of Folklore* p. 57, *The Folklore*, p. 367.

ಸಾಮಾನ್ಯ ಮಾನವ ವೀರರು ತಮ್ಮ ತ್ಯಾಗ ಬಲಿದಾನ ಅಥವಾ ಸಾಹಸಗಳಿಂದ ಆರಾಧ್ಯ ವ್ಯಕ್ತಿಗಳೆನಿಸಿ ಪುರಾಣಗಳ ನಾಯಕ ನಾಯಕಿಯರಾಗಿರುತ್ತಾರೆ. ಶ್ರವಣಬೆಳಗೊಳದ ಗುಳಕಾಯಜ್ಜಿಗೂ ಜೈನದೇವತೆಯೊಂದಕ್ಕೂ ಸಂಬಂಧವನ್ನು ಕಲ್ಪಿಸಲಾಗಿದೆ. ಗೊಮ್ಮಟಮೂರ್ತಿಯನ್ನು ಭವ್ಯವಾಗಿ ಕಡೆಸಿದ ಮೇಲೆ ಚಾವುಂಡರಾಯನಿಗೆ ಸಹಜವಾಗಿ ಅಹಂಕಾರ ಮೂಡಿತು. ಅದರ ಫಲವಾಗಿ ಆ ಮಹಾಮೂರ್ತಿಗೆ ಮಾಡಿದ ಅಭಿಷೇಕ ಪೂರ್ಣವಾಗಿ ಮೂರ್ತಿಯ ಶರೀರಕ್ಕೆ ಆಗುತ್ತಿರಲಿಲ್ಲ. ಅಜ್ಜಿಯೊಬ್ಬಳು ಬಿಳಿಯ ಗುಳಕಾಯಿಯ ಹೋಳಿನಲ್ಲಿ ಅಭಿಷೇಕವನ್ನು ತಂದು ಚಾವುಂಡರಾಯನ ಬಳಿಗೆ ಬಂದು ಗೊಮ್ಮಟಮೂರ್ತಿಗೆ ಅಭಿಷೇಕ ಮಾಡಲು ತನಗೆ ಅವಕಾಶ ಕೊಡಬೇಕೆಂದು ಕೇಳಿಕೊಂಡಳು. ಚಾವುಂಡರಾಯ ಔದಾಸೀನ್ಯ ದಿಂದಲೇ ಅನುಮತಿ ನೀಡಿದ. ಮುದುಕಿ ಅಭಿಷೇಕ ಮಾಡಿದಾಗ ಮೂರ್ತಿಯ ದೇಹವೆಲ್ಲಾ ಸಂಪೂರ್ಣವಾಗಿ ಅಭಿಷೇಕದಿಂದ ತುಂಬಿಹೋಯಿತು. ಗೊಮ್ಮಟಮೂರ್ತಿ, ಇಂದ್ರಗಿರಿ ತಪ್ಪಲಿನ ಊರು ಎಲ್ಲವೂ ಬೆಳ್ಳಗೆ ತೋರಿದುವು ಆದ್ದರಿಂದಲೇ ಅದು ಬೆಳುಗೊಳವಾಯಿತು. ಬಿಳಿಯ ಗುಳ್ಳದಲ್ಲಿ ಅಭಿಷೇಕವನ್ನು ತಂದಿದ್ದರಿಂದಲೂ ಈ ಹೆಸರು ಬಂದಿರಬಹುದೆಂದು ಊಹಿಸಲಾಗಿದೆ. ಅಜ್ಜಿಯ ರೂಪಿನಲ್ಲಿ ಬಂದಿದ್ದವಳು ಪದ್ಮಾವತಿದೇವಿಯೆಂದು ನಂಬಲಾಗಿದೆ. ಸಾಮಾನ್ಯ ಐತಿಹ್ಯವೊಂದಕ್ಕೆ ದೇವತೆಯ ಸಂಬಂಧವನ್ನು ಕಲ್ಪಿಸಿ ಪುರಾಣವಾಗಿ ಪರಿವರ್ತಿಸಲಾಗಿದೆ. ಸ್ಥಳ ಸಂಬಂಧವಾದ ಇಂಥ ಅನೇಕ ಕತೆಗಳು ಪುರಾಣಗಳಾಗುತ್ತವೆ.

ಪುರಾಣಗಳಲ್ಲಿ ಪ್ರಾಣಿಗಳ ಪಾತ್ರವೂ ಪ್ರಮುಖವಾದುದೆ. ಹಾವು ಗೋವುಗಳಿಗೆ ಸಂಬಂಧಿಸಿದಂತೆ ಅನೇಕ ಪುರಾಣಗಳು ಲಭ್ಯವಾಗುತ್ತವೆ. ಸೋಮವಾರ ಏಕೆ ಆರುಕಟ್ಟಬಾರದು ಎಂಬುದಕ್ಕೆ ಬಯಲು ಸೀಮೆಯಲ್ಲಿ ಹೇಳುವ ಕತೆ ಐತಿಹ್ಯವೂ ಹೌದು, ಪುರಾಣವೂ ಹೌದು. ತನ್ನ ಗುಟ್ಟನ್ನು ಅತ್ತೆಗೆ ಹೇಳಿದ್ದಕ್ಕಾಗಿ ಸೊಸೆ ಗೋವಿಗೆ ಶಾಪ ಹಾಕಿದಳು, "ಸೋಮವಾರ ನಿನ್ನ ಕೊಲ್ಲಡಗ" ಎಂದು. ಅಂದಿನಿಂದ ಗೋವುಗಳು ಮೂಕವಾದವು. ಆ ದುಃಖ ಸೂಚಕವಾಗಿಯೋ ಸೋಮವಾರ ಆರು ಕಟ್ಟಬಾರದೆಂಬ ನಂಬಿಕೆ ಬೆಳೆದುಬಂದಿದೆ. ಬಸವಣ್ಣನೂ ಆರಾಧ್ಯ ದೈವವೇ ಆದ್ದರಿಂದ ಪುರಾಣಗಳ ವರ್ಗದಲ್ಲಿ ಇಂಥ ಕತೆಗಳು ಸೇರಿಕೊಳ್ಳುತ್ತವೆ. ಆದರೆ ಸಾಮಾನ್ಯ ಜನಪದ ಕಥೆಗಳಲ್ಲಿ ಇಂಥ ಪ್ರಾಣಿಗಳು ಬಂದಾಗ ಅವು ಪುರಾಣಗಳೆನಿಸಬೇಕಾಗಿಲ್ಲ.

ಸಾಂಸ್ಕೃತಿಕ ವೀರ ಮೊದಲಿಗೆ ಪ್ರಾಣಿರೂಪಿನಲ್ಲಿದ್ದನು ಎಂಬ ಹಿನ್ನೆಲೆಯಲ್ಲಿ ಆದಿವಾಸಿಗಳಲ್ಲಿ ಅನೇಕ ಪುರಾಣಗಳು ಹುಟ್ಟಿಕೊಳ್ಳುತ್ತವೆ. ಮಾನವಸಹಜ ಗುಣಗಳನ್ನೆಲ್ಲಾ ಆರೋಪಿಸಿ ಅಂತಹ ಸಂದರ್ಭದಲ್ಲಿ ಕತೆಗಳನ್ನು ಬೆಳೆಸಿದಾಗ ದೈವಿಕ ಆವರಣ ಕಂಡುಬಂದರೆ ಅದು ಪುರಾಣ, ಧಾರ್ಮಿಕ ಅಥವಾ ದೈವಿಕ ಆವರಣದಿಂದ ಕತೆ ಮುಕ್ತವಾದರೆ ಅದು ಸಾಮಾನ್ಯ ಪ್ರಾಣಿಕಥೆ.[19]

---

19 Stith Thompson—*The Folklore*, p. 9.

ಪುರಾಣ ಮತ್ತು ಐತಿಹ್ಯಗಳು ಧಾರ್ಮಿಕ ಐತಿಹಾಸಿಕ ಹಿನ್ನೆಲೆಯಲ್ಲಿ ಒಂದು ಪ್ರತ್ಯೇಕ ವರ್ಗವಾಗಿಯೇ ಉಳಿಯುತ್ತವೆ. ಅವುಗಳ ವ್ಯಾಪ್ತಿ ಸೀಮಿತ, ಉದ್ದೇಶ ನಿರ್ದಿಷ್ಟ; ಆವರಣ ಸ್ಪಷ್ಟ.

ನೀತಿ ಕಥೆಗಳು (Fables) ಎಂಬ ಮತ್ತೊಂದು ವರ್ಗದ ಕತೆಗಳನ್ನು ಒಂದು ಪ್ರತ್ಯೇಕ ಗುಂಪಾಗಿ ವಿಂಗಡಿಸುವ ಪ್ರಯತ್ನವನ್ನು ಕಾಣಬಹುದು. Boggs ಅವರ ವಿಭಜನೆಯಲ್ಲಿ ನೀತಿಕಥೆಗೆ ಪ್ರತ್ಯೇಕ ಸ್ಥಾನವಿಲ್ಲ. ಜನಪದ ಕಥೆಗಳಲ್ಲಿ ಇವುಗಳ ಸಂಖ್ಯೆ ಬಹಳ ಗೌಣವಾದುದರಿಂದ ಕಟ್ಟುಕತೆಗಳಲ್ಲಿಯೇ ಅವನ್ನು ಸೇರಿಸಿಕೊಳ್ಳುವ ಸಾಧ್ಯತೆಯೂ ಇದೆ. ಸಾಮಾನ್ಯವಾಗಿ ನೀತಿಕಥೆಗಳಲ್ಲಿ ಪ್ರಾಣಿಪಾತ್ರಗಳ ಪ್ರಾಚುರ್ಯವೇ ಹೆಚ್ಚು. ಮಾನವರಂತೆಯೇ ವರ್ತಿಸುವ ಪ್ರಾಣಿಪಾತ್ರಗಳು ಯಾವುದೋ ನೀತಿಯ ಕಡೆ ಯೋಜಿಸಲ್ಪಟ್ಟು ಕಥಾ ಕ್ರಿಯೆಯಲ್ಲಿ ಭಾಗವಹಿಸುತ್ತವೆ.[20] ಕಥೆನಕ್ರಿಯೆ ನೀತಿಯತ್ತ ಸಾಗುವುದು, ಕೊನೆಯಲ್ಲಿ ಸೂತ್ರಪ್ರಾಯ ವಾಕ್ಯವೊಂದರಲ್ಲಿ ನೀತಿ ನಿಲ್ಲುವುದು ಈ ಕತೆಗಳ ಎರಡು ಪ್ರಧಾನ ಅಂಶಗಳು. ನೀತಿಕಥೆಗಳೆಲ್ಲಾ ಮೊದಲಿಗೆ ಜನಪದ ಕಥೆಗಳೇ ಆಗಿದ್ದವು. ಪ್ರಾಣಿಗಳ ಗುಣವಿಶೇಷಗಳನ್ನು ವಿವರಿಸುವ ಹಿನ್ನೆಲೆಯಲ್ಲಿ ಸೃಷ್ಟಿಯಾದ ಅವುಗಳನ್ನು ಕ್ರಮೇಣ ಮಾನವರಿಗೆ ನೀತಿಬೋಧಕ ಸಾಧನವನ್ನಾಗಿ ಮಾರ್ಪಡಿಸಿಕೊಳ್ಳಲಾಯಿತು.[21]

ಒಟ್ಟಿನಲ್ಲಿ ನೀತಿಕಥೆಗಳ ಸ್ವರೂಪ ಜನಪದ ಕಥೆಗಳ ಸರ್ವಸ್ವಾತಂತ್ರ್ಯ ಜಾಯಮಾನಕ್ಕೆ ಒಗ್ಗುವುದಿಲ್ಲ. ಯಾವ ನಿರ್ದಿಷ್ಟ ಉದ್ದೇಶಕ್ಕೂ ಬೆನ್ನುಬಿದ್ದು ಸಾಗುವುದು ಜನಪದ ಕಥೆಗಳ ದೃಷ್ಟಿಯಲ್ಲ. ದಕ್ಷಿಣ ಆಫ್ರಿಕಾದ ನಿಗ್ರೋಗಳಲ್ಲಿ ಅಮೇರಿಕೆಯ ರೆಡ್ ಇಂಡಿಯನ್ನರಲ್ಲಿ ಜನಪದ ಕಥೆಗಳು ಮಕ್ಕಳ ಶೈಕ್ಷಣಿಕ ಸಾಧನಗಳಾಗಿದ್ದರೂ ಅವುಗಳ ಗುರಿ ಕೇವಲ ನೀತಿಯಲ್ಲ. ಸ್ವತಂತ್ರವಾದ ಜಗತ್ತಿನಲ್ಲಿ ತಮಗೆ ತಾವೇ ಬೆಳೆದು ನಿಲ್ಲುವ ಕಟ್ಟುಕತೆಗಳ ಉದ್ದೇಶ ಮನರಂಜನೆ ಮಾತ್ರ. ಆದರೆ ಸುಶಿಕ್ಷಿತ ವರ್ಗ ಒಂದು ವಿಶಿಷ್ಟ ಉದ್ದೇಶಕ್ಕಾಗಿ ಈ ಕತೆಗಳಿಗೆ ಒಂದು ಹೊಸ ಪೋಷಾಕನ್ನು ಹಾಕಿರುವುದು ನಿಜ. ಈಸೋಪನ ಕತೆಗಳು, ಜಾತಕ ಕತೆಗಳು, ಪಂಚತಂತ್ರದ ಕತೆಗಳು ಇಲ್ಲಿ ಗಮನಾರ್ಹ. ಜಾನಪದ ಆಶಯಗಳನ್ನು ಧಾರಾಳವಾಗಿ ಸ್ವೀಕರಿಸಿ ಆ ಕಥಾಕೋಶಗಳನ್ನು ಬೆಳಸಿರುವ ಬಗೆ ಇಲ್ಲಿ ಸಂಸ್ಪಷ್ಟ.[22]

ಅನೇಕ ಜನಪದ ಕಥೆಗಳಲ್ಲಿ ನೀತಿ ಅಂತರ್ಗತವಾಗಿ ಕಂಡುಬಂದರೂ ಅಂತ್ಯದಲ್ಲಿ ಒಂದು ವಾಕ್ಯದಲ್ಲಿ ನೀತಿಯನ್ನು ಸಂಗ್ರಹಿಸುವ ಬಗೆ ತೀರ ವಿರಳ. ನೀತಿಕಥೆಗಳ ಮುಖ್ಯ ಉದ್ದೇಶ ನೀತಿಯೇ ಆದುದರಿಂದ ವಾಕ್ಯ ರೂಪದಲ್ಲಿ ಗಾದೆಯ ರೂಪದಲ್ಲಿ ಕತೆಯ ತುದಿಯಲ್ಲಿ ಅಭಿಪ್ರಾಯವನ್ನು ಭಟ್ಟಿ ಇಳಿಸಿರುವ ಪ್ರಸಂಗಗಳು ಅಷ್ಟೇನೂ ಈ ಕತೆಗಳಲ್ಲಿ

20. *Standard Dictionary of Folklore*, p. 361.
21. Ibid., p. 361
22. Ibid., p. 361

ಕಂಡುಬರುವುದಿಲ್ಲ. ಒಂದು ಕತೆಯಲ್ಲಿ ನೀತಿಯೋ ಪರಮೋದ್ದೇಶವೆಂದು ಕಂಡುಬಂದರೆ ಅದರ ಮೂಲದ ಬಗ್ಗೆ ಸಂಶಯಪಡುವ ಅಗತ್ಯವೂ ಕಾಣಬರುತ್ತದೆ.[23]

ಜನಪದ ಕಥೆಗಳ ಸಾಲಿನಲ್ಲಿ ಕಟ್ಟುಕತೆಗಳು ಬಹಳ ಪ್ರಮುಖವಾದ ಅಂಗವಾಗಿ ನಿಲ್ಲುತ್ತವೆ. ಇಂಗ್ಲಿಷಿನ Fairy tale ಜರ್ಮನಿಯ Marchen ನಾರ್ವೆಯ Evenrty ಫ್ರಾನ್ಸಿನ Conte Populair ಸ್ವಿಡ್ಸರ್ಲೆಂಡಿನ Saga ರಷ್ಯಾದ Skazka ಮುಂತಾದ ಹೆಸರುಗಳಲ್ಲಿ ಕರೆಯಲ್ಪಡುವ ಈ ಕತೆಗಳಿಗೆ ಕನ್ನಡದಲ್ಲಿ ಡಾ. ಹಾ. ಮಾ. ನಾಯಕರು 'ಕಟ್ಟುಕಥೆ' ಎಂಬ ಹೆಸರನ್ನು ಬಳಸಿದ್ದಾರೆ.[24] Folktale ಎಂಬ ಮಾತು ಎಲ್ಲ ಜನಪದ ಗದ್ಯಕಥನಗಳಿಗೂ ಅನ್ವಯವಾಗುತ್ತದೆ. ಗ್ರಿಮ್ ಸಹೋದರರು ಬಳಸಿದ Hausmarchen (House holdtales)[25] ಕೂಡ ಅತ್ಯಂತ ವ್ಯಾಪಕವಾದ ಅರ್ಥವನ್ನು ಪಡೆದುಕೊಳ್ಳುತ್ತದೆ. ಕನ್ನಡದ ಅಜ್ಜಿಯಕತೆ ಕೂಡ ಇಷ್ಟೇ ವ್ಯಾಪಕತೆಯನ್ನು ಪಡೆದ ಶಬ್ದವಾಗಿದೆ. ಯಾವ ವರ್ಗದ ಕತೆಗಳನ್ನಾದರೂ ಇಲ್ಲಿ ಸೇರಿಸಿಕೊಳ್ಳುವ ಸಾಧ್ಯತೆ ಹೆಚ್ಚು. Marchen ಎಂಬ ಹೆಸರನ್ನು ಒಂದು ಪ್ರಮುಖ ವರ್ಗದ ಜನಪದ ಕಥೆಗಳಿಗೆ ವಿಶೇಷವಾಗಿ ಪಾಶ್ಚಾತ್ಯ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಜನಪದ ಕಥೆಗಳಿಗೆ Fairy tale ಎಂಬ ಹೆಸರು ಇಂಗ್ಲಿಷಿನಲ್ಲಿ ಹೇಗೋ ಬಳಕೆಗೆ ಬಂದಿದೆ. The Science of Fairy Tale, The Fairy Mythology ಮುಂತಾದ ಹೆಸರುಗಳು ಕಳೆದ ಶತಮಾನದಲ್ಲಿಯೇ ಇಂಗ್ಲೆಂಡಿನಲ್ಲಿ ಬಳಕೆಗೆ ಬಂದವು.[26] ಕಳೆದ ಶತಮಾನದ ಅಂತ್ಯಭಾಗದಲ್ಲಿ ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್‌ಗಳಲ್ಲಿ Fairy Tales[27] ಎಂಬ ಹೆಸರಿನಲ್ಲಿಯೇ ಅಪಾರ ಸಂಖ್ಯೆಯ ಕೃತಿಗಳು ಪ್ರಕಟವಾದವು. ಆದರೆ ಈ ಹೆಸರಿನ ಬಗ್ಗೆ ವಿದ್ವಾಂಸರಲ್ಲಿ ತುಂಬ ಜಿಜ್ಞಾಸೆಯುಂಟಾಗಿ ಕ್ರಮೇಣ ಆ ಹೆಸರು ಮರೆಯಾಗುತ್ತಿದೆ. Fairy Taleಗಳಲ್ಲಿ Fairyಯ ಪಾತ್ರ ತುಂಬ ವಿರಳ. Fairyಯರು ಅಥವಾ ಕಿನ್ನರಿಯರು ಬರುವ ಕತೆಗಳೇ ಜನಪದ ಕಥೆಗಳ ಪ್ರಧಾನವರ್ಗ ಅಲ್ಲ. ಆ ವರ್ಗದಲ್ಲಿ Cinderlla, Black and White. Snow White ಮುಂತಾದ ಕತೆಗಳನ್ನು ಹೆಸರಿಸಲಾಗುತ್ತಿದ್ದರೂ ಇವಷ್ಟೇ ಕತೆಗಳು ಸಮಗ್ರ ಜನಪದ ಕತೆಗಳನ್ನು ಪ್ರತಿನಿಧಿಸುವುದಿಲ್ಲ. ಜಗತ್ತಿನ ಎಲ್ಲ ಭಾಷೆಗಳ ಜನಪದ ಕಥೆಗಳಲ್ಲೂ ಕಿನ್ನರ ಕತೆಗಳು

23. 'ಒಂದು ದೃಷ್ಟಿಯಿಂದ ನೋಡಿದರೆ ಈ ಬಗೆಯ ಎಷ್ಟೋ ನೀತಿಕಥೆಗಳು ಶುದ್ಧ ಜನಪದ ಕಥೆಗಳಲ್ಲ'

—ಡಾ. ಹಾ. ಮಾ. ನಾಯಕ, ಸುವರ್ಣ ಸಂಚಯ, ಪು. ೨೫

24. ಡಾ. ಹಾ. ಮಾ. ನಾಯಕ—ಸುವರ್ಣ ಸಂಚಯ, ಪು. ೨೪

25. The Brothers Grimm—*Kinder Und Hausmarchen* (1812)

26. Hart Land E.S—*The Science of Fairy Tale*–London (1891) Thomas Keightleys—*The Fairy Mythology* (1878)

27. ಡಾ. ಹಾ. ಮಾ. ನಾಯಕರು Fairy tale ಎಂಬ ಇಂಗ್ಲಿಷ್ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಕಿನ್ನರಕಥೆ ಎಂಬ ರೂಪವನ್ನು ಸಮುಚಿತವಾಗಿ ಪ್ರಯೋಗಿಸಿದ್ದಾರೆ.

(Fairy Tales) ಆಕರ್ಷಕ ಕತೆಗಳಾಗಿ ಕಾಣಬಂದರೂ ಅಪಾರ ಸಂಖ್ಯೆಯಲ್ಲಿ ಲಭ್ಯವಾಗುವುದಿಲ್ಲ. ಎಲ್ಲ ಜನಪದ ಕಥೆಗಳಿಗೂ ಈ ಹೆಸರನ್ನು ಅನ್ವಯಿಸಿರುವುದು ದುರದೃಷ್ಟಕರ ಎಂದು ಪ್ರಸಿದ್ಧ ಜಾನಪದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[28]

ಜನಪದ ಕಥೆಗಳ ಅಧ್ಯಯನಕ್ಕೆ ವೈಜ್ಞಾನಿಕ ತಳಹದಿಯನ್ನು ಹಾಕಿದ ಗ್ರಿಮ್ ಸಹೋದರರೆ Marchen ಎಂಬ ಜರ್ಮನ್ ಪದವನ್ನು ಪ್ರಥಮಬಾರಿಗೆ ಬಳಸಿದ್ದರೂ ಆ ಪದ ಆರಂಭದಲ್ಲಿ ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಆಧುನಿಕ ಜಾನಪದ ವಿದ್ವಾಂಸರು ಆ ಪದದ ಕಡೆ ವಿಶೇಷ ಆಸಕ್ತಿಯನ್ನು ತೋರಿ ಹೆಚ್ಚಾಗಿ ಬಳಸುತ್ತಿದ್ದಾರೆ. Stith Thompson ಅವರು Marchen ಎಂಬ ಪದದ ಔಚಿತ್ಯವನ್ನು ಒಪ್ಪಿಕೊಂಡರೂ ಅದಕ್ಕಿಂತ ಉತ್ತಮವಾದ Chimerat ಎಂಬ ಪದವನ್ನು ಅಂತರರಾಷ್ಟ್ರೀಯ ಬಳಕೆಗಾಗಿ ಸೂಚಿಸಿದ್ದಾರೆ.[29] ಈ ಪದವೂ ಹೆಚ್ಚು ಜನಪ್ರಿಯವಾಗಿಲ್ಲ. ಕನ್ನಡದ ಕಟ್ಟುಕಥೆ ಈ Chimerat ಮತ್ತು Marchenಗಳ ವ್ಯಾಪ್ತಿಯನ್ನು ಪಡೆದು ಅತ್ಯಂತ ಗಮನಾರ್ಹವಾದ ಪ್ರಯೋಗವಾಗಿದೆ. ಎಂದೆಂದೂ ಅಸಾಧ್ಯವಾದ ನೆಲೆಗಳಲ್ಲಿ ದೈನ್ಯ ಜನಪದ ನಾಯಕರು ಅನೇಕ ಅಡ್ಡಿ ಅಡಚಣೆಗಳನ್ನು ಗೆದ್ದು ರಾಜಧಾನಿಗಳಿಗೆ ಆಗಮಿಸಿ ರಾಜಕುಮಾರಿಯರನ್ನು ಮದುವೆಯಾಗುವ ಅಪೂರ್ವ ಸನ್ನಿವೇಶಗಳು ಬರುತ್ತವೆ. Chimera ಪದದಿಂದ Chimeret ಪದವನ್ನು ರೂಪಿಸಿರುವ ಥಾಮ್ಸನ್ ಅವರು ಬಹುಶಃ ಸಿಂಹದ ತಲೆಯೂ ಆಡಿನ ಒಡಲೂ ಹಾವಿನ ಬಾಲವೂ ಉಳ್ಳ ಒಂದು ಅದ್ಭುತ ಪ್ರಾಣಿಯನ್ನು ದೃಷ್ಟಿಯಲ್ಲಿಟ್ಟುಕೊಂಡಂತೆ ತೋರುತ್ತದೆ. ಇದೊಂದು ಅಸಂಭವ ಕಲ್ಪನೆ. ಈ ಅಸಂಭಾವ್ಯತೆಯೇ ಜನಪದ ಕಥೆಗಳ ಜೀವಾಳ. ವಿಶಿಷ್ಟ ಆವರಣದಲ್ಲಿ ಆ ಕತೆಗಳಿಗೆ ಒಂದು ನೈಜತೆ ಬರುತ್ತದೆ. ಈ ಅರ್ಥದಲ್ಲಿ ಕಟ್ಟುಕಥೆ ಎಂಬ ಮಾತೂ ಅತ್ಯಂತ ಅರ್ಥತ್ತಾಗಿದ್ದು Marchen ಅಥವಾ Chimeretಗಳ ಹತ್ತಿರಕ್ಕೆ ಬರುವ ಏಕಮಾತ್ರ ಪದವಾಗಿದೆ. ಈ ಕಟ್ಟುಕಥೆಗಳಲ್ಲಿ ಪ್ರಾಣಿಕಥೆಗಳೂ ಅತಿಮಾನುಷ ಕಥೆಗಳೂ ವಿನೋದ ಕಥೆಗಳೂ ತಂತ್ರಿಕಥೆಗಳೂ ಸೂತ್ರಕಥೆಗಳೂ ರಮ್ಯಕಥೆಗಳೂ ವಾಸ್ತವಿಕ ಕಥೆಗಳೂ ಮಾಂತ್ರಿಕ ಅಥವಾ ಅದ್ಭುತ ಕಥೆಗಳೂ ಪರಿಗಣಿತವಾಗುತ್ತವೆ. ಈ ಎಲ್ಲ ಕತೆಗಳ ಭಾಷೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಟ್ಟುಕಥೆ ಎಂಬ ಮಾತನು ಕನ್ನಡದಲ್ಲಿ ಬಳಕೆಗೆ ತರಬಹುದಾಗಿದೆ.

ಕಟ್ಟುಕಥೆ ಸಾಂಪ್ರದಾಯಿಕವಾದುದು. ಪರಂಪರಾನುಗತವಾಗಿ ಕರ್ಣಾಕರ್ಣಿಯಾಗಿ ಬಂದುದು. ತಾನು ಕೇಳಿದ್ದ ಕತೆಯನ್ನು ತನ್ನ ನೆನಪಿಗೆ ಬಂದಂತೆ ತನ್ನ ಕಲ್ಪನಾ

28. '.....In many ways this is an unfortunate word since not more than the small number of such stories have to do with fairies.'

—Stith Thompson : *Standard Dictionary of Folklore*, p. 365

29. Stith Thompson—*The Folktale*. p. 8

ಶಕ್ತಿಗೆ ತಕ್ಕಂತೆ ನಿರೂಪಕ ಹೇಳುತ್ತಾ ಸಾಗುತ್ತಾನೆ. ಅನೇಕ ಆಶಯ ಅಥವಾ ಘಟನೆಗಳಿಂದ ಕೂಡಿ ನಿರ್ದಿಷ್ಟ ದೀರ್ಘತೆಯನ್ನು ಪಡೆದ ಈ ಕಥೆಯ ಕ್ರಿಯೆ ಅವಾಸ್ತವ ಪ್ರಪಂಚದಲ್ಲಿ ಸಂಚರಿಸುತ್ತಾ ತನ್ನದೇ ಆದ ಹಿನ್ನೆಲೆಯನ್ನು ಕಲ್ಪಿಸಿಕೊಳ್ಳುತ್ತದೆ. ಈ ಕತೆಗಳಲ್ಲಿ ಯಾವ ಗೊತ್ತಾದ ಪ್ರದೇಶವಾಗಲೀ ಅಥವಾ ಗೊತ್ತಾದ ಪಾತ್ರಗಳಾಗಲೀ ಇರುವುದಿಲ್ಲ. ಎಲ್ಲಿಯಾದರೂ ನಡೆಯಬಹುದು. ಪಾತ್ರಗಳು ಹೆಸರಿಲ್ಲದೆ ಊರಿಲ್ಲದೆಯೂ ವರ್ತಿಸಬಹುದು. ಒಬ್ಬ ನಾಯಕ ಅಥವಾ ನಾಯಕಿಯ ಸುತ್ತ ಕೇಂದ್ರೀಕೃತವಾದ ಈ ಕತೆಗಳು ನಾಯಕ ಗುರಿಯನ್ನು ತಲುಪಿ ಸಂತೋಷವಾಗಿ ಬದುಕುವ ಕಡೆಗೇ ವಿಶೇಷವಾಗಿ ವಾಲಿರುತ್ತವೆ. ಸುಖಾಂತವಾಗಿ ಮುಕ್ತಾಯವನ್ನು ಸಾಧಿಸಿಕೊಳ್ಳುವ ಈ ಕತೆಗಳು ಲಾವಣಿಯ ಕತೆಗಳಿಗಿಂತ ಭಿನ್ನವಾದುವು. ಲಾವಣಿಗಳಲ್ಲಿ ದುರಂತ ಚಿತ್ರಗಳೇ ಹೆಚ್ಚು.

ಕಟ್ಟುಕಥೆ ತನ್ನಷ್ಟಕ್ಕೆ ತಾನು ಸ್ವಸಂಪೂರ್ಣವಾದ ಒಂದು ಕಲಾಕೃತಿ. ತನ್ನ ಜನ್ಮವನ್ನು ಯಾವುದೋ ಕಾಲದಲ್ಲಿ ಯಾವುದೋ ನೆಲೆಯಲ್ಲಿ ಪಡೆದಿದ್ದರೂ ಸಹಸ್ರಾರು ವರ್ಷಗಳ ಯಾತ್ರೆಯಲ್ಲಿ ತನ್ನ ಅಂತಸ್ಸತ್ವದಿಂದ ಅದು ಉಳಿದು ಬರುತ್ತದೆ. ಕತೆಯನ್ನು ಕಟ್ಟಿದವನು ಒಬ್ಬನಾದರೆ ಬೆಳೆಸಿದವರು ಹಲವರು. ಕಾಲಗರ್ಭದಲ್ಲಿ ಎಲ್ಲಿಂದ ಎಲ್ಲಿಗೋ ಪ್ರಯಾಣವನ್ನು ಕೈಗೊಂಡು ತನ್ನ ಮೂಲ ಸ್ವರೂಪದಲಲ್ಲದಿದ್ದರೂ ಹಲವು ಪಾತ ಭೇದಗಳೊಡನೆ ಗೋಚರಿಸುತ್ತಾ ಸಾಗುತ್ತದೆ. ಹಲವು ಬಾಯಲ್ಲಿ ಹಲವು ರೂಪವನ್ನು ಪಡೆಯುವಾಗ ಅದರ ಅಡಿಗಲ್ಲಾದ ಆಶಯಗಳು ಎಷ್ಟೋ ಕುಸಿದು ಹೋಗುತ್ತವೆ. ಆದರೆ ಆ ಸ್ಥಳದಲ್ಲಿ ಹೊಸ ಆಶಯಗಳು ಬಂದು ಸೇರಿಕೊಂಡು ಅದು ಕುಸಿಯದೆ ಮುಂದೆ ಸಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಹಲವು ಕತೆಗಳು ಒಂದೇ ಕತೆಯಲ್ಲಿ ಸೇರಿಕೊಂಡು ಬರುತ್ತವೆ. ಒಂದೇ ಕತೆ ಹಲವು ಕತೆಗಳಾಗಿ ಹಂಚಿಕೊಳ್ಳುತ್ತದೆ. ಹಲವು ದೇಶಗಳಲ್ಲಿ ಹಲವು ಭಾಷೆಗಳಲ್ಲಿ ಅಲೆದಲೆದೂ ಆ ಕತೆ ಒಂದಲ್ಲ ಒಂದು ರೂಪದಲ್ಲಿ ತಾನು ಉಳಿದುಕೊಳ್ಳುತ್ತದೆ.

ಶುದ್ಧ ಕಟ್ಟುಕಥೆಗೆ ಧರ್ಮದ ಚೌಕಟ್ಟಿಲ್ಲ, ಇತಿಹಾಸದ ಗೋಜಿಲ್ಲ, ಸಮಾಜದ ಹಂಗಿಲ್ಲ. ಎಲ್ಲುಂದರಲ್ಲಿ ಅದು ನುಗ್ಗುತ್ತದೆ. ಕಲ್ಪನಾರಮ್ಯತೆ ಭಾಷಾ ಸಂಪತ್ತಿಯನ್ನು ಪಡೆದ ವ್ಯಕ್ತಿಯ ಬಾಯಲ್ಲಿ ಅವತರಿಸಿದಾಗ ಉಜ್ವಲ ಕಲಾಕೃತಿಯಾಗುತ್ತದೆ, ಸಾಹಿತ್ಯ ಕೃತಿಯಾಗುತ್ತದೆ. ಸಾಮಾನ್ಯನ ಬಾಯಲ್ಲಿ ಮೂಡಿಬಂದಾಗಲೂ ಅದರ ಮೌಲ್ಯ ಮುಕ್ಕಾಗುವುದಿಲ್ಲ. ಏಕೆಂದರೆ ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾಶಾಸ್ತ್ರ ಮುಂತಾದ ಬೇರೆ ಬೇರೆ ವಿಜ್ಞಾನಗಳಿಗೂ ಮೂಲ ಸಾಮಗ್ರಿಯನ್ನು ಹೇರಳವಾಗಿ ಒದಗಿಸುವ ಕಟ್ಟುಕಥೆಯ ಪ್ರಧಾನ ಉದ್ದೇಶ ಅದರ ಕಲಾತ್ಮಕತೆಯಲ್ಲ. ಮೂಲಕ್ಕೆ ಪ್ರಾಮಾಣಿಕನಾಗಿರುವ ಸಂಗ್ರಾಹಕನು ಕಲೆಹಾಕಿದ ಕತೆಗಳು ಅತ್ಯಂತ ಅಮೂಲ್ಯವಾದ ಸಂಶೋಧನೆಯ ಸಾಮಗ್ರಿ ಎನಿಸುತ್ತವೆ. ಜನಪದಕಥೆ ಕತೆಗಾಗಿ ಕತೆಯಾದರೂ ಹಲವು ಉದ್ದೇಶಗಳಿಗೆ ಅದನ್ನು ಬಳಸಿಕೊಳ್ಳುವ ಹಿನ್ನೆಲೆ ಇರುವುದರಿಂದ ವಕ್ತೃ (Informent)

ವಿನಿಂದ ಸಂಗ್ರಹಿಸಿದ ರೀತಿಯಲ್ಲಿಯೇ ಅದನ್ನು ಪ್ರಕಟಿಸುವ ಅಗತ್ಯವನ್ನು ವಿದ್ವಾಂಸರು ಕಂಡುಕೊಂಡಿದ್ದಾರೆ.

ಜನಪದ ಕಥೆಗಳ ವರ್ಗೀಕರಣ ಅತ್ಯಂತ ತೊಡಕಾದುದು. ಅವುಗಳನ್ನು ಶಾಸ್ತ್ರೀಯವಾಗಿ ವಿಭಜಿಸುವ ಪ್ರಯತ್ನ ಕಳೆದ ಶತಮಾನದಲ್ಲಿಯೇ ನಡೆಯಿತು. ಜನಪದ ಕಥೆಗಳನ್ನು Edwin Sidney Hartland ತನ್ನ 'Science of Folklore' ಗ್ರಂಥದಲ್ಲಿ Saga ಮತ್ತು Marchen ಎಂದು ವಿಭಾಗಿಸಿದ್ದಾನೆ. Saga ಐತಿಹ್ಯಗಳಿಗೆ ಸಂಬಂಧಿಸಿದರೆ Marchen ಕಟ್ಟುಕಥೆಗಳ ವರ್ಗದಲ್ಲಿ ಬರುತ್ತದೆ. Von der leyen ಎಂಬ ಮತ್ತೊಬ್ಬ ವಿದ್ವಾಂಸ Sage ಮತ್ತು Marchen ಎಂದು ಎರಡು ಗುಂಪಾಗಿ ಕತೆಗಳನ್ನು ವಿಭಜಿಸಿದ್ದಾನೆ. ಅವನ ಪ್ರಕಾರ Saga ಸರಳವಾದುದು. Marchen ಸಂಕೀರ್ಣವಾದುದು. ಈ ಎರಡು ಪ್ರಧಾನ ವರ್ಗಗಳನ್ನು ಮುಂದೆ Stith Thompson ಅವರು ಜನಪದ ಕಥೆಗಳ ವರ್ಗೀಕರಣದಲ್ಲಿ ಬಳಸಿಕೊಂಡು ವಿವರವಾದ ವಿಭಜನೆಯನ್ನು ಮಾಡಿದ್ದಾರೆ. ಜನಪದ ಕಥೆಗಳ ಮೊತ್ತವನ್ನು ಸಂಕೀರ್ಣ ಕಥೆಗಳು (Complex Tales) ಮತ್ತು ಸರಳ ಕಥೆಗಳು (Simple Tales) ಎಂದು ಎರಡು ಪ್ರಧಾನ ಭಾಗಗಳಾಗಿ ವಿಂಗಡಿಸಿದ್ದಾರೆ. ಇಂಡಿಯಾನ ವಿಶ್ವವಿದ್ಯಾಲಯದ Folklore Instituteನ ಎರಡನೇ ಸಮ್ಮೇಳನದಲ್ಲಿ (೧೯೪೬) Thompson ಅವರು ಕಂಠಸ್ಥ ಸಂಪ್ರದಾಯದ ಎಲ್ಲ ಕತೆಗಳನ್ನೂ ಆರಿಸಿಕೊಂಡು ವಿಭಜಿಸಿದ ಪತ್ರಿಕೆಯೊಂದನ್ನು ಮುಂಡಿಸಿದರು. ಅವರ ಪ್ರಕಾರ—

(ಅ) ಐತಿಹ್ಯ, ಸಂಪ್ರದಾಯ ಮತ್ತು ಸಾಹಸ ಕಥೆಗಳು

೧. ಸ್ಥಳಕ್ಕೆ ಸಂಬಂಧಿಸಿದ ಐತಿಹ್ಯಗಳು.
೨. ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯಗಳು.
೩. ವಿವರಣಾತ್ಮಕ ಕಥೆಗಳು.
೪. ಕಿನ್ನರಿಯರು ರಾಕ್ಷಸರು ಮಾಟಗಾತಿಯರು ಮುಂತಾದವರಿಗೆ ಸಂಬಂಧಿಸಿದ ಕತೆಗಳು.
(ಇವೆಲ್ಲವೂ ವಾಸ್ತವಿಕ ನಂಬಿಕೆಗಳನ್ನು ಆಧರಿಸಿದ ಕತೆಗಳು.)
೫. ಘಟನೆಗಳ ಐತಿಹ್ಯಗಳು.
(ಇವು ಪ್ರವಾಹ ಇತ್ಯಾದಿ ವಾಸ್ತವಿಕ ಘಟನೆಗಳಿಗೆ ಸಂಬಂಧಿಸಿದ ಕತೆಗಳು.)

(ಆ) ಕಟ್ಟುಕಥೆಗಳು

೧. ಪ್ರಾಣಿಕಥೆ
೨. ಅತಿಮಾನುಷ ಕಥೆ
೩. ವಿನೋದ ಕಥೆ
೪. ತಂತ್ರ ಕಥೆ

Thompson ಅವರ ಈ ವಿಭಜನೆ ಸಮಗ್ರ ಜನಪದ ಕಥೆಗಳನ್ನು ಪರಿಶೀಲಿಸುವಾಗ ಅಸಮಗ್ರ ಎನಿಸಿದರೂ ಅವರ Folktale ಗ್ರಂಥದಲ್ಲಿ ಅವರು ನೀಡಿರುವ ವಿಭಜನೆ ಅತ್ಯಂತ ಸಮರ್ಥನೀಯವಾದುದು, ಶಾಸ್ತ್ರೀಯವಾದುದು. ಅವರ ವಿಭಜನೆಯನ್ನು ಇಲ್ಲಿ ಪರಿಶೀಲಿಸಬಹುದು—

ಸಂಕೀರ್ಣಕಥೆಗಳು ಎಂಬ ಪ್ರಧಾನ ವರ್ಗದಲ್ಲಿ ಅತಿಮಾನುಷ ಕಥೆಗಳನ್ನು ಹೀಗೆ ವಿಭಜಿಸಿದ್ದಾರೆ—

(ಅ) ಕಟ್ಟುಕಥೆ ಮತ್ತು ಅದಕ್ಕೆ ಸಂಬಂಧಿಸಿದ ಕಥಾರೂಪಗಳು

೧. ಅತಿಮಾನುಷ ವಿರೋಧಿಗಳು (Super natural adversaries)
೨. ಅತಿಮಾನುಷ ಸಹಾಯಕರು (Super natural helpers)
೩. ಯಂತ್ರ ಮಂತ್ರ ಅದ್ಭುತಗಳು (Magic and marvels)
೪. ಪ್ರೇಮಿಗಳು ಮತ್ತು ದಂಪತಿಗಳು (Lovers and married couples)
೫. ಪರೀಕ್ಷೆಗಳು ಮತ್ತು ಸಾಹಸಗಳು (Tasks and quests)
೬. ವಿಧೇಯತೆ (Faithfulness)
೭. ಒಳ್ಳೆಯ ಹಾಗೂ ಕೆಟ್ಟ ಬಂಧುಗಳು (Good and bad relatives)
೮. ಅತೀತ ಶಕ್ತಿಗಳು (The higher powers)
೯. ಮೂರು ಲೋಕಗಳು (The three worlds)

ಕತೆಗಳ ಆಂತರಿಕ ಸ್ವರೂಪಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಟ್ಟುಕಥೆಗಳ ವಿಭಜನೆಯನ್ನು ವಿಸ್ತಾರವಾಗಿ ಸೂಚಿಸಿರುವ Stith Thompson ಅವರು ಎರಡನೇ ವರ್ಗದಲ್ಲಿ ವಾಸ್ತವಿಕ ಕಥೆಗಳನ್ನು (Realistic tales) ಪರಿಗಣಿಸಿದ್ದಾರೆ. ಜಾಣತನದ ಕತೆಗಳು ಮೋಸ ವಂಚನೆಗಳಿಗೆ ಸಂಬಂಧಿಸಿದ ಕತೆಗಳು ಈ ಗುಂಪಿನಲ್ಲಿ ಬರುತ್ತವೆ.

ಸ್ಟಿತ್ ಥಾಂಸನ್ ಅವರು ಮಾಡಿಕೊಂಡಿರುವ ಮತ್ತೊಂದು ಪ್ರಧಾನವರ್ಗ ಸರಳಕಥೆಗಳದು ವಿನೋದಕಥೆಗಳು, ಪ್ರಾಣಿಕಥೆಗಳು, ಸೂತ್ರ ಕಥೆಗಳು ಐತಿಹ್ಯ ಹಾಗೂ ಸಂಪ್ರದಾಯಗಳು ಈ ಭಾಗದಲ್ಲಿ ಬರುತ್ತವೆ.

ಸ್ಟಿತ್ ಥಾಂಸನ್ ಅವರು ತಮ್ಮ ಗ್ರಂಥದಲ್ಲಿ ವಿಶ್ವದ ಅನೇಕ ಕಡೆಗಳ ಜನಪದ ಕಥೆಗಳನ್ನು ಪರಿಶೀಲಿಸುವ ದೊಡ್ಡ ಸಾಹಸವನ್ನೇ ಮೆರೆದಿದ್ದಾರೆ. ಆಯಾ ವರ್ಗದಲ್ಲಿ ಬರುವ ಕತೆಗಳು ಅವುಗಳ ಪ್ರಸರಣ ಅವುಗಳ ವೈಶಿಷ್ಟ್ಯ ಮುಂತಾದುವನ್ನು ಕುರಿತು ವಿದ್ವತ್ಪೂರ್ಣವಾಗಿ ಚರ್ಚೆ ಮಾಡಿದ್ದಾರೆ.

ಸಂಕೀರ್ಣ ಕಥೆಗಳಲ್ಲಿ ಒಂದಲ್ಲ ಒಂದು ಬಗೆಯ ಕಷ್ಟ ಪರಂಪರೆ ನಾಯಕ ಅಥವಾ ನಾಯಿಕೆಯ ಪಾಲಿಗೆ ಮೀಸಲಾದುದು. ತನ್ನ ಗುರಿಯನ್ನು ಸಾಧಿಸಿಕೊಳ್ಳಲು ಅನೇಕ ವಿರುದ್ಧ ಶಕ್ತಿಗಳನ್ನು ಅವನು ಎದುರಿಸಬೇಕಾಗುತ್ತದೆ. ಬಹುತೇಕ ಎಲ್ಲ ಕಡೆಗಳಲ್ಲೂ ಅತಿಮಾನುಷ ವಿರೋಧಿಗಳು ನಾಯಕ ಅಥವಾ ನಾಯಕಿಗೆ ಎದುರಾಗುತ್ತಾರೆ. ಅಂಥ

ಅತಿಮಾನುಷ ಶಕ್ತಿಗಳು ರಾಕ್ಷಸರಾಗಿರಬಹುದು, ಯಾವುದೋ ದುಷ್ಟ ಜಂತುಗಳಾಗಿರಬಹುದು, ದೆವ್ವಗಳಾಗಿರಬಹುದು, ದೇವತೆಗಳೂ ಆಗಬಹುದು. ಅಥವಾ ಗುರುತಿಸಲಾಗದಂಥ ಯಾವುದೋ ದುಷ್ಟ ಶಕ್ತಿ ಆಗಬಹುದು. ಮಾಟಗಾತಿಯರೂ ಈ ಗುಂಪಿಗೇ ಸೇರುತ್ತಾರೆ. ನಾಯಕ ಅಥವಾ ನಾಯಕಿ ಈ ವಿರೋಧಿಗಳ ನೆಲೆಗೆ ಹೋಗಿ ಅವರಲ್ಲಿನ ಯಾವುದೋ ಅಪೂರ್ವ ವಸ್ತುವನ್ನು ತರಬೇಕಾಗಬಹುದು. ಆ ಸಂದರ್ಭದಲ್ಲಿ ಅನೇಕ ಪ್ರಾಣಿಗಳೂ, ಪಕ್ಷಿಗಳೂ, ವ್ಯಕ್ತಿಗಳೂ ಸಹಾಯಕರಾಗಿ ನಿಲ್ಲುತ್ತಾರೆ. ನಾಯಕನ ಪಾಲಿಗೆ ವಿರೋಧಿಯು ಸಾಕುಮಗಳೋ ನಿಜವಾದ ಮಗಳೋ ತಾನೇ ನೆರವಾಗಿ ವಿರೋಧಿಯ ಜೊತೆ ಹೋರಾಡಿ ಗೆಲ್ಲುವ ಪ್ರಸಂಗಗಳು ವಿರಳ. ಆದರೆ ತಂತ್ರದಿಂದಲೋ ಇತರ ಸಹಾಯಕರ ನೆರವಿನಿಂದಲೋ ಅವನು ಗೆದ್ದು ಬರುತ್ತಾನೆ. ಸಾಹಸವನ್ನು ಮೆರೆದ ಪ್ರಸಂಗಗಳೂ ಬರುತ್ತವೆ. ಅತಿಮಾನುಷ ವಿರೋಧಿಗಳು ಒಂದೇ ಕತೆಯಲ್ಲಿ ಹಲವು ಮಂದಿ ಕಾಣಿಸಿಕೊಳ್ಳಬಹುದು. ಅಥವಾ ಒಬ್ಬನೇ ವಿರೋಧಿ ನಾಯಕನಿಗೆ ದೊಡ್ಡ ಸವಾಲಾಗಿ ನಿಲ್ಲಬಹುದು. ಇಂಥ ಸಂದರ್ಭಗಳಲ್ಲಿ ನಾಯಕ ತಾನೆಸಗಿದ ಉಪಕಾರದಿಂದಲೋ ಪಡೆದ ಮಾಂತ್ರಿಕ ವಸ್ತುವಿನಿಂದಲೋ ತಾನು ಸಹಾಯಕರಾಗಿ ಪಡೆದ ಪ್ರಾಣಿ ವಿಶೇಷಗಳಿಂದಲೋ ಅನೇಕ ಅದ್ಭುತಗಳನ್ನು ಮೆರೆದು ಅತಿಮಾನುಷ ಶಕ್ತಿಗಳನ್ನು ಗೆದ್ದು ರಾಜಕುಮಾರಿಯನ್ನು ಸಾಧಿಸಿಕೊಳ್ಳುತ್ತಾನೆ. ಇಂಥ ವಿಲಕ್ಷಣವಾದ ಅಪೂರ್ವವಾದ ಸನ್ನಿವೇಶಗಳು ಜನಪದ ಕಥೆಗಳಲ್ಲಿ ಹೇರಳವಾಗಿ ಬರುತ್ತವೆ.

ಅತಿಮಾನುಷ ಕತೆಗಳಲ್ಲಿ ವಿರೋಧಿಗಳಂತೆಯೇ ಅತಿಮಾನುಷ ಸಹಾಯಕರು ಹೆಚ್ಚಾಗಿಯೇ ಬರುತ್ತಾರೆ. ನಾಯಕ ಅಥವಾ ನಾಯಕಿಯು ಕಷ್ಟ ಸಂದರ್ಭಗಳಲ್ಲಿ ಯಾವುದೋ ಅಗೋಚರ ಶಕ್ತಿಯೋ ದೇವಕನ್ಯೆಯರೋ ತೀರಿಕೊಂಡ ಕೃತಜ್ಞ ವ್ಯಕ್ತಿಗಳೋ ಅತಿಶಯದ ಜೊತೆಗಾರರೋ ಸಹಾಯಕ ಪ್ರಾಣಿಗಳೋ ರಾಕ್ಷಸರೋ ದೆವ್ವಗಳೋ ನೆರವಾಗಬಹುದು. C. W. Von sydow ಅವರು ಅಭ್ಯಾಸ ಮಾಡಿರುವ ಅದ್ಭುತ ನೇಯ್ಗೆಯವನ ಕತೆ ಇಲ್ಲಿ ಗಮನಾರ್ಹ.

ನಾಯಕಿ ತನ್ನ ತಾಯಿಯ ದಂಡುಕು ನುಡಿಯಿಂದ ಅತ್ಯಂತ ಕ್ಲಿಷ್ಟವಾದ ಪರೀಕ್ಷೆಯೊಂದರಲ್ಲಿ ಪಾರಾಗಬೇಕಾಗುತ್ತದೆ. ತನ್ನ ಪತಿ ಸೂಚಿಸಿದ ನೂಲುವ ಕಾರ್ಯದಲ್ಲಿ ಪುಟ್ಟ ಜೀವಿಯೊಂದು ಕಾಣಿಸಿಕೊಂಡು ಆಕೆಗೆ ನೆರವಾಗುತ್ತದೆ. ನಾಯಕಿಗೆ ನೂಲುವ ಕಾರ್ಯದಲ್ಲಿ ತಾನು ನೆರವಾದರೂ ತನ್ನ ಹೆಸರನ್ನು ಸಕಾಲದಲ್ಲಿ ಹೇಳದಿದ್ದರೆ ಅವಳು ತನ್ನನ್ನೇ ಅರ್ಪಿಸಿಕೊಳ್ಳುವ ಸಂದರ್ಭ ಉಂಟಾಗುತ್ತದೆ. ನಾಯಕಿ ಉಪಾಯಾಂತರದಿಂದ ಆ ಜೀವಿಯ ಹೆಸರನ್ನು ತಿಳಿದುಕೊಳ್ಳುತ್ತಾಳೆ. ಬೇಕಾದಷ್ಟು ನೂಲುವ ಕೆಲಸವನ್ನು ಆದರಿಂದ ಮಾಡಿಸಿ ತನ್ನ ಪರೀಕ್ಷೆಯಲ್ಲಿ ಗೆಲ್ಲುತ್ತಾಳೆ.

ಅದ್ಭುತ ಕತೆಗಳು ಮಾಯಾಮಂತ್ರಗಳಿಗೆ ಸಂಬಂಧಪಡುತ್ತವೆ. ಮಾಂತ್ರಿಕ ವಸ್ತುಗಳ ನೆರವಿನಿಂದ ನಾಯಕ ಅಸಾಧ್ಯವಾದ ವಸ್ತು ವಿಶೇಷಗಳನ್ನು ಸಾಧಿಸಿ ದೊಡ್ಡ

ಆಶ್ಚರ್ಯವನ್ನೇ ಮರೆಯುತ್ತಾನೆ. ಅದ್ಭುತ ಘಟನೆಗಳಿಂದ ತುಂಬಿ ಹೋಗುವ ಇಂಥ ಕತೆಗಳಲ್ಲಿ ಹೆಜ್ಜೆ ಹೆಜ್ಜೆಗೂ ಆಶ್ಚರ್ಯ ಎದುರಾಗುತ್ತದೆ. ನಾಯಕನು ಹೇಗೋ ತಾನು ಪಡೆದ ಮಾಂತ್ರಿಕ ವಸ್ತುವನ್ನು ಕುತಂತ್ರಿಯೊಬ್ಬ ಅಪಹರಿಸುತ್ತಾನೆ. ನಾಯಕ ಅನೇಕ ಕಷ್ಟಗಳನ್ನು ಅನುಭವಿಸಿ ಮತ್ತೆ ಆ ವಸ್ತುವನ್ನು ಪಡೆದುಕೊಳ್ಳಬೇಕು. ತನ್ನ ಮಡದಿಯನ್ನೂ ಐಶ್ವರ್ಯವನ್ನೂ ಪುನಃ ಪಡೆಯಬೇಕು. ಇಂಥ ಕತೆಗಳ ಸಾಲಿನಲ್ಲಿ ಅಲ್ಲಾವುದ್ದೀನನ ಅದ್ಭುತ ದೀಪದಂಥ ಕತೆಗಳನ್ನು ಹೆಸರಿಸಬಹುದು.

ಕೆಲವು ಸಂದರ್ಭಗಳಲ್ಲಿ ಮಂತ್ರಶಕ್ತಿಯ ಬಲದಿಂದ ನಾಯಕ ತನ್ನ ಪ್ರತಿಸ್ಪರ್ಧಿಯನ್ನು ಗೆಲ್ಲುವ ರೋಮಾಂಚಕಾರಕ ಸನ್ನಿವೇಶಗಳು ಈ ಕಥಾಮಾಲೆಯಲ್ಲಿ ಬರುತ್ತವೆ.

ಪ್ರೇಮಿಗಳು ಮತ್ತು ದಂಪತಿಗಳಿಗೆ ಸಂಬಂಧಿಸಿದ ಕತೆಗಳು ಒಂದು ಪ್ರತ್ಯೇಕ ವಿಭಾಗವಾಗಿ ಈ ವರ್ಗದಲ್ಲಿಯೇ ಪರಿಗಣಿಸಲ್ಪಡುತ್ತವೆ. ನಾಯಕ ಅತಿ ಮಾನುಷ ಸುಂದರಿಯರನ್ನು ಮೋಹಿಸಿ ಅವಳನ್ನು ಪಡೆಯಲು ಅನೇಕ ರೀತಿಯಲ್ಲಿ ಹೆಣಗ ಬೇಕಾಗುತ್ತದೆ. ನಾಯಕಿ ಅತಿಮಾನುಷ ಪತಿಗಳನ್ನು ವರಿಸಿ ಅವನನ್ನು ಉಳಿಸಿಕೊಳ್ಳಲು ಅನೇಕ ಬಗೆಯಲ್ಲಿ ಪ್ರಯತ್ನಶೀಲಳಾಗುತ್ತಾಳೆ. ಪತಿ ಪತ್ನಿಯರು ಪರಸ್ಪರ ಅಗಲಿ ಎಷ್ಟೋ ಕಷ್ಟಪರಂಪರೆಗಳನ್ನು ಅನುಭವಿಸಿ ಮತ್ತೆ ಜೊತೆಗೂಡುವ ಸಂದರ್ಭಗಳು ಈ ಮಾಲೆಯಲ್ಲಿ ಹೆಚ್ಚಾಗಿ ಬರುತ್ತವೆ.

ನಾಯಕ ಅಥವಾ ನಾಯಕಿ ಕಷ್ಟಸಾಧ್ಯವಾದ ಅನೇಕ ಕಾರ್ಯಗಳನ್ನು ಗೆದ್ದು ಜಯವನ್ನು ಪಡೆಯುವ ಕತೆಗಳು ಸಾಹಸ ಕಥೆಗಳ ಗುಂಪಿನಲ್ಲಿ ಬರುತ್ತವೆ. ಅನೇಕ ಸಂದರ್ಭಗಳಲ್ಲಿ ನಾಯಕ ನಿಶ್ಚಿತಗುರಿಯಿಲ್ಲದೆಯೇ ಸಾಹಸಗಳಲ್ಲಿ ತೊಡಗಬಹುದು. ತನ್ನ ಮೆಚ್ಚಿನ ರಾಜಕುಮಾರಿಯನ್ನು ಪಡೆಯುವುದೊಂದೇ ಅವನ ಉದ್ದೇಶವಲ್ಲದಿರ ಬಹುದು. ಭಯ ಎಂದರೇನು ಎಂದು ಅರಿಯಲು ಹೊರಟ ಯುವಕನೊಬ್ಬ ಕೆಲವು ಭಯಂಕರ ಅನುಭವಗಳನ್ನು ಪಡೆದ ಕತೆ (ವರ್ಗ ೩೨೬) ಅಪೂರ್ವವಾದುದು. ನಾಯಕ ಭಯ ಎಂದರೇನು ಎಂಬುದನ್ನು ಕೇಳಿದ್ದ. ಆದರೆ ಅದನ್ನು ಅನುಭವಿಸಿರಲಿಲ್ಲ. ಭಯದ ಅನುಭವವನ್ನು ಪಡೆಯಲು ಅದನ್ನು ಅರಸಿಕೊಂಡೇ ಅವನು ಹೊರಟ. ಅನೇಕ ಅಪಾಯಕಾರಿ ಕಾರ್ಯಗಳಲ್ಲಿ ಅವನು ವಿಚಿತ್ರ ಅನುಭವಗಳನ್ನು ಪಡೆದ. ದೆವ್ವದ ಜೊತೆಯಲ್ಲಿ ಇಸ್ಪೀಟು ಆಡುತ್ತಾನೆ. ಮತ್ತೊಂದು ದೆವ್ವದ ಒಟ್ಟೆಯನ್ನು ಕದಿಯುತ್ತಾನೆ. ಗಲ್ಲುಮರದ ಕೆಳಗೆ ಒಂದು ರಾತ್ರಿಯನ್ನು ಕಳೆಯುತ್ತಾನೆ. ಸ್ಮಶಾನದಲ್ಲಿ ಮತ್ತೊಂದು ರಾತ್ರಿಯನ್ನು ಕಳೆಯುತ್ತಾನೆ. ಸತ್ತವರ ಕೈಬೆರಳು ಚಿಮಣಿಯಿಂದ ಬೀಳುವ ದೈತ್ಯ ಸೌಧವೊಂದರಲ್ಲಿ ಇರುತ್ತಾನೆ. ಕ್ಷೌರಿಕನ ರೂಪದ ದೆವ್ವವೊಂದರಿಂದ ಕ್ಷೌರಮಾಡಿಸಿಕೊಳ್ಳುತ್ತಾನೆ. ಇಷ್ಟಾದರೂ ಭಯವೆಂದರೇನೆಂಬ ಅನುಭವ ಅವನಿಗೆ ಆಗಲಿಲ್ಲ. ಆದರೆ ಅವನ ಮದುವೆಯಾದ ಮೇಲೆ ತಣ್ಣೀರನ್ನು

ಅವನ ಮೇಲೆ ಎರಚಿದಾಗ ಹೌಹಾರಿದವನು ಭಯ ಎಂದರೇನು ಎಂಬುದನ್ನು ಆಗ ಅರಿತುಕೊಂಡ.[30]

ಇಂಥ ಕತೆಗಳ ಜೊತೆಗೆ ಅತಿಮಾನುಷ ಪ್ರಭಾವವಿಲ್ಲದ ಅನೇಕ ಕತೆಗಳು ಈ ಗುಂಪಿನಲ್ಲಿ ಬರುತ್ತವೆ. ನಾಯಕ ನಾಯಕಿಯರು ಇತರರು ಒಡ್ಡುವ ಪರೀಕ್ಷೆಗಳಲ್ಲಿ ಅನೇಕ ಸಾಹಸಗಳನ್ನು ಮೆರೆದು ಗೆದ್ದು ಬರುತ್ತಾರೆ.

ವಿಧೇಯ ಪತ್ನಿ, ಸೇವಕಿ, ಸೋದರಿ ಮುಂತಾದ ಆಶಯಗಳನ್ನೊಳಗೊಂಡ ಕತೆಗಳು 'ವಿಧೇಯತೆ' ಎಂಬ ಪ್ರತ್ಯೇಕ ವರ್ಗಕ್ಕೆ ಸೇರಿದರೆ ಒಳ್ಳೆಯ ಅಥವಾ ಕೆಟ್ಟ ಬಂಧುಗಳು ಎಂಬ ವರ್ಗದಲ್ಲಿ ಅವಿಧೇಯ ಹೆಂಡತಿ, ತಂಗಿ, ತಾಯಿ, ಪತ್ನಿ ಮುಂತಾದ ವರು ನಾಯಕ ಅಥವಾ ನಾಯಕಿಯ ವಿರುದ್ಧವಾಗಿ ಎಸಗುವ ಕಾರ್ಯಗಳನ್ನೊಳಗೊಂಡ ಕತೆಗಳು ಬರುತ್ತವೆ.

ಹೀಗೆ ಅನೇಕ ಆಶಯಗಳಿಂದ ಕೂಡಿ ವಿಸ್ತಾರವಾಗಿ ಬೆಳೆದು ನಿಲ್ಲುವ ಸಂಕೀರ್ಣ ಕಥೆಗಳು ಜಗತ್ತಿನ ಎಲ್ಲ ಭಾಷೆಗಳಲ್ಲೂ ಲಭ್ಯವಾಗುತ್ತವೆ. ಅವುಗಳನ್ನು ಹಲವು ಬಗೆಗಳಲ್ಲಿ ವಿಭಜನೆ ಮಾಡಿಕೊಳ್ಳುವ ಪ್ರಯತ್ನ ಆಯಾ ಭಾಷೆಯ ಕತೆಗಳ ಹಿನ್ನೆಲೆ ಯಲ್ಲಿಯೇ ನಡೆಯಬೇಕಾದರೂ ಸ್ಟಿತ್ ಥಾಂಸನ್ ಅವರು ಮಾಡಿಕೊಂಡಿರುವ ಈ ವಿಭಜನೆಯಲ್ಲಿ ಜಗತ್ತಿನ ಜನಪದ ಕಥೆಗಳೆಲ್ಲ ಬಹುಮಟ್ಟಿಗೆ ಸೇರಿ ಹೋಗುತ್ತವೆ.

ಜನಪದ ಕಥೆಗಳಲ್ಲಿ ಸರಳಕಥೆಗಳ ಪಾತ್ರವೂ ಬಹಳ ದೊಡ್ಡದು. ವಿಶ್ವದ ಎಲ್ಲ ದೇಶಗಳ ಕಥಾಸಾಗರದಲ್ಲೂ ಅಪಾರಸಂಖ್ಯೆಯ ಸರಳಕಥೆಗಳು ಲಭ್ಯವಾಗುತ್ತವೆ. ಆದಷ್ಟು ಕಡಮೆ ಆಶಯಗಳ ಚೌಕಟ್ಟಿನಲ್ಲಿ, ಬಹುಮಟ್ಟಿಗೆ ಒಂದು ಅಥವಾ ಎರಡೇ ಆಶಯದ ಅಡಿಗಲ್ಲಿನ ಮೇಲೆ ಈ ಕಥೆಗಳು ನಿಲ್ಲುತ್ತವೆ. ಬಹುಪಾಲು ಪ್ರಾಣಿಕಥೆಗಳು, ವಿನೋದ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ನೀತಿಕಥೆಗಳು ಈ ಗುಂಪಿನಲ್ಲಿ ಬರುತ್ತವೆ. ಮೋಸ ವಂಚನೆಗೆ ಸಂಬಂಧಿಸಿದ ಲೈಂಗಿಕ ವಿಷಯಗಳಿಗೆ ಸಂಬಂಧಿಸಿದ, ಅಂಗಿಕ ದೋಷ ಗಳಿಗೆ ಸಂಬಂಧಿಸಿದ ವಿಷಯಗಳೂ ಸರಳಕಥೆಗಳ ವಸ್ತುವಾಗಬಹುದು.

ಸರಳಕಥೆಗಳ ವಸ್ತು ಸರಳವಾದುದು, ವಿನೋದಾತ್ಮಕವಾದುದು. ತಂತ್ರ ನೇರ ವಾದುವು ಎಂದು ಹೇಳಿದರೂ ಅನೇಕ ಸಂದರ್ಭಗಳಲ್ಲಿ ಸರಳಕಥೆಗೂ ಸಂಕೀರ್ಣಕಥೆಗೂ ಗೆರೆ ಎಳೆದಂತೆ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗುತ್ತದೆ. ಏಕಮುಖವಾದ ಆಶಯಗಳು ಎಷ್ಟು ಉದ್ದಕ್ಕಾದರೂ ಬೆಳೆಯುವ ಸಾಧ್ಯತೆ ಇರುತ್ತದೆ. ಪೆದ್ದರ ಕತೆಗಳು ಹೀಗೆ ಎಷ್ಟು ದೀರ್ಘವಾಗಿಯಾದರೂ ಬೆಳೆದು ನಿಲ್ಲಬಹುದು. ಇತರರನ್ನು ಮೋಸ ಗೊಳಿಸುವ ಅಥವಾ ದಡ್ಡತನವನ್ನು ಪ್ರದರ್ಶಿಸುವ ಅನೇಕ ಘಟನೆಗಳು ಒಂದಕ್ಕೊಂದು ಕೊಂಡಿಯಾಗಿ ಸೇರಿಕೊಳ್ಳಬಹುದು. ಜಾತ್ರೆಗೆ ಹೋದ ಶೂರರು, ಕೊಂಗನಹಳ್ಳಿ

30. *Ibid.*, p. 105.

ದಾಸಯ್ಯ, ಅಳ್ಳಣ್ಣ, ಬುಳ್ಳಣ್ಣ, ಸುಳ್ಳಣ್ಣ, ಮುಂಜುಂಗಣ್ಣಿನ ಮಾಯಣ್ಣ ಮುಂತಾದ ಕಥೆಗಳು ಸಂಕೀರ್ಣ ಕಥೆಗಳ ವ್ಯಾಪ್ತಿಯನ್ನೇ ಪಡೆದುಕೊಳ್ಳುತ್ತವೆ.

ಸರಳಕಥೆಗಳಲ್ಲಿ ಸೂತ್ರಕಥೆಗಳು (Formula tales) ಮತ್ತೊಂದು ವಿಶಿಷ್ಟ ಅಂಗವಾಗಿ ಬರುತ್ತವೆ. ಇಲ್ಲಿ ಕಥಾರೂಪ ಮಾತ್ರ ಮುಖ್ಯವಾದುದು. ವಸ್ತು ಸರಳವಾಗಿದ್ದು ಅತ್ಯಂತ ಜಾಣ್ಮೆಯಿಂದ ಬೆಳಸಿಕೊಂಡು ಹೋಗುವುದು ಈ ಕಥೆಗಳ ಮುಖ್ಯತಂತ್ರ. ಕತೆಯಲ್ಲಿ ಏನಾಗುತ್ತದೆ ಎನ್ನುವುದಕ್ಕಿಂತ, ಕತೆಗಾರ ಮೆರೆಯುವ ಚಮತ್ಕಾರವೇ ಗಮನಾರ್ಹವಾದುದು. ಒಂದೇ ಬಗೆಯ ಘಟನೆಗಳನ್ನೋ, ಕೆಲವು ಪದ್ಯಗಳನ್ನೋ, ನುಡಿಗಟ್ಟುಗಳನ್ನೋ ಪುನರುಕ್ತಿಗೊಳಿಸುತ್ತ, ಪ್ರಾಣಿಗಳ ಅಥವಾ ವ್ಯಕ್ತಿಗಳ ಹೆಸರನ್ನು ಮಾತ್ರ ಬದಲಿಸುತ್ತ ಒಂದೇ ಬಗೆಯ ಘಟನಾವಳಿಗಳನ್ನು ಚಿತ್ರಿಸುತ್ತ ಕತೆ ಅಂತ್ಯವನ್ನು ತಲುಪುತ್ತದೆ. ಅನೇಕ ವೇಳೆ ನಿರ್ದಿಷ್ಟ ನೆಲೆಯಿಂದ ಆರಂಭವಾದ ಕ್ರಿಯೆ ಒಂದು ಗುರಿಯನ್ನು ಮುಟ್ಟಿ ಮತ್ತೆ ಹೊರಟ ಸ್ಥಳವನ್ನೇ ಎಂದಿನಂತೆಯೇ ಬಂದು ಸೇರಿ ಅಲ್ಲಿ ಐಕ್ಯವಾಗುತ್ತದೆ.

ಡಾ. ಆರ್ಕಿಯಸ್ ಸುಂದರಂ

ಗಾದೆ

ಗಾದೆ, ನಾಣ್ಣುಡಿ, ಸಾಮತಿ ಎಂಬಿವು Proverb ಎಂಬ ಆಂಗ್ಲ ಪದಕ್ಕೆ ಸಮಾನಾರ್ಥಕವಾಗಿ ಕನ್ನಡದಲ್ಲಿ ಬಳಕೆಯಲ್ಲಿವೆ. ಸಂಸ್ಕೃತದಲ್ಲಿ ಇವನ್ನು ಸಂಭಾಷಿತ ವೆಂದೂ ಸೂಕ್ತಿ ಎಂದೂ ತಮಿಳಿನಲ್ಲಿ ಪಟಿಮೊಟಿ ಎಂದೂ ತೆಲುಗಿನಲ್ಲಿ ಸಾಮೆಂತ (ಕನ್ನಡ–ಸಾಮತಿ) ಎಂದೂ ಕರೆಯುವರು. ಜನಜೀವನವೆಷ್ಟು ವೈವಿಧ್ಯಮಯವೋ ಗಾದೆಯೂ ಅಷ್ಟೇ ವೈವಿಧ್ಯವನ್ನೊಳಗೊಂಡಿದೆ. ಗಾದೆಯು "ಸೂತ್ರ ಪುಸ್ತಕದ ಮೊದಲಿನಲ್ಲಿರಲಾಗದು ; ಕೊನೆಯಲ್ಲಿರಬೇಕು"[1] ಎಂಬ ಮಾತಿನಲ್ಲಿ ಅದರ ವೈವಿಧ್ಯ ಮಯ ಸ್ವರೂಪ ವ್ಯಕ್ತವಾಗುತ್ತದೆ.

ಅಬ್ರಹಾಂಸ್ (Abrahams) ಅವರು ಹೇಳಿದಂತೆ "ಗಾದೆಗಳು ದೈನಂದಿನ ಜೀವನದಲ್ಲಿ ಸಂಭಾಷಣೆಗಳಲ್ಲಿಯೂ ವಿದ್ಯಾವಿಷಯಕ ಸಂದರ್ಭಗಳಲ್ಲಿಯೂ ನ್ಯಾಯ ಸಂಬಂಧವಾದ ಕಾರ್ಯಕ್ರಮಗಳಲ್ಲಿಯೂ ಬಳಕೆಯಾಗುವ ಸಂಕ್ಷಿಪ್ತವಾದ, ವಿವೇಕಯುತ ವಾದ ಸಾಂಪ್ರದಾಯಿಕ ಅಭಿವ್ಯಕ್ತಿಗಳು.[2] ಇದರಲ್ಲಿ ಗಾದೆಯ ಮುಖ್ಯ ಲಕ್ಷಣಗಳೆಂದು ಹೇಳಬಹುದಾದ ಮೂರು ಲಕ್ಷಣಗಳು ಉಲ್ಲೇಖಗೊಂಡಿದೆ. ಅವು ಸಂಕ್ಷಿಪ್ತವಾಗಿರು ತ್ತವೆ. ವಿವೇಕಪೂರ್ಣವಾಗಿರುತ್ತವೆ ಮತ್ತು ಸಾಂಪ್ರದಾಯಿಕ ಅಭಿವ್ಯಕ್ತಿಗಳಾಗಿರುತ್ತವೆ. ಸಂಪ್ರದಾಯವೆಂಬುದು ಜಾನಪದದ ಇತರ ಅಂಶಗಳಿಗೂ ಅನ್ವಯವಾಗುವಂತಹದು. ಗಾದೆಯ ವೈಶಿಷ್ಟ್ಯವೆಂದರೆ ಸಂಕ್ಷಿಪ್ತವಾಗಿ, ವಿವೇಕಪೂರ್ಣವಾಗಿರುವುದು. ಈ ಎರಡರಲ್ಲಿ ಮೊದಲನೆಯದು ಗಾದೆಯ ಸ್ವರೂಪವನ್ನೂ ಎರಡನೆಯದು ಅದರ ಉಗಮವನ್ನೂ ಕುರಿತು ಹೇಳುವಂತಹವಾಗಿವೆ. ಹಲವರ ಜ್ಞಾನ ಒಬ್ಬನ ವಿವೇಕವಾಗಿ ಗಾದೆಗಳು ಉಗಮವಾಗುತ್ತವೆಂಬುದನ್ನು[3] ನಾವೆಲ್ಲ ನೆನೆಯಬಹುದು. ಗಾದೆಗಳು ಸಂಕ್ಷಿಪ್ತವಾಗಿರು ತ್ತವೆ. ಇಪ್ಪತ್ತು ಪದಗಳಿಗಿಂತ ಹೆಚ್ಚು ಇದ್ದರೆ ಅವು ಗಾದೆಗಳಲ್ಲ ಎನ್ನುವ ಅಭಿಪ್ರಾಯ ಇರುವುದನ್ನು[4] ನೋಡಿದರೆ ಸಂಕ್ಷಿಪ್ತತೆ ಗಾದೆಗಳ ಮುಖ್ಯ ಲಕ್ಷಣವೆಂಬುದು ಖಚಿತ ವಾಗುತ್ತದೆ.

ಕಲಾತ್ಮಕವಾದ ಪ್ರಾಚೀನ ಅಭಿವ್ಯಕ್ತಿಗಳಲ್ಲಿ ಒಂದಾದ ಗಾದೆಯಲ್ಲಿ ಸಾಮಾನ್ಯ ವಾಗಿ ಒಂದು ವಾಕ್ಯ ಅಥವಾ ಎರಡು ವಾಕ್ಯಗಳು ಮಾತ್ರ ಕಂಡುಬರುತ್ತವೆ. 'ಹಿತಮಿತ

ಮೃದುವಚನಂ' ಎಂಬುದು ಗಾದೆಗಳಿಗೆ ಚೆನ್ನಾಗಿ ಅನ್ವಯವಾಗುತ್ತದೆ. ಅಲ್ಪಾಕ್ಷರಗಳಲ್ಲಿ ಅನಲ್ಪಭಾವವನ್ನು ವ್ಯಕ್ತಮಾಡುವುದರಿಂದ ಈ ಗಾದೆಗಳಿಗೆ ಇರುವ ಬೆಲೆ ಅಮೂಲ್ಯವಾದುದು. ಅಗತ್ಯವಾದ ಪದಗಳನ್ನು ಮಿತವಾಗಿ ವ್ಯಯಮಾಡುವ ಗುಣ ಗಾದೆಗಳಲ್ಲಿ ಎದ್ದು ಕಾಣುತ್ತದೆ. ಆದರೆ ಗಾದೆಗಳು ಯಾವಾಗಲೂ ಸಂಕ್ಷಿಪ್ತವಾಗಿಯೇ ಇರುತ್ತವೆಂದಾಗಲಿ, ಸಂಕ್ಷಿಪ್ತವಾಗಿಲ್ಲದಿದ್ದರೆ ಅಂತಹದನ್ನು ಗಾದೆಯೆಂದೇ ಕರೆಯಬಾರದೆಂದಾಗಲಿ ಹೇಳಬಾರದು. ಸುದೀರ್ಘವಾಗಿಲ್ಲದೆ, ಗಂಭೀರವಾಗಿ, ಸೂಚ್ಯವಾಗಿ, ಅನುಭವವನ್ನು ವ್ಯಕ್ತೀಕರಿಸುವ ವಾಕ್ಯವನ್ನು ಗಾದೆ ಎಂದು ಹೇಳಿದರೆ ತಪ್ಪಾಗದು.

ಗಾದೆಗಳಲ್ಲಿ ಒಂದು ವಾಕ್ಯ ಇರಬಹುದು ಅಥವಾ ಸಮತೂಕ ಇರುವ ಎರಡು ವಾಕ್ಯಗಳಲ್ಲಿ, ಒಂದೇ ವಾಕ್ಯದಲ್ಲಿ ಎರಡು ಭಾಗಗಳಾಗಲಿ ಇರಬಹುದು. ಹೀಗೆ ಎರಡು ಭಾಗವಾಗಿರುವುದನ್ನು **caesura** ಎನ್ನುವರು. ***An apple a day keeps doctor away***, 'ಆಲದ ಮರಕ್ಕೊಂದು ಅಂದ ಬೇಲದ ಮರಕ್ಕೊಂದು ಚೆಂದ'. ಕನ್ನಡ ಉದಾಹರಣೆಯಲ್ಲಿರುವಂತೆ ಕೆಲವು ಗಾದೆಗಳ ಎರಡು ಸಮಾನ ಭಾಗಗಳಲ್ಲಿ ಅಕ್ಷರ ಸಂಖ್ಯೆಯೂ ಸಮಾನವಿರುತ್ತದೆ.

ಎರಡು ಸಮಾನ ಭಾಗಗಳಿಲ್ಲದಿದ್ದರೂ ಗಾದೆಗಳಲ್ಲಿ ಪ್ರಾಸಾನುಪ್ರಾಸಗಳಿಂದ ಕೂಡಿದ ಲಯ ಕಂಡುಬರುತ್ತದೆ ಗಾದೆಗಳ ವಾಕ್ಯಗಳನ್ನು ಪರಿಶೀಲಿಸಿದರೆ ಅವುಗಳಲ್ಲಿ ಪದ್ಯಪಾದಗಳು ಆಗಾಗ್ಗೆ ಕಂಡುಬರುತ್ತವೆ. ಇದು ಕನ್ನಡಕ್ಕೆ ಮಾತ್ರ ಸೀಮಿತವಾದುದಲ್ಲ. ಇಂಗ್ಲಿಷಿನಲ್ಲಾಗಲಿ, ತೆಲುಗಿನಲ್ಲಾಗಲಿ, ತಮಿಳಿನಲ್ಲಾಗಲಿ ಈ ಪ್ರಾಸಬದ್ಧತೆ, ಲಯ ಇರುತ್ತವೆ. ಪ್ರತಿ ಗಾದೆಯೂ ಅನುಭವ ತುಂಬಿದ ಕವಿತಾಖಂಡಿಕೆಯೆಂದು ಹೇಳಬಹುದು. ಕಾವ್ಯಗುಣಗಳು ಗಾದೆಗಳಲ್ಲಿರುತ್ತವೆಯೆಂದು ಇದರಿಂದ ಹೇಳಿದಂತಾಯಿತು.[5] ಲಯ ಎಂಬುದು ಪ್ರಾಚೀನ ಕಾವ್ಯಗುಣಗಳಲ್ಲಿ ಒಂದು. ಪ್ರಾಚೀನ ಮಾನವನ ಭಾಷೆ ಲಯಾತ್ಮಕವಾಗಿದ್ದಿತೆಂದು ಮಾನವಶಾಸ್ತ್ರ, ಭಾಷಾಶಾಸ್ತ್ರ ಹೇಳುತ್ತವೆ. ಆದುದರಿಂದ ಪ್ರಾಚೀನ ಮಾನವನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಗಾದೆಗಳಲ್ಲಿಯೂ ಲಯ ಇರುತ್ತದೆಂದು ಹೇಳಬಹುದು. ಈ ಲಯ ಗಾದೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ನೆರವಾಗುತ್ತದೆ.

ಮಾನವನ ವಿವೇಕವನ್ನು ಪ್ರತಿಬಿಂಬಿಸುವುದು ಗಾದೆಗಳ ಮತ್ತೊಂದು ಮುಖ್ಯ ಲಕ್ಷಣವೆಂದು ಹೇಳಬಹುದು. ಪ್ರಾಚೀನ ಮಾನವ ತಾನು ತಲೆ ತಲೆಮಾರುಗಳಿಂದ ಪಡೆದ ಅನುಭವವನ್ನು ಸಾರಭೂತವಾಗಿ ಗಾದೆಗಳ ರೂಪದಲ್ಲಿ ವ್ಯಕ್ತಮಾಡಿದೆ. ಆದರೆ ಒಬ್ಬ ವ್ಯಕ್ತಿ ತನ್ನ ಅನುಭವವನ್ನು ಒಂದು ವಾಕ್ಯದಲ್ಲಿ ಹೇಳಿದ ಕೂಡಲೇ ಅದು ಗಾದೆಯಾಗುತ್ತದೆಂದು ಹೇಳಲಾಗುವುದಿಲ್ಲ. ಅದು ಆ ಕ್ಷಣದಲ್ಲಿ ಒಂದು ಹೇಳಿಕೆಯಾಗುತ್ತದಷ್ಟೆ. ಆ ಹೇಳಿಕೆ ಜನರಲ್ಲಿ ಪ್ರಚಾರವನ್ನು ಪಡೆದು ತನ್ನದೇ ಆದ ಒಂದು ಸಂಪ್ರದಾಯವನ್ನು ಗಳಿಸಿಕೊಂಡು ಆಮೇಲೆ ಗಾದೆಯಾಗುತ್ತದೆ. ಇದನ್ನು ಒಂದು ನಾಣ್ಯಕ್ಕೆ ಹೋಲಿಸಬಹುದು. ಯಾರಾದರೂ ಒಂದು ನಾಣ್ಯವನ್ನು ಮುದ್ರಿಸಿದರೆ

ಅದು ಚಲಾವಣೆಗೆ ಬರುವುದಿಲ್ಲ. ಪ್ರಭುತ್ವದವರು ಮುದ್ರಿಸಿದ ನಾಣ್ಯ ಪ್ರಜೆಗಳ ಬಳಕೆಗೆ ಬಂದು ಪ್ರಾಚುರ್ಯವನ್ನು ಪಡೆದನಂತರವೇ ಅದಕ್ಕೆ ಬೆಲೆ ಬರುತ್ತದೆ. ಹಾಗೆಯೇ ಸಂಪ್ರದಾಯ, ಜನಪ್ರಿಯತೆಯಿಲ್ಲದ ಹೇಳಿಕೆ ಹೇಳಿಕೆಯಾಗಿಯೇ ಉಳಿಯುತ್ತದೆ. ಆದುದರಿಂದ ಒಬ್ಬ ವ್ಯಕ್ತಿ ವಿವೇಕದಿಂದ ಹೇಳಿದ ಮಾತು ನಾಲ್ಕು ಜನರ ಬಾಯಲ್ಲಿ ಇದ್ದು ಬಾಯಿಂದ ಬಾಯಿಗೆ ಪ್ರಚಾರವಾಗಿ, ಜನಪ್ರಿಯವಾಗಿ ಗಾದೆಯಾಗುತ್ತದೆ. ವಿವೇಕಪೂರ್ಣತೆ. ಸಂಪ್ರದಾಯ, ಜನಪ್ರಿಯತೆಗಾದೆಯ ಲಕ್ಷಣಗಳೆಂದು ಇದರಿಂದ ಸ್ಪಷ್ಟ.

ತೀಕ್ಷ್ಣತೆ ಗಾದೆಯ ಮತ್ತೊಂದು ಲಕ್ಷಣ. ಹೇಳುವ ವಿಷಯವನ್ನು ಗಾದೆಗಳು ನೇರವಾಗಿ ಹೇಳುತ್ತವೆ. ಮಾನವನ ದೀರ್ಘಕಾಲದ ಅನುಭವದ ಆಧಾರದಿಂದ ಹೊರಬಂದ ಸಂಕ್ಷಿಪ್ತವಾದ ಹೇಳಿಕೆಗಳಾದುದರಿಂದ ಇವುಗಳಿಗೆ ಈ ತೀಕ್ಷ್ಣತೆ ಲಭ್ಯ ವಾಯಿತೆಂದು ಹೇಳಬಹುದು. ಗೂಢಾರ್ಥ ದ್ಯೋತಕವಾಗಿ ಹೇಳುವುದು ಗಾದೆಯ ಮತ್ತೊಂದು ಲಕ್ಷಣವೆಂದು ಹೇಳಬಹುದು. ಗಾದೆಗಳ ಭಾಷೆ ಸಂಕೇತಾತ್ಮಕವಾಗಿರು ತ್ತದೆ. ರೂಪಕಗಳು, ಉಪಮೆಗಳು, ದೃಷ್ಟಾಂತಗಳು ಗಾದೆಗಳಲ್ಲಿ ಸರ್ವೇಸಾಮಾನ್ಯ ವಾಗಿ ಕಂಡುಬರುತ್ತವೆ. ಸ್ವಭಾವೋಕ್ತಿಗಳೂ ಆಗಾಗ್ಗೆ ಕಾಣಬರುತ್ತವೆ.

ಮೇಲಿನ ಲಕ್ಷಣಗಳಿದ್ದರೆ ಮಾತ್ರ ಅವು ಗಾದೆಗಳಾಗುತ್ತವೆಂದಾಗಲಿ, ಗಾದೆಗಳಿಗೆ ಇನ್ನು ಯಾವ ಲಕ್ಷಣಗಳೂ ಇರುವುದಿಲ್ಲವೆಂದಾಗಲಿ ಹೇಳುವಂತಿಲ್ಲ. ಗಾದೆಗಳಲ್ಲಿ ಕಂಡುಬರುವ ವೈವಿಧ್ಯ ಅಸಾಧಾರಣವಾದುದು. ಒಟ್ಟಿನಲ್ಲಿ ಸಂಕ್ಷಿಪ್ತವಾದ, ವಿವೇಕ ಪೂರ್ಣವಾದ, ತೀಕ್ಷ್ಣವಾದ, ಸಾಂಪ್ರದಾಯಿಕವಾದ, ಜನಪ್ರಿಯತೆಯುಳ್ಳ ಅನುಭವದ ಅಭಿವ್ಯಕ್ತಿಯನ್ನು ಗಾದೆಯೆಂದು ಸೂತ್ರೀಕರಿಸಬಹುದು.

ಉಗಮ–ವಿಕಾಸ

ಗಾದೆಯ ಉಗಮಕ್ಕೆ ಕಾರಣವೇನು, ಗಾದೆ ಯಾವ ಸಮಾಜದಲ್ಲಿ ಯಾವ ಕಾಲ ದಲ್ಲಿ, ಯಾವ ರೀತಿ ಉಗಮವಾಗುತ್ತದೆಂಬ ಪ್ರಶ್ನೆಗಳಿಗೆ ಉತ್ತರ ಹೇಳುವುದು ಸುಲಭ ವಲ್ಲ. ಪ್ರಾಚೀನ ಮಾನವ ತನ್ನ ಸುಖದುಃಖಗಳನ್ನು ಅಭಿವ್ಯಕ್ತಿ ಮಾಡಲು, ತನ್ನ ಅನುಭವಗಳನ್ನು ಬೇರೆಯವರಿಗೆ ತಿಳಿಸಲು ಗೀತೆಗಳನ್ನು, ಕಥೆಗಳನ್ನು, ಗಾದೆಗಳನ್ನು ಉಪಯೋಗಿಸಿಕೊಂಡ. ಮೌಲಿಕವಾದ ಪ್ರತಿಭಾಶಕ್ತಿ, ಕಲ್ಪನೆಯ ಆಸಕ್ತಿ ಇದ್ದ ಪ್ರಾಕ್ತನ ಮಾನವ ಗಾದೆಗಳನ್ನು ಸೃಷ್ಟಿಸಿದನೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅದು ಎಷ್ಟು ಪ್ರಾಚೀನ ಕಾಲದಲ್ಲಿ ನಡೆಯಿತೆಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ.

ಗಾದೆಗಳನ್ನು ಕುರಿತು ವಿವೇಚನೆ ಮಾಡುವಾಗಲೂ ನಾವು ಉಳಿದ ಜಾನಪದ ಅಂಶಗಳಿಗೆ ಅನ್ವಯಿಸುವ ಸಿದ್ಧಾಂತ ಮತ್ತು ವಿಧಾನಗಳನ್ನೇ ತೆಗೆದುಕೊಳ್ಳಬಹುದು. ಗೀತೆ, ಕಥನಗೀತೆ ಮುಂತಾದುವನ್ನು ಕುರಿತು ಹೇಳುವಾಗ ಅಂತಹ ಕೆಲವು ಸಿದ್ಧಾಂತ ಗಳನು ಹೆಸರಿಸಲಾಗಿದೆ. ಯಾವ ಅಂಶದ ಉಗಮವನ್ನು ಕುರಿತು ವಿವೇಚಿಸಿದರೂ

ಅನ್ವಯಿಸತಕ್ಕ ಸಿದ್ಧಾಂತಗಳನ್ನು ಮೂರು ವಿಭಾಗಗಳಲ್ಲಿ ಗುರುತಿಸಬಹುದು. ಮಾನಸಿಕ ವಾಗಿ ಹೇಗೆ ಉಗಮವಾಯಿತೆಂದು ಚಿಂತನೆಮಾಡುವುದು ಮೊದಲನೆಯದು. ಐತಿಹಾಸಿಕವಾಗಿ ಅದು ಎಷ್ಟು ಪ್ರಾಚೀನವಾದುದೆಂಬುದನ್ನು ಪರಿಶೀಲಿಸುವುದು ಎರಡನೆಯದು. ಭೌಗೋಳಿಕವಾಗಿ ಆ ಅಂಶ ಎಲ್ಲಿ ಉಗಮವಾಗಿ, ವಿಕಾಸ ಹೊಂದಿ ತೆಂದು ಅನುಶೀಲನೆಮಾಡುವುದು ಮೂರನೆಯದು. ಮನೋವಿಶ್ಲೇಷಣ ಸಿದ್ಧಾಂತ (Pshycho-analysis). ಸ್ವಪ್ನ ಸಿದ್ಧಾಂತ ಮುಂತಾದವು ಗಾದೆ ಇತ್ಯಾದಿಗಳು ಯಾವ ಮಾನಸಿಕ ಸ್ಥಿತಿಯಲ್ಲಿ ಉಗಮವಾಗುತ್ತವೆ, ಅವುಗಳಲ್ಲಿ ಕಂಡು ಬರುವ ವಿವೇಕ ಶೂನ್ಯತೆಗೆ (irrationality) ಕಾರಣವೇನು ಎಂಬೀ ವಿಷಯಗಳ ವಿವೇಚನೆಗೆ ನೆರವಾಗುತ್ತವೆ. ಒಂದು ಗಾದೆ ಯಾವ ಕಾಲದಲ್ಲಿ ಹುಟ್ಟಿತು ಎಂದು ಸಂಶೋಧನೆ ಮಾಡಿ ನಿರ್ಣಯಿಸಲು ಪ್ರಯತ್ನಪಟ್ಟರೆ ಅದು ಚಾರಿತ್ರಿಕ ಅಧ್ಯಯನವಾಗುತ್ತದೆ. ಉದಾಹರಣೆಗೆ 'ಕೃಷ್ಣರಾಯ ಭೂಪ ಮನೆ ಮನೆಗೆ ದೀಪ,' 'ಬುಕ್ಕರಾಯ ಮೆಂಚ್ಚಿ ಬೆಕ್ಕಿನ ಮರಿ ಇತ್ತ' ಮುಂತಾದ ಗಾದೆಗಳು ವಿಜಯನಗರ ಕಾಲಕ್ಕೆ ಅಥವಾ ಅನಂತರ ಕಾಲಕ್ಕೆ ಸಂಬಂಧಿಸಿದುವೆಂದು ಊಹಿಸಬಹುದು. ಭೌಗೋಳಿಕವಾಗಿ ಅಧ್ಯಯನ ನಡೆಸಲು ಚಾರಿತ್ರಿಕ ಭೌಗೋಳಿಕ ವಿಧಾನ ಉಪಯೋಗಿಸುತ್ತದೆ. ಫಿನ್ನಿಶ್ ವಿಧಾನ ವೆಂದು ಹೆಸರುಗಳಿಸಿರುವ ಈ ವಿಧಾನದಂತೆ ಕಥೆ, ಗಾದೆ ಮೊದಲಾದ ಜನಪದ ಸಾಹಿತ್ಯ ಪ್ರಕಾರಗಳ ಅನೇಕ ಪಾಠಗಳನ್ನು ಸಂಗ್ರಹಮಾಡಿ ಅವುಗಳ ಮೂಲ ಪಾಠವನ್ನು ಕಂಡು ಹಿಡಿಯುವ ಪ್ರಯತ್ನ ನಡೆಯಬೇಕು. ಈ ವಿಧಾನ ಏಕಮೂಲ ಸಿದ್ಧಾಂತ (Monogenesis) ವನ್ನು ಬಲಪಡಿಸುತ್ತದೆ. ಎಂದರೆ ಇದರ ಪ್ರಕಾರ ಒಂದು ಗಾದೆ ಅಥವಾ ಕಥೆ ಯಾವುದೋ ಒಂದು ಪ್ರದೇಶದಲ್ಲಿ ಹುಟ್ಟಿ ಬೇರೆ ಸ್ಥಳಗಳಿಗೆ ಪ್ರಯಾಣ ಮಾಡುತ್ತದೆ. ಜಾನಪದ ಅಂಶಗಳ ಪ್ರದೇಶ ಅಸ್ತಿತ್ವವನ್ನು ಇನ್ನೊಂದು ರೀತಿ ವಿವರಿಸುವಂತಹದು ಬಹು ಮೂಲ ಸಿದ್ಧಾಂತ. ಇದರ ಪ್ರಕಾರ ಗಾದೆಗಳು ಮುಂತಾದುವು ಬೇರೆ ಬೇರೆ ಪ್ರದೇಶಗಳಲ್ಲಿ ಸ್ವತಂತ್ರವಾಗಿ ಹುಟ್ಟುತ್ತವೆ. ಬೇರೆ ಬೇರೆ ಪ್ರದೇಶಗಳ ಗಾದೆಗಳಲ್ಲಿ ಏನಾದರೂ ಹೋಲಿಕೆಗಳು ಕಂಡುಬಂದರೂ ಅವು ಮಾನವ ಮನೋಧರ್ಮದ ಸಾಮ್ಯತೆಯನ್ನು ಸೂಚಿಸುತ್ತವೆಯೇ ಹೊರತು ಒಂದರಿಂದ ಇನ್ನೊಂದು ಹುಟ್ಟಿತೆಂದಲ್ಲ. ಹೀಗೆ ಅನೇಕ ಸಿದ್ಧಾಂತಗಳು ಗಾದೆಗಳ ಹುಟ್ಟು, ಬೆಳವಣಿಗೆ ಗಳನ್ನು ವಿವರಿಸಲು ಪ್ರಯತ್ನಪಡುತ್ತವೆ.

ಕೆಲವು ಗಾದೆಗಳು ಕಥೆಗಳಿಂದ ಅಥವಾ ಕಥೆಗಳ ಆಧಾರದಿಂದ ಹುಟ್ಟುತ್ತವೆಂದು ಹೇಳಬಹುದು. ಒಂದು ಕಥಾಭಾಗವನ್ನಾಗಲಿ, ಪೂರ್ತಿ ಕಥೆಯನ್ನಾಗಲಿ ಸೂಚಿಸುವ ಗಾದೆಗಳು ಕೆಲವಿವೆ. ಪುರಾಣ, ಇತಿಹಾಸಗಳು ಕೆಲವು ಗಾದೆಗಳ ಉಗಮಕ್ಕೆ ಕಾರಣ ವಾದವು. ಬೈಬಲ್, ರಾಮಾಯಣ, ಮಹಾಭಾರತ, ಪಂಚತಂತ್ರ ಮೊದಲಾದವು ಅನೇಕ ಗಾದೆಗಳು ಉಗಮವಾಗಲು ನೆರವಾದವು, ಉದಾ. ಮಣ್ಣಿನಿಂದ ಕೌರವ ಕೆಟ್ಟ,

ಹೆಣ್ಣಿನಿಂದ ರಾವಣ ಕೆಟ್ಟ, ಅಳಿಲಭಕ್ತಿ, ಮಳಲ ಸೇವೆ. ಕೆಲವು ಗಾದೆಗಳು ಯಾವುದೋ ಒಂದು ಕಥೆಯನ್ನು ಸೂಚಿಸುತ್ತವೆ ಅಥವಾ ಕಥೆಗಳ ಬಾಲವಾಗಿ ಹುಟ್ಟಿಕೊಳ್ಳುತ್ತವೆ. 'ಕುರುಡರು ಆನೆ ನೋಡಿದ ಹಾಗೆ, ಸಿಕ್ಕದ ದ್ರಾಕ್ಷಿ ಎಲ್ಲ ಹುಳಿ ಇತ್ಯಾದಿ ಉದಾಹರಣೆಗಳು.

ಕೆಲವು ಗಾದೆಗಳು ಸ್ಥಳ ಪುರಾಣಗಳನ್ನು ಒಂದು ದೇಶದ ಚರಿತ್ರೆಗೆ ಸಂಬಂಧಿಸಿದ ವಿಷಯಗಳನ್ನೂ ಸೂಚಿಸುತ್ತವೆ. 'ಫ್ರಾನ್ಸ್ ದೇಶದವರು ಹಸಿವಾದರೆ ಕಾಗೆಯನ್ನೂ ಬಿಡರು' ಎಂದು ರಷ್ಯನರಲ್ಲಿ ಒಂದು ಗಾದೆಯಿದೆ. ನೆಪೋಲಿಯನ್ ರಷ್ಯಾಮೇಲೆ ದಾಳಿಮಾಡಿದಾಗ ಫ್ರೆಂಚು ಸೈನಿಕರು ಹಸಿವು ತಾಳಲಾರದೆ ಕಾಗೆಗಳನ್ನೂ ಕೊಂದು ತಿಂದರೆಂದು ಪ್ರತೀತಿ. *See Naples and die* ಎಂಬುದು ಒಂದಾನೊಂದು ಕಾಲ ದಲ್ಲಿ ನೇಪಲ್ಸ್ ವ್ಯಾಪಾರಕ್ಕೂ, ಕಲೆಗಳಿಗೂ ಕೇಂದ್ರವಾಗಿದ್ದ ವಿಷಯುವನ್ನು ಸೂಚಿಸು ತ್ತದೆ. *All roads lead to Rome* ಎಂಬ ಗಾದೆ ರೋಮನ್ನರು ರಸ್ತೆಗಳನ್ನು ಹಾಕುವುದರಲ್ಲಿ ನಿಪುಣರಾಗಿದ್ದರೆಂಬುದನ್ನು ಸೂಚಿಸುತ್ತದೆ. ಇದು ರೋಮನ್ನರ ಬೌದ್ಧಿಕ ಪ್ರಗತಿಯನ್ನು ಸೂಚಿಸುವುದೂ ಆಗಿರಬಹುದು. 'ಹಂಪೆಗೆ ಹೋಗುವುದ ಕ್ಕಿಂತ ತನ್ನ ಕೊಂಪೆಯೇ ವಾಸಿ' ಎಂಬುದು ವಿಜಯನಗರದ ರಾಜ್ಯಪತನವನ್ನು ಸೂಚಿಸುವುದೆಂದು ಹೇಳುವರು. ಹೀಗೆ ಅನೇಕ ಚಾರಿತ್ರಿಕ ವಿಷಯಗಳು, ಸ್ಥಳ ವೈಶಿಷ್ಟ್ಯ ಗಾದೆಗಳ ಉಗಮಕ್ಕೆ ಕಾರಣವಾದವು.

ದೈನಂದಿನ ಜೀವನದಲ್ಲಿ ನಾವು ಕಂಡವು, ಕೇಳಿದವು, ಅನುಭವಿಸಿದಂಥವೂ ಗಾದೆಗಳ ರೂಪದಲ್ಲಿ ಹೊರಬರುತ್ತವೆ. ಎಷ್ಟೋ ಗಾದೆಗಳು ಸರಳವಾದ ಉಪಮೆಗಳ ರೂಪದಲ್ಲಿಯೂ, ಅನುಭವ ಸಾರದುಂಬಿರುವ ವಾಕ್ಯಗಳಲ್ಲಿಯೂ, ಹಾಸ್ಯಮಯ ಅಭಿವ್ಯಕ್ತಿಗಳಾಗಿಯೂ ಇರುತ್ತವೆ. 'ರಾತ್ರಿಯೆಲ್ಲಾ ರಾಮಾಯಣ ಕೇಳಿ, ಬೆಳಗ್ಗೆ ರಾಮನಿಗೆ ಸೀತೆ ಏನಾಗುತ್ತಾಳೆಂದು ಕೇಳಿದಂತೆ' ಎಂಬುದು ಯಾವ ರಾಮಾಯಣ ಪುರಾಣ ಕಾಲಕ್ಷೇಪದ ಕಾಲದಲ್ಲಿ ಹೊರ ಬಂದಿತೋ ! 'ಒರಳಲ್ಲಿ ತಲೆಯಿಟ್ಟರೆ ಒನಕೆ ಪೆಟ್ಟು ತಪ್ಪೀತೇ' ಎಂಬ ಗಾದೆ ಒನಕೆಯ ಸ್ವಭಾವವನ್ನೇ ಅಲ್ಲದೆ, ನೋಡಿದವನ ಅನುಭವವನ್ನೂ ಹೇಳುತ್ತದೆ. 'ಚಿಕ್ಕಮೆಣಸಿನ ಕಾಯಿಗೆ ಕಾರ ಹೆಚ್ಚು' ಎಂಬುದು ಅನುಭವವಲ್ಲದೆ ಇನ್ನೇನು ? ಯಾವ ಮೂರ್ಖನನ್ನು ನೋಡಿಯೋ ಒಬ್ಬ 'ತನ್ನ ಕುದುರೆಗೆ ಮೂರೇ ಕಾಲು' ಎಂದು ಹೇಳಿರಬೇಕು. 'ನೀರೂ ತಾವರೆಯೂ ಇದ್ದ ಹಾಗೆ' ಎಂಬುದು ಪ್ರಕೃತಿ ಪರಿಶೀಲನೆ ಮಾತ್ರವಲ್ಲದೆ ತುಂಬು ಅನುಭವದಿಂದ ಹೇಳಿದ ಮಾತು ಹೀಗೆ ಗಾದೆಗಳು ನಮ್ಮ ಜೀವನಾನುಭವ ಆಧಾರವಾಗಿ ಉಗಮವಾಗುತ್ತವೆ.

ಜನಪದ ಸಾಹಿತ್ಯದ ಇತರ ಅಂಶಗಳಂತೆ ಗಾದೆಗಳೂ ಸಾಮೂಹಿಕ ವಿಕಾಸವನ್ನು ಹೊಂದುವಂತಹವಾದರೂ ಅವುಗಳ ಸೃಷ್ಟಿ ಮೊದಲು ವೈಯಕ್ತಿಕವಾಗಿಯೇ ಇರಬಹುದು. ತಲೆತಲೆಮಾರುಗಳಿಂದ ಮನುಷ್ಯ ಸಂಪಾದಿಸಿಕೊಂಡ ಅನುಭವ ಯಾರೋ ಒಬ್ಬರ ಬಾಯಲ್ಲಿ ವಿವೇಕ ಪೂರ್ಣವಾದ ಹೇಳಿಕೆಯಾಗಿ ಹೊರಬರುತ್ತದೆ. ಅದನ್ನು ಜನರು ಗ್ರಹಿಸಿ ಅದಕ್ಕೆ ಪ್ರಾಚುರ್ಯವನ್ನೂ ಕೊಟ್ಟರೆ ಆ ಹೇಳಿಕೆ ಗಾದೆಯಾಗು

ತ್ತದೆ. 'ಹಲವರ ಜ್ಞಾನ, ಒಬ್ಬನ ವಿವೇಕ' ಎಂಬ ಮಾತು ಗಾದೆಗಳ ಉಗಮವನ್ನು ಹೇಳುತ್ತದೆ. ಜ್ಞಾನವೆಂಬುದು ವೈಯಕ್ತಿಕವಾಗಿ ಲಭಿಸುವುದಲ್ಲ. ನಾಲ್ಕು ಜನರೊಂದಿಗೆ ಮಾತಾಡಿ, ನಾಲ್ಕು ಪುಸ್ತಕಗಳನ್ನು ಓದಿ, ಸಮಾಜದಲ್ಲಿ ಒಬ್ಬನಾಗಿ ಎಷ್ಟೋ ಕಲಿತರೆ ಮಾತ್ರ ಜ್ಞಾನ ಲಭಿಸುತ್ತದೆ. ವಿವೇಕ ಒಬ್ಬ ವ್ಯಕ್ತಿಗೆ ಸಂಬಂಧಿಸಿದುದು. ಹೀಗೆ ಸಮಾಜದಲ್ಲಿ ತಾನು ಸಂಪಾದಿಸಿದ ಜ್ಞಾನಕ್ಕೆ ತನ್ನ ವಿವೇಕ ಜತೆಯಾಗಲು ಗಾದೆಗಳು ಉಗಮವಾಗುತ್ತವೆ.

ಈಗಾಗಲೇ ಹೇಳಿದಂತೆ ಗಾದೆಗಳ ವಿಕಾಸವನ್ನು ಕುರಿತು ಎರಡು ಅಭಿಪ್ರಾಯ ಗಳಿವೆ. ಗಾದೆಗಳು ಒಂದು ಪ್ರದೇಶದಲ್ಲಿ ಹುಟ್ಟಿ ಬೇರೆ ಪ್ರದೇಶಗಳಿಗೆ ಪ್ರಯಾಣ ಮಾಡುತ್ತವೆಂಬುದು ಒಂದು ಅಭಿಪ್ರಾಯ. ಬೇರೆಬೇರೆ ಪ್ರದೇಶಗಳಲ್ಲಿ ಸ್ವತಂತ್ರವಾಗಿ ಹುಟ್ಟುತ್ತವೆಂಬುದು ಇನ್ನೊಂದು ಅಭಿಪ್ರಾಯ. ಡಾ. ಚಾಂಪಿಯನ್ ಹೀಗೆ ಹೇಳು ತ್ತಾರೆ–'ಗಾದೆ ಜ್ಞಾನ ಜಗತ್ತಿನಲ್ಲೆಲ್ಲ ಒಂದೆಯೋ, ಭಿನ್ನತೆಯೋನಿದ್ದರೂ ಅದರ ಪ್ರಕಟಣೆ ಯಲ್ಲಿ': ಮಾನವರೆಲ್ಲ ಒಂದೇ ಬಣ್ಣದಿಂದ ಮಾಡಿದವರೇ. ಮೂಲಭೂತವಾಗಿ, ಪೌರ್ವಾತ್ಯ ಪಾಶ್ಚಾತ್ಯರೆನ್ನದೆ, ಬಿಳಿಯ ಕರಿಯರೆನ್ನದೆ ಮನೋವೈಜ್ಞಾನಿಕವಾಗಿ ಅವರೆಲ್ಲ ಒಂದೇ ಆಗಿದ್ದಾರೆ. ಮೂಲಭೂತ ವಿಷಯಗಳಾದ ಪ್ರೀತಿ, ಹಸಿವು ಮತ್ತು ಭಯಗಳು ಅಸಂಸ್ಕೃತ ಸಂಸ್ಕೃತರೆನ್ನದೆ ಎಲ್ಲರಲ್ಲಿಯೂ ಸಮಾನವಾಗಿರುವ ಗುಣಗಳು. ವಾತಾವರಣ ವಾಗಲಿ, ನಾಗರಿಕತೆಯಾಗಲಿ ಇವುಗಳ ಮೇಲೆ ಪ್ರಭಾವ ಬೀರಲಾರವು. ಮಾನವಕುಲದ ಈ ಮೂಲಭೂತ ಪ್ರವೃತ್ತಿಗಳನ್ನು ಯುಗಯುಗಗಳ ನಾಗರಿಕತೆಗಳಾವುವೂ ನಿವಾರಿಸ ಲಾರವು.[6]

ಅತ್ಯಂತ ಪ್ರಾಚೀನವಾದ ಗಾದೆಗಳು ಯಾವ ದೇಶದಲ್ಲಿ ಹುಟ್ಟಿದುವೆಂಬ ಅಂಶವೂ ವಿದ್ವಾಂಸರನ್ನು ಆಕರ್ಷಿಸಿದೆ. ಬಾಬಿಲೋನಿಯಾ, ಈಜಿಪ್ಟ್, ಇಂಡಿಯಾ ದೇಶಗಳ ಅತಿ ಪ್ರಾಚೀನ ಗ್ರಂಥಗಳಲ್ಲಿಯೂ ಗಾದೆಗಳು ಕಂಡುಬರುತ್ತವೆ. ಏಸುಕ್ರಿಸ್ತನು ಸುವಾರ್ತೆ ಗಳಲ್ಲಿ ಗಾದೆಗಳನ್ನೂ ಬಳಸಿಕೊಂಡಿದ್ದಾನೆ. ಮುಸ್ಲಿಮರ ಖೊರಾನ್‌ನಲ್ಲಿ ಗಾದೆಗಳು, ಗಾದೆಗಳನ್ನು ಹೋಲುವ ವಾಕ್ಯಗಳು ಅನೇಕ ಸಿಕ್ಕುತ್ತವೆ. ವೇದಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ ಸುಭಾಷಿತಗಳು, ನುಡಿಗಟ್ಟುಗಳು ಅಸಂಖ್ಯಾತವಾಗಿ ಕಾಣಿಸು ತ್ತವೆ. ಪ್ರಾಚೀನ ಕಾಲದ ಭಾರತೀಯ ಋಷಿಗಳು, ಅರಿಸ್ಟಾಟಲ್, ಪ್ಲೇಟೋ ಮುಂತಾದ ದಾರ್ಶನಿಕರು ಬಹಳವಾಗಿ ಗಾದೆಗಳನ್ನು ಬಳಸಿರುವರು. ಅವರು ಹೇಳಿದ ಕೆಲವು ವಾಕ್ಯಗಳು ಗಾದೆಗಳಾಗಿರುವ ಸಂದರ್ಭಗಳೂ ಉಂಟು.

ಹೀಗೆ ಗಾದೆಗಳ ಉಗಮಕ್ಕೆ ಒಂದೊಂದು ಸಾರಿ ದಾರ್ಶನಿಕರ ಮಾತುಗಳೂ ಹಿನ್ನೆಲೆಯಾಗಬಹುದು. ಸಾಮಾನ್ಯ ಜನರ ಅನುಭವ ವಾಕ್ಯಗಳೂ ಗಾದೆಗಳಾಗ ಬಹುದು. ಆಚಾರಗಳು, ಆಶಯಗಳು, ಪ್ರಕೃತಿ ಪರಿಶೀಲನೆ, ಸ್ವಭಾವದ ಅನುಶೀಲನೆ, ಚಾರಿತ್ರಿಕ ಸ್ಥಳಗಳು, ಪ್ರಾಚೀನ ಪುರಾಣಗಳು, ದೈನಿಕ ಜೀವನದಲ್ಲಿ ನಾವು ನೋಡಿ ಅನುಭವಿಸುವ ಪ್ರತಿಯೊಂದು ವಿಷಯವೂ ಗಾದೆಗಳ ಉಗಮಕ್ಕೆ ಕಾರಣವಾಗಬಹುದು.

ವರ್ಗೀಕರಣ :

ಗಾದೆಗಳಷ್ಟು ವೈವಿಧ್ಯ ಇರುವ ಅಂಶಗಳನ್ನು ವರ್ಗೀಕರಿಸುವುದು ಬಹಳ ಕಷ್ಟದ ಕೆಲಸ. ಗಾದೆಗಳ ವಿಭಾಗಕ್ರಮಕ್ಕೆ ಅನೇಕ ವಿಧಾನಗಳನ್ನು ವಿದ್ವಾಂಸರು ಸೂಚಿಸಿದರು. ಆದರೆ ಅವುಗಳಲ್ಲಿ ಯಾವುದೂ ಸಮರ್ಪಕವಲ್ಲ. ಯಾಕೆಂದರೆ ಯಾವ ವರ್ಗೀಕರಣವೂ ಗಾದೆಗಳ ವೈವಿಧ್ಯವನ್ನು ಪೂರ್ತಿಯಾಗಿ ಪ್ರತಿನಿಧಿಸಲಾರದು. ಗಾದೆಗಳನ್ನು ವಿಭಾಗ ಮಾಡುವಾಗ ಮುಖ್ಯವಾಗಿ ಎರಡು ವಿಧಾನಗಳನ್ನು ಅನುಸರಿಸುವರು. ಅಕಾರಾದಿ ಯಾಗಿ ವಿಭಾಗ ಮಾಡುವುದು ಒಂದು ಮಾರ್ಗ. ಇದನ್ನು ಎರಡುರೀತಿ ಮಾಡಬಹುದು. ಗಾದೆಗಳ ಮೊದಲ ಮಾತನ್ನು ತೆಗೆದುಕೊಂಡು ಅಕಾರಾದಿಯಾಗಿ ಅಣಿ ಮಾಡುವುದು ಒಂದು ವಿಧಾನ. ಗಾದೆಗಳಲ್ಲಿ ಮುಖ್ಯವಾದ ಒಂದು ಪದವನ್ನು ತೆಗೆದುಕೊಳ್ಳುವುದು ಇನ್ನೊಂದು ಮಾರ್ಗ. ಎರಡನೆಯ ವಿಧಾನವೆಂದರೆ ಗಾದೆಗಳಲ್ಲಿ ಕಾಣುವ ವಿಷಯ ಗಳನ್ನು ಆಧಾರವಾಗಿಟ್ಟುಕೊಂಡು ಮಾಡುವ ವರ್ಗೀಕರಣ. ಈ ಎರಡನೆಯ ವಿಧಾನವೇ ಅಕಾರಾದಿಯಾಗಿ ಮಾಡುವ ವಿಭಾಗಕ್ಕಿಂತ ಉತ್ತಮವಾದುದೆಂದು ಹೇಳ ಬಹುದು. ಏಕೆಂದರೆ ಅಕಾರಾದಿ ವರ್ಗೀಕರಣದಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದ ಗಾದೆ ಬೇಕಾದರೆ ಗ್ರಂಥವೆಲ್ಲಾ ಹುಡುಕಬೇಕಾಗುತ್ತದೆ. ಮೊದಲು ವಸ್ತುವನ್ನು ತೆಗೆದುಕೊಂಡು ವಿಭಾಗಮಾಡಿ ಅನಂತರ ಒಂದೊಂದು ವಸ್ತು ವಿಗೆ ಸಂಬಂಧಪಟ್ಟ ಗಾದೆಗಳನ್ನು (ಅವು ಸಂಖ್ಯೆಯಲ್ಲಿ ಕಡಿಮೆಯಾಗಿರುತ್ತವಾದುದ ರಿಂದ) ಅಕಾರಾದಿಯಾಗಿ ಅಣಿಮಾಡಬಹುದು.

ಗಾದೆಗಳ ವಿಭಾಗ ಕ್ರಮಗಳಲ್ಲಿ ರಾಬರ್ಟ್ಸ್‌ನ (Warren Roberts) ಸೂಚಿಸಿದ ವರ್ಗೀಕರಣ ವಿಧಾನ ಗಮನಾರ್ಹವಾದುದು.[7] ದಶಮಾಂಕ ಪದ್ಧತಿಯನ್ನು ಬಳಸ ಲಾಗಿರುವ ಈ ವರ್ಗೀಕರಣದಲ್ಲಿ ಮೊದಲನೆಯ ಸಂಖ್ಯೆ ಪ್ರಧಾನ ವಿಷಯವನ್ನು ಸೂಚಿಸುತ್ತದೆ. ಎರಡನೆಯ ಸಂಖ್ಯೆ ಪ್ರಧಾನ ವಿಷಯದಲ್ಲಿರುವ ಉಪವಿಭಾಗಗಳನ್ನು ತಿಳಿಸುತ್ತದೆ. ಮೂರನೆಯ ಸಂಖ್ಯೆ ಈ ಉಪವಿಭಾಗದಲ್ಲಿ ಆ ಗಾದೆಯ ಸ್ಥಾನವನ್ನು ಸೂಚಿಸುತ್ತದೆ. ಇನ್ನೂ ಏನಾದರೂ ವಿಶೇಷವನ್ನೂ ಸೂಚಿಸಬೇಕಾದರೆ ಕೊನೆಯ ಸಂಖ್ಯೆಯಿಂದ ಸೂಚಿಸಬಹುದು. ಉದಾಹರಣೆಗೆ–ಮನುಸ್ಸಿಗೆ ಸಂಬಂಧಿಸಿದ ಗಾದೆ ಗಳಿಗೆ ೭ ಎಂಬ ಸಂಖ್ಯೆಯನ್ನು ನಾವು ಕೊಟ್ಟರೆ, ಅದರಲ್ಲಿ ಮುದುಕರನ್ನು ಕುರಿತ ಗಾದೆ ಗಳನ್ನು ೪ ಸಂಖ್ಯೆಯಿಂದ ಸೂಚಿಸುವುದಾದರೆ ಅಂತಹ ಗಾದೆಗಳನ್ನು ೭–೪ ಎಂಬ ಅಂಕಿಗಳಿಂದ ಪ್ರತಿನಿಧಿಸಬೇಕಾಗುತ್ತದೆ. ಇಂತಹ ಗಾದೆಗಳ ಒಳ ವಿಭಾಗಗಳನ್ನು ಸೂಚಿಸುವುದಕ್ಕೆ ೭.೪.೧೫.೧ ಅಥವಾ ೭.೪.೧೩.೨ ಇತ್ಯಾದಿಯಾಗಿ ಸಂಖ್ಯೆಗಳನ್ನು ಬಳಸಬಹುದು. ಈ ವರ್ಗೀಕರಣದಿಂದ ಗಾದೆಗಳಲ್ಲಿ ಕಂಡುಬರುವ ವೈವಿಧ್ಯಮಯ ವಿಷಯಗಳನ್ನು ಬಹಳಮಟ್ಟಿಗೆ ಪ್ರತಿನಿಧಿಸಲು ಸಾಧ್ಯವಾಗುತ್ತದೆ.

ಜಗತ್ತಿನ ಎಲ್ಲ ಗಾದೆಗಳಿಗೂ ಅನ್ವಯವಾಗುವಂತೆ ಸಮರ್ಪಕವಾಗಿ ವರ್ಗೀಕರಣ ಮಾಡುವುದಂತು ಅಸಾಧ್ಯ. ಪ್ರತಿಯೊಂದು ಗಾದೆಯೂ ಯಾವುದೋ ರೀತಿಯಲ್ಲಿ

ವಿಶಿಷ್ಟವಾದುದೇ ಆಗಿರುತ್ತದೆ. ಒಟ್ಟಿನಲ್ಲಿ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಕಂಡು ಬರುವ ಗಾದೆಗಳ ಕೆಲವು ವಿಶೇಷಗಳನ್ನೂ ಕೆಲವು ವಿಭಾಗ ಕ್ರಮಂಗಳಲ್ಲಿ ಸೇರಿಸಲು ಪ್ರಯತ್ನಗಳು ನಡೆದಿವೆ. ಜಾನಪದವನ್ನು ವೈಜ್ಞಾನಿಕವಾಗಿ ವಿಂಗಡನೆ ಮಾಡಲು ಯತ್ನಿಸಿದ ಪ್ರಸಿದ್ಧ ವಿದ್ವಾಂಸ ಬಾಗ್ಸ್ Standard Dictionary of Folklore Mythology and Legendನಲ್ಲಿ ಗಾದೆಗಳನ್ನು ಆರು ವಿಭಾಗ ಮಾಡಿರುತ್ತಾನೆ. ಅವು ೧. Proverbial Metaphor, ರೂಪಕ (ಉಪಯೋಗವನ್ನು ಹೇಳುವಂತಹದು. (*A new broom sweeps clean*) ೨. Proverbial Apothegm, Maxim (ನೇರವಾಗಿ, ಸಾಧಾರಣೀಕರಣಮಾಡಿ ಹೇಳುವುದು *Seeing is believing*) ೩. Blason Populaire (ಜನರನ್ನು ಕುರಿತು, ಸ್ಥಳಗಳನ್ನು ಕುರಿತು ಹೇಳಿದುದು. *It takes nine tailors to make a man*) ೪. Wellerism (ಉದ್ಧೃತ ವಾಕ್ಯವೊಂದು, ಅದರ ಮೇಲೆ ಹಾಸ್ಯಸ್ಫೋಟಕವಾದ ಮುಕ್ತಾಯ. "*Everyman to his taste*" *said the farmer When he kissed his cow*) ೫. Proverbial Phrase (ಗಾದೆಯನ್ನು ಹೋಲುವ ಪದಪುಂಜ. *To break the ice*) ೬. Proverbial comparison (ಹೋಲಿಕೆ : *As white as snow; wiser than Solomen*).

ಬಾಗ್ಸ್ ಹೆಸರಿಸಿದ ಮೇಲಿನ ಗಾದೆಗಳ ಜತೆ ಇನ್ನೂ ಕೆಲವು ರೀತಿಯ ಗಾದೆಗಳನ್ನು ಉದಾಹರಿಸುತ್ತಾ ಆರ್ಚೆರ್ ಟೇಲರ್ ಬರೆದ ಪ್ರಬಂಧ ಅನೇಕ ವಿದ್ವಾಂಸರ ಗಮನವನ್ನು ಸೆಳೆದಿದೆ.[8] ಗಾದೆಗಳಲ್ಲಿ ಕೆಲವು ಯಾವುದೋ ಒಂದು ಸತ್ಯವನ್ನು ಹೇಳುವಂತಹವಾಗಿರಬಹುದು. *Honesty is the best policy*. ಒಂದು ಸೂತ್ರವನ್ನಾಗಲಿ, ಅನುಭವವನ್ನಾಗಲಿ ಹೇಳುವಂತಹವು ಕೆಲವು. *Silence gives consent*. ಕೆಲವು ಕಥೆಗಳನ್ನು ಸೂಚಿಸುವಂತಹವು; ಹಳೆಯ ಸಂಪ್ರದಾಯಗಳನ್ನು ಸೂಚಿಸುವಂತಹ *Sour grapes* ಎಂಬುದು ಈಸೋಪನ ಕಥೆಗೆ ಸಂಬಂಧಿಸಿದುದಾಗಿದೆ. *Good wine needs no bush* ಎಂಬುದು ಬಳ್ಳಿಗಳನ್ನು ಮದ್ಯದಂಗಡಿಗಳ ಮುಂದೆ ನೇತಾಡಿಸುತ್ತಿದ್ದ ಸಂಪ್ರದಾಯವನ್ನು ಸೂಚಿಸುತ್ತದೆ. ಕೆಲವು ಪ್ರಸಿದ್ಧ ಗಾದೆಗಳ ಅನುಕರಣೆಗಳಾಗಿ ಹುಟ್ಟುತ್ತವೆ. *The nearer the church, the farther from god* ಎಂಬ ಗಾದೆಯಿಂದ *The nearer Rome, the worse christian* ಎಂಬುದು ಹುಟ್ಟಿತೆಂದು ಹೇಳುವರು.

ಹೋಲಿಕೆಯನ್ನು ಹೇಳುವ ಗಾದೆಗಳನ್ನು ಒಂದು ಪ್ರತ್ಯೇಕ ವಿಭಾಗ ಮಾಡಬಹುದು. *Enough is as good as feast* ವೈದ್ಯಸಂಬಂಧವಾದ ಗಾದೆಗಳು ಕೆಲವಿವೆ. *An apple a day keeps doctor away* ಅಂತಹದು. ಇವು ಅನುಭವವೇ ಆಧಾರವಾಗಿ ರೂಪುಗೊಂಡಂತಹವು. ಅನುಭವ ಗೃಹವೈದ್ಯವೆಂದೂ, ಅನುಭವೈಕ ವೇದ್ಯಗಳೆಂದು ಇವನ್ನು ಹೇಳಬಹುದು. ಲ್ಯಾಟಿನ್ ಗಾದೆಯಾದ *Like cures like* ಎಂಬುದೇ ಹೋಮಿಯೋಪತಿ ವೈದ್ಯಕ್ಕೂ ಸ್ಫೂರ್ತಿಯಾಯಿತು. ವಾತಾವರಣಕ್ಕೆ

ಸಂಬಂಧಪಟ್ಟಂತೆ ಕೆಲವು ಗಾದೆಗಳಿವೆ. 'ಆರ್ದ್ರಮಳೆ ಕೈತುಂಬ ಬೆಳೆ' *April showers bring May flowers* ಮುಂತಾದುವನ್ನೂ ಉದಾಹರಿಸಬಹುದು. ಕೆಲವು ಗಾದೆಗಳು ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದಂಥವು. *Ignorance of the law excuses no man* ಇತ್ಯಾದಿ ಕಾನೂನಿಗೆ ಸಂಬಂಧಿಸಿದುವು. ಕೆಲವು ಜನಸಾಮಾನ್ಯಕ್ಕೆ ಸಂಬಂಧಿಸಿದ ನ್ಯಾಯವನ್ನು ಹೇಳುತ್ತವೆ. *Dont kick a man when he is down* ಎಂಬುದು ಮಾನವ ಧರ್ಮಕ್ಕೆ ಸಂಬಂಧಿಸಿದ್ದು.

ಬ್ರಿಯಂಟ್ (**Margaret M. Bryant**) ಮಾಡಿದ ವಿಭಾಗ ಭಾಷಾಶಾಸ್ತ್ರ ಪರವಾದುದು.[9] ೧ ಪೂರ್ತಿ ವಾಕ್ಯಗಳು ೨ ವಿದ್ಯಾವಂತರ ಸಂಗ್ರಹರೂಪದ ವಾಕ್ಯಗಳು ೩ ಅನುಪ್ರಾಸಗಳು ೪ ಅಸಂಪೂರ್ಣ ವಾಕ್ಯಗಳು, ಕ್ರಿಯಾತ್ಮಕವಾದುವು ೫ ಕ್ರಿಯಾರಹಿತವಾದುವು ೬ ಉಪಮೆಗಳು ೭ ಉದ್ಧೃತ ವಾಕ್ಯಗಳು ೮ ಆಧುನಿಕ ಸರಸೋಕ್ತಿಗಳು.

ಗಾದೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳನ್ನು ಗುರುತಿಸಬಹುದು. ಅವು ಜನಪ್ರಿಯ ಗಾದೆಗಳು ಮತ್ತು ಗ್ರಂಥಸ್ಥ ಗಾದೆಗಳು. ಕೆಲವರು ನಾಗರಿಕ ಗಾದೆಗಳೆಂಬ ಇನ್ನೊಂದು ವಿಭಾಗವನ್ನೂ ಸೇರಿಸುವರು. ನಾಗರಿಕರ ಗಾದೆಗಳೂ ಜನಪದ ಗಾದೆಗಳು ಅಥವಾ ಜನಪ್ರಿಯ ಗಾದೆಗಳಿಂದ ಹುಟ್ಟಿದುವೇ ಆಗಿವೆ. ಜನಪದರ ಗಾದೆಗಳು ಸಹಜ ವಾಗಿ ಹುಟ್ಟಿ ಬೆಳೆದಂಥವು. ಉಳಿದುವು ಬಹಳಮಟ್ಟಿಗೆ ಕವಿಗಳಿಂದ, ಬೇರೆ ವಿದ್ಯಾವಂತ ರಿಂದ ಕಲ್ಪಿತವಾದುವು. ಪ್ರಯತ್ನಪೂರ್ವಕವಾಗಿ ಸೇರಿಸಿದ ಪ್ರಾಸ, ಲಯ, ಛಂದಸ್ಸು ಅವುಗಳಲ್ಲಿ ಇರುತ್ತವೆ. ಜನಪದರ ಗಾದೆಗಳದು ಗ್ರಾಮ್ಯಭಾಷೆ, ನಾಗರಿಕರ ಗಾದೆಗಳದು, ಗ್ರಂಥಸ್ಥ ಗಾದೆಗಳದು ಶಿಷ್ಟವ್ಯವಹಾರದ ಭಾಷೆ ಅಥವಾ ಗ್ರಾಂಥಿಕಭಾಷೆ. ಜನಪದರ ನುಡಿಗಟ್ಟುಗಳ ಸೊಗಸು ಇವುಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ಕೆಲವು ವೇಳೆ ವಿದ್ಯಾವಂತರ ಗಾದೆಗಳು. ಗ್ರಂಥಸ್ಥಗಾದೆಗಳು ಸಹ ಜನರಲ್ಲಿ ಪ್ರಚುರವಾಗಿ ಜನಪ್ರಿಯ ಗಾದೆಗಳಾಗಬಹುದು, ಸರ್ವಜ್ಞನ ಕೆಲವು ವಾಕ್ಯಗಳು, ವೇಮನನ ಪದ್ಯಪಾದಗಳು ಗಾದೆಗಳಾಗಿ ಪರಿಣಮಿಸಿದುದನ್ನು ಇಲ್ಲಿ ನೆನೆಯಬಹುದು.

ಮೇಲಿನ ವರ್ಗೀಕರಣ ವಿಧಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗಾದೆಗಳನ್ನು ವಸ್ತು, ಭಾವ, ರಚನೆಗಳ ಆಧಾರದಿಂದ ವಿಭಾಗಮಾಡುವುದಕ್ಕೆ ಪ್ರಯತ್ನ ಮಾಡ ಬಹುದು. ವಸ್ತುವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಹಲವು ಬಗೆಯ ಗಾದೆಗಳನ್ನು ಗುರುತಿಸಬಹುದು. ಪೌರಾಣಿಕ ಅಂಶವಿರುವ ಗಾದೆಗಳು, ಚಾರಿತ್ರಿಕಾಂಶಗಳಿರುವ ಗಾದೆಗಳು ಈ ವಿಭಾಗದಲ್ಲೇ ಬರುವಂತಹವು. ಕೆಲವು ಗಾದೆಗಳು ಸ್ಥಳಪುರಾಣಗಳು ಅಥವಾ ಐತಿಹ್ಯಗಳು. ಅವು ಕೆಲವು ಸ್ಥಳಗಳ ವೈಶಿಷ್ಟ್ಯವನ್ನು ತಿಳಿಸುತ್ತವೆ. ವಸ್ತು ದೃಷ್ಟಿಯಿಂದ ಮಾಡುವ ವಿಭಾಗದಲ್ಲೇ ಪ್ರಕೃತಿ ವಸ್ತುಗಳನ್ನು ಕುರಿತ ಗಾದೆಗಳನ್ನೂ ವಾತಾವರಣಕ್ಕೆ ಸಂಬಂಧಿಸಿದ ಗಾದೆಗಳನ್ನೂ ಸೇರಿಸಬಹುದು. ಪ್ರಾಣಿ, ಪಕ್ಷಿಗಳಿಗೆ

ಸಂಬಂಧಿಸಿದುವನ್ನೂ ಇದರಲ್ಲೇ ಸೇರಿಸಬಹುದು. ಎರಡನೆಯ ಹಿರಿಯ ವಿಭಾಗ ಮಾನವನ ಅನುಭವಕ್ಕೆ, ಸ್ವಭಾವಕ್ಕೆ ಸಂಬಂಧಿಸಿದುವು. ಮೂರನೆಯ ವಿಭಾಗದಲ್ಲಿ ವೇದಾಂತಪರವಾದುವನ್ನು, ಸಲಹೆಗಳನ್ನು, ಚಮತ್ಕಾರಗಳನ್ನು ಸೇರಿಸಬಹುದು. ವೈಜ್ಞಾನಿಕ ಗಾದೆಗಳನ್ನು ಪ್ರತ್ಯೇಕ ವಿಭಾಗವಾಗಿ ಹೇಳಬಹುದು. ಕಥೆಗಳಿಗೆ ಬಾಲವಾಗಿ ಹುಟ್ಟುವ ಗಾದೆಗಳನ್ನು ಇನ್ನೊಂದು ವಿಭಾಗ ಮಾಡಬಹುದು. ಶೃಂಗಾರ, ಹಾಸ್ಯ ಮುಂತಾದ ಭಾವಗಳಿಗೆ ಸಂಬಂಧಿಸಿದ ಗಾದೆಗಳು ಪ್ರತ್ಯೇಕವಾಗಿ ಪರಿಶೀಲಿಸತಕ್ಕವು. ಇವಲ್ಲದೆ ಆಲಂಕಾರಿಕವಾದ ಗಾದೆಗಳನ್ನು ಬೇರೆಮಾಡಿ ಉಪಮೆಗಳು, ರೂಪಕಗಳು ಇತ್ಯಾದಿಯಾಗಿ ವರ್ಗೀಕರಿಸಬಹುದು. ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ಕಂಡುಬರುವ ವಿಶೇಷಗಳನ್ನು ಗಣನೆಗೆ ತೆಗೆದುಕೊಂಡು ವರ್ಗೀಕರಣ ಮಾಡಬೇಕಾಗುತ್ತದೆ.

ಅಧ್ಯಯನ-ವೈಶಿಷ್ಟ್ಯ :

ಜನರ ಮೇಲೆ ಗಾದೆಗಳು ಒಳ್ಳೆಯ ಪ್ರಭಾವವನ್ನು ಬೀರಬಲ್ಲವೆಂದು ಬಹಳ ಪ್ರಾಚೀನ ಕಾಲದಿಂದಲೇ ಪ್ರಾಜ್ಞರು ಕಂಡುಕೊಂಡರು. ವೇದಕಾಲದ ಋಷಿಗಳ ಮಾತುಗಳಲ್ಲಿಯೇ ಅನೇಕ ಗಾದೆಗಳು ಕಂಡುಬರುತ್ತವೆ. ಪ್ಲೇಟೋ, ಅರಿಸ್ಟಾಟಲ್, ಏಸುಕ್ರಿಸ್ತ ಮುಂತಾದವರು ತಮ್ಮ ಭಾಷಣಗಳಲ್ಲಿ, ಧಾರ್ಮಿಕ ಪ್ರಸಂಗಗಳಲ್ಲಿ ಗಾದೆಗಳನ್ನು ಬಳಸಿರುತ್ತಾರೆ. ಪ್ರಾಚೀನ ಶಿಷ್ಟಗ್ರಂಥಗಳಲ್ಲಿ ಆ ಕಾಲದ ಲೇಖಕರು ಬಳಕೆಯಲ್ಲಿದ್ದ ಗಾದೆಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ. ಹೇವುಡ್ (John Heywood) ೧೫೪೬ ರಲ್ಲಿ ರಚಿಸಿದ A dialogue of Proverbs ಗಾದೆಗಳ ಸಹಾಯದಿಂದ ಕಾವ್ಯಗಳನ್ನು ಬರೆಯುವ ಸಂಪ್ರದಾಯಕ್ಕೆ ಮಾರ್ಗದರ್ಶಕವಾಯಿತು. ಪಾಶ್ಚಾತ್ಯದೇಶಗಳಲ್ಲಿ ಗಾದೆಗಳನ್ನು ಕುರಿತ ಪ್ರಶಂಸಾರ್ಹ ಅಧ್ಯಯನ ನಡೆಯಿತು. ಲಕ್ಷಾಂತರ ಗಾದೆಗಳನ್ನು ಪಾಶ್ಚಾತ್ಯ ವಿದ್ವಾಂಸರು ಸಂಗ್ರಹಿಸಿದರು. ಇಂತಹ ಸಂಕಲನಗಳಲ್ಲಿ ಚಾಂಪಿಯನ್ ಪ್ರಕಟಿಸಿದ 'Racial Proverbs' ಎಂಬ ಗ್ರಂಥ ಪ್ರಖ್ಯಾತವಾದುದು. ಜಗತ್ತಿನ ವಿವಿಧ ಪ್ರದೇಶಗಳಿಂದ ಸಾವಿರಾರು ಗಾದೆಗಳನ್ನು ಸಂಗ್ರಹಮಾಡಿ, ಇಂಗ್ಲಿಷಿಗೆ ಅನುವಾದ ಮಾಡಿ ಬೆಲೆಯುಳ್ಳ ಪೀಠಿಕೆಯೊಂದಿಗೆ ಚಾಂಪಿಯನ್ ಈ ಗ್ರಂಥವನು ಪ್ರಕಟಿಸಿದ.

ಗಾದೆಗಳನ್ನು ಅಧ್ಯಯನ ಮಾಡುವಾಗಲೂ ಬೇರೆ ಜಾನಪದ ವಿಭಾಗಗಳಂತೆಯೇ ಸಂಗ್ರಹ, ಪರಿಷ್ಕರಣ, ವಿಶ್ಲೇಷಣೆ ಮಾಡಬೇಕಾದ ಆವಶ್ಯಕತೆ ಇದೆ. ಶಾಸ್ತ್ರೀಯವಾಗಿ ನಡೆಯಬೇಕಾದ ಈ ಅಧ್ಯಯನಕ್ಕಾಗಿ ಪಾಶ್ಚಾತ್ಯ ದೇಶಗಳಲ್ಲಿ ಕೆಲವು ಸಂಸ್ಥೆಗಳೇ ಇವೆ. ಅಂತಹವುಗಳಲ್ಲಿ Proverbial sayings committee ಒಂದು. American Dialect Societyಗೆ ಅನುಬಂಧವಾಗಿ ೧೯೪೪ ರಲ್ಲಿ ರೂಪಗೊಂಡ ಈ ಸಂಸ್ಥೆ ಗಾದೆಗಳ ಅಧ್ಯಯನಕ್ಕೆ ಸಾಕಷ್ಟು ಕೃಷಿಮಾಡುತ್ತಿದೆ. ಗಾದೆಗಳಲ್ಲಿ ಎಂತಹವನ್ನು ಸಂಗ್ರಹಿಸಬೇಕು ಎಲ್ಲಿಂದ ಸಂಗ್ರಹಿಸಬೇಕು, ಹೇಗೆ ಸಂಗ್ರಹ ಮಾಡಬೇಕು ಇತ್ಯಾದಿ ವಿಷಯಗಳನ್ನು ಕುರಿತ ಕೆಲವು ಸೂಚನೆಗಳನ್ನು ಈ ಸಂಸ್ಥೆ ಪ್ರಕಟಿಸಿತು.[10] ವಾಗ್ರೂಪದಲ್ಲಿ ಅಥವಾ

ಹಸ್ತಪ್ರತಿಗಳ ರೂಪದಲ್ಲಿ ಇರುವ ಗಾದೆಗಳನ್ನು ಏನೂ ಬದಲಾವಣೆಗಳನ್ನು ಮಾಡದೆ ಲಿಖಿಸಬೇಕು. ಪಾಠಾಂತರವಿದ್ದರೆ ಗುರುತಿಸಬೇಕು. ಎಲ್ಲಿ, ಯಾವಾಗ, ಯಾರಿಂದ ಕೇಳಿದುದು ಅಥವಾ ಯಾವ ಪ್ರತಿಯಿಂದ ಸಂಗ್ರಹಿಸಿದ್ದು ಇತ್ಯಾದಿ ವಿವರ ಗಳನ್ನು ಕೊಡಬೇಕು. ಹೀಗೆ ಸಂಗ್ರಹ ಮಾಡಿದ ಗಾದೆಗಳನ್ನು ವಿಶ್ಲೇಷಣೆ ಮಾಡಿ, ಅಧ್ಯಯನ ನಡೆಸಿದಾಗ ನಮ್ಮ ಸಂಸ್ಕೃತಿಗೆ ಸಂಬಂಧಪಟ್ಟಂತೆ ಎಷ್ಟೋ ವಿಶೇಷಗಳು ನಮಗೆ ಅರಿವಾಗುತ್ತವೆ.

ಗಾದೆಗಳ ಅಧ್ಯಯನದಿಂದ ಪ್ರಾಕ್ತನ ಮಾನವನ ಸ್ವಭಾವ, ಜೀವನ, ಆಲೋಚನಾ ವಿಧಾನ ಮುಂತಾದುವನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇನ್ನೂ ನ್ಯಾಯಾಲಯುಗಳ ಬೆಳಕಿಗೆ ಬರದಂತಹ ಸಮಾಜಗಳಲ್ಲಿ ಅನುಭವಜ್ಞನಾದ ಒಬ್ಬನು ಹೇಳಿದ ಒಂದು ಗಾದೆ ಅನೇಕ ಸಮಸ್ಯೆಗಳನ್ನು ಬಿಡಿಸುವ ಸಂದರ್ಭಗಳು ಇಂದಿಗೂ ಕಂಡುಬರುತ್ತವೆ. ಆಕಾರದಲ್ಲಿ ಗಾದೆ ಚಿಕ್ಕದಾಗಿರಬಹುದು. ಆದರೆ ಗಾದೆಗಳ ಅರ್ಥ ಗಾಂಭೀರ್ಯ ದೊಡ್ಡದಾದುದರಿಂದ ಅದರ ಪ್ರಭಾವ ಬೆಲೆಯುಳ್ಳದಾಗಿದೆ. "ಬ್ರಿಟಿಷ್ ಮ್ಯೂಜಿಯಂ, ಲಂಡನ್ ಲೈಬ್ರರಿ ಮುಂತಾದ ಸ್ಥಳಗಳಲ್ಲಿ ಗಾದೆಗಳನ್ನು ಅನ್ವೇಷಿಸುತ್ತಾ ಹೋದಾಗ, ನನಗೆ ಲೇಖನಿಗಿಂತ ಚಾಕಿನ ಅಗತ್ಯವೇ ಹೆಚ್ಚಾಗಿತ್ತು" ಎಂದು ಡಾ. ಚಾಂಪಿ ಯನ್ 'Racial Proverbs' ಪೀಠಿಕೆಯಲ್ಲಿ ಹೇಳಿದ ಮಾತು ಎಲ್ಲಾ ಗಾದೆಗಳ ಸಂಕಲನ ಗಳಿಗೂ ಅನ್ವಯವಾಗುವುದಕ್ಕೆ ಮೊದಲೇ, ಜನಪದರ ಬಾಯಿಗಳಲ್ಲಿ ಇನ್ನೂ ನಿಂತಿರುವ ಗಾದೆಗಳು ಮರೆಯಾಗುವ ಮೊದಲೇ, ನಾವು ಅವನ್ನು ಸಂಗ್ರಹಿಸಿ ಅವುಗಳಿಂದಾಗುವ ಲಾಭವನ್ನು ಪಡೆಯುವುದು ಎಷ್ಟು ಬೇಗ ನಡೆದರೆ ಅಷ್ಟೂ ಒಳ್ಳೆಯದು.

ಅಡಿಟಿಪ್ಪಣಿಗಳು

1. ರಾಮಾನುಜನ್. ಎ. ಕೆ., ಗಾದೆಗಳು, ಪು. ೬.

2. (ಆಂಗ್ಲಮೂಲ). Richard M. Dorson (Ed.) *Folklore and Folklife*, p. 119.

3. ಲಾರ್ಡ್ ಜಾನ್ ರಸೆಲ್‌ನ ಸೂತ್ರ, ರಾಗೌ ಅವರಿಂದ ಉದ್ಧೃತ, ನಮ್ಮ ಗಾದೆಗಳು, ಪು. ೧೨.

4. ರಾಗೌ, ಪೂರ್ವೋಕ್ತ, ಪು. ೧೭.

5. Proverbs use all of the devices we commonly associate with poetry in English: meter, binary construction and balanced phrasing, rhyme, assonance and alliteration, conciseness, metaphor and occasional inverted word order and unusual construction." Roger D. Abrahams, *Folklore and Folklife*, Ed. Richard M. Dorson, p. 119

6. Racial Proverbs ನಿಂದ ಉದ್ಧೃತ, ರಾಗೌ, ನಮ್ಮ ಗಾದೆಗಳು, ಪು. ೨೩–೨೪.

7. As quoted in Kenneth and Mary clarke's *Introducing Folklore*, p. 120,

8. *Dictionary of Folklore, Mythology and Legend*, (one–vol. Ed.) pp. 902–905.

9. *Ibid.*, p. 907.

10. *Ibid.*, p. 907.

ಡಾ. ಸಿ.ಪಿ.ಕೆ.

ಒಗಟು

ಜನಪದ ಸಾಹಿತ್ಯದ ಇತರ ಪ್ರಕಾರಗಳಂತೆ ಒಗಟುಗಳು ಕೂಡ ಅಜ್ಞಾತ ಗ್ರಾಮೀಣ ಜನತೆಯ ಸೃಷ್ಟಿ. ಇವು ಪ್ರಪಂಚದಾದ್ಯಂತ ಸರ್ವದೇಶ ಜನಾಂಗಗಳಲ್ಲಿ ಪ್ರಾಕ್ಕಾಲದಿಂದಲೂ ಆಬಾಲವೃದ್ಧರ ಮನೋರಂಜನ ಸಾಧನವಾಗಿ, ಜನಪ್ರಿಯವಾದ ಮನಃಕ್ರೀಡೆಯಾಗಿ, ಬೌದ್ಧಿಕ ವ್ಯಾಯಾಮವಾಗಿ ಬೆಳೆದು ಬಂದಿವೆ. ಒಗಟುಗಳನ್ನು ಕಟ್ಟುವುದು ಮತ್ತು ಒಡೆಯುವುದು ಒಂದು ಲಘು ಹವ್ಯಾಸ. ಕೆಲಸವಿಲ್ಲದ ಸೋಮಾರಿಗಳಿಗೆ, ಹೆಂಗಸರಿಗೆ ಮತ್ತು ಮಕ್ಕಳಿಗೆ ಮೀಸಲಾದದ್ದು ಎಂಬ ಭಾವನೆ ಸಾಮಾನ್ಯವಾಗಿ ಪ್ರಚಲಿತವಾಗಿದ್ದರೆ ಆಶ್ಚರ್ಯವಿಲ್ಲ. ಆದರೆ ಒಗಟುಗಳ ಇತಿಹಾಸವನ್ನು ಪರಿಭಾವಿಸಿದರೆ ಈ ಭಾವನೆಯು ತಪ್ಪು ಅರಿವಾಗುತ್ತದೆ. ಜನಾಂಗ ಜೀವನದಲ್ಲಿ ಒಗಟುಗಳು ಗಹನ ಗಂಭೀರವಾದ ಪಾತ್ರವನ್ನು ವಹಿಸಿರುವುದುಂಟು; ಮಹತ್ತರವಾದ ಉದ್ದೇಶಗಳಿಗೆ ಬಳಕೆಯಾಗಿರುವುದುಂಟು. ಅವುಗಳ ಲೋಕ ಬಹಳ ವಿಸ್ತಾರವುಳ್ಳದ್ದು.

ಮೂಲತಃ ಒಗಟುಗಳು ಜಾನಪದೀಯ ನಿರ್ಮಿತಿಯಾಗಿದ್ದರೂ, ವಿದ್ವತ್ಕವಿಗಳು ಅವುಗಳ ರಚನೆಗೆ ಪ್ರಯತ್ನಿಸಿ ಈ ಸಾಹಿತ್ಯವನ್ನು ಬೆಳೆಸಿರುವುದುಂಟು. ಆದರೆ ಸಾಮೂಹಿಕ ರಚನೆಗಳಾದ ಜನಪದ ಒಗಟುಗಳೆ ಅತ್ಯುತ್ಕೃಷ್ಟವಾದವು.

ಜನಪದ ಕವಿಗಳು 'ಕುರಿತೋದದ ಕಾವ್ಯ ಪ್ರಯೋಗ ಪರಿಣತಮತಿಗಳು' ಎಂಬುದು ಸರಿಯೇ. ಆದರೆ ಅವರು ಕುರಿಮತಿಗಳೂ ಅಲ್ಲ. ಅವರು ಮುಗ್ಧರೆಂದಾಕ್ಷಣ ಮಂದಬುದ್ಧಿಗಳೆಂದು ಅರ್ಥವಲ್ಲ. ಬೌದ್ಧಿಕ ಜಾಗೃತಿ, ಆಲೋಚನಾ ಶಕ್ತಿ, ತರ್ಕಸಾಮರ್ಥ್ಯ ಅವರಲ್ಲಿದ್ದುವೆಂಬುದನ್ನು ನಾವು ಮನಗಾಣಬೇಕು. ಕುರಿ (ಳಿ) ತು ಓದದಿರುವುದರಿಂದಲೇ ಅವರ ಬುದ್ಧಿಯಲ್ಲಿ ನಾವೀನ್ಯ, ಸ್ವಪ್ರಕಾಶ, ನಿಶಿತತೆ ಉಳಿಯುವುದು ಸಾಧ್ಯವಾಯಿತು; ಅನುಕರಣರಾಹಿತ್ಯಕ್ಕೆ ಅವಕಾಶವಾಯಿತು. ಜನಪದ ಕವಿಗಳ ಈ ಬೌದ್ಧಿಕ ಎಚ್ಚರಕ್ಕೆ ಸೊಗಸಾಗಿ ಕನ್ನಡಿ ಹಿಡಿಯುತ್ತವೆ ಒಗಟುಗಳು. ಗೀತೆ, ಕತೆಗಳಲ್ಲಿ ಭಾವಾವೇಶವಿದ್ದರೆ ಸಾಕಾಗಬಹುದು ; ಆದರೆ ಒಗಟುಗಳಲ್ಲಿ ಭಾವದ ಜೊತೆಗೆ ಬುದ್ಧಿಯ ತೀಕ್ಷ್ಣತೆ ಬೇಕಾಗುತ್ತದೆ. 'ಬುದ್ಧಿ ಭಾವಗಳ ಮಿದ್ಯುದಾಲಿಂಗನ' ವಿಲ್ಲದೆ ಒಗಟು ಸಿದ್ಧಿಸಲಾರದು. ಜನಪದ ಸಾಹಿತ್ಯದ ಈ ಬೌದ್ಧಿಕ ಮುಖದ ಕಡೆಗೆ ಸಾಕಷ್ಟು ಲಕ್ಷ್ಯ ಹರಿದಿಲ್ಲ.

ಒಗಟು ಎಂದರೇನು ? ಕನ್ನಡದಲ್ಲಿ ಇದಕ್ಕೆ ಒಡಪು[1], ಮುಂಡಿಗೆ ಎಂಬ ಹೆಸರುಗಳೂ ಇವೆ; ಶರಣರ ವಚನಗಳಲ್ಲಿ ಮೈದೋರಿರುವ ಒಗಟುಗಳಿಗೆ 'ಬೆಡಗಿನ ವಚನಗಳು' ಎಂಬ ವಿಶೇಷಾಭಿಧಾನವುಂಟು. ಸಂಸ್ಕೃತದಲ್ಲಿ ಈ ಪ್ರಕಾರವನ್ನು 'ಪ್ರಹೇಳಿಕೆ' ಎಂದು ಕರೆಯುತ್ತಾರೆ; ಸಮಸ್ಯೆ, ಕೂಟ, ಬ್ರಹ್ಮೋದ್ಯ ಮುಂತಾದ ಹೆಸರುಗಳೂ ಉಂಟು.[2] ಇಂಗ್ಲಿಷಿನಲ್ಲಿ ಇದನ್ನು Riddle ಎನ್ನುತ್ತಾರೆ. 'ಒಗಟು (ಒಗಟು), 'ಒಡಪು'ಗಳ ನಿಷ್ಪತ್ತಿ ಹೇಗೆ ? ಖಚಿತವಾಗಿ ಹೇಳಬರದು. ತುಸು ಊಹೆ ಮಾಡಬಹುದಷ್ಟೆ. ಒಗಟು ಅಥವಾ ಒಗಟಿಗೆ 'ಒಗೆ' (to throw) ಧಾತು ಮೂಲವಿರಬಹುದೆ, 'ಸವಾಲು ಹಾಕು', 'ಎಸೆ' ಎಂಬರ್ಥದಲ್ಲಿ ? ಹಾಗೆಯೆ 'ಒಡಪು' ಶಬ್ದಕ್ಕೆ 'ಒಡೆ' ಧಾತು ಮೂಲವಿದ್ದೀತೆ, 'ಬಿಡಿಸಬೇಕಾದದ್ದು' ಎಂಬರ್ಥದಲ್ಲಿ ? 'ಮುಂಡಿಗೆ' (ಮುಂಡಿಗೆ)ಯಂತೂ, ಸವಾಲು ಎಂಬರ್ಥದಲ್ಲಿ ರೂಢವಾಗಿದೆ.[3] ಇದರಿಂದ ಒಗಟೆಂಬುದು ಒಬ್ಬರು ಮತ್ತೊಬ್ಬರಿಗೊಡ್ಡಿದ ಸವಾಲು. ಸಮಸ್ಯೆ ಎಂಬುದು ವೇದ್ಯವಾಗುತ್ತದೆ. ಇಂಗ್ಲಿಷಿನ Riddle ಶಬ್ದ Raedan ಎಂಬ ಆಂಗ್ಲೊಸ್ಯಾಕ್ಸನ್ ಧಾತುವಿನಿಂದ ನಿಷ್ಪನ್ನವಾದದ್ದು; ಹಾಗೆಂದರೆ 'to interpret' ಎಂದರ್ಥ. ಎಂದರೆ ಒಗಟು ವ್ಯಾಖ್ಯಾನಸಾಪೇಕ್ಷವಾದ, ಅರ್ಥೈಸಬೇಕಾದ ಒಂದು ಗೂಢೋಕ್ತಿ ಎಂದಾಯಿತು. ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ವ್ಯಾಜದಿಂದ ಚಮತ್ಕಾರಯುತವಾಗಿ ವರ್ಣಿಸುವುದು, ಆ ಅನುಕ್ತ ವಸ್ತುವನ್ನು ಕಂಡುಹಿಡಿಯುವಂತೆ ಹೇಳುವುದು ಒಗಟು. ಅದು "Paraphrastic presentation of an unmentioned subject, the design of which is to excite the reader or hearer to the discovery of the meaning hidden under a studied obscurity of expression."[4]

ಒಗಟಿನಲ್ಲಿ ಎರಡು ಸದೃಶ ವಸ್ತುಗಳಿರುತ್ತವೆ; ಒಂದು ಉಪಮಾನ, ಇನ್ನೊಂದು ಉಪಮೇಯ. ಇಲ್ಲಿ ಉಪಮಾನ ವಾಚ್ಯವಾಗಿರುತ್ತದೆ, ಉಪಮೇಯ ಅಸ್ಪಷ್ಟವಾಗಿ ಗುಹ್ಯವಾಗಿರುತ್ತದೆ; ಅದನ್ನು ಒಗಟಿನ ಕರ್ತೃ ಜಾಣ್ಮೆಯಿಂದ ಬಚ್ಚಿಟ್ಟಿರುತ್ತಾನೆ. ಉಪಮಾನದ ಆಧಾರದಿಂದ ಉಪಮೇಯವನ್ನು ಪತ್ತೆ ಹಚ್ಚಬೇಕಾಗುತ್ತದೆ. ಇದು ಬುದ್ಧಿ ಸಾಮರ್ಥ್ಯಕ್ಕೊಂದು ಒರೆಗಲ್ಲು ; ಇದರಲ್ಲಿ ಉತ್ತೀರ್ಣರಾಗುವುದು ಕಠಿಣ. ಶ್ರೀಸಾಮಾನ್ಯರ ವಿಶ್ವವಿದ್ಯಾನಿಲಯಗಳಲ್ಲಿ ಎಂದಿನಿಂದಲೂ ಪ್ರಚುರವಾಗಿ ಬಂದಿರುವ ಈ ಪರೀಕ್ಷಾ ಪದ್ಧತಿ, ಪ್ರಶ್ನೋತ್ತರ ವೈಖರಿ ಆಶ್ಚರ್ಯಕರವಾದುದು.

---

1. ಒಗಟು ಮತ್ತು ಒಡಪು ಸಮಾನಾರ್ಥಕವಲ್ಲ, ಒಡಪು ಒಂದು ವಿಶಿಷ್ಟವಾದ ಬಗೆ ಎಂದೂ ಹೇಳಲಾಗಿದೆ. ಒಡಪಿಗೆ ಸಂವಾದಿಯಾಗಿ 'ತೊಡಕು' ಎಂಬ ಮಾತು ಕೆಲವೆಡೆ ಇದೆಯಂತೆ.
2. ಇವೆಲ್ಲ ಒಗಟಿಗೆ ಸಂಪೂರ್ಣ ಸಂವಾದಿಗಳಲ್ಲ.
3. ನೋಡಿ: ಎಂ. ಚಿದಾನಂದಮೂರ್ತಿ 'ಸಂಶೋಧನತರಂಗ', ಸಂ. ೧, ಪು. ೧೦೧–೧೧೪
4. *Everyman's Encyclopedia*

ಮಾನವಕುಲದ ಶೈಶವದಲ್ಲೆ ಒಗಟಿನ ಪ್ರಾದುರ್ಭಾವವಾಯಿತೆಂದು ಹೇಳಬಹುದು. ವಾಕ್ಸಂಪ್ರದಾಯಂದಲ್ಲಿ ಒಗಟು ಎಲ್ಲಕ್ಕಿಂತ ಪ್ರಾಥಮಿಕವೆಂಬ ಅಭಿಪ್ರಾಯವೊಂದುಂಟು.[1] ಆದರೆ ಈ ವಾದವನ್ನೊಪ್ಪುವುದು ಕಷ್ಟವೆನಿಸುತ್ತದೆ. ಏಕೆಂದರೆ ಮಾನವನಲ್ಲಿ ಮೊದಲು ಭಾವದ ಆವೇಗ; ಅನಂತರ ಬುದ್ಧಿಯ ಮಿಂಚು, ಮನೀಷೆ. ಅದಕ್ಕನುಗುಣವಾಗಿ ಮಾನವಕುಲದಲ್ಲಿ ಮೊದಲು ಸಂಭವಿಸಿದ್ದು ಸರಳ ಸ್ಪಷ್ಟವಾದ ಕವಿತೆ, ತದನಂತರ ತರ್ಕಬುದ್ಧಿ ಸಂಬಂಧವಾದ, ಗುಹ್ಯವಾದ ಒಗಟುಗಳ ಪ್ರಕಾರ. ಆದ್ದರಿಂದ ಮಾನವ ಮನೋವಿಕಾಸದ ದ್ವಿತೀಯಾವಸ್ಥೆಯನ್ನು ಒಗಟು ಪ್ರತಿನಿಧಿಸುತ್ತದೆನ್ನುವುದು ಸಾಧುವೇನೊ.

ಸಾದೃಶ್ಯ ಪರಿಜ್ಞಾನವೆ ಒಗಟುಗಳ ನಿರ್ಮಾಣದ ತಳಹದಿ. ಆದಿಮಾನವ ಪ್ರಕೃತಿವಸ್ತುಗಳಲ್ಲಿ ಗುರುತಿಸಿದ ಸಾದೃಶ್ಯ ಒಗಟುಗಳಿಗೆ ಪ್ರೇರಕ ಶಕ್ತಿಯಾಯಿತು. ಈ ಸಾದೃಶ್ಯಸಂವೇದನೆಯಿಂದುಂಟಾದ ವಿಸ್ಮಯಂದಲ್ಲೆ ಅವನು ವಿರಮಿಸದೆ, ಅದನ್ನು ಹಾಸ್ಯ ವಿನೋದಗಳಿಗೆ ಬಳಸಿಕೊಳ್ಳುವುದಕ್ಕಾಗಿ ಮಾಡಿದ ಪ್ರಯತ್ನವೆ ಒಗಟಿನ ರೂಪ ತಳೆದಂತೆ ತೋರುತ್ತದೆ. ಎಂತಲೆ ಈಗಿರುವ ಹಾಸ್ಯಪ್ರಕಾರಗಳಲ್ಲಿ ಒಗಟೇ ಪ್ರಾಚೀನ ತಮವೆಂದೂ ಸಾದೃಶ್ಯ ಪ್ರಜ್ಞೆಯೆ ಇದಕ್ಕೆ ಹೇತುವೆಂದೂ ವಿದ್ವಾಂಸರ ಮತ. "(Riddles) are probably the oldest extant form of humour. They spring from man's earliest perception that there are such things as analogies in nature. Man observes an example of analogy, puts his observation in the form of a question and there is the riddle ready made."[2]

ಒಗಟುಗಳು ಹಾಸ್ಯದ ಒಂದು ಪ್ರಕಾರವೆಂದುದರಲ್ಲಿ ಅವುಗಳ ವೈಶಿಷ್ಟ್ಯವೊಂದು ಸೂಚಿತ. ಇತರ ಸಾಹಿತ್ಯರೂಪಗಳಿಗಿಂತ ಅವು ಉದ್ದೇಶದಲ್ಲಿ ಭಿನ್ನವೆಂದು ತೋರುತ್ತದೆ. ಉಳಿದಪ್ರಕಾರಗಳಲ್ಲಿ ಜನತೆಯ ಸುಖದುಃಖಗಳು ಸಹಜವಾಗಿ ಅಭಿವ್ಯಕ್ತವಾಗುತ್ತವೆ; ಅವಕ್ಕೆ ಬೇರೆ ಉದ್ದೇಶಗಳೂ ಉಂಟು. ಒಗಟಾದರೆ ಹಾಗಲ್ಲ. ಅದೂ ಸಹಜ ಸ್ಫೂರ್ತ ವಾಗಿರಬಹುದು. ಆದರೆ ಬಹು ಮಟ್ಟಿಗೆ ಅದು ಬುದ್ಧಿಪೂರ್ವಕವೂ ಹೌದು; ಚಿತ್ತಾಹ್ಲಾದಕ್ಕಾಗಿಯೆ ಅದರ ರಚನೆ. ಆದ್ದರಿಂದ ಯಶಸೇ, ಅರ್ಥಕೃತೇ, ವ್ಯವಹಾರವಿದೇ, ಶಿವೇತ ರಕ್ಷತಯೇ, ಉಪದೇಶಯುಂಜೇ ಎಂಬ ಕಾವ್ಯಪ್ರಯೋಜನ ಗಳು ಜನ ಸಾಮಾನ್ಯರ ಒಗಟುಗಳಿಗೆ ಅನ್ವಯಿಸತಕ್ಕವಲ್ಲ. 'ಸದ್ಯಃಪರ ನಿರ್ವೃತಿ', ಬೇಸರಪರಿಹಾರವಷ್ಟೆ ಅವುಗಳ ಗಮ್ಯ. ಅವು ಆನುಷಂಗಿಕವಾಗಿ ಬುದ್ಧಿಗೆ ಸಾಣೆ ಹಿಡಿದು, ಅದರ ವಿಕಾಸಕ್ಕೆ ನೆರವಾಗುತ್ತವೆ.

1. ನೋಡಿ ; ಹಾ. ಮಾ. ನಾಯಕ, 'ಜಾನಪದ ಸ್ವರೂಪ,' ಪು. ೩೪–೩೫
2. *Encyclopedia Britannica*

ಒಗಟುಗಳಲ್ಲಿ ಎರಡು ವಸ್ತುಗಳ ತರ್ಕಬದ್ಧ ಸಮಿಾಕರಣ, ಅಭೇದ ಏರ್ಪಟ್ಟಿರುತ್ತದೆ. ಆದ್ದರಿಂದ ಒಗಟುಗಳೆಂದರೆ ರೂಪಕಗಳಲ್ಲದೆ ಬೇರೆಯಲ್ಲ. ಜೇಮ್ಸ್ ಎ. ಕೆಲ್ಲೊ ಹೀಗೆನ್ನುತ್ತಾರೆ : "Rhetorically the riddle is closely related to the metaphor and in fact it may be defined as a metaphor or a group of metaphors which have not passed into common usage and whose significance is not evident."[1] ರೂಪಕಗಳು ನಿರಂತರವಾಗಿ ಬಂದರೆ ಒಗಟುಗಳಾಗುತ್ತವೆಂದು ಅರಿಸ್ಟಾಟಲ್ ಒಂದೆಡೆ ಅಭಿಪ್ರಾಯಿಸಿದ್ದಾನೆ. ಒಗಟುಗಳಲ್ಲಿ ಸಮಾಸೋಕ್ತಿಯಿರುತ್ತದೆ ಎನ್ನಲೂಬಹುದು, ವಿಶೇಷಣ ವಾಚ್ಯವಾಗಿದ್ದು, ವಿಶೇಷ್ಯ ಸೂಚ್ಯವಾಗಿರುತ್ತದೆ. ಒಗಟುಗಳೆಲ್ಲ ಉಪಮಾ ಪ್ರತಿಭೆಯ ಕಿಡಿಗಳು. ಇನ್ನೂ ನಿಷ್ಕೃಷ್ಟವಾಗಿ ಹೇಳುವುದಾದರೆ, ಅವು ಪ್ರತಿಮೆಗಳು.

ಒಟ್ಟಿನಲ್ಲಿ ಒಗಟುಗಳು ಸಾಂಕೇತಿಕ ಕೃತಿಗಳು, ರೂಪಕಗಳು ಅಥವಾ ಪ್ರತಿಮೆಗಳು. ಎಂದಮೇಲೆ ಅವುಗಳಿಗೆ ನಾವು ಕಾವ್ಯದ ಜೀವಗುಣವಾದ ಧ್ವನಿಯನ್ನು ಆರೋಪಿಸಲು ಹಿಂಜರಿಯಬೇಕಾಗಿಲ್ಲ. ಇಲ್ಲಿ ಒಂದು ವಸ್ತು ಮತ್ತೊಂದನ್ನು ವ್ಯಂಜಿಸುತ್ತದೆ. ಆದರೆ ಈ ವಸ್ತುಧ್ವನಿ ಅತಿಗೂಢವಾಗಿದ್ದು, ಎಲ್ಲ ಸಂದರ್ಭಗಳಲ್ಲೂ ಪರಮರಮಣೀಯವೆನಿಸದಿರಬಹುದು ; ಒಮ್ಮೆ ತಿಳಿದ ಮೇಲೆ ಅದರ ಸ್ವಾರಸ್ಯ ಕುಗ್ಗಬಹುದು, ಪರಿಭಾವಿಸಿದಷ್ಟೂ ಅದು ಸಂತೋಷ ಕೊಡದಿರಬಹುದು. ಇಷ್ಟಾದರೂ ಒಂದು ಮಿತಿಯಲ್ಲಿ ಅದು ಧ್ವನಿಯುಂತೂ ಹೌದು. ಒಂದು ಕ್ಷಣವಾದರೂ ಅದು ಮನಸ್ಸನ್ನು ಮೋದಗೊಳಿಸುತ್ತದೆ, ಬುದ್ಧಿಯನ್ನು ಬೆಳಗುತ್ತದೆ, ವಿಸ್ಮಯಾನುಭವ ನೀಡುತ್ತದೆ.

ಎಲ್ಲ ಒಗಟುಗಳಲ್ಲವಾದರೆ ಕೆಲವಾದರೂ ಉತ್ತಮ ಕಾವ್ಯವೆನಿಸಬಲ್ಲುವು. ಉಳಿದ ಸತ್ಕಾವ್ಯ ಪ್ರಕಾರಗಳಂತೆ ಒಗಟಿನ ಉಗಮವೂ ಸೌಂದರ್ಯಾನುಭೂತಿಯಲ್ಲಿ, ವಿಸ್ಮಯೋದ್ರೇಕದಲ್ಲಿ. ಕವಿಯ ಪರಿವೀಕ್ಷಣ ಶಕ್ತಿ, ಸೂಕ್ಷ್ಮ ಸಂವೇದನೆ, ಕಲ್ಪನೆಗಳು ಒಳ್ಳೆಯ ಒಗಟುಗಳಲ್ಲಿ ಸಂಘಟಿಸಿರುತ್ತವೆ. ಒಂದು ವೇಳೆ ಈ ಒಗಟುಗಳಲ್ಲಿ ಬರುವ ಉಪಮಾನ ಉಪಮೇಯುವೆರಡನ್ನೂ ವಾಚ್ಯಗೊಳಿಸಿ, ವಿಚಿತ್ರ ವೇಷವನ್ನು ಕಳಚಿದ ಪಕ್ಷದಲ್ಲಿ ಅವು ಬಂಧುರ ಭಾವಗೀತೆಗಳಾಗಿ ಪರಿಣಮಿಸುತ್ತವೆ. ಒಗಟುಗಳನ್ನು ಒಂದು ಬಗೆಯ ಚಿತ್ರಕವಿತೆಯೆಂದು ಕರೆದರೂ ತಪ್ಪಲ್ಲ. ಅವು ಗೂಢಾರ್ಥಗರ್ಭಿತವೆಂಬ ಅಭಿಪ್ರಾಯವೂ ಇಲ್ಲಿ ಸಂಗತವಾಗಬಹುದು. ಅಷ್ಟೆ ಅಲ್ಲದೆ, ಅವು ವಸ್ತುಗಳ ಚಿತ್ರಗಳನ್ನು ಖಚಿತವಾಗಿ ಸಂಕ್ಷಿಪ್ತವಾಗಿ, ಪ್ರಭಾವಶಾಲಿಯಾಗಿ ಕೊರೆದು ನಿಲ್ಲಿಸುತ್ತವೆ ಎಂಬುದೂ ಬಹಳ ಗಮನಾರ್ಹ. ವೇದಾಂತಪರವಾದ ಒಗಟುಗಳನ್ನು ಬಿಟ್ಟರೆ, ಸಾಮಾನ್ಯರ ಒಗಟುಗಳೆಲ್ಲ ಭಾವಪ್ರಪಂಚಕ್ಕಿಂತ ಮಿಗಿಲಾಗಿ ಬಾಹ್ಯ ಪ್ರಪಂಚವನ್ನು ಕುರಿತವು. ಆದ್ದರಿಂದ ಒಗಟುಗಳಲ್ಲಿ ಸಾಕಾರವಸ್ತು ಚಿತ್ರಗಳಿಗೇ ಪ್ರಾಧಾನ್ಯವೆನ್ನಬಹುದು.

---

1 *Encyclopedia of Religion and Ethics*.

ಒಗಟುಗಳ ಸ್ವಾರಸ್ಯ ಸೌಂದರ್ಯಗಳನ್ನು ಕೆಲವು ನಿದರ್ಶನಗಳ ಮೂಲಕ ಅರಿಯು ಬಹದು.

ಆಕಾಶವನ್ನು ಕುರಿತ ಕೆಲವು ಒಗಟುಗಳಿವೆ; ಒದೊಂದರಲ್ಲೂ ವಿಭಿನ್ನವಾದ ನಮ್ಮಕಲ್ಪನೆಯ ವಿಲಾಸವನ್ನು ಕಾಣುತ್ತೇವೆ. "ಅಮ್ಮನ ಸೀರೆಮಡಿಸೋಕಾಗೋಲ್ಲ, ಅಪ್ಪನ ದುಡ್ಡು ಎಣಿಸೋಕಾಗೊಲ್ಲ" ಎಂದರೆ, ಆಕಾಶ ಮತ್ತು ನಕ್ಷತ್ರಗಳು. ಈ ಒಗಟು ಕಟ್ಟಿದ ಕವಿಗೆ ನೀಲಿ ಆಗಸ ಅಮ್ಮನ ಸೀರೆಯಂತೆ ತೋರಿದೆ. ಲೋಕವನ್ನೆಲ್ಲ ಆಚ್ಛಾದಿಸಿ ನೆರಳಾಗಿ ನಿಂತಿರುವ ಬಾನನ್ನು ಅವನು ಆತ್ಮೀಯ ಶಿಶುಭಾವದಿಂದ ಕಂಡಿದ್ದಾನೆ. ನಿಜಕ್ಕೂ ಈ ಕಲ್ಪನೆ ಭವ್ಯವೆನ್ನಬೇಕು. ಮತ್ತೊಂದು ಒಗಟು "ಅಂಗೈ ಅಗಲದ ರೊಟ್ಟಿಗೆ ಲೆಕ್ಕವಿಲ್ಲದಷ್ಟು ಉಪ್ಪಿನಕಾಯಿ" ಎನ್ನುತ್ತದೆ. ಇಲ್ಲಿ ರೊಟ್ಟಿಯೆಂದರೆ ಚಂದ್ರ, ಉಪ್ಪಿನಕಾಯಿಗಳೆಂದರೆ ನಕ್ಷತ್ರಗಳು. ಈ ಕಲ್ಪನೆ ವಿಲಕ್ಷಣವೆನಿಸಿದರೂ ಅಪೂರ್ವ. ಹೀಗೆಯೆ "ನೀಲಿ ಕೆರೇಲಿ ಬಿಳಿಮೀನು" ಎಂಬ ಒಗಟು. "ಒಂದು ರುಮಾಲ—ನಮ್ಮಪ್ಪನೂ ಸುತ್ತಲಾರ. ನಿಮ್ಮಪ್ಪನೂ ಸುತ್ತಲಾರ" ಎಂಬ ಒಗಟೊಂದು ದಾರಿಯನ್ನು ಸೂಚಿಸುತ್ತದೆ. ನೀಳವಾದ ದಾರಿ ಬಿಳಿಯ ರುಮಾಲಿನ ಪಟ್ಟಿಯಂತೆ ಈ ಕವಿಗೆ ಗೋಚರಿಸಿದೆ. ಇದು ಸ್ವಾನುಭವಜಾತವಾದ ಸೊಗಸಾದ ಹೋಲಿಕೆ. ("The road was a ribbon of moonlight" ಎಂಬ ಆಂಗ್ಲ ಕವಿಯೊಬ್ಬನ ವರ್ಣನೆ ನೆನಪಾಗುತ್ತದೆ).

"ಅಂಗೈ ಅಗಲದ ಗದ್ದೆ ಗದ್ದೆಗೆ ನೀರು ನೀರಿಗೆ ಬೇರು ಬೇರಿಗೆ ಬೆಂಕಿ" ಎಂದಾಗಲಿ, "ಚಿನ್ನದ ಗಿಣಿ ಬಾಲದಲ್ಲಿ ನೀರು ಕುಡಿಯುತ್ತೆ" ಎಂದಾಗಲಿ ದೀಪವನ್ನು ಬಣ್ಣಿಸುವ ರೀತಿ ಬಹು ಚಮತ್ಕಾರಯುತ. ಹಾಗೆಯೆ "ಹಿಡಿದರೆ ಹಿಡಿ ತುಂಬ, ಬಿಟ್ಟರೆ ಮನೆ ತುಂಬ" ಎಂಬ ಚಿತ್ರ ಎಷ್ಟು ಸಂಕ್ಷಿಪ್ತ, ಸಹಜ ಸುಂದರ ! "ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ" ಎಂಬ ಒಗಟು ಹಲಸಿನ ತೊಳೆ ಮತ್ತು ಬೀಜಗಳನ್ನು ನಿರ್ದೇಶಿಸುತ್ತದೆ. ಹಲಸಿನ ತೊಳೆಯ ಹೊಂಬಣ್ಣವನ್ನು ಕವಿ ಗಮನಿಸಿರುವುದಿರಲಿ, ಒಳಗಿನ ಬೀಜವನ್ನು ಬೆಳ್ಳಿಯ ಲಿಂಗವನ್ನಾಗಿ ಕಂಡಿರುವುದು ಒಂದು ವಿಶೇಷಾನುಭವವೇ ಸರಿ. "ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ" ಎನ್ನುವುದು ಮಲ್ಲಿಗೆ ಹೂವಿನ ಚೇತೋಹಾರಿಯಾದ ವರ್ಣನೆ. ಇದು ಒಗಟಾಗದೆ, "ಮಲ್ಲಿಗೆ ಹೂವು ಮೊಸರಿನಂತಿದೆ" ಎಂದು ಸ್ಪಷ್ಟವಾಗಿ ಹೇಳುವುದಾದರೆ, ಇದಕ್ಕಿಂತ ಮೇಲಾದ ಕಾವ್ಯ ಮತ್ತೆಲ್ಲಿದೆ ? ಮಲ್ಲಿಗೆಗೂ ಮೊಸರಿಗೂ ನಿಕಟ ಸಾದೃಶ್ಯವಿದೆ—ಬರಿಯ ಬಣ್ಣದಲ್ಲಲ್ಲ, ರಚನಾವಿನ್ಯಾಸದಲ್ಲೆ. ಎಷ್ಟು ಜನ ಇದನ್ನು ಲಕ್ಷಿಸಿರಬಹುದು ? ಈರುಳ್ಳಿಯ ಒಂದು ಯಥಾವತ್ತಾದ ಚಿತ್ರವನ್ನು "ಅಡ್ಡಕೊಯ್ದರೆ ಚಕ್ರವಲ್ಲ, ಉದ್ದಕೊಯ್ದರೆ ಶಂಖವಲ್ಲ, ಮೂಸಿದರೆ ವಾಸನೆ, ಬಿಡಿಸಿದರೆ ಹತ್ತಿಪ್ಪತ್ತು" ಎಂಬ ಒಗಟು ಮೂಡಿಸುತ್ತದೆ. ಈರುಳ್ಳಿ ಅಡ್ಡ ಕೊಯ್ದಾಗ ಶಂಖದಂತೆ ಕಾಣುತ್ತದೆ ತಾನೆ. ಮತ್ತೊಂದು ಒಗಟು ಈರುಳ್ಳಿಯನ್ನು ಹಾಸ್ಯ ಪೂರ್ವಕವಾಗಿ ಬಣ್ಣಿಸುತ್ತದೆ: "ಕಾವಿ ಕಮಂಡಲ ಧರಿಸಿದೋರ್ಯಾರು.

ಮೂರು ತಿಂಗಳು ಭೂಮೀಲಿದ್ದೋರ್ಯಾರು, ಗಂದ್ಲಪ್ಪನವರು ಎಬ್ಬಿಸಿದೋರ್ಯಾರು ?" ಯಾರೋ ಹಠ ಯೋಗಿಯ ವಿಷಯವಿರಬೇಕೆನಿಸುತ್ತದೆ. ಮೊದಲು; ಆದರೆ ಈರುಳ್ಳಿಯ ಕತೆಯೆಂದಾಗ ನಗು ಬರುತ್ತದೆ. "ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ, ಮೂರು ಕಣ್ಣುಂಟು ಹರನಲ್ಲ" ಎಂಬ ತೆಂಗಿನಕಾಯಿ ಚಿತ್ರವೂ ಮನೋಜ್ಞ ಹಾಗೂ ನಿಖರವಾಗಿದೆ. ಹೀಗೆಯೆ ಎಲ್ಲ ಒಗಟುಗಳಲ್ಲೂ ವ್ಯಕ್ತವಾಗುವ ಸಾಮ್ಯಪ್ರಜ್ಞೆ ಅದ್ಭುತವಾದುದು. ಇಂಥ ಭಾವಾನುಭಾವಗಳು ಪಂಡಿತ ಕವಿಗಳಲ್ಲಿ ಅಲಭ್ಯ.

ಒಗಟುಗಳಿಗೆ ವಿಷಯವಾಗದ ಪದಾರ್ಥವೇ ಜಗತ್ತಿನಲ್ಲಿಲ್ಲ. ಏನು ಬೇಕಾದರೂ ಕಾವ್ಯವಸ್ತುವಾಗಬಹುದು. "ತನ್ನಾಸ್ತಿಯನ್ನ ರಸಭಾವಮುಪೈತಿ ಲೋಕೇ" ಎಂದು ಕಾವ್ಯಮೀಮಾಂಸೆಯಲ್ಲಿ ಹೇಳಿದ್ದರೂ, ಶಿಷ್ಟ ಕವಿಗಳು ಕೆಲವೇ ಕೆಲವು ವಸ್ತುಗಳನ್ನು ತಮ್ಮ ಕಾವ್ಯಪ್ರಾಂತಕ್ಕೆ ಪ್ರವೇಶಗೊಳಿಸಿದರಷ್ಟೆ. ಆದರೆ ಒಗಟುಗಳು ಹಾಗಲ್ಲ. ಅಲ್ಲಿ ಹುಲ್ಲುಕಡ್ಡಿಯಿಂದ ಹಿಡಿದು ಆಕಾಶದ ತನಕ, ಅಲ್ಪದಿಂದ ಭೂಮಂದವರೆಗೆ ಎಲ್ಲವೂ ಚಮತ್ಕಾರಯುತವಾಗುತ್ತದೆ. ಜನಪದ ಕವಿಗಳು ತಾವು ಕಂಡುದಕ್ಕೆಲ್ಲ ಒಗಟಿನ ವೇಷ ತೊಡಿಸಿ ಮೆರೆಸಿದ್ದಾರೆ.

ಒಗಟುಗಳ ಅಂತರಾರ್ಥ ಸುಲಭಗಮ್ಯವಲ್ಲದಿರಬಹುದು. ಆದರೆ ಅವುಗಳ ಬಾಹ್ಯರೂಪ ಮಾತ್ರ ಯಾವಾಗಲೂ ಆಕರ್ಷಕವಾಗಿರುತ್ತದೆ. ಇಲ್ಲದಿದ್ದರೆ ಒಗಟುಗಳಲ್ಲಿ ಯಾರಿಗೂ ಕುತೂಹಲ ಹುಟ್ಟದಿರಬಹುದು. ಎಂತಲೇ ಥಟ್ಟನೆ ಮನಸ್ಸನ್ನು ಸೆಳೆಯುವಂತೆ, ಆಸಕ್ತಿ ಕೆರಳಿಸುವಂತೆ, ಆಲೋಚನೆಯನ್ನು ಚೋದಿಸುವಂತೆ ಒಗಟುಗಳ ರಚನೆಯಾಗಿರುತ್ತದೆ. ಕಿವಿಗೆ ಸ್ವಾದುವಾಗುವ ಪ್ರಾಸಾನುಪ್ರಾಸ ಪರಂಪರೆ, ಲಯ ವೈವಿಧ್ಯ ಒಗಟುಗಳಲ್ಲಿ ಮೇಳವಿಸಿರುತ್ತದೆ. ತಲೆ ತಿನ್ನುವ ಸಮಸ್ಯೆಯಾದರೂ ಅದರ ರೀತಿ ಸರಸವಾಗಿರಲೆಬೇಕು. "ಅಕ್ಕ ಅಕ್ಕ ಗಿಡ ನೋಡು, ಗಿಡದ ತುಂಬ ಜಡೆ ನೋಡು. ಜಡೆ ಬಿಚ್ಚಿ ವಾಸನೆ ನೋಡು" (ಏಲಕ್ಕಿ) ಎಂದಾಗ, ಏನೂ ಅರ್ಥವಾಗ ದಿದ್ದರೂ ಮಕ್ಕಳು ಬೆರಗುಗಣ್ಣಿನಿಂದ ನೋಡಿಯೆ ನೋಡುತ್ತವೆ. ಒಮ್ಮೆ ಕುತೂಹಲ ಗರಿಗೆದರಿದ ಮೇಲೆ ಬುದ್ಧಿ ಸಹಜವಾಗಿ ಕೆಲಸಕ್ಕೆ ತೊಡಗುತ್ತದೆ. ಬಹುಪಾಲು ಒಗಟುಗಳ ನಿರೂಪಣೆ ಹಾಸ್ಯಲಿಪ್ತವಾಗಿಯೆ ಇರುತ್ತದೆ. ಎಷ್ಟೋ ವೇಳೆ ಮೇಲುನೋಟಕ್ಕೆ ಅಸಭ್ಯವೆನಿಸುವಂತೆ ಒಗಟುಗಳಿರುವುದೂ ಉಂಟು ; ಆದರೆ ಅವುಗಳ ಇಂಗಿತ ಬೇರೆಯೆ ಇರುತ್ತದೆ. ಉದಾಹರಣೆಗೆ, "ಗಿಡ್ಡಿ ಗುದ್ದಿದರೆ ಮನೆಯೆಲ್ಲ ಮಕ್ಕಳು" (ಬೆಳ್ಳುಳ್ಳಿ) ಎಂಬುದು. ಇನ್ನೊಂದು ಪ್ರಸಿದ್ಧವಾದ ಒಗಟು : "ಒಬ್ಬನನು ಕರಕೊಂಡೊಳಗ್ಹೋದೆ !" ಇಲ್ಲೇನೊ ಅಶ್ಲೀಲವಿದೆಯೆನಿಸಬಹುದು. ಆದರೆ "ಹಸುವನ್ನು ಕಟ್ಟಿದ್ದೆ, ಕರುವನ್ನು ಬಿಟ್ಟಿದ್ದೆ, ಹಾಲನ್ನು ಕರಕೊಂಡೊಳಗ್ಹೋದೆ" ಎಂಬ ಉತ್ತರ ಕೇಳಿದಾಗ, ನಕ್ಕು ತಲೆಯಾಗುತ್ತೇವೆ. ಹಾಸ್ಯ, ವಿನೋದಗಳೂ

ಒಗಟುಗಳ ಜೀವಾಳವೆಂಬುದನ್ನು ನೆನೆದಾಗ, ಈ ಪರಿಯ ತುಂಟತನದ ಔಚಿತ್ಯ ಅರ್ಥವಾಗುತ್ತದೆ.

ರಚನೆಯ ದೃಷ್ಟಿಯಿಂದ ಒಗಟುಗಳಲ್ಲಿ ನಾನಾ ಬಗೆಗಳುಂಟು. ಕೆಲವು ತ್ರಿಪದಿ, ಚೌಪದಿ ಮುಂತಾದ ಪದ್ಯರೂಪದಲ್ಲಿದ್ದರೆ, ಹಲವು ಲಯಬದ್ಧ ಗದ್ಯದಲ್ಲಿರುತ್ತವೆ. ಕೆಲವು ಪ್ರಶ್ನಾಂತವಾಗಿಯೊ ಸವಾಲನ್ನುಳ್ಳವಾಗಿಯೊ ಇದ್ದರೆ, ಮತ್ತೆ ಕೆಲವು ಬರಿಯ ಹೇಳಿಕೆಗಳ ರೂಪದಲ್ಲಿ ಮುಗಿಯುತ್ತವೆ. ಶುದ್ಧ ಸಂವಾದಾತ್ಮಕ ಒಗಟುಗಳೂ ಉಂಟು. ಒಗಟುಗಳ ಒಂದು ಪ್ರಮುಖ ವರ್ಗವೆಂದರೆ, ಎರಡು ವಸ್ತುಗಳ ಸಮಾನಧರ್ಮವನ್ನು ಹೇಳುವಾಗ, ಪ್ರಸಿದ್ಧವಾದ ಒಂದನ್ನು ನಿಷೇಧರೂಪದಲ್ಲಿರಿಸತಕ್ಕದ್ದು : "ರೆಕ್ಕೆಯುಂಟು ಪಕ್ಷಿಯಲ್ಲ" ಇತ್ಯಾದಿ. ಒಟ್ಟಿನ ಮೇಲೆ ಒಗಟುರಚನೆ ವೈವಿಧ್ಯಪೂರ್ಣ.

ವಸ್ತುವಿನ ದೃಷ್ಟಿಯಿಂದ ಒಗಟುಗಳನ್ನು ಅನೇಕ ವರ್ಗಗಳನ್ನಾಗಿ ಮಾಡಬಹುದು : ಧಾರ್ಮಿಕ ಒಗಟು, ಪ್ರಾಕೃತಿಕ ಒಗಟು, ಕಥಾಮೂಲ ಒಗಟು, ಪ್ರಾಣಿಸಂಬಂಧಿ ಒಗಟು, ಪೌರಾಣಿಕ ಒಗಟು, ವಿನೋದಾತ್ಮಕ ಒಗಟು, ಗಣಿತಾತ್ಮಕ ಒಗಟು ಇತ್ಯಾದಿ ಪ್ರಕೃತಿಸಂಬಂಧವಾದ ಒಗಟುಗಳದೇ ದೊಡ್ಡ ಗುಂಪು. ಬಹುತೇಕ ಗಣಿತಾತ್ಮಕ ಒಗಟುಗಳು ಸಾಮಾನ್ಯ ಜ್ಞಾನಕ್ಕಷ್ಟೆ (**common** sense) ಸಂಬಂಧಿಸಿರುತ್ತವೆ. ಒಗಟುಗಳಲ್ಲಿ ಶ್ಲೇಷೆ, ಶಬ್ದ ಚಮತ್ಕಾರಗಳ ಪಾತ್ರವೂ ಗಣ್ಯ.[1]

ಒಗಟುಗಳ ಇತಿಹಾಸ ಜಾಗತಿಕವಾದುದು, ಸುದೀರ್ಘವಾದುದು, ಕುತೂಹಲ ಕಾರಿಯಾದುದು. ಅದು ನಡೆದುಬಂದ ದಾರಿಯಲ್ಲಿ ಏರಿಳಿತಗಳುಂಟು ; ಅದರ ಕತೆ ಸ್ವಲ್ಪ ಮಟ್ಟಿಗೆ ರಕ್ತರಂಜಿತವೂ ಹೌದು. ಪ್ರಪಂಚದ ಪ್ರಾಚೀನತಮ ಜನಾಂಗಗಳಲ್ಲಿ ಒಗಟುಗಳು ಪ್ರಚಲಿತವಾಗಿದ್ದುವು. ಭರತಖಂಡ ಮಾತ್ರವಲ್ಲದೆ, ಗ್ರೀಕ್, ರೋಮನ್ ಈಜಿಪ್ಷಿಯನ್ ಸಮಾಜಗಳು ಕೂಡ ಪ್ರಹೇಳಿಕಾನಿಬಿಡವಾಗಿದ್ದುವು. ವೈದಿಕ ಸಾಹಿತ್ಯ ದಲ್ಲೆ ಒಗಟುಗಳು ಸುಳಿಯುತ್ತವೆ ; ಕೊರಾನ್, ಬೈಬಲ್ಲುಗಳಲ್ಲೂ ತಲೆದೋರಿವೆ.

ಜನಸಾಮಾನ್ಯರಲ್ಲಿ ಒಗಟುಗಳು ಕೇವಲ ಆನಂದಲಾಭಕ್ಕಾಗಿ ಪ್ರಯುಕ್ತ ವಾಗುತ್ತಿದ್ದುದರಲ್ಲಿ ಸಂದೇಹವಿಲ್ಲ. ಆದರೆ ರಾಜಾಸ್ಥಾನಗಳಲ್ಲಿ, ಪಂಡಿತ ಕವಿಗಳ ಕೈಯಲ್ಲಿ ಇವು ವಿದ್ವತ್‌ಸ್ಪರ್ಧೆಯ ಉದ್ದೇಶಕ್ಕೂ ಬಳಕೆಗೊಳ್ಳುತ್ತಿದ್ದುವು ; ಪಾಂಡಿತ್ಯ ಪ್ರದರ್ಶನ, ಕೀರ್ತಿಸಂಪಾದನೆ, ಧನಾರ್ಜನೆ, ಪ್ರಣಯ ಸಾಫಲ್ಯದಂತಹ ಪ್ರಯೋಜನಗಳೂ ಅವುಗಳಿಂದ ಸಿದ್ಧಿಸುತ್ತಿದ್ದಂತೆ ತೋರುತ್ತದೆ. ಎಷ್ಟೋ ಸಲ ರಾಜ್ಯ ಸಾಮ್ರಾಜ್ಯಗಳ ಸಂಪ್ರಾಪ್ತಿ ನಷ್ಟಗಳು, ಬದುಕು ಸಾವಿನ ಪ್ರಶ್ನೆಗಳು ಒಗಟುಗಳಲ್ಲುಂಟಾಗುವ ಗೆಲುವು ಸೋಲುಗಳನ್ನವಲಂಬಿಸಿರುತ್ತಿದ್ದುವು. ನಮ್ಮ ದೇಶದ 'ಭೇತಾಳ ಪಂಚವಿಂಶತಿ', 'ಶುಕಸಪ್ತತಿ', 'ಭಟ್ಟಿ ವಿಕ್ರಮಾರ್ಕನ ಕಥೆ',

---

1. ಈ ಬಗೆಯ ಸಮಸ್ಯೆಗಳೆಲ್ಲ ಅಪ್ಪಟ ಒಗಟುಗಳೆ ಎಂಬ ಸಂದೇಹಕ್ಕೂ ಆಸ್ಪದವಿದೆ.

'ಭೋಜಪ್ರಬಂಧ' ಮುಂತಾದ ಕೃತಿಗಳಲ್ಲಿ ಬರುವ ರಮ್ಯಾದ್ಭುತ ಕಥೆಗಳನ್ನು ಸ್ಮರಿಸಬಹುದು.

ಪ್ರಾಚೀನ ಭಾರತದಲ್ಲಿ ಪ್ರಹೇಳಿಕೆಗಳನ್ನು ಬಿಡಿಸುವುದು ಅರವತ್ತುನಾಲ್ಕು ವಿದ್ಯೆಗಳಲ್ಲಿ ಒಂದಾಗಿತ್ತೆಂಬುದು ಗಮನಾರ್ಹ. ಒಗಟುಗಳ ಮೇಲೆ ಪಣ ಕಟ್ಟಿ ಜೂಜಾಡುವ ಪದ್ಧತಿಯೂ ಕೆಲವೆಡೆ ಇದ್ದಂತೆ ತಿಳಿದುಬರುತ್ತದೆ. ಒಗಟುಸಂಬಂಧವಾದ ದ್ಯೂತ, ಸ್ಪರ್ಧೆ, ಮೇಳ, ಸಮಾರಂಭಗಳು ಗ್ರೀಕರಲ್ಲಿ ವಿಪರೀತವಾಗಿದ್ದುವು. ಹೇಸಿಯಡ್ ಮತ್ತು ಹೋಮರ್ ಕವಿಗಳ ನಡುವೆ ನಡೆದ ಒಗಟಿನ ಸ್ಪರ್ಧೆಯೊಂದರಲ್ಲಿ ಎದುರಾಳಿಯ ಒಗಟನ್ನುತ್ತರಿಸಲಾರದೆ ಹೋಮರ್ ಪ್ರಾಣ ತೆತ್ತನೆಂದು ಪ್ರತೀತಿಯಿದೆ. ಅನೇಕ ಗ್ರೀಕ್ ರುದ್ರ ನಾಟಕಗಳಲ್ಲಿ ಒಗಟುಗಳೆ ಕ್ರಿಯಾಪರಂಪರೆಗೆ ಚಾಲಕಶಕ್ತಿಯಾಗಿ ಕೆಲಸ ಮಾಡಿರುವುದುಂಟು. ಸ್ಫಿಂಕ್ಸ್‌ಭೂತ ಈಡಿಪಸನಿಗೆ ಒಡ್ಡಿದ ಸಮಸ್ಯೆ ಜಗದ್ವಿಖ್ಯಾತವಾದುದು ; ಅದು ಜಗತ್ತಿನ ಪುರಾತನತಮ ಒಗಟುಗಳಲ್ಲೊಂದು : "ಬೆಳಗ್ಗೆ ನಾಲ್ಕುಕಾಲು, ಮಧ್ಯಾಹ್ನ ಎರಡುಕಾಲು, ಸಂಜೆ ಮೂರುಕಾಲು—ಈ ಪ್ರಾಣಿ ಯಾವುದು ?" ಇದಕ್ಕೆ ಉತ್ತರ 'ಮನುಷ್ಯ.' ಈ ಒಗಟಿನಲ್ಲಿ ಒಂದು ದಿನದ ಅವಧಿ ಇಡೀ ಮಾನವಜೀವಿತವನ್ನು ಸಂಕೇತಿಸುತ್ತದೆ. ಅಜ್ಞಾತ ಜಾನಪದರಲ್ಲದೆ ಎಷ್ಟೋ ಮಂದಿ ವರಿಷ್ಠ ಕವಿಗಳು ಒಗಟುಗಳ ಕೃಷಿಗೆ ಯತ್ನಿಸಿರುವುದುಂಟು. ನಿದರ್ಶನಕ್ಕೆ, ಜರ್ಮನಿಯ ಮಹಾಕವಿ ಷಿಲ್ಲರ್ ಒಗಟುಗಳ ಬೆಳವಣಿಗೆಗೆ ವಿಶೇಷ ಶ್ರಮಿಸಿ, ಅವುಗಳಿಗೆ ಸಾಹಿತ್ಯಶಕ್ತಿಯನ್ನು ತುಂಬಿದನೆಂಬುದು ಚಾರಿತ್ರಿಕ ಸಂಗತಿ.

ಒಗಟುಗಳ ಬಗ್ಗೆ ಪ್ರಾಯಃ ಅತ್ಯಂತ ಆಶ್ಚರ್ಯಾಸ್ಪದವಾದ ವಿಷಯವೇನೆಂದರೆ, ಅವು ಪುರಾತನ ಕಾಲದಿಂದಲೂ ಧಾರ್ಮಿಕ ವಿಧಿ ಉತ್ಸವಗಳಿಗೆ ಸಂಬಂಧಿಸಿದಂತೆ, ಅಲೌಕಿಕೋದ್ದೇಶಗಳಿಗೆ ಮಾಧ್ಯಮವಾಗಿ ಬಳಕೆಯಾಗುತ್ತ ಬಂದಿರುವುದು. ಹೀಗಾಗಿ ಅವು ಅತ್ಯಂತ ಗಂಭೀರ ವಿಚಾರಗಳಿಗೆ, ಆಧ್ಯಾತ್ಮಿಕ ಸತ್ಯಗಳಿಗೆ, ವೇದಾಂತ ರಹಸ್ಯಗಳಿಗೆ ಪ್ರಣಾಳಿಕೆಗಳಾಗಿ ಕೂಡ ದುಡಿದಿರುವುದು ಕಂಡುಬರುತ್ತದೆ. ಗ್ರೀಕರಲ್ಲಿ ಡೆಲ್ಫಿಯ ಭವಿಷ್ಯವಾಣಿ ಪುರೋಹಿತರ ಮೂಲಕ ಒಗಟು ರೂಪದಲ್ಲೆ ಹೊರಹೊಮ್ಮುತ್ತಿತ್ತು. ಭರತ ಖಂಡದ ವೈದಿಕ ಯಜ್ಞ ಯಾಗಾದಿಗಳಲ್ಲಿ ಒಗಟಿನ ಸಂಪ್ರದಾಯವಿದ್ದುದು ತಿಳಿದುಬರುತ್ತದೆ.

ವೇದಸಾಹಿತ್ಯದಲ್ಲಿ ಕಂಡುಬರುವ ಮುಂದಿನ ಒಗಟು ಬಹುಶಃ ಭಾರತದ ಪ್ರಹೇಳಿಕಾಪರಂಪರೆಯ ಆದಿಮ ಘಟ್ಟವೊಂದನ್ನು ಸೂಚಿಸುತ್ತದೆ :

> ದ್ವಾ ಸುಪರ್ಣಾ ಸಯುಜಾ ಸಖಾಯಾ
> ಸಮಾನಂ ವೃಕ್ಷಂ ಪರಿಷಸ್ವಜಾತೇ
> ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ
> ಅನಶ್ನನ್ನನ್ಯೋಽಭಿಚಾಕಶೀತಿ

(ಒಂದು ಮರದಲ್ಲಿ ಎರಡು ಹಕ್ಕಿಗಳಿವೆ : ಒಂದು ಸವಿಯಾದ ಹಣ್ಣನ್ನು ತಿನ್ನುತ್ತಿದೆ, ಮತ್ತೊಂದು ತಿನ್ನದೆ ಸುಮ್ಮನೆ ನೋಡುತ್ತಿದೆ). ಇಲ್ಲಿ ಹಣ್ಣು ಮೆಲ್ಲುವ ಹಕ್ಕಿ ಕರ್ಮನಿರತ ಜೀವಾತ್ಮನಿಗೂ ಸುಮ್ಮನಿರುವ ಹಕ್ಕಿ ನಿರ್ಲಿಪ್ತ ಪರಮಾತ್ಮನಿಗೂ ಸುಂದರ ರೂಪಕಗಳು. ಮಹಾಭಾರತದಲ್ಲಿ ಬರುವ ಯಕ್ಷ ಪ್ರಶ್ನೆ, ನಹುಷಪ್ರಶ್ನೆಗಳೂ ಒಂದು ತೆರನಾದ ಒಗಟುಗಳೇ. ಪುರಾಣೇತಿಹಾಸಗಳಲ್ಲಿ ಇಂಥವು ಅಸಂಖ್ಯ.

ಕನ್ನಡಕ್ಕೆ ಬಂದರೆ, ಅಲ್ಲಮಪ್ರಭುವಿನ ಎಷ್ಟೋ ವಚನಗಳು ದುರವಗಾಹ್ಯ ಒಗಟುಗಳಾಗಿ, 'ಬೆಡಗಿನ ವಚನಗಳು' ಎಂಬ ಹೆಸರಿನಿಂದ ಅನುಭಾವಸೂಕ್ಷ್ಮಗಳಿಗೆ ಪ್ರತೀಕಗಳಾಗಿವೆ. ಒಂದು ವಚನವನ್ನು ನೋಡಿ: "ಕೆಂಡದ ಗಿರಿಯು ಮೇಲೆ ಒಂದು ಅರಗಿನ ಕಂಬವಿದ್ದುದ ಕಂಡೆ, ಅರಗಿನ ಕಂಬದ ಮೇಲೊಂದು ಹಂಸೆಯಿದ್ದುದ ಕಂಡೆ ಕಂಬ ಬೆಂದು ಹಂಸೆ ಹಾರಿತ್ತು!" ಇಲ್ಲಿ ಕೆಂಡದ ಗಿರಿ ಸಂಸಾರಕ್ಕೆ, ಅರಗಿನ ಕಂಬ ಶರೀರಕ್ಕೆ, ಹಂಸ ಆತ್ಮಕ್ಕೆ ದ್ಯೋತಕವಾಗಿವೆ. 'ಕಂತಿಹಂಪನ ಸಮಸ್ಯೆಗಳು' ಎಂಬ ಪುಸ್ತಕದಲ್ಲಿ ಶಬ್ದಚಮತ್ಕಾರ ಸಂಬಂಧವಾದ ಸಮಸ್ಯೆಗಳಿವೆ. ಕನಕದಾಸರ ಕೆಲವು ಕೀರ್ತನೆಗಳು 'ಮುಂಡಿಗೆ'ಗಳಾಗಿವೆ. ಸರ್ವಜ್ಞನ ಕೆಲವು ತ್ರಿಪದಿಗಳು ವಸ್ತುತಃ ಒಗಟುಗಳೇ. ಆಧುನಿಕ ಕಾಲದಲ್ಲೂ ಒಗಟುಗಳು ರಚಿತವಾಗಿರುವುದುಂಟು.

ಒಟ್ಟಿನಲ್ಲಿ ಜಗತ್ತಿನ ಅತ್ಯುದಾತ್ತವಾದ ಎಷ್ಟೋ ಅನುಭವಗಳು ಒಗಟಿನ ರೂಪದಲ್ಲಿ ಅಭಿವ್ಯಕ್ತವಾಗಿವೆಯೆಂದರೆ ತಪ್ಪಲ್ಲ. ನಾನಾ ಮನೋಭೂಮಿಕೆಗಳಲ್ಲಿ ಈ ಒಗಟುಗಳ ಉಗಮ. ಬದುಕಿನ ಯಾವುದೋ ನಿಕೃಷ್ಟ ಭಾಗವಲ್ಲ ಒಗಟು. ಏಕೆಂದರೆ, ನಮ್ಮ ಜೀವನವೆ ಒಂದು ಬಿಡಿಸಲಾಗದ ಗಂಟು ಅಥವಾ 'ಒಗಂಟು' ಎಂಬ ನೆಲೆಯಲ್ಲಿ ಪರ್ಯವಸಾನಗೊಳ್ಳುತ್ತದೆ ಇವುಗಳ ಪ್ರಪಂಚ.

ಡಾ. ಬಿ. ಎ. ವಿವೇಕ ರೈ

ಜನಪದ ನಂಬಿಕೆಗಳು

ಜಾನಪದದಲ್ಲಿ ಜನಪದ ನಂಬಿಕೆಗಳು ಸಾಹಿತ್ಯೇತರ ವಿಭಾಗಕ್ಕೆ ಸೇರುತ್ತವೆ. ಆರ್. ಎಸ್. ಬಾಗ್ಸ್ ನಂಬಿಕೆಗಳನ್ನು ಜಾನಪದದ ವೈಜ್ಞಾನಿಕ ಬಗೆಯಲ್ಲಿ ಅಳವಡಿಸಿದ್ದಾನೆ. ಜನಪದ ನಂಬಿಕೆಯು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಸಾಮಾನ್ಯವಾಗಿ ಅದು ಕಾರಣ ಮತ್ತು ಪರಿಣಾಮ (cause and effect)ದ ಸಂಬಂಧವನ್ನು ಹಾಗೂ ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ಸಂಗತಿಗಳನ್ನು ಒಳಗೊಂಡಿರುತ್ತದೆ. ಅದು ಹೆಚ್ಚಾಗಿ ಪುನರಾವರ್ತಿತ ಹಾಗೂ ಸಾಮೂಹಿಕ ನಿರೀಕ್ಷಣೆಯ ಪರಿಣಾಮವಾಗಿ ಅಂಗೀಕೃತವಾಗಿರುತ್ತದೆ. ಅಥವಾ ಕೊನೆಗೆ ಎಲ್ಲವೂ ವಿಶ್ವಾಸವನ್ನು ಅವಲಂಬಿಸಿರುತ್ತದೆ. ನಂಬಿಕೆಯು ಅಭಯ ಅಥವಾ ನೆಚ್ಚಿಕೆಯ ಒಂದು ಮಾನಸಿಕಸ್ಥಿತಿ. ಆದರೆ 'ಧರ್ಮ' ಎನ್ನುವಾಗ ಅದರಲ್ಲಿ ನಂಬಿಕೆ (belief) ಮತ್ತು ಆಚರಣೆ (ritual) ಎಂಬ ಎರಡು ಭಾಗಗಳು ಬರುತ್ತವೆ. ನಂಬಿಕೆಯು ಅವಲಂಬನೆಯ ರೂಪ. ಆಚರಣೆಯು ಕ್ರಿಯೆಯ ರೂಪ. ಜಾನಪದದಲ್ಲಿ ನಂಬಿಕೆಗಳು ಎನ್ನುವ ಪ್ರಕಾರವು ಪುರಾಣ (myth), ಐತಿಹ್ಯ (legend), ಮಂತ್ರವಿದ್ಯೆ (magic), ಜನಪದ ವೈದ್ಯ (Folk medicine), ಧರ್ಮ (religion) ಮುಂತಾದ ಜನಪದ ಪ್ರಕಾರಗಳೊಡನೆ ಸಂಬಂಧಿಸಿರುವುದರಿಂದ, ಅದು ಬಹಳ ಸಂಕೀರ್ಣರೂಪವಾಗಿ ಕಾಣಿಸುತ್ತದೆ

ಪ್ರಾಚೀನ ಮಾನವನ ಪರಿಮಿತ ತಿಳುವಳಿಕೆಯು ಜನಪದ ನಂಬಿಕೆಗಳಿಗೆ ಮೂಲ ವಸ್ತುಸ್ಥಿತಿಯೊಡನೆ ಅಸಂಬದ್ಧ, ಅವೈಜ್ಞಾನಿಕ ಸಂಬಂಧವನ್ನು ಕಲ್ಪಿಸಿದಾಗ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ತಪ್ಪು ತಿಳಿವಳಿಕೆ ಮತ್ತು ಅಜ್ಞಾನದಿಂದ ಹೆಚ್ಚಿನ ನಂಬಿಕೆಗಳು ಜನ್ಮತಾಳುತ್ತವೆ.

ನಂಬಿಕೆಗಳ ಅಧ್ಯಯನದಲ್ಲಿ ಕೆಲವು ಜಾನಪದ ವಿಜ್ಞಾನಿಗಳು 'ಜನಪದ ನಂಬಿಕೆ' (Folk belief) ಮತ್ತು 'ಮೂಢನಂಬಿಕೆ' (superstition) ಎಂಬ ಪ್ರಭೇದಗಳನ್ನು ಗುರುತಿಸುತ್ತಾರೆ.[1] ಅವರ ಪ್ರಕಾರ, "ಜನಪದ ನಂಬಿಕೆಯು ಧೋರಣೆ ಮತ್ತು

---

1. Wayland D. Hand, "The Fear of the Gods: Superstition and Popular beliefs": American Folklore. Ed. Tristram Coffin III.

ವಿಶ್ವಾಸಕ್ಕೆ ಸಂಬಂಧಿಸಿದ್ದು."[2] ಜನಪದ ಕತೆಯಂತೆಯೇ ಇಲ್ಲಿಯೂ ಇರುವುದು 'ಅಸಂಭಾವ್ಯತೆ' (willing suspension of disbelief). ಜನಪದ ನಂಬಿಕೆಯು ದೈನಂದಿನ ಬದುಕಿನ ಸಮಸ್ಯೆಗಳನ್ನು ನಿವಾರಿಸಲು ಬಳಸುವ ವಿಧಾನ. ಇಂತಹ ಯಾವುದಾದರೊಂದು ನಂಬಿಕೆಯನ್ನು ಪ್ರಬಲವಾಗಿ ನಂಬುವುದರ ಮೂಲಕ ತನ್ನ ನಡವಳಿಕೆಯಲ್ಲಿ ಅದು ಪ್ರಭಾವ ಬೀರುತ್ತದೆ ಎಂದು ಒಬ್ಬನು ಭಾವಿಸಿಕೊಂಡಿದ್ದರೆ, ಅದು 'ಮೂಢನಂಬಿಕೆ' (superstition). 'ಮೂಢನಂಬಿಕೆಗಳು' ಅನೇಕ ಬಾರಿ ಅಪಾಯಕಾರಿಯಾಗಿರುತ್ತವೆ. ಹಾಗೂ ಅವು ಮಂತ್ರವಿದ್ಯೆ (magic)ಗೆ ಸಂಬಂಧಿಸಿರುತ್ತವೆ. ಆದರೆ ಜನಪದ ನಂಬಿಕೆ ಮತ್ತು ಮೂಢನಂಬಿಕೆ (superstition)ಗಳ ನಡುವಿನ ಈ ವ್ಯತ್ಯಾಸವು ಅವುಗಳೆರಡನ್ನೂ ಸಮರ್ಪಕವಾಗಿ ಪ್ರತ್ಯೇಕಿಸುವಂತಹದ್ದೇನೂ ಅಲ್ಲ. ನಂಬಿಕೆಯ ಭಿನ್ನ ಪ್ರಮಾಣ (degree)ಗಳನ್ನಷ್ಟೇ ನಾವು ಇಲ್ಲಿ ಕಾಣುತ್ತೇವೆ. ಯಾವುದೇ ಒಂದು ಜನಪದ ನಂಬಿಕೆಯು superstition ಆಗುವುದು ವ್ಯಕ್ತಿಯ ಅರಿವು, ಕಾಲದ ಅಂತರ ಮುಂತಾದ ಅಂಶಗಳನ್ನು ಅವಲಂಬಿಸಿದ್ದು, ಅದು ಸಾಪೇಕ್ಷವಾಗಿರುತ್ತದೆ. ಒಬ್ಬನ ನಂಬಿಕೆ ಇನ್ನೊಬ್ಬನ ಪಾಲಿಗೆ ಮೂಢನಂಬಿಕೆಯಾಗಬಹುದು ಅಥವಾ ಅವನಿಗೇ ಆತನ ನಂಬಿಕೆ ಕೆಲವು ಕಾಲದ ನಂತರ ಮೂಢನಂಬಿಕೆ ಅನ್ನಿಸಬಹುದು.

ಜನಪದ ನಂಬಿಕೆಗಳು ಮನುಷ್ಯನ ಮನಸ್ಸಿನ ಪರಿಸ್ಥಿತಿಗೆ ಸಂಬಂಧಿಸಿದವು ಆಗಿರುವುದರಿಂದ, ಅವು ಸಾರ್ವತ್ರಿಕವಾಗಿವೆ. ಹಾಗೆಯೇ ಅನೇಕ ದೇಶಗಳ ಜನಪದ ನಂಬಿಕೆಗಳು ಸಮಾನವಾಗಿವೆ. ಆದ್ದರಿಂದಲೇ ಕರ್ಣಾಟಕದ ಜನಪದ ನಂಬಿಕೆಗಳು ಜಗತ್ತಿನ ಬೇರೆ ದೇಶಗಳ ಜನಪದ ನಂಬಿಕೆಗಳಿಗಿಂತ ವಿಶೇಷ ಭಿನ್ನವಾಗಿ ಕಾಣಿಸುವುದಿಲ್ಲ. ಈ ದೃಷ್ಟಿಯಿಂದ ಕನ್ನಡಿಗರು ಜಗತ್ತಿನ ಯಾವುದೇ ನಾಗರಿಕ ದೇಶದ ಜನರಷ್ಟೇ ಬುದ್ಧಿವಂತರಾಗಿದ್ದಾರೆ ಅಥವಾ ಮೂಢರಾಗಿದ್ದಾರೆ. ಕರ್ಣಾಟಕದ ಜನಪದ ನಂಬಿಕೆಗಳ ವಿಶಿಷ್ಟತೆ ಏನೇ ಇದ್ದರೂ, ಅದು ಇಲ್ಲಿನ ಪ್ರಾದೇಶಿಕ ಸಂಸ್ಕೃತಿಯ ಭಿನ್ನತೆಗೆ ಸಂಬಂಧಿಸಿದ್ದು ಮಾತ್ರ; ಹೊರತು ಆಲೋಚನೆಯ ಸ್ಥಿತಿಗೆ ಸಂಬಂಧಿಸಿದ್ದು ಅಲ್ಲ.

ಆರ್. ಎಸ್. ಬಾಗ್ಸ್‌ನ ವರ್ಗೀಕರಣದಂತೆ ಜನಪದ ನಂಬಿಕೆಗಳಲ್ಲಿ ಸ್ಥೂಲವಾಗಿ ಈ ೬ ಪ್ರಕಾರಗಳಿವೆ: (೧) ಪುರಾಣ (೨) ಐತಿಹ್ಯ (೩) ಪದ್ಧತಿ (೪) ಮಾಂತ್ರಿಕತೆ (೫) ವೈದ್ಯ (೬) ಕಾಲಜ್ಞಾನ (prediction). ಈ ಪ್ರಕಾರಗಳಲ್ಲಿ ಇನ್ನೂ ಅನೇಕ ಒಳ ಪ್ರಭೇದಗಳಿವೆ. ಇನ್ನೊಂದು ರೀತಿಯವರ್ಗೀಕರಣದಲ್ಲಿ (Wayland D. Hand) ಜನಪದ ನಂಬಿಕೆಗಳನ್ನು ಹೀಗೆ ವಿಂಗಡಿಸಲಾಗಿದೆ: (೧) ಮನುಷ್ಯ ಶರೀರ ಮತ್ತು ವೈದ್ಯಕ್ಕೆ ಸಂಬಂಧಿಸಿದವು. (೨) ಜೀವನಚಕ್ರಕ್ಕೆ ಸಂಬಂಧಿಸಿದವು. ಅಂದರೆ, ಹುಟ್ಟು ಮದುವೆ ಸಾವು ಇತ್ಯಾದಿ. (೩) ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು. ಇದರಲ್ಲಿ

---

2. Folk belief is often a matter of attitude and matter of faith. ಅದೇ.

ಸಂಚಾರ ಹಾಗೂ ಸಾರಿಗೆ, ಕಾನೂನು ವಿಚಾರಗಳು, ಮನೆ, ಶಾಲೆ ಮುಂತಾದುವುಗಳಿಗೆ ಸಂಬಂಧಿಸಿದವು. (೪) ಮಾಟ ಮತ್ತು ಮಂತ್ರವಿದ್ಯೆ (Witchcraft and magic). (೫) ಭೂತ, ಪ್ರೇತ, ಸಾವು ಮುಂತಾದುವುಗಳಿಗೆ ಸಂಬಂಧಿಸಿದವು. (೬) ಸಂಖ್ಯೆಗಳು ಮತ್ತು ಖಗೋಳ ಸಂಗತಿಗಳು. (೭) ಬೇಸಾಯಕ್ಕೆ ಸಂಬಂಧಿಸಿದವು. ಅಂದರೆ, ಹವಾಮಾನ, ಪ್ರಾಣಿಸಾಕಣೆ, ಸಸ್ಯಗಳನ್ನು ಬೆಳೆಸುವುದು, ಬೇಟೆ, ಮೀನುಗಾರಿಕೆ ಇತ್ಯಾದಿ. ಕರ್ಣಾಟಕದ ಜನಪದ ನಂಬಿಕೆಗಳಲ್ಲಿ ಈ ಎಲ್ಲ ಪ್ರಕಾರಗಳಿಗೆ ನಿದರ್ಶನಗಳು ಸಿಗುತ್ತವೆ.

ಜನಪದ ನಂಬಿಕೆಗಳ ವೈಜ್ಞಾನಿಕ ಅಧ್ಯಯನದಲ್ಲಿ ಅವುಗಳು ಹುಟ್ಟಿಕೊಂಡ ಸಂದರ್ಭ (context)ಗಳ ದೃಷ್ಟಿಯಿಂದ ವಿಶ್ಲೇಷಿಸುವುದು ಅಗತ್ಯ. ಜನಪದ ನಂಬಿಕೆಗಳ ಉಗಮವನ್ನು ಸ್ಥೂಲವಾಗಿ ಮೂರು ವಿಧವಾಗಿ ಗುರುತಿಸಬಹುದು : (೧) ಧಾರ್ಮಿಕ (೨) ಸಾಂಸ್ಕೃತಿಕ (೩) ವೈಯುಕ್ತಿಕ.

೧. ಧಾರ್ಮಿಕ ನಂಬಿಕೆಗಳು

ಇವುಗಳನ್ನು ಅತಿಮಾನುಷ ನಂಬಿಕೆಗಳು ಎಂದೂ ಕರೆಯಬಹುದು. ಮಾನವನ ಬದುಕಿನಲ್ಲಿ ಭಯ ಮತ್ತು ಅಸ್ಥಿರ ಭಾವನೆಗಳು ಅತಿಮಾನುಷ ನಂಬಿಕೆಗಳಿಗೆ ಮೂಲ. ನಿಸರ್ಗದ ನಡುವೆ ಬದುಕಬೇಕಾದ ಮಾನವ ತನ್ನ ಪರಿಸರದ ಎಷ್ಟೋ ಸಂಗತಿಗಳ ಬಗ್ಗೆ ಅಜ್ಞಾನಿಯಾಗಿದ್ದ. ಅಸ್ಥಿರವಾದ ಅವನ ಮನಸ್ಸಿಗೆ ತಾತ್ಕಾಲಿಕವಾಗಿಯಾದರೂ ಸಮಾಧಾನ ಕೊಡುವಲ್ಲಿ ಧಾರ್ಮಿಕ ನಂಬಿಕೆಗಳು ಸಹಕಾರಿಯಾದುವು. ದೇವರು, ದೈವ ಮುಂತಾದ ಅತಿಮಾನುಷ ಶಕ್ತಿಗಳ ಕಲ್ಪನೆಗಳು ಆತನ ಮನಸ್ಸಿನಲ್ಲಿ ಹುಟ್ಟಿ ಕೊಂಡುವು. ಹಾಗೆಯೇ ಅವುಗಳ ಸ್ವರೂಪ, ಕಾರ್ಯಗಳಿಗೆ ಸಂಬಂಧಿಸಿದ ನಂಬಿಕೆಗಳೂ ಕಾಣಿಸಿಕೊಂಡುವು. ಕೆಲವೊಮ್ಮೆ ಕಾಲ್ಪನಿಕ ದೇವರುಗಳನ್ನು ವಾಸ್ತವಿಕ ವಸ್ತುಗಳೊಡನೆ ಸಂಬಂಧ ಕಲ್ಪಿಸಿ, ಗೌರವಿಸುವ ನಂಬಿಕೆಗಳೂ ಬಂದುವು. ಉದಾ : "ತೆಂಗಿನಕಾಯಿಯನ್ನು ಕಾಲಿನಿಂದ ಒದೆಯಬಾರದು. ಅದು ಮುಕ್ಕಣ್ಣ." ಈಶ್ವರನಿಗೆ ಮೂರು ಕಣ್ಣುಗಳಿವೆ ಎನ್ನುವುದು ಪೌರಾಣಿಕ ಕಲ್ಪನೆ. ತೆಂಗಿನಕಾಯಿಯಲ್ಲೂ ಮೂರು ಕಣ್ಣುಗಳು ಇರುವುದರಿಂದ, ಅದನ್ನು ಈಶ್ವರನಿಗೆ ಸಮಾನವೆಂದು ಗೌರವಿಸಲಾಗಿದೆ.

ಕೆಲವು ನಂಬಿಕೆಗಳು ಧಾರ್ಮಿಕ ಸ್ವರೂಪದವು ಆಗಿದ್ದರೂ, ಆ ನಂಬಿಕೆಗಳಲ್ಲಿನ ಕ್ರಿಯೆ ಲೌಕಿಕವಾಗಿರುತ್ತದೆ. ಮೂಲತಃ ಲೌಕಿಕವಾದ ಒಂದು ಕ್ರಿಯೆಯನ್ನು ಸಮರ್ಪಕ ವಾಗಿ ಮಾಡಿಸುವುದಕ್ಕಾಗಿ ಅಥವಾ ನಿಷೇಧಿಸುವುದಕ್ಕಾಗಿ ಇಂತಹ ನಂಬಿಕೆಗಳು ಹುಟ್ಟಿ ಕೊಂಡಿರಬಹುದು. ಉದಾ : "ಕಾಲನ್ನು ತೊಳೆಯುವಾಗ ಹಿಮ್ಮಡಿ ಪೂರ್ತಿ ನೆನೆಯಬೇಕು. ಇಲ್ಲದಿದ್ದರೆ ಶನಿ ಹಿಡಿದುಕೊಳ್ಳುತ್ತದೆ."

ಇಲ್ಲಿ ಕಾಲನ್ನು ಹಿಮ್ಮಡಿ ಸಹಿತ ಸರಿಯಾಗಿ ತೊಳೆದುಕೊಳ್ಳಬೇಕು ಎನ್ನುವುದು ಶುಚಿತ್ವದ ದೃಷ್ಟಿಯಿಂದ ಅಗತ್ಯವಾದ ಸಂಗತಿ. ಆದರೆ ಲೌಕಿಕವಾದ ಬುದ್ಧಿವಾದವನ್ನು

ಕೇಳದ ಜನರನ್ನು ಸರಿಯಾಗಿ ಕೆಲಸಮಾಡಿಸಲು ಶನಿಯು ಹೆದರಿಕೆಯನ್ನು ಉಂಟು ಮಾಡಿರಬೇಕು.

ಈ ದೃಷ್ಟಿಯಿಂದ 'ಜನಪದ ನಂಬಿಕೆಗಳು' ಅನೇಕ ಬಾರಿ 'ನಿಷಿದ್ಧತೆಗಳು' (Taboos) ಆಗಿರುವುದನ್ನು ಗಮನಿಸಬಹುದು. ನಿಷಿದ್ಧತೆಗಳನ್ನು ಪ್ರಾಚೀನ ಸಮಾಜಗಳ ಅಲಿಖಿತ ಕಾನೂನು ಎಂದು ಕರೆಯಲಾಗಿದೆ. ಲಿಖಿತವಾದ ಕಾನೂನು, ಕೋರ್ಟ್, ಪೊಲೀಸ್ ವ್ಯವಸ್ಥೆಗಳು ಇಲ್ಲದ ಕಾಲದಲ್ಲಿ ಸಮಾಜದ ವ್ಯವಸ್ಥೆಯನ್ನು ರಕ್ಷಿಸುವ ಕಾನೂನುಗಳ ರೀತಿಯಲ್ಲಿ ನಿಷಿದ್ಧತೆಗಳನ್ನು ಬಳಸುತ್ತಿದ್ದರು. ಇಂತಹ ನಿಷಿದ್ಧತೆಗಳನ್ನು ಮುರಿದರೆ ಕೇಡು ಸಂಭವಿಸುತ್ತದೆ ಎನ್ನುವ ಭಾವನೆಯನ್ನು ಉಂಟು ಮಾಡುವುದಕ್ಕಾಗಿ ಅವುಗಳನ್ನು ಧಾರ್ಮಿಕ ನಂಬಿಕೆಗಳ ರೂಪದಲ್ಲಿ ಇಡುತ್ತಿದ್ದರು. ಉದಾ : "ಒಲೆಯನ್ನು ಕಾಲಿನಿಂದ ಒದೆಯಬಾರದು–ಲಕ್ಷ್ಮಿಗೆ ಸಮಾನ."

ಒಲೆಯನ್ನು ಕಾಲಿನಿಂದ ಒದೆದಾಗ, ಒಲೆಯ ಬೆಂಕಿ ಕಾಲಿಗೆ ತಾಗಿ ಅಪಾಯ ಸಂಭವಿಸಬಹುದು. ಆದ್ದರಿಂದ ಈ ರೀತಿ ಮಾಡಬಾರದು ಎನ್ನುವುದನ್ನು ಧಾರ್ಮಿಕ ವಾಗಿ ಒಲೆಯು ಲಕ್ಷ್ಮಿಗೆ ಸಮಾನ ಎಂದು ನಂಬಿಸುವುದರ ಮೂಲಕ ಸಾಧಿಸಲಾಗಿದೆ.

"ಹುತ್ತವನ್ನು ಬಳಸಬಾರದು" ಎನ್ನುವ ನಂಬಿಕೆಯೂ ಧಾರ್ಮಿಕ ನಂಬಿಕೆಯ ರೂಪದಲ್ಲೇ ಇದೆ. ಆದರೆ ವಾಸ್ತವಿಕವಾಗಿ ಅದು ಲೌಕಿಕ ಬದುಕಿಗೆ ಸಂಬಂಧಿಸಿದ ಸಂಗತಿಯ ಬಗ್ಗೆ ಎಚ್ಚರಿಕೆಯನ್ನು ಕೊಡುವ ನಿಷಿದ್ಧತೆ. ಎಳೆಬಿಸಿಲಿಗೆ ಅಥವಾ ಸಂಜೆಯ ಧೂಳಿಗೆ ಹಾವು ಹುತ್ತದಿಂದ ಹೊರಬಂದು ಮಲಗಿರುತ್ತದೆ. ಒಬ್ಬ ವ್ಯಕ್ತಿಯು ಹುತ್ತವನ್ನು ಬಳಸುವುದರಿಂದ ಅಥವಾ ಕೆಲವರು ಹುತ್ತದ ಎರಡೂ ಕಡೆಗಳಲ್ಲಿ ಹೋಗುವುದರಿಂದ ಹಾವು ಎಚ್ಚರಗೊಂಡು ಗಾಬರಿಯಿಂದ ಅವರಿಗೆ ಕಚ್ಚುವ ಅಪಾಯವಿರುತ್ತದೆ.

"ದೇವರ ಹೂವನ್ನು ಮೂಸಬಾರದು." ಇಲ್ಲಿ ಹೂವನ್ನು ಮೂಸುವುದರಿಂದ ಅದರೊಳಗಿನ ಕ್ರಿಮಿಕೀಟಗಳು ಮೂಗಿನೊಳಕ್ಕೆ ಸೇರಿಕೊಂಡು ತೊಂದರೆಯಾಗಬಾರದು ಎನ್ನುವ ಕಾರಣಕ್ಕಾಗಿ ಈ ನಿಷಿದ್ಧತೆಯ ರೂಪದ ನಂಬಿಕೆಯನ್ನು ಸೃಷ್ಟಿಸಿರಬಹುದು. ಆದರೆ ಇದು ದೇವರ ಹೂವಿಗಷ್ಟೇ ಸೀಮಿತವಾಗಿರಬೇಕಾಗಿಲ್ಲ, ಯಾವುದೇ ಹೂವಿಗೆ ಅನ್ವಯಿಸಬಹುದು.

ಆದರೆ ಎಲ್ಲ ನಿಷಿದ್ಧರೂಪದ ನಂಬಿಕೆಗಳು ಸಕಾರಣವಾಗಿ ಹುಟ್ಟಿದವುಗಳಲ್ಲ. ಹೆಚ್ಚಿನ ಧಾರ್ಮಿಕ ನಂಬಿಕೆಗಳು ಧಾರ್ಮಿಕ ವ್ಯವಸ್ಥೆಯನ್ನು ಉಳಿಸಿಕೊಂಡು ಬರುವ ಉದ್ದೇಶದಿಂದ ಬಂದವುಗಳು.

ಮಾನವನ ಸಾವು, ಸತ್ತನಂತರದ ಸ್ಥಿತಿಗಳ ಬಗೆಗಿನ ಅಜ್ಞಾನದಿಂದ ಭೂತ, ಪ್ರೇತ, ದೆವ್ವ ಮುಂತಾದ ಅತಿಮಾನುಷ ಶಕ್ತಿಗಳ ಬಗೆಗಿನ ನಂಬಿಕೆಗಳು ಬಂದಿವೆ. ಮನುಷ್ಯನ ನೆರಳು, ಪ್ರತಿಬಿಂಬ, ಕತ್ತಲಿನಲ್ಲಿ ಪ್ರಾಣಿಪಕ್ಷಿಗಳ ಕೂಗುಗಳು, ರೂಪಗಳು ಮುಂತಾದವು ದೆವ್ವಗಳ ಕಲ್ಪನೆಗಳಿಗೆ ಹಾಗೂ ನಂಬಿಕೆಗಳಿಗೆ ಪ್ರಧಾನ ಸಾಮಗ್ರಿಗಳು.

ಉದಾ : "ಅಮಾವಾಸ್ಯೆದಿನ ದೆವ್ವಗಳು ಕಾಡುವುದು ಜಾಸ್ತಿ"

"ಹುಣಿಸೆ ಮರದಲ್ಲಿ ದೆವ್ವಗಳು ಹೆಚ್ಚಾಗಿ ವಾಸಿಸುತ್ತವೆ"

ಅನೇಕ ಜನಪದ ನಂಬಿಕೆಗಳಲ್ಲಿನ ತಿಳುವಳಿಕೆಯು ತಪ್ಪುಗ್ರಹಿಕೆ. ಅಸಮರ್ಪಕ ತರ್ಕಗಳಿಂದ ಕೂಡಿರುವುದರಿಂದ ಜೇಮ್ಸ್ ಫ್ರೇಜರ್ ನಂತಹ ವಿದ್ವಾಂಸರು ಅದಕ್ಕೆ 'ಮಂತ್ರವಿದ್ಯೆ'ಯ ಸಂಬಂಧವನ್ನು ಕೊಟ್ಟಿದ್ದಾರೆ.

೧. ಅನುಕರಣದ ಮಂತ್ರವಿದ್ಯೆ (Homopathic magic)

ಇದು ಸಾದೃಶ್ಯ ನಿಯಮಗಳನ್ನು ಅವಲಂಬಿಸಿದೆ. ಇದನ್ನು ಜನಪದ ವೈದ್ಯದಲ್ಲಿ ಹೆಚ್ಚಾಗಿ ಬಳಸುತ್ತಾರೆ. ಹಾಗೆಯೇ ಮಳೆ ಬರಿಸಲು ಜನರು ಅನುಸರಿಸುವ ನಂಬಿಕೆಗಳಲ್ಲೂ ಈ ಸಾದೃಶ್ಯದ ನಿಯಮವಿದೆ. ಪ್ರಾಣಿಗಳನ್ನು ಬಲಿಕೊಡುವುದು, ಎಳನೀರಿನ ಅಭಿಷೇಕ ಮಾಡುವುದು, ಇಂತಹ ನಂಬಿಕೆಗಳಲ್ಲಿ ಮಳೆಯನ್ನು ಹೋಲುವ ದ್ರವದ ಉತ್ಪತ್ತಿಯು ಮಳೆಯನ್ನು ಉಂಟುಮಾಡುತ್ತದೆ ಎಂಬ ನಂಬಿಕೆ ಇದೆ. ಜಾಂಡಿಸ್ (ಹಳದಿ ರೋಗ) ರೋಗಿಗಳಿಗೆ ಹಳದಿ ಬಣ್ಣದ ಸಸ್ಯಗಳಿಂದಲೇ ಔಷಧ ಮಾಡಬೇಕೆಂಬ ನಂಬಿಕೆಯಲ್ಲಿಯೂ ಇದೇ ತತ್ವವನ್ನು ಕಾಣಬಹುದು. "ಹೆಂಗಸರು ಅವಳಿ ಬಾಳೆಹಣ್ಣು ತಿನ್ನಬಾರದು, ತಿಂದರೆ ಅವಳಿ ಮಕ್ಕಳು ಆಗುತ್ತವೆ" ಎನ್ನುವಲ್ಲಿಯೂ ಇದೇ ತತ್ವ ಅಡಕವಾಗಿದೆ.

೨. ಸೋಂಕು ಮಂತ್ರವಿದ್ಯೆ (Contagious magic)

ಇಲ್ಲಿ ಸಂಪರ್ಕದ ನಿಯಮವಿದೆ. "ಮನೆಯಲ್ಲಿ ಉಗುರನ್ನು ಕತ್ತರಿಸಬಾರದು" ಎನ್ನುವ ನಂಬಿಕೆಯಲ್ಲಿ ಸೋಂಕು ಮಂತ್ರವಿದ್ಯೆಯ ನಿಯಮವಿದೆ. ವ್ಯಕ್ತಿಯೊಬ್ಬನಿಗೆ ಸಂಬಂಧಿಸಿದ ಉಗುರು, ಬಟ್ಟೆ ಮುಂತಾದ ವಸ್ತುಗಳನ್ನು ಇನ್ನೊಬ್ಬನು ಮಾಟಕ್ಕೆ ಬಳಸಿ, ಆ ಬಟ್ಟೆಯು ವ್ಯಕ್ತಿಗೆ ಕೇಡುಕು ತರಬಹುದು ಎಂಬ ಭಯ ಈ ನಂಬಿಕೆಗೆ ಕಾರಣ. ಇನ್ನೊಬ್ಬ ಉಪಯೋಗಿಸಬಾರದು ಎನ್ನುವಲ್ಲಿ ಆರೋಗ್ಯದ ನಿಯಮ ಹೆಚ್ಚು ಮುಖ್ಯವಾಗಿದೆ.

ಸಾಂಸ್ಕೃತಿಕ ನಂಬಿಕೆಗಳು

ಧರ್ಮವು ಸಂಸ್ಕೃತಿಯ ಭಾಗವೇ ಆದರೂ, ಸಂಸ್ಕೃತಿಯ ಇತರ ಅಂಗಗಳಿಗೆ ಸಂಬಂಧಿಸಿದ ನಂಬಿಕೆಗಳು ಅಧಿಕ ಪ್ರಮಾಣದಲ್ಲಿ ದೊರೆಯುತ್ತವೆ. ಹುಟ್ಟು, ಮದುವೆ, ಸಾವು ಮುಂತಾದ ಬದುಕಿನ ಹಂತಗಳಿಗೆ ಸಂಬಂಧಿಸಿದಂತೆ ಅನೇಕ ನಂಬಿಕೆಗಳು ಇವೆ.

"ಅಮಾವಾಸ್ಯೆಯ ದಿನ ಹುಟ್ಟಿದ ಮಕ್ಕಳು ಕಳ್ಳರಾಗುತ್ತಾರೆ"

ಅಮಾವಾಸ್ಯೆಯ ದಿನ ಕಾರ್ಗತ್ತಲು ಇರುತ್ತದೆ. ಆಗ ಕಳ್ಳರ ಹಾವಳಿ ಜಾಸ್ತಿ, ಆದ್ದರಿಂದ ಇಂತಹ ನಂಬಿಕೆ ಹುಟ್ಟಿರಬಹುದು.

ಸಾವಿನ ಬಗ್ಗೆ ಅನೇಕ ನಂಬಿಕೆಗಳಿವೆ. ಸಾಯುವುದು ಎಂದರೇನು ಎಂಬುದರ ಕಲ್ಪನೆ ಇಲ್ಲದ ಮಾನವನು ತನ್ನ ಬದುಕಿನುದ್ದಕ್ಕೂ ಸಾವಿಗೆ ಬಹಳವಾಗಿ ಹೆದರುತ್ತಾ ಬಂದಿದ್ದಾನೆ. ಸತ್ತಾಗ ಮಾಡುವ ಉತ್ತರಕ್ರಿಯೆಯಲ್ಲಿ ಬಳಸುವ ಹೊಸಮಡಕೆಯು ಪ್ರಯಾಣದಲ್ಲಿ ಎದುರಾದಾಗ, ಅದು ಅಪಶಕುನ ಎಂಬ ನಂಬಿಕೆಗೆ ಈ ಸಾವಿನ ಭಯ ಕಾರಣ. ಗಂಡನನ್ನು ಕಳೆದುಕೊಂಡ ಹೆಣ್ಣು, ಅಂದರೆ ವಿಧವೆಯು ದಾರಿಯಲ್ಲಿ ಅಡ್ಡ ಬಂದಾಗ ಅಪಶಕುನ ಎನ್ನುವ ನಂಬಿಕೆಯಲ್ಲಿಯೂ ಸಾವಿನ ಭಯವಿದೆ.

ವೈಯುಕ್ತಿಕ ನಂಬಿಕೆಗಳು

ವೈಯುಕ್ತಿಕ ನಂಬಿಕೆಗಳು ಹುಟ್ಟುವಾಗ ವ್ಯಕ್ತಿಯೊಬ್ಬನಿಗೆ ಮಾತ್ರ ಸಂಬಂಧಿಸಿದ್ದರೂ, ಕ್ರಮೇಣ ಒಂದು ಸಮಾಜ ಅದನ್ನು ಅನುಕರಿಸಿದಾಗ, ಅದು ಸಾಂಸ್ಕೃತಿಕ ನಂಬಿಕೆಯಲ್ಲಿಯೇ ಸೇರಿಹೋಗುತ್ತವೆ. ಇಂತಹ ವೈಯುಕ್ತಿಕ ನಂಬಿಕೆಗಳು ಮುಂದೆ ಸಾಂಸ್ಕೃತಿಕ ಸಂಬಿಕೆಗಳಾಗಿ ಪರಿವರ್ತಿತವಾಗುತ್ತವೆ. ಆದರೆ ಇನ್ನೂ ಅನೇಕ ನಂಬಿಕೆಗಳು ವ್ಯಕ್ತಿಯೊಬ್ಬನಿಗೆ ಮಾತ್ರ ಸಂಬಂಧಿಸಿಯೂ ಇರುತ್ತವೆ. ಒಬ್ಬನು ಧರಿಸಿದ ಯಾವುದೋ ಒಂದು ಬಟ್ಟೆಯಿಂದ, ಉಂಗುರದಿಂದ, ಕಾಲುಚೀಲದಿಂದ ಆಕಸ್ಮಿಕವಾಗಿ ಅವನಿಗೆ ಹಣ ಅಥವಾ ಇಚ್ಛಿಸಿದ ಹೆಣ್ಣು ಸಿಕ್ಕಿದರೆ, ಅಥವಾ ಪರೀಕ್ಷೆಯಲ್ಲಿ ಪಾಸಾದರೆ, ಮುಂದೆ ಆತ ಆ ವಸ್ತುಗಳೇ ತನ್ನ ಅದೃಷ್ಟಕ್ಕೆ ಕಾರಣ ಎಂದು ನಂಬುತ್ತಾ ಹೋಗಬಹುದು. ಮುಂದೆ ಒಂದು ವೇಳೆ ಯಾವ ಪ್ರಯೋಜನ ಸಿಕ್ಕದೆ ಇದ್ದರೂ, ಆತನ ನಂಬಿಕೆ ಸಡಿಲವಾಗುವುದು ಕಡಿಮೆ. ನೂರರಲ್ಲಿ ಒಂದು ಬಾರಿ ಸಫಲವಾಗಿ, ೯೯ ಬಾರಿ ಸೋತರೂ ಆ ಒಂದು ಬಾರಿಯ ಸಫಲತೆಯನ್ನೇ ವಾಸ್ತವಿಕ ಎಂದು ಭಾವಿಸುವುದು ಅನೇಕ ವೈಯುಕ್ತಿಕ ನಂಬಿಕೆಗಳ ಲಕ್ಷಣ.

ಒಬ್ಬ ವ್ಯಕ್ತಿಗೆ ಯಾವುದೋ ಒಂದು ವಾರದಲ್ಲಿ ಅನುಕೂಲವಾಗಬಹುದು. ಆಮೇಲೆ ಅವನು ಯಾವಾಗಲೂ ತನಗೆ ಆ ವಾರ ಅದೃಷ್ಟಶಾಲಿ ಎಂದು ನಂಬುತ್ತಾನೆ. ಕೆಲವೊಮ್ಮೆ ಅವನ ವೈಯುಕ್ತಿಕ ನಂಬಿಕೆ ಅವನ ಕುಟುಂಬದಲ್ಲಿ ಪ್ರಸರಿಸಿ, ಮುಂದೆ ಅದು ಒಂದು ಸಮಾಜದಲ್ಲಿಯೇ ಜನಪ್ರಿಯವಾಗಬಹುದು.

"ಮಂಗಳವಾರ ಕೆಟ್ಟದಿನ, ಅಂದು ಯಾವ ಒಳ್ಳೆಯ ಕೆಲಸವನ್ನೂ ಮಾಡಬಾರದು" ಎನ್ನುವ ನಂಬಿಕೆ ನಮ್ಮಲ್ಲಿದೆ. 'ಮಂಗಳವಾರ ಕ್ಷೌರ ಮಾಡಿಸಬಾರದು' ಎನ್ನುವ ನಂಬಿಕೆ ಇದೆ. ಆದರೆ ಕ್ರೈಸ್ತಧರ್ಮ ಪ್ರಬಲವಾಗಿರುವ ಹೆಚ್ಚಿನ ದೇಶಗಳಲ್ಲಿ ಶುಕ್ರವಾರ ಕೆಟ್ಟದಿನ. ಅಮೇರಿಕದ ಜಾನಪದದಲ್ಲಿ ಸೋಮವಾರ ಮತ್ತು ಮಂಗಳವಾರ ಮಾತ್ರ ಮನುಷ್ಯರು ಕ್ಷೌರ ಮಾಡಿಸಬಹುದು, ಬುಧವಾರ ಕುರಿಗಳಿಗೆ ಮಾತ್ರ ಕ್ಷೌರ. ಉಳಿದ ದಿನಗಳು ನಿಷಿದ್ಧ.

ಕಾಕತಾಳೀಯ ಎಂಬ ಮಾತು ವೈಯುಕ್ತಿಕ ನಂಬಿಕೆಗಳಿಗೆ ಹೆಚ್ಚಾಗಿ ಅನ್ವಯಿಸುತ್ತದೆ. ಜ್ಯೋತಿಷ್ಯ, ಜಾತಕ ಶಕುನ, ಭವಿಷ್ಯ ಮುಂತಾದವುಗಳ ಬಗ್ಗೆ ಮನುಷ್ಯನು

ಇಟ್ಟುಕೊಳ್ಳುವ ನಂಬಿಕೆಗಳು ಇಂತಹ ಕಾಕತಾಳೀಯ ಸಂಬಂಧಕ್ಕೆ ಹಾಗೂ ಮನುಷ್ಯರ ಕುಗ್ಗದ ಆಶಾಭಾವನೆಗೆ ಸಂಬಂಧಿಸಿದವು. ಅಂಕೆ ಸಂಖ್ಯೆಗಳನ್ನು ಕುರಿತ ಅನೇಕ ನಂಬಿಕೆಗಳು ಇದೇ ಗುಂಪಿಗೆ ಸೇರುತ್ತವೆ. ಉದಾ: ೧೩ ಎಂಬ ಸಂಖ್ಯೆ ಕೆಟ್ಟದ್ದು; ೩ ಮತ್ತು ೭ ಅಂಕೆಗಳು ಶುಭ ಇತ್ಯಾದಿ.

"ಬೆಕ್ಕು ಅಡ್ಡಬಂದಾಗ ಅಪಶಕುನ" ಎನ್ನುವುದು ನಮ್ಮಲ್ಲಿ ಒಂದು ಜನಪದ ನಂಬಿಕೆ. ಅದರಲ್ಲೂ ಕಪ್ಪುಬೆಕ್ಕು ಬಂದಾಗ ಅಪಶಕುನದ ಪ್ರಮಾಣವು ಮತ್ತೂ ಜಾಸ್ತಿಯಾಗುತ್ತದೆ. ಇದು ಮೂಲತಃ ಒಂದು ವೈಯಕ್ತಿಕ ನಂಬಿಕೆಯಾಗಿದ್ದು, ಆಮೇಲೆ ಸಾರ್ವತ್ರಿಕವಾಗಿರಬಹುದು. ಇದೇ ನಂಬಿಕೆ ಅಮೇರಿಕದಲ್ಲೂ ಇದೆ. ಅದಕ್ಕೆ ಅವರಲ್ಲಿ ಪರಿಹಾರವೂ ಇದೆ. ಒಂದೊ ಪ್ಯಾಂಟನ್ನು ಮೇಲಕ್ಕೆ ಸುತ್ತಬೇಕು ಅಥವಾ ಹ್ಯಾಟಿನಲ್ಲಿ ಉಗಳಬೇಕು ಅಥವಾ ಮಾರ್ಗದಲ್ಲಿ ಉಗಳಬೇಕು ಅಥವಾ ಒಂಬತ್ತು ಹೆಜ್ಜೆ ಹಿಂದಕ್ಕೆ ಬರಬೇಕು ಅಥವಾ ಮನೆಗೆ ಹಿಂದಿರುಗಿ ಮತ್ತೆ ಹೊರಡಬೇಕು. ಈ ಕೊನೆಯ ಪರಿಹಾರವು ಕರ್ನಾಟಕದಲ್ಲೂ ಇದೆ. ಈಜಿಪ್ಟಿನಲ್ಲಿ ಐದು ಸಾವಿರ ವರ್ಷಗಳ ಹಿಂದೆ ಬೆಕ್ಕನ್ನು ಪೂಜಿಸುತ್ತಿದ್ದರು. ಅದು ಸತ್ತಾಗ ಅದನ್ನು ಮಮ್ಮಿಯ ರೂಪದಲ್ಲಿ ಸಂರಕ್ಷಿಸಿ, ರಾಜರಾಣಿಯರ ಹೆಣಗಳ ಜೊತೆಗೆ ಹೂಳುತ್ತಿದ್ದರು.

ಬೆಕ್ಕನ್ನು ಒಂದು ಕುಲದೇವತೆ (totem) ಯನ್ನಾಗಿ ಪೂಜಿಸಿರುವುದಕ್ಕೆ ಅದರ ಕೆಲವು ಅಸಾಮಾನ್ಯ ಗುಣಗಳು ಕಾರಣವೆಂದು ಭಾವಿಸಲಾಗಿದೆ. ಬೆಕ್ಕು ಕತ್ತಲೆಯಲ್ಲಿ ನೋಡಬಲ್ಲದು. ಅದರ ಕಣ್ಣುಗಳು ಕತ್ತಲೆಯಲ್ಲಿ ಹೊಳೆಯುತ್ತವೆ. ಅದು ಎತ್ತರದಿಂದ ಕೆಳಕ್ಕೆ ಜಿಗಿದರೂ ಅದರ ಕಾಲುಗಳಿಗೆ ಏನೂ ನೋವಾಗುವುದಿಲ್ಲ; ಒಂದು ಕಾಲಕ್ಕೆ ಈಜಿಪ್ಟಿನಲ್ಲಿ ಪ್ಲೇಗ್ ರೋಗವನ್ನು ಹರಡುತ್ತಿದ್ದ ಇಲಿಗಳನ್ನು ಅದು ತಿನ್ನುತ್ತಿತ್ತು. ಈ ರೀತಿ ಈ ವಿಚಿತ್ರಪ್ರಾಣಿಯ ಬಗೆಗಿನ ಭಯದಿಂದ ಮತ್ತು ಗೌರವದಿಂದ ಅದನ್ನು ಪೂಜಿಸಿರಬಹುದು. ಕಪ್ಪು ಬೆಕ್ಕುಗಳು ನೋಡಲು ಇನ್ನೂ ಭಯಂಕರವಾಗಿದ್ದು, ಅವುಗಳು ದೆವ್ವಗಳ ರೂಪಗಳು ಎನ್ನುವ ಭಾವನೆಯು, ಅಪಶಕುನ ಎಂಬ ನಂಬಿಕೆಗೆ ಅವಕಾಶವಿತ್ತಿತು.

ಇದೇ ರೀತಿ ಇನ್ನೊಂದು ವಿಚಿತ್ರ ಪಕ್ಷಿಯಾದ ಗೂಬೆಯನ್ನು ಅಪಶಕುನ ಎಂಬ ನಂಬಿಕೆ ಜಗತ್ತಿನ ಅನೇಕ ಕಡೆ ಪ್ರಚಲಿತವಿದೆ. "ಗೂಬೆ ಕೂಗಿದರೆ ಅಪಶಕುನ," "ಗೂಬೆ ನೋಡಿದರೆ ದೆವ್ವ ನೋಡಿದ ಹಾಗೆ" ಎಂಬ ನಂಬಿಕೆಗಳು ಕರ್ನಾಟಕದಲ್ಲಿವೆ. ಗೂಬೆಯು ರಾತ್ರಿ ವೇಳೆ ನೋಡಲು ಶಕ್ತವಾಗಿದೆ, ಅದು ವಿಚಿತ್ರವಾದ ಧ್ವನಿಯಲ್ಲಿ ಕೂಗುತ್ತದೆ ಎನ್ನುವುದು ಅದರ ಬಗೆಗಿನ ಇಂತಹ ಭಯ ಮತ್ತು ಆ ಮೂಲಕ ಇಂತಹ ನಂಬಿಕೆಗೆ ಕಾರಣ. ಕರ್ನಾಟಕದ ಕೆಲವೆಡೆ ಶಿಳ್ಳಿನ ಧ್ವನಿಮಾಡುವ ಮರಕುಟಿಗ ಹಕ್ಕಿಯ ಕೂಗನ್ನು ಇದೇ ಕಾರಣಕ್ಕಾಗಿ ಅಪಶಕುನ ಎಂದು ಭಾವಿಸುತ್ತಾರೆ. ವಿಚಿತ್ರಬಣ್ಣ ಮತ್ತು ಆಕಾರದ ನಾಗರಹಾವು, ಪೈರುಗಳನ್ನು ನಾಶಮಾಡುವ ಕಾಡುಹಂದಿ, ಜಾನುವಾರುಗಳನ್ನು ತಿನ್ನುವ ಹುಲಿ–ಮುಂತಾದ ಪ್ರಾಣಿಗಳ ಬಗೆಗಿನ

ಭಯವು ಅವುಗಳನ್ನು ಕರ್ನಾಟಕದ ಕೆಲವೆಡೆ ಕುಲದೇವತೆಯಾಗಿ ನಂಬಲು ಮತ್ತು ಪೂಜಿಸಲು ಕಾರಣ.

ಅಪೂರ್ವ (rare) ಆದದ್ದನ್ನು ಅಪಾಯಕಾರಿ ಎಂದು ತಿಳಿಯುವ ನಂಬಿಕೆ ಜನಪದರಲ್ಲಿ ಹೆಚ್ಚಾಗಿದೆ. "ಹೆಣ್ಣುಕೋಳಿ ಕೂಗಿದರೆ ಮನೆಗೆ ಅಪಾಯ" ಎಂಬುದು ಅಂತಹ ಒಂದು ನಂಬಿಕೆ. ಸಾಮಾನ್ಯವಾಗಿ ಗಂಡುಕೋಳಿ ಮಾತ್ರ ಕೂಗುವ ಶಕ್ತಿಯನ್ನು ಪಡೆದಿರುತ್ತದೆ. ಇದಕ್ಕೆ ಅದರ ಧ್ವನಿಪೆಟ್ಟಿಗೆಯಲ್ಲಿರುವ ವ್ಯತ್ಯಾಸ ಕಾರಣ. ಆದರೆ ಕೆಲವೊಮ್ಮೆ ದೈಹಿಕ ವ್ಯತ್ಯಾಸಗಳಿಂದಾಗಿ ಹೇಂಟೆಯು ಕೂಗುತ್ತದೆ. ಗಂಡಸು ಹೆಣ್ಣನ್ನು ತನಗಿಂತ ಬೇರೆಮಾಡುವ ಉದ್ದೇಶದಿಂದಲೂ ಕೆಲವು ನಂಬಿಕೆಗಳನ್ನು ಸೃಷ್ಟಿಸಿ, ಅವು ಸತ್ಯವೆಂಬಂತೆ ನಡೆಸಿಕೊಂಡು ಬಂದಿದ್ದಾನೆ. ಹೆಣ್ಣಿನ ದೈಹಿಕ ಲಕ್ಷಣದ ಅಪೂರ್ವತೆಗಳು ಅನೇಕ ನಂಬಿಕೆಗಳಿಗೆ ಕಾರಣವಾಗಿವೆ.

ಜಾತಿವ್ಯವಸ್ಥೆಯನ್ನು ಬಲಪಡಿಸಿಕೊಂಡು ಬಂದ, ಅಸ್ಪೃಶ್ಯತೆಯನ್ನು ಸಮರ್ಥಿಸಿಕೊಂಡು ಬಂದ ಕೆಲವು ನಂಬಿಕೆಗಳು ಕರ್ನಾಟಕದಲ್ಲೂ ಸಿಗುತ್ತವೆ. ಇಂತಹ ಅನಾರೋಗ್ಯಕರ ಪ್ರವೃತ್ತಿಗಳನ್ನು ಯಾರು ಸೃಷ್ಟಿಸಿದರು ಎಂಬುದು ಅಂತಹ ನಂಬಿಕೆಗಳ ಮೂಲಕ ಸ್ಪಷ್ಟವಾಗುತ್ತದೆ. ಉದಾ: "ಕೀಳು ಜಾತಿಯ ಜನರ ಎಂಜಲೆಲೆಯನ್ನು ಮೇಲು ಜಾತಿಯ ಜನ ತೆಗೆಯಬಾರದು."

"ಕೀಳು ಜಾತಿಯವರು ಮುಟ್ಟಿದ ಪಾತ್ರೆಯನ್ನು ಬೆಳಗದೆ ಒಳಗಡೆ ತೆಗೆದುಕೊಳ್ಳಬಾರದು."

"ಬಿಸಿ ಅಡುಗೆಯನ್ನು ಮನೆಯವರು ಊಟಮಾಡದೆ ಹೊಲೆಯರಿಗೆ ಇಕ್ಕಬಾರದು."

"ಬೂದುಗುಂಬಳ ಕಾಯನ್ನು ಬ್ರಾಹ್ಮಣರಲ್ಲದೆ ಬೇರೆ ಯಾರೂ ತಿನ್ನಬಾರದು."

ಕರ್ಣಾಟಕದ ಅಥವಾ ಯಾವುದೇ ಪ್ರದೇಶದ ಜನಪದ ನಂಬಿಕೆಗಳನ್ನು ಅಧ್ಯಯನ ಮಾಡಿದಾಗ ನಮಗೆ ಎದುರಾಗುವ ಪ್ರಶ್ನೆ ಎಂದರೆ ಈ ಎಲ್ಲ ಅಧ್ಯಯನದ ಪ್ರಯೋಜನ ಏನು ಎಂಬುದು. ಜಾನಪದವನ್ನು ಸಂಗ್ರಹಣ, ವರ್ಗೀಕರಣ ಮತ್ತು ವಿಶ್ಲೇಷಣಗಳ ಹಂತಗಳಲ್ಲಿ ನಾವು ಸಾಮಾನ್ಯವಾಗಿ ಅಧ್ಯಯನ ಮಾಡುತ್ತೇವೆ. ಆದರೆ ಇಂತಹ ವಿಶ್ಲೇಷಣವನ್ನು ಮಾಡಿ, ಅಲ್ಲಿಯೇ ನಿಲ್ಲಿಸಿದಾಗ ಅದು ಒಂದು ಅಕೆಡೆಮಿಕ್ ಪ್ರಬಂಧವಾಗಿ ಮಾತ್ರ ಉಳಿಯಬಲ್ಲುದು, ಈ ಅಧ್ಯಯನದ ಫಲಿತಾಂಶದ ಪ್ರಯೋಜನವು ಆ ಸಮಾಜಗಳ ಜನರ ಬದುಕನ್ನು ಕಷ್ಟ, ಅಪಾಯಗಳಿಂದ ಪಾರು ಮಾಡಲು, ಅವರು ಹೆಚ್ಚು ವಿಚಾರವಂತರಾಗಲು ಸಹಕಾರಿಯಾಗಬೇಕು. ಜನಪದ ನಂಬಿಕೆಗಳು ಸಾಹಿತ್ಯಿಕ ಪ್ರಕಾರವಲ್ಲ. ಬಾಗ್ಸ್ ಅದನ್ನು ವೈಜ್ಞಾನಿಕ ಬಗೆಗೆ ಸೇರಿಸಿದ. ಆದರೆ ಇದು 'ಮಿಥ್ಯಾ ವಿಜ್ಞಾನ' (Pseudo science). ಆದ್ದರಿಂದ ಇದರ ಮಿಥ್ಯೆಯನ್ನು ಒಡೆದು, ಜನರನ್ನು ಸತ್ಯದ ಸಮೀಪಕ್ಕೆ ತರಲು, ಜನಪದ

ನಂಬಿಕೆಗಳ ವೈಜ್ಞಾನಿಕ ಅಧ್ಯಯನವನ್ನು ಬಳಸಬಹುದು. ಈ ದೃಷ್ಟಿಯಿಂದ ನಾವು ಸಾಹಿತ್ಯೇತರ ಜಾನಪದ ಪ್ರಕಾರಗಳಲ್ಲಿಯಾದರೂ ಮಾನವವಿಜ್ಞಾನ, ಮನೋವಿಜ್ಞಾನ ಮತ್ತು ಇತರ ವಿಜ್ಞಾನಗಳ ಸಹಾಯದಿಂದ ಕಂಡುಕೊಂಡ ಸಂಗತಿಗಳನ್ನು ಆ ಜನರ ಬದುಕಿನ ಉತ್ತಮಿಕೆಗಾಗಿ ಬಳಸುವ 'ಅನ್ವಯಿಕ ಜಾನಪದ' (Applied folklore) ಎಂಬ ಶಾಖೆಯನ್ನು ಸೃಷ್ಟಿಸಬೇಕು.

ನಂಬಿಕೆಗಳ ಸಹಾಯವಿಲ್ಲದೆ ಬದುಕುವ ಮಾನಸಿಕ ಗಟ್ಟಿತನ ಎಲ್ಲರಿಗೂ ಸಾಧ್ಯವಾಗಲಾರದು. ಅನೇಕರು ಬದುಕುವ ಪರಿಸರ, ಅವರ ತಿಳುವಳಿಕೆಯ ಇತಿಮಿತಿ ಮುಂತಾದ ಸಂಗತಿಗಳು ಅವರ ಬದುಕಿನಲ್ಲಿ ಕೆಲವಾದರೂ ನಂಬಿಕೆಗಳನ್ನು ಅವಲಂಬಿಸಲು ಕಾರಣವಾಗಬಹುದು. ಆದರೆ ಮನುಷ್ಯನ ಹಾಗೂ ಅವನು ಬದುಕುತ್ತಿರುವ ಸಮಾಜಕ್ಕೆ ಅಪಾಯಕಾರಿಯಾದ ಅನೇಕ ಧಾರ್ಮಿಕ ನಂಬಿಕೆಗಳು, ಜಾತಿ, ಅಸ್ಪೃಶ್ಯತೆ, ಗಂಡು ಹೆಣ್ಣಿನ ಅಂತರ ಮುಂತಾದ ಸಾಮಾಜಿಕ ಅಸಮಾನತೆಗಳನ್ನು ಪೋಷಿಸುವ ಸಾಂಸ್ಕೃತಿಕ ನಂಬಿಕೆಗಳು, ವ್ಯಕ್ತಿಯ ಮನಸ್ಸಿನಲ್ಲಿ ಸದಾ ಭಯದ ಅಸ್ಥಿರತೆಯ ವಾತಾವರಣವನ್ನು ಉಂಟುಮಾಡುವ ವೈಯಕ್ತಿಕ ನಂಬಿಕೆಗಳು. ಇವನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಅನ್ವಯಿಕ ಜಾನಪದದ ಉದ್ದೇಶವಾಗಿರಬೇಕು. ಜನಪದ ನಂಬಿಕೆಗಳು ಹುಟ್ಟಿದ ಸಾಂಸ್ಕೃತಿಕ ಸಂದರ್ಭ, ಅವು ನೆರವೇರಿಸುತ್ತಿದ್ದ ಸಾಮಾಜಿಕ ಪರಿಸರ, ಕಾರ್ಯಗಳ ಪರಿಸರ ಇಂದು ಸಾಮಾನ್ಯವಾಗಿ ಇಲ್ಲ. ಆದ್ದರಿಂದ ಅಂತಹ ಜನಪದ ನಂಬಿಕೆಗಳು ಇಂದು ಅಗತ್ಯವಿಲ್ಲ ಎನ್ನುವುದನ್ನು ವೈಜ್ಞಾನಿಕವಾಗಿ ತಿಳಿಯಹೇಳುವುದು ಜಾನಪದ ವಿಜ್ಞಾನಿಯ ಕರ್ತವ್ಯ.

ಡಾ. ಡಿ. ಕೆ. ರಾಜೇಂದ್ರ

ಮಾಟ–ಮಂತ್ರ–ಮೋಡಿ

ಮಾಟ–ಮಂತ್ರಗಳು ಇಂದು ನೆನ್ನೆಯವಲ್ಲ. ಧರ್ಮದಷ್ಟೇ ಪ್ರಾಚೀನವಾದುವು ಗಳು. ಈ ಧರ್ಮಕ್ಕೂ, ಮಾಟ–ಮಂತ್ರಗಳಿಗೂ ಸಂಬಂಧವೇ ಇಲ್ಲ—ಎಂದು ಒಂದು ಕಾಲದವರೆವಿಗೂ ಭಾವಿಸಲಾಗಿತ್ತಾದರೂ; ನಂತರ ಆ ಅಭಿಪ್ರಾಯ ಬದಲಾಯಿತು. ಅವೆರಡೂ ಅವಿಭಾಜ್ಯ ಅಂಗಗಳು ಎನ್ನುವಷ್ಟರಮಟ್ಟಿಗೆ ಅವುಗಳ ಸಂಬಂಧವನ್ನು ಕಲ್ಪಿಸಿದುದು ಅಥವಾ ಕಂಡುಕೊಂಡುದು—ಸಮಾಜದಲ್ಲಿ ಮಂತ್ರವಿದ್ಯೆ ಮತ್ತು ಧರ್ಮ ಅವೆರಡಕ್ಕೂ ಇದ್ದ ಸಮಾನಸ್ಥಾನವನ್ನು ಸೂಚಿಸುತ್ತದೆ. ಫ್ರೇಸರನ ಪ್ರಕಾರ, ದೇವತಾರಾಧನೆಯ ಮುಂದಿನ ಘಟ್ಟವೆ ಮಾಟ–ಮಂತ್ರ ಮುಂತಾದುವು. ಮಂತ್ರವಿದ್ಯೆಯನ್ನು ಫ್ರೇಸರ್, 'ಪ್ರಾಚೀನ ವಿಜ್ಞಾನ' ಎಂದೇ ಕರೆದಿದ್ದಾನೆ. ಧರ್ಮಕ್ಕೂ ಮಂತ್ರವಿದ್ಯೆಗೂ ಸಂಬಂಧ ಇರುವಂತೆಯೇ, ಮಂತ್ರವಿದ್ಯೆಗೂ–ವಿಜ್ಞಾನಕ್ಕೂ ಹಲವಂಶ ಗಳಲ್ಲಿ ಸಂಬಂಧವಿದೆ ಎಂಬುದನ್ನು ಗುರುತಿಸಲಾಗಿದೆ. ಇವುಗಳ ಕಾರ್ಯವಿಧಾನದಲ್ಲಿ ಹೆಚ್ಚಿನ ಸಾಮ್ಯತೆ ಕಂಡುಬರುತ್ತದೆ.

ಧರ್ಮ, ಮಾಟ–ಮಂತ್ರ ಮುಂತಾದುವು ಬಹು ಹಿಂದಿನಿಂದಲೂ ನಮ್ಮ ಸಮಾಜದಲ್ಲಿ ಬೇರುಬಿಟ್ಟು ಬಂದವುಗಳು. ಮಾನವ, ತನ್ನ ಜೀವನದಲ್ಲಿ ಉಂಟಾದ ಸಂದಿಗ್ಧತೆಯಿಂದ ಪಾರಾಗಲು, ಪರಿಹಾರವನ್ನು ಕಂಡುಕೊಳ್ಳಲು ಇಂತಹವುಗಳನ್ನು ಕಲ್ಪಿಸಿ ಸೃಷ್ಟಿಸಿಕೊಂಡ. ನಿಜಜೀವನದಲ್ಲಿ ಉಂಟಾದ ಕಹಿ ಘಟನೆಗಳನ್ನು—ಪ್ರಸಂಗಗಳನ್ನು ಎದುರಿಸಲು ಅಲೌಕಿಕ ಶಕ್ತಿಗಳ ಮೊರೆಹೊಕ್ಕ. ಅಂತಹ ಶಕ್ತಿಗಳನ್ನು ಪೂಜಿಸಿ, ಪ್ರಾರ್ಥಿಸುವುದರ ಮೂಲಕ ಅವುಗಳನ್ನು ಒಲಿಸಿಕೊಳ್ಳಲು ಸಾಧ್ಯ ಎಂಬುದನ್ನು ಹೇಗೋ ಕಂಡುಕೊಂಡ. ಆ ಮೂಲಕ ಒಂದು ಬಗೆಯ ಆತ್ಮಸ್ಥೈರ್ಯ, ನಂಬಿಕೆ ಬೆಳೆಯುತೊಡಗಿ ಅದನ್ನೇ ಮುಂದುವರಿಸಿದ. ಇದರ ಫಲವೇ ದೇವರು–ಧರ್ಮ. ತನ್ನಿಂದ ಸಾಧಿಸಲು ಅಸಾಧ್ಯವಾದುದನ್ನು ಇಂತಹ ಶಕ್ತಿಗಳ ಮೂಲಕ ಸಾಧಿಸಬಹುದು ಎಂಬ ಅಭಿಪ್ರಾಯ ಅವನಲ್ಲಿ ಅಂಕುರಿಸಿದ ಮೇಲೆ ಅಂತಹ ಶಕ್ತಿಗಳನ್ನು ಬಲವಾಗಿ ನಂಬಿದ. ಮಂತ್ರವಿದ್ಯೆಯೂ ಇಂತಹ ಗುರಿಯಿಂದ ಹೊರತಾದುದಲ್ಲ. ಹಲವಾರು ಧರ್ಮವನ್ನು ಬಲವಾಗಿ ನಂಬಿ ನಡೆದಂತೆಯೇ, ಕೆಲವರು ಮಂತ್ರ–ಮಾಟಗಳನ್ನೂ ನಂಬಿದರು ; ಮತ್ತೆ ಕೆಲವರು ಎರಡನ್ನೂ ನಂಬಿಕೊಂಡರು.

ಧರ್ಮ ಮತ್ತು ಮಂತ್ರವಿದ್ಯೆ—ಇವೆರಡರಲ್ಲಿಯೂ ಕೆಲವು ಸಮಾನ ಲಕ್ಷಣಗಳಿರುವಂತೆಯೇ, ಮತ್ತೆ ಕೆಲವು ವ್ಯತ್ಯಾಸಗಳೂ ಇವೆ. ಇವೆರಡೂ ಅಗೋಚರವಾದ, ಅಲೌಕಿಕ ಶಕ್ತಿಗಳನ್ನು ಮೂಲ ಬಂಡವಾಳವಾಗಿಸಿಕೊಂಡು ಕಾರ್ಯ ನಡೆಸುತ್ತವೆ. ಧರ್ಮದ ಪ್ರತಿನಿಧಿಯಾಗಿ ಪುರೋಹಿತ ನಿಂತರೆ, ಮಂತ್ರವಿದ್ಯೆಯ ಪ್ರತಿನಿಧಿಯಾಗಿ ಮಂತ್ರವಾದಿ ನಿಲ್ಲುತ್ತಾನೆ. ಇವರಿಬ್ಬರೂ, ಅವುಗಳನ್ನು ನಂಬಿದವರ ಪರವಾಗಿ ನಿಂತು ಕಾರ್ಯ ನಡೆಸುತ್ತಾರೆ. ಆ ಮೂಲಕ ಅವರವರ ಮನಸ್ಸಿಗೆ ನೆಮ್ಮದಿಯನ್ನು ಉಂಟು ಮಾಡಲು ಪ್ರಯತ್ನಿಸುತ್ತಾರೆ. ಅವರ ಮಾನಸಿಕ ಒತ್ತಡವನ್ನು ತೊಡೆದುಹಾಕಲು ಶ್ರಮಿಸುತ್ತಾರೆ. ಈ ಬಗೆಯ ಸಾದೃಶ್ಯಗಳಂತೆಯೇ, ಹಲವು ವೈದೃಶ್ಯಗಳೂ ಕಂಡು ಬರುತ್ತವೆ.

ಧರ್ಮವನ್ನನುಸರಿಸಿದ ವ್ಯಕ್ತಿ ಸನ್ಮಾರ್ಗದಲ್ಲಿ ನಡೆದರೆ, ಮಾಟ-ಮಂತ್ರವನ್ನು ನಂಬಿದ ವ್ಯಕ್ತಿ ದುರ್ಮಾರ್ಗದಲ್ಲಿ ನಡೆಯುತ್ತಾನೆ. ಸಾಧನೆಯ ಗುರಿ ಒಂದೇ ಆದರೂ, ಅನುಸರಿಸುವ ಮಾರ್ಗ ಮಾತ್ರ ಬೇರೆ ಬೇರೆ. ಧರ್ಮಾನುಚರಣೆಯ ಪುರೋಹಿತ ವಿಧೇಯತೆಯಿಂದ, ಶರಣಾಗತ ಭಾವನೆಯಿಂದ ಪೂಜೆ ಸಲ್ಲಿಸಿ ಪ್ರಾರ್ಥಿಸಿದರೆ; ಮಾಂತ್ರಿಕಾಚರಣೆಯ ಮಂತ್ರವಾದಿ, ಅಂತಹದೇ ಗುರಿಯನ್ನು ದಬ್ಬಾಳಿಕೆಯಿಂದ ಸಾಧಿಸಲು ಪ್ರಯತ್ನಿಸುತ್ತಾನೆ. ಆ ಶಕ್ತಿಯನ್ನೇ ವಶಪಡಿಸಿಕೊಂಡು, ಅದು ತನಗೆ ವಿಧೇಯವಾಗಿ ನಡೆದುಕೊಳ್ಳುವಂತೆ ವಶೀಕರಿಸಿಕೊಳ್ಳುತ್ತಾನೆ ದಬ್ಬಾಳಿಕೆ, ಬಲಾತ್ಕಾರ ಮಂತ್ರವಿದ್ಯೆಯಲ್ಲಿ ಎದ್ದು ಕಾಣುವ ಅಂಶಗಳು. ಧರ್ಮ ಸಾಮೂಹಿಕವಾದುದಾದರೆ, ಮಂತ್ರವಿದ್ಯೆ ರಹಸ್ಯ ಮಾರ್ಗಿ. ಮಂತ್ರವಿದ್ಯೆಗೆ ಬಲಿಯಾದ ವ್ಯಕ್ತಿ ಎಲ್ಲವನ್ನೂ ಗೋಪ್ಯವಾಗಿ ನಡೆಸಲು ಪ್ರಯತ್ನಿಸುತ್ತಾನೆ. ಗುರಿ ಮುಟ್ಟಿದಮೇಲೂ ಅದನ್ನು ಯಾರಿಗೂ ಅವನು ತಿಳಿಸಲಿಚ್ಛಿಸುವುದಿಲ್ಲ. ಆದರೆ ಧರ್ಮದ ರೀತಿಯೇ ಬೇರೆ. ಅವರದ್ದು ರಾಜಮಾರ್ಗ.

ಮಂತ್ರ-ಮಾಟಗಳು, ರಹಸ್ಯಮಾರ್ಗಿಗಳಾಗಿರುವಂತೆಯೇ ಹಿಂಸಾಮಾರ್ಗಿಗಳೂ ಕೂಡ. ಸಾಮಾನ್ಯವಾಗಿ ಬಲಿ ಇಲ್ಲಿ ಅನಿವಾರ್ಯ. ಸ್ವಂತ ಬಯಕೆಗಳನ್ನು ಈಡೇರಿಸಿಕೊಳ್ಳಬೇಕೆಂಬ ಅಭಿಲಾಷೆಯ ಜೊತೆಗೆ, ಬೇರೊಬ್ಬನ ಮೇಲೆ ಸೇಡನ್ನು ತೀರಿಸಿಕೊಳ್ಳುವ ದೃಷ್ಟಿಯೇ ಮಾಟ-ಮಂತ್ರಗಳಲ್ಲಿ ಹೆಚ್ಚು. ಹಾಗಾಗಿ, ಸಂಕುಚಿತ ಮನಸ್ಸಿನ, ಸೇಡಿನ ಮನೋಭಾವದ ಜನ ಬೇಗ ಮಾಟ-ಮಂತ್ರಗಳಿಗೆ ಶರಣಾಗುತ್ತಾರೆ. ಏಕೆಂದರೆ, ಅದು ಶೀಘ್ರಗಾಮಿ. ಧರ್ಮದಂತೆ ಮಂದಗಾಮಿಯಲ್ಲ ಮಂತ್ರವಿದ್ಯೆ. ಅಲ್ಲದೆ, ಮಾಂತ್ರಿಕಶಕ್ತಿಯ ಮೂಲಕ ಗುರಿಯನ್ನು ಸಾಧಿಸುವ ಭರವಸೆ ಹೆಚ್ಚಾಗಿರುತ್ತದೆ. ಮಂತ್ರವಾದಿಯೂ ಆ ಭರವಸೆಯನ್ನು ನಂಬಿದವರಿಗೆ ಕೊಡುತ್ತಾನೆ. ಮಂತ್ರವಾದಿ, ಅಲೌಕಿಕ ಶಕ್ತಿಯೊಂದನ್ನು ವಶೀಕರಿಸಿಕೊಂಡಿದ್ದು, ಆ ಶಕ್ತಿ ಮಂತ್ರವಾದಿಯ ಮಾತನ್ನು ಕೇಳುತ್ತದೆ ಎಂಬ ನಂಬಿಕೆ ಹಲವರಿಗಿರುವುದರಿಂದ ಅಂತಹವರು ಶೀಘ್ರ ಗುರಿಸಾಧನೆಗಾಗಿ ಮಂತ್ರವಾದಿಯ ಬಳಿ ತೆರಳುತ್ತಾರೆ. ಧರ್ಮ ಹಾಗೂ ಧರ್ಮದ ಪ್ರತಿನಿಧಿ

ಯೆನಿಸಿದ ಪುರೋಹಿತ ಎಲ್ಲರ ಶ್ರೇಯಸ್ಸಿಗಾಗಿ, ಸುಖಕ್ಕಾಗಿ ಪ್ರಾರ್ಥಿಸಿದರೆ, ಮಾಟ-ಮಂತ್ರಗಳ ಪ್ರತಿನಿಧಿಯೆನಿಸಿದ ಮಂತ್ರವಾದಿ, ತನಗೆ ಶರಣಾದವರ ರಕ್ಷಣೆಗಾಗಿ ಹಾಗೂ ಅದರ ವಿರುದ್ಧವಾದವರ ವಿನಾಶಕ್ಕಾಗಿ ಪ್ರಾರ್ಥಿಸುತ್ತಾನೆ. ಎರಡೂ, ಅಲೌಕಿಕ-ಅಗೋಚರ ಶಕ್ತಿಗಳಿಂದಲೇ ನಡೆಯುವಂತಹುದು ; ಆದರೂ ಅವುಗಳು ಬೀರುವ ಪರಿಣಾಮ ಮತ್ತು ಪ್ರಭಾವಗಳು ಬೇರೆ ಬೇರೆ. ಒಂದು ಲೋಕಕಲ್ಯಾಣಕ್ಕೆ ಶ್ರಮಿಸಿದರೆ, ಮತ್ತೊಂದು ಸ್ವಾರ್ಥಕಲ್ಯಾಣಕ್ಕೆ ಪಣತೊಡುತ್ತದೆ.

ಆದರೆ, ವ್ಯಾಪಕಾರ್ಥದಲ್ಲಿ ನೋಡುವಾಗ—ಎರಡರಲ್ಲಿಯೂ ಲೋಪದೋಷಗಳಿವೆ. ಮಂತ್ರವಿದ್ಯೆಯನ್ನು ಒಳ್ಳೆಯ ಕಾರ್ಯಕ್ಕೂ ಬಳಸಿಕೊಳ್ಳಬಹುದಾದರೂ, ಬಳಸುವವರು ಕಡಿಮೆ. ಮಾಟ-ಮಂತ್ರಗಳಿಗೆ ಜನ ಹೆಚ್ಚಾಗಿ ಹೆದರುವುದರಿಂದ, ಅದರತ್ತ ಹೋಗುವವರ ಸಂಖ್ಯೆಯೂ ಕಡಿಮೆ. ಹಾಗಾಗಿ ಶೀಘ್ರಗುರಿ ಸಾಧಿಸಬೇಕೆಂಬ ಮನೋವೃತ್ತಿಯವರು ಮಾತ್ರ ಅತ್ತ ಸುಳಿಯುತ್ತಾರೆ. ಧರ್ಮ-ನಿಜವಾದ ಅರ್ಥದಲ್ಲಿ ಎಷ್ಟು ಆಚರಣೆಯಾಗುತ್ತಿದೆ ? ಎಂಬುದನ್ನು ಗಮನಿಸಿದಾಗ, ಧರ್ಮದ ಹೆಸರಿನಲ್ಲಿಯೂ ಎಷ್ಟೊಂದು ಅಧರ್ಮ ನಡೆಯುತ್ತದೆ ? ಎಂಬುದು ವೇದ್ಯವಾಗುತ್ತದೆ. ಆದರೂ ನಿರಪಾಯಕಾರಿಯಾದ ಧರ್ಮವನ್ನು ಅವಲಂಬಿಸುವವರೇ ಹೆಚ್ಚು. ಮಂತ್ರದ ಕಾರ್ಯಾಚಾರಕನಾದ ಮಂತ್ರವಾದಿಗೂ, ಧರ್ಮದ ಕಾರ್ಯಾಚಾರಕನಾದ ಪುರೋಹಿತನಿಗೂ ಸಮಾಜದಲ್ಲಿ ಇರುವ ಸ್ಥಾನಮಾನವನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಮಂತ್ರವಾದಿಗೆ ಹೆದರಿ ನಡೆಯುವಂತೆ ಜನ, ಪುರೋಹಿತನಿಗೆ ಹೆದರುವುದಿಲ್ಲ. ಆದರೆ, ಪುರೋಹಿತನ ಬಗೆಗೆ ಅವರಿಗಿರುವ ಗೌರವಭಾವನೆ ಮಂತ್ರವಾದಿಯ ಬಗೆಗೆ ಇರುವುದಿಲ್ಲ. ಕೆಲವು ಆದಿವಾಸಿಗಳಲ್ಲಿ ಪುರೋಹಿತರಾಗಿದ್ದುಕೊಂಡೂ, ಮಂತ್ರವಾದಿಯ ಕೆಲಸ ನಿರ್ವಹಿಸಿದ ನಿದರ್ಶನಗಳು ಉಂಟು. ಸೈಬೀರಿಯಾದ ಆದಿವಾಸಿಗಳಲ್ಲಿ ಇಂತಹವರನ್ನು 'ಶಾಮನ್' ಎಂದು ಕರೆಯುತ್ತಾರೆ. ಎರಡೂ ಶಕ್ತಿಗಳನ್ನು ಮೈಗೂಡಿಸಿಕೊಂಡಿದ್ದ ಇವರಿಗೆ ಸಮಾಜದಲ್ಲಿ ಗೌರವದ ಸ್ಥಾನವಿತ್ತು. ಇವರಲ್ಲಿ ಕೆಲವರು ವೈದ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಈತ ದೇವರ ಅಥವಾ ಭೂತದ ನೆರವಿನಿಂದ ತನ್ನ ಬಳಿಗೆ ಬಂದವರ ಇಚ್ಛೆಯನ್ನು ಈಡೇರಿಸಲು ನೆರವಾಗುತ್ತಿದ್ದ. ಆದರೆ, ಅನೇಕ ಕಡೆ, ಮಾಂತ್ರಿಕನೆಂದರೆ ; ಕೆಡುಕು ಮಾಡುವವನು—ಎಂದೇ ಅಭಿಪ್ರಾಯವಿದೆ. ಅಮಾನುಷ ರೀತಿಯಲ್ಲಿ ತನಗಾಗದವನನ್ನು ನಿವಾರಿಸಿಕೊಳ್ಳುವುದಕ್ಕಷ್ಟೇ—ಮಂತ್ರ-ಮಾಟಗಳನ್ನು ಬಳಸಿಕೊಂಡವರ ಸಂಖ್ಯೆ ವಿರಳವೇನಲ್ಲ.

ಮಂತ್ರ-ಮಾಟ ಮುಂತಾದುವುಗಳಿಗೆಲ್ಲ ನಂಬಿಕೆಯೇ ಮೂಲ ಆಧಾರ. ಮಂತ್ರವಾದಿಯನ್ನು ನಂಬಿ ಒಬ್ಬ ವ್ಯಕ್ತಿ ತನ್ನ ಪರಿಸ್ಥಿತಿಯನ್ನು ಅವನಿಗೆ ವಿವರಿಸುತ್ತಾನೆ. ಅದಕ್ಕೆ ಪರಿಹಾರವನ್ನು ಬೇಡುತ್ತಾನೆ. ಮಂತ್ರವಾದಿಯ ಭರವಸೆಯ ಮೇಲೆ ಆ ವ್ಯಕ್ತಿ ನಿಶ್ಚಿಂತನಾಗಿರುತ್ತಾನೆ. ಅಮೆರಿಕೆಯ ಕ್ಯಾಲಿಫೋರ್ನಿಯಾದ ಬುಡಕಟ್ಟು ಜನಾಂಗದಲ್ಲಿ ಮಂತ್ರವಾದಿಗಳಿಗೆ ಹೆಚ್ಚಿನ ಗೌರವವಿರುವುದು ಈ ಕಾರಣಕ್ಕಾಗಿ—ಅವರು, ತಮ್ಮ

ಮಂತ್ರಶಕ್ತಿಯಿಂದ ಸಮಾಜದ ಹಲವು ಅನಿಷ್ಟಗಳನ್ನು ಹೋಗಲಾಡಿಸಲು ಮುಂದಾಗುವುದು. ಸ್ವಾರ್ಥಕ್ಕಾಗಿ ಅದನ್ನು ಬಳಸಿಕೊಳ್ಳುವವರೂ ಉಂಟು.

ಪ್ರಪಂಚದ ಅನೇಕ ಭಾಗಗಳಲ್ಲಿಯ ಜನರಂತೆಯೇ, ಕರ್ನಾಟಕದ ಅನೇಕ ಭಾಗಗಳಲ್ಲಿ ಇಂದಿಗೂ ಇಂತಹ ಮಾಟ–ಮಂತ್ರಗಳಿಗೆ ಬೆಲೆ ಕೊಡುವ ಜನರಿದ್ದಾರೆ. ಬೇರೆ ಬೇರೆ ಹಂತಗಳಲ್ಲಿ, ಬೇರೆ ಬೇರೆ ಕಾರಣಗಳಿಗಾಗಿ ಅವುಗಳನ್ನು ಆಚರಿಸುತ್ತಾರೆ. ಸುಲಭವಾಗಿ, ಬೇಗ ಪರಿಹಾರ ಕಾಣದ ವಿಷಯಗಳಲ್ಲಿ ಇಂತಹವುಗಳ ಮೊರೆ ಹೋಗುವುದು ಸಾಮಾನ್ಯ. ದೆವ್ವ ಪಿಶಾಚಿಗಳಿಗೆ ಹೆದರಿ ಅಥವಾ ಅವು ದೂರವಿರಲಿ ಎಂಬ ಕಾರಣಕ್ಕಾಗಿ ಮನೆಯ ಮುಂದಿನ ಬಾಗಿಲಿಗೆ ಮೂರು ನಾಮವನ್ನು ಬಳಿಯುವುದಾಗಲಿ, ತೆಂಗಿನಕಾಯನ್ನು ಮಂತ್ರಿಸಿ ಕಟ್ಟುವುದಾಗಲಿ ಅಥವಾ ಹಳೆಯ ಚಪ್ಪಲಿಗಳನ್ನು ಮನೆಯ ಹೊರಭಾಗದ ನಾಲ್ಕು ಮೂಲೆಗಳಿಗೂ ಕಟ್ಟುವುದಾಗಲಿ—ಹಳ್ಳಿಯ ಅನೇಕ ಮನೆಗಳಲ್ಲಿ ಕಂಡುಬರುವ ದೃಶ್ಯ. ದೇವರ ಪೂಜಾರಿಗಳಲ್ಲಿಯೇ ಕೆಲವರು ಇದನ್ನು ಮಾಡಿಕೊಡುತ್ತಾರೆ. ಇಲ್ಲವೇ ಇದಕ್ಕಾಗಿಯೇ ಕೆಲವರಿರುವುದೂ ಉಂಟು. "ಹಣೆಗೆ ಎಂತಹದೋ ಕಪ್ಪುಬೊಟ್ಟನ್ನಿಟ್ಟು ಹೆಂಗಸರನ್ನು ತಮ್ಮ ಹಿಂದೆಯೇ ಬರುವಂತೆ ಮಾಡುತ್ತಾರೆ" ಎಂಬ ಸುದ್ದಿ ಹೊಸದೇನೂ ಅಲ್ಲ. ಇಂತಹದ್ದರ ಬಗೆಗೆ ಹುಟ್ಟಿಕೊಂಡಿರುವ ಕತೆಗಳೇ ಅಪರಿಮಿತವಾಗಿದೆ.

ಮಾಟ–ಮಂತ್ರ, ಧರ್ಮದಂತೆಯೇ ವಿಶ್ವದಾದ್ಯಂತವೂ ಕಂಡುಬರುತ್ತದೆ. ಒಂದೊಂದು ಜನಾಂಗದಲ್ಲಿ, ಒಂದೊಂದು ಬಗೆಯಲ್ಲಿ ಅದರ ಆಚರಣೆ ಇರುವುದು ಗಮನಾರ್ಹ. ಒಂದು ಕಡೆ ಅದಕ್ಕೆ ಅತಿ ಹೆಚ್ಚಿನ ಮಾನ್ಯತೆ ಇದ್ದರೆ, ಇನ್ನೊಂದೆಡೆ ಅಷ್ಟೇ ನಿರ್ಲಕ್ಷ್ಯವೂ ಇದೆ. ಆದರೂ, ಮಂತ್ರವಿದ್ಯೆ ಎಲ್ಲರ ಸ್ವತ್ತಾಗಿ ಕಂಡುಬರದಿದ್ದರೂ ; ಕೆಲವರ ಸ್ವತ್ತಾಗಿ, ಮತ್ತೆ ಕೆಲವರಿಗೆ ಕುತ್ತಾಗಿರುವುದು ಸಾಮಾನ್ಯ ಅಂಶ.

ವಿಶ್ವದಾದ್ಯಂತ ಕಂಡುಬರುವ ಈ ಮಂತ್ರವಿದ್ಯೆಯ ಅಧ್ಯಯನದ ಆಧಾರದ ಮೇಲೆ, ಪ್ರಸಿದ್ಧ ಮಾನವಶಾಸ್ತ್ರಜ್ಞನಾದ ಫ್ರೇಜರ್ ಎರಡು ಸೂತ್ರಗಳನ್ನು ರೂಪಿಸಿದ್ದಾನೆ. ವಿಶ್ವದ ಎಲ್ಲ ಭಾಗದಲ್ಲಿಯೂ—ಎಲ್ಲ ಆದಿವಾಸಿ ಸಮಾಜದಲ್ಲಿಯೂ ಮಾಂತ್ರಿಕ ವಿದ್ಯೆ, ಈ ಎರಡು ಸೂತ್ರಗಳ ಆಧಾರದ ಮೇಲೆಯೇ ನಡೆಯುವಂತಹುದು ಎಂದು ಆತ ತೀರ್ಮಾನಿಸುತ್ತಾನೆ. ಅವನ ಸೂತ್ರಗಳು :

೧. ಕಾರಣದಂತೆ ಪರಿಣಾಮ (Like Produces like)

೨. ಒಮ್ಮೆ ತಟ್ಟಿದ ಸೋಂಕು ಬಿಟ್ಟೋಡದ ಸೋಂಕು.

(Once in contact always in contact)

ಮೊದಲನೆಯದನ್ನು 'ಸಾದೃಶ್ಯತೆಯ ನಿಯಮ' ಎಂದೂ ಕರೆಯಲಾಗಿದೆ. ಇದಕ್ಕೆ ಸಂಬಂಧಪಟ್ಟ ಮಂತ್ರವಿದ್ಯೆಯನ್ನು—'ಅನುಕರಣ ಮಂತ್ರವಿದ್ಯೆ' ಎಂದೂ ಕರೆದಿದ್ದಾನೆ. ಇದು 'ಬಾಲನಾಗಮ್ಮನ ಕಥೆ'ಯಲ್ಲಿ ಬರುವ ಮಾಯಾಮರಾಟಿಯ ಪ್ರಸಂಗವನ್ನು

ನೆನಪಿಗೆ ತರುವಂತಹುದು : ಆ ಮಾಯಾಮರಾಟಿಯ ಜೀವ ಏಳು ಸಮುದ್ರದಾಚೆ ಇರುವ, ಯಾವುದೋ ಒಂದು ದೊಡ್ಡ ಮರದ ಮೇಲಿರುವ ಪಕ್ಷಿಯಲ್ಲಿದೆ ; ಆ ಪಕ್ಷಿಯ ಶರೀರದ ಒಂದೊಂದು ಭಾಗವನ್ನು ಊನವಾಗಿಸಿದಂತೆ, ಈ ಮಾಯಾಮರಾಟಿಯ ಶರೀರದ ಭಾಗಗಳೂ ಊನವಾಗುತ್ತವೆ. ಕೊನೆಗೆ ಆ ಪಕ್ಷಿಯ ಪ್ರಾಣದೊಂದಿಗೆ ಈತನ ಪ್ರಾಣವೂ ಹೋಗುತ್ತದೆ. ಇದು ಒಂದು ಕಾಲ್ಪನಿಕ ಕಥೆಯೆನಿಸಿದರೂ, ಸಾದೃಶ್ಯತೆಯ ಅಥವಾ ಅನುಕರಣೆಯ ಮಂತ್ರವಿದ್ಯೆಯಲ್ಲಿ ಇದರ ಕೆಲವೊಂದು ಅಂಶಗಳನ್ನು ಕಾಣುತ್ತೇವೆ. ತನಗಾಗದವನೊಬ್ಬನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಮಂತ್ರವಾದಿಯ ಬಳಿ ಹೋದಾಗ, ಆ ಮಂತ್ರವಾದಿ ಸೇಡಿಗೊಳಗಾದ ವ್ಯಕ್ತಿಯನ್ನು ಹೋಲುವ ಗೊಂಬೆಯನ್ನು ಮರದಿಂದಲೋ, ಮಣ್ಣಿನಿಂದಲೊ ಅಥವಾ ಮತ್ತಾವುದೋ ವಸ್ತುವಿನಿಂದಲೋ ಮಾಡಿ ಅದಕ್ಕೆ ತನ್ನ ಮಂತ್ರಶಕ್ತಿಯಿಂದ ಜೀವಕಳೆ ಬರುವಂತೆ ಮಾಡುತ್ತಾನೆ. ನಂತರ ತನಗೆ ತೋರಿದ ರೀತಿಯಲ್ಲಿ ಆ ಮೂರ್ತಿಗೆ ಹಿಂಸೆ ಕೊಡಲು ಪ್ರಾರಂಭಿಸುತ್ತಾನೆ. ಅದರ ಕೈಕಾಲು ಮುರಿಯುವುದೋ, ಶರೀರದ ನಾನಾ ಭಾಗಗಳಿಗೆ ಮೊಳೆ ಚುಚ್ಚುವುದೋ, ಇಲ್ಲ ಬೆಂಕಿಯಲ್ಲಿ ಸುಡುವುದೋ—ಹೀಗೆ ನಾನಾ ರೀತಿಯಲ್ಲಿ ಹಿಂಸಿಸುತ್ತಾನೆ. ಇದರ ಉದ್ದೇಶ, ಹೀಗೆ ಮಾಡುವುದರಿಂದ ಆ ಹಿಂಸೆಯೆಲ್ಲವೂ ಉದ್ದೇಶಿತ ವ್ಯಕ್ತಿಗೆ ತಾಗುತ್ತದೆ ಎಂಬುದು. ಅದರಿಂದ ಅವನು ನೋವನ್ನೊ ಅಥವಾ ಕೊನೆಗೆ ಸಾವನ್ನೋ ಅನುಭವಿಸುತ್ತಾನೆ. ಇದರಿಂದ, ದೂರದಲ್ಲಿಯೇ ನಿಂತು ಶತ್ರುನಾಶ ಮಾಡಿದಂತಾಗುತ್ತದೆ.

ಸಾದೃಶ್ಯತೆಯ ನಿಯಮದ ಮೇಲೆ ನಡೆಯುವ ಈ ಅನುಕರಣಮಂತ್ರವಿದ್ಯೆ, ಅನೇಕ ಸಂದರ್ಭದಲ್ಲಿ ಯಶಸ್ವಿಯಾದ ನಿದರ್ಶನಗಳೂ ಇವೆ. ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸಮಾಡಿರುವ ವಾಲ್ಟರ್ ಬಿ. ಕ್ಯಾನನ್—ಇದರ ಯಶಸ್ಸಿಗೆ ಇರಬಹುದಾದ ಕಾರಣ ವನ್ನು ಗುರುತಿಸಿ, ನೀಡಿರುವ ವಿವರಣೆ ಸಮರ್ಪಕವಾಗಿರುವಂತೆ ತೋರುತ್ತದೆ. ಜನರಿಗೆ ಈ ಬಗೆಯ ಮಾಟ-ಮಂತ್ರಗಳ ಬಗೆಗೆ ಇರುವ ದೃಢವಾದ ನಂಬಿಕೆ ಹಾಗೂ ಅತಿಯಾದ ಭಯವೇ ಇದರ ಯಶಸ್ಸಿಗೆ ಕಾರಣ ಎಂಬುದು ಕ್ಯಾನನ್ನ ಅಭಿಪ್ರಾಯ. ತನ್ನ ಮೇಲೆ ಮಾಟ-ಮಂತ್ರದ ಪ್ರಯೋಗವಾಗಿರಬೇಕೆಂದು ಭ್ರಮಿಸಿ, ಭಯಪಟ್ಟ ವ್ಯಕ್ತಿ ಅದೇ ಗುಂಗಿನಲ್ಲಿ ಚಿಂತೆಗೆ ಒಳಗಾಗುತ್ತಾನೆ. ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು, ಆತ ಊಟ ತಿಂಡಿಗಳನ್ನು ತೊರೆದು ಕ್ಷೀಣಿಸತೊಡಗುತ್ತಾನೆ. ಅದೇ ಸ್ಥಿತಿ ಮುಂದುವರೆದರೆ ಅದು ಆತನ ಸಾವಿಗೂ ಕಾರಣವಾಗಬಹುದು. ಕ್ಯಾನನ್ ಹೇಳುವ ಹಾಗೆ, ಮಾಟ-ಮಂತ್ರದ ಶಕ್ತಿಗಿಂತ ಅದರಿಂದ ಉಂಟಾದ ಭಯ ಆ ವ್ಯಕ್ತಿಯ ಅವಸಾನಕ್ಕೆ ಕಾರಣ ವಾಗಬಹುದು.

ಸಾದೃಶ್ಯತೆಯ ಮೇಲಿನ ಈ ಅನುಕರಣ ಮಂತ್ರವಿದ್ಯೆಯನ್ನು ಶತ್ರುನಾಶಕ್ಕಷ್ಟೇ ಅಲ್ಲದೆ, ಕೆಲವು ಒಳ್ಳೆಯ ಕಾರ್ಯಗಳಿಗೂ ಬಳಸಿಕೊಂಡಿರುವ ಬಳಸಿಕೊಳ್ಳುವ ನಿದರ್ಶನ ಗಳೂ ಇವೆ. ಆದಿವಾಸಿಗಳು ತಮ್ಮ ಪರಿಸರದ ಸುತ್ತ ಮುತ್ತ ನಡೆಯುತ್ತಿದ್ದ ಘಟನೆಗಳ

ಬಗೆಗೆ ಭಾವಿಸಿಕೊಂಡ ರೀತಿ, ಇಂತಹ ಚಟುವಟಿಕೆಗಳಿಗೆ ಮುಖ್ಯ ಕಾರಣ ಎನಿಸುತ್ತದೆ. ಮಳೆ ಬರುವುದು–ಮಳೆ ಬರುವುದಕ್ಕೆ ಮುನ್ನ ಗುಡುಗುವ ಗುಡುಗಿನ ಶಬ್ದವೇ ಕಾರಣ ಎಂದು ಭಾವಿಸಿ ; ಮಳೆ ಇಲ್ಲದಾಗ ಅಥವಾ ತಮಗೆ ಮಳೆ ಬೇಕೆನಿಸಿದಾಗ— ದೊಡ್ಡ ದೊಡ್ಡ ಬಂಡೆಗಳನ್ನು ಗುಡ್ಡದ ಮೇಲಿಂದ ಕೆಳಕ್ಕೆ ಉರುಳಿಸುವುದರ ಮೂಲಕ ಅಂತಹ ಶಬ್ದವನ್ನು ಉಂಟುಮಾಡುತ್ತಿದ್ದರು. ಗುಡುಗಿನಂತಹ ಆ ಬಂಡೆಗಳ ಶಬ್ದಕ್ಕೆ ಮಳೆ ಬರುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ಛೋಟಾನಾಗಪುರದ ಆದಿವಾಸಿಗಳು ಹೀಗೆ ನಂಬಿದ್ದರು. ಕರ್ನಾಟಕದಲ್ಲಿ ಪ್ರಚಲಿತವಿರುವ 'ಕೊಂತಿಪೂಜೆ'ಯಾಗಲಿ ಅಥವಾ 'ಮಳೆದೇವರು' ಆಚರಣೆಗಳಾಗಲಿ ಇಂಥದೇ ಕಾರಣಕ್ಕಾಗಿ ಹುಟ್ಟಿಕೊಂಡುವುಗಳು. ಇದರಂತೆಯೇ, ಬೇಗ ಗರ್ಭಿಣಿಯರಾಗಲಿ ಎಂಬ ಕಾರಣದಿಂದ, ಮಕ್ಕಳಾಗದ ಹೆಂಗಸರಿಗೆ ಮಗುವನ್ನೇ ಹೋಲುವಂತಹ ಗೊಂಬೆಗಳನ್ನು ಮಾಡಿಕೊಡುವ ಪದ್ಧತಿ ಎಸ್ಕಿಮೋ ಜನರಲ್ಲಿ ಇತ್ತೆಂಬುದು ಗಮನಾರ್ಹ. ಅವರು ಇದನ್ನು ಮಾಟ–ಮಂತ್ರದ ಹೆಸರಿನಲ್ಲಿ ಕರೆದರೂ, ವಾಸ್ತವಿಕ ಸಂಗತಿಯೇ ಬೇರೆ. ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ಮುಖ್ಯವಾಗಿ ಇದನ್ನು ಗಮನಿಸಬೇಕಾಗುತ್ತದೆ. ಹೀಗೆ ಗೊಂಬೆಯನ್ನು ಬಂಜೆಯರಿಗೆ ಕೊಡುವುದರಿಂದ, ಅವರಲ್ಲಿ ಅದಮ್ಯವಾಗಿ ಅಡಗಿರುವ ತಾಯ್ತನದ ಹಂಬಲ ಉದ್ರೇಕಗೊಂಡು ಗರ್ಭಧಾರಣೆಗೆ ಕಾರಣವಾಗಬಹುದೆಂಬುದು ಆದಿವಾಸಿಗಳಲ್ಲಿ ಕೆಲವರು ಮೀನಿನ ಬೇಟೆಗೆ ಹೋಗುವ ಮೊದಲು ಮೀನಿನ ಬಲೆಯನ್ನು ತಾವೇ ಸುತ್ತಿಕೊಂಡು ಹೊರಳಾಡುತ್ತಿದ್ದರು. ಇದರ ಉದ್ದೇಶವಾದರೂ, ಮೀನುಗಳು ಬಲೆಗೆ ಬೇಗ ಬೀಳಲಿ, ಬೇಟೆ ಯಶಸ್ವಿಯಾಗಲಿ ಎಂಬುದೇ ಆಗಿದೆ. ಇಂತಹ ಲೆಕ್ಕವಿಲ್ಲದಷ್ಟು ಆಚರಣೆಗಳು ವಿಚಿತ್ರ ರೀತಿಯಲ್ಲಿ ವಿಶ್ವದಾದ್ಯಂತವೂ ಇರುವುದನ್ನು ಕಾಣಬಹುದು.

ಇನ್ನು ಫ್ರೇಜರನ ಎರಡನೆಯ ಸೂತ್ರ : 'ಒಮ್ಮೆ ತಟ್ಟಿದ ಸೋಂಕು ಬಿಟ್ಟೋಡದ ಸೋಂಕು.' ಇದನ್ನು 'ಸೋಂಕು ಮಂತ್ರವಿದ್ಯೆ' ಎಂದೇ ಕರೆದಿದ್ದಾನೆ. ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಯಾವುದೋ ಒಂದು ವಸ್ತುವನ್ನು ಆಧರಿಸಿ ಆ ಮೂಲಕ ಅವನಿಗೆ ಕೇಡುಕನ್ನುಂಟು ಮಾಡುವುದು. ವಿಶೇಷವಾಗಿ—ಕೂದಲು, ಉಗುರು ಹಾಗೂ ತಾವು ಬಳಸುವ ಬಟ್ಟೆಬರೆಗಳ ಬಗೆಗೆ ಆದಿವಾಸಿಗಳು ತುಂಬ ಎಚ್ಚರಿಕೆಯಿಂದಿರುತ್ತಿದ್ದರು. ಅವುಗಳು ತಮಗಾಗದವರ ಕೈಗೆ ಸಿಕ್ಕಿದರೆ ಅವನ್ನು ಬಳಸಿಕೊಂಡು ತಮಗೆ ಕೇಡುಕನ್ನುಂಟುಮಾಡಬಹುದೆಂಬ ಭಯವೇ ಇದಕ್ಕೆ ಮುಖ್ಯ ಕಾರಣವಾಗಿತ್ತು. ಹಾಗಾಗಿ ಅವುಗಳನ್ನು ಜೋಪಾನವಾಗಿ ಕಾಯ್ದುಕೊಳ್ಳುತ್ತಿದ್ದರು. ತಮ್ಮ ಕೂದಲು, ಉಗುರುಗಳನ್ನು ಕಾಣದಂತೆ ನೆಲದಲ್ಲಿ ಹೂಳುತ್ತಿದ್ದರು. ಆಸ್ಟ್ರೇಲಿಯಾದ ಗುಡ್ಡಗಾಡು ಜನರ ನಂಬಿಕೆಯಂತೆ, ತಮಗಾಗದ ಒಬ್ಬ ವ್ಯಕ್ತಿಯನ್ನು ಕುಂಟನನ್ನಾಗಿ ಮಾಡುವುದು ಬಹಳ ಸುಲಭ. ತಮಗಾಗದ ವ್ಯಕ್ತಿ ಓಡಾಡುವ ಜಾಗವನ್ನು ಗಮನಿಸಿ ಅವನ ಕಾಲಹೆಜ್ಜೆ ಗುರುತಿನಲ್ಲಿ ಗಾಜಿನ ಚೂರನ್ನೋ ಅಥವಾ ಹರಿತವಾದ ಮೂಳೆಯ ಚೂರುಗಳನ್ನೋ ಅವಿತಿಟ್ಟರೆ ಸಾಕು, ಅವನ ಕತೆ ಮುಗಿದಂತೆ. ಹಾಗಾಗಿ ಆದಿವಾಸಿಗಳು

ಒಬ್ಬರ ಬಟ್ಟೆಯನ್ನು ಮತ್ತೊಬ್ಬರು ಧರಿಸುವುದಿಲ್ಲ. ಸತ್ತಾಗ ಅವರವರ ಬಟ್ಟೆಯನ್ನು ಈ ಕಾರಣಕ್ಕಾಗಿಯೇ ಅವರವರ ಜೊತೆಯಲ್ಲಿಯೆ ಸುಟ್ಟು ಬಿಡುತ್ತಿದ್ದರು.

ಇಂದಿಗೂ, ಅತ್ಯಾಧುನಿಕರೆನಿಸಿಕೊಂಡವರಲ್ಲಿಯೂ ನಾವು ಕಾಣುವ—ದೃಷ್ಟಿ ನಿವಾಳಿಸುವುದೋ, ಹೊಟ್ಟೆಗೆ ಸಂಬಂಧಿಸಿದ ಯಾವುದೋ ಕಾಯಿಲೆಯನ್ನು ನಿವಾಳಿಸಿ ಮೂರು ದಾರಿ ಕೂಡಿದ ಕಡೆ ಅದನ್ನು ಹಾಕುವುದು—ಮುಂತಾದುವುಗಳೂ ಈ ವಲಯದಿಂದ ದೂರವಾದುವುಗಳಲ್ಲ. ಹಾಗೆ ದಾರಿಯಲ್ಲಿ ಹಾಕುವ ಉದ್ದೇಶ, ಕಾಣದೆ ಅದನ್ನು ದಾಟಿದವನಿಗೆ ಆ ಸೋಂಕು ತಟ್ಟಲಿ ಎಂಬುದು. ಆದರೆ ಕೆಲವೊಮ್ಮೆ, ಅದನ್ನು ದಾರಿಯಲ್ಲಿ ನೋಡಿದ ವ್ಯಕ್ತಿ ಮೂರುಸಾರಿ ಅದರತ್ತ ಉಗಿದು ಮತ್ತೆ ಹಿಂತಿರುಗಿ ನೋಡದೆ ಹೋಗುವುದೂ—ಆ ಸೋಂಕು ತನಗೆ ತಟ್ಟದಿರಲಿ ಎಂಬ ಕಾರಣಕ್ಕಾಗಿ.

ಇವುಗಳಂತೆಯೇ ಕೆಲವು ನುಡಿಗಳು ಮಾಂತ್ರಿಕಶಕ್ತಿಯ ಮಹತ್ವವನ್ನು ಪಡೆದಿವೆ ಎಂದು ಭಾವಿಸಲಾಗಿದೆ. ಇವುಗಳನ್ನು ಮಾಂತ್ರಿಕ ನುಡಿಗಳು (Spells) ಎಂದು ಕರೆಯಲಾಗಿದೆ. ಇಂತಹ ನುಡಿಗಳು ಕೆಲವು ವ್ಯಕ್ತಿಗಳ ಬಾಯಿಂದ ಹೊರಬಿದ್ದಾಗ ಅವು ಪರಿಣಾಮಕಾರಿಯಾಗಿದ್ದು, ಪ್ರಭಾವ ಬೀರುತ್ತವೆ ಎಂಬ ನಂಬಿಕೆ ಪ್ರಬಲವಾಗಿದೆ. ಎಲ್ಲರ ಮನೆಯಲ್ಲಿಯೂ ಮಕ್ಕಳಿಗೆ ದೃಷ್ಟಿಯಾದಾಗ, ಸಾಮಾನ್ಯವಾಗಿ ಕಾಣುವ—ಕಡ್ಡಿ ನಿವಾಳಿಸುವಾಗ, ಉಪ್ಪು ಮೆಣಸಿನಕಾಯಿ ನಿವಾಳಿಸುವಾಗ ಜೊತೆಯಲ್ಲಿ ನುಡಿಯುವ ನುಡಿಗಳಂತೆಯೇ, ಕಾಯಿಲೆಗಳನ್ನು ಗುಣಪಡಿಸಲು, ಉಳುಕನ್ನು ತೆಗೆಯಲು ಹಾವು—ಚೇಳು ಕಚ್ಚಿದಾಗ ಅವುಗಳನ್ನು ನಿವಾರಿಸಲು ಮಾಂತ್ರಿಕ ನುಡಿಗಳನ್ನು ಪ್ರಯೋಗಿಸುತ್ತಾರೆ. ಈಗಲೂ ಹಾವು ಕಚ್ಚಿದವರನ್ನು ಕೇವಲ ಮಂತ್ರದಿಂದಲೇ ಬದುಕಿಸಲು ಸಾಧ್ಯ ಎಂಬ ನಂಬಿಕೆ ಹಲವರಲ್ಲಿದೆ. ಕರ್ನಾಟಕದಲ್ಲಷ್ಟೇ ಅಲ್ಲ, ಭಾರತದ ಅನೇಕ ಭಾಗಗಳಲ್ಲಿ ಇಂತಹ ನಂಬಿಕೆ ಪ್ರಬಲವಾಗಿದೆ. ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರದಲ್ಲಿರುವ ಮನೆತನವೊಂದು—ಹಾವು ಚೇಳು ಕಚ್ಚಿದ್ದಕ್ಕೆ, ಕೇವಲ ಮಂತ್ರದಿಂದಲೇ ಗುಣಪಡಿಸುವುದರಲ್ಲಿ ಹೆಸರಾಗಿದೆ. ಇಂದಿಗೂ ಜನ ಅಲ್ಲಿಗೆ ಬರುತ್ತಾರೆ. ಅಷ್ಟೇ ಅಲ್ಲ, ಸಿಡಿಲು ಬಡಿಯುವ ಸಂದರ್ಭದಲ್ಲಿ ಅರ್ಜುನನ ದಶನಾಮಗಳನ್ನು ಜಪಿಸಿದರೆ ಯಾವ ತೊಂದರೆಯೂ ಆಗುವುದಿಲ್ಲ ಎಂಬ ನಂಬಿಕೆಯೂ ರೂಢಿಯಲ್ಲಿದೆ. ಸೂತ್ರಪ್ರಾಯವಾದ ಕೆಲವು ಮಾಂತ್ರಿಕ ನುಡಿಗಳು ಉತ್ತಮ ಔಷಧಕ್ಕಿಂತಲೂ ಪರಿಣಾಮಕಾರಿಯಾದುದು ಎಂಬ ನಂಬಿಕೆ ಹಲವರಲ್ಲಿದೆ. ಉತ್ತರ ಅಮೆರಿಕೆಯ ಮೂಲನಿವಾಸಿಗಳಲ್ಲಿ ಮಾಂತ್ರಿಕ ನುಡಿಗಳ ಬಗೆಗೆ ಅತಿಯಾದ ನಂಬಿಕೆಯಿದ್ದುದು ತಿಳಿಯುತ್ತದೆ. ಒಂದು ನಿರ್ದಿಷ್ಟ ಮನೆತನಕ್ಕೆ ಸೇರಿದ ಜನ ಮಾತ್ರ ಅಂತಹ ಮಾಂತ್ರಿಕ ನುಡಿಗಳನ್ನು ವಂಶದ ಆಸ್ತಿಯಾಗಿ ಕಾಯ್ದುಕೊಂಡು ಬರುತ್ತಿದ್ದರು. ಬೇರೆಯವರು ಕಲಿತು ಉಚ್ಚರಿಸಿದರೂ ಅದು ಪ್ರಭಾವ ಬೀರುವುದಿಲ್ಲ ಎಂಬ ನಂಬಿಕೆಯೂ ಇತ್ತು. ಹಾಗಾಗಿ ಕೆಲವರ ಬಾಯಲ್ಲಿ ಮಾತ್ರ ಅವು ಶಕ್ತಿಯುತವಾಗಿ, ಪರಿಣಾಮಕಾರಿಯಾಗಿ ಪ್ರಯೋಗವಾಗುತ್ತಿದ್ದುವು.

ಮುಖ್ಯವಾಗಿ, ಕಾಯಿಲೆ ಮತ್ತು ಅನಿಷ್ಟಗಳ ನಿವಾರಣೆಗೆ ಈ 'ಮಾಂತ್ರಿಕ ನುಡಿ'ಗಳ ಬಳಕೆಯನ್ನು ನೋಡುತ್ತೇವೆ.

ಮಂತ್ರ–ಮಾಟಗಳಿಗೆ ಸಂಬಂಧಿಸಿದಂತೆ, ನಿರ್ದಿಷ್ಟವಾದ ಕೆಲವು ವಸ್ತುಗಳ ಬಳಕೆಯನ್ನು ನೋಡುತ್ತೇವೆ. ಅವುಗಳಲ್ಲಿ ವಿಶೇಷವಾದ ಶಕ್ತಿ ಇದೆ ಎಂಬುದೇ ಇದಕ್ಕೆ ಮುಖ್ಯ ಕಾರಣ. ಈ ವಸ್ತುಗಳನ್ನು ಆರಾಧಿಸುವುದಷ್ಟೇ ಅಲ್ಲದೆ, ಮೈಮೇಲೆಯೂ ಧರಿಸುತ್ತಾರೆ. ಇಂತಹ ಮಾಂತ್ರಿಕ ವಸ್ತುಗಳಿಗೆ ಮಾಂತ್ರಿಕ ಆಚರಣೆಯ ಸಂದರ್ಭದಲ್ಲಿ ವಿಶೇಷವಾದ ಪೂಜೆ ಸಲ್ಲುತ್ತದೆ. ತಲೆಬುರುಡೆ, ಮಂತ್ರದಂಡ ಮುಂತಾದುವುಗಳಿಗೆ ಅತಿಶಯವಾದ ಶಕ್ತಿ ಇದೆ ಎಂದೇ ಅವರ ಭಾವನೆ. ತಾವು ನಡೆಸುವ ಮಾಂತ್ರಿಕ ಆಚರಣೆಗಳೆಲ್ಲವೂ ಅಂತಹ ವಸ್ತುಗಳ ಮೂಲಕವೇ ಪರಿಣಾಮಕಾರಿಯಾಗಿ ಪ್ರಯೋಗವಾಗುತ್ತವೆ ಎಂದೇ ಅವರು ನಂಬುತ್ತಾರೆ. ಮತ್ತೆ ಕೆಲವು ವಸ್ತುಗಳನ್ನು ತಮ್ಮ ಶರೀರದ ಮೇಲೆಯೇ ಧರಿಸುತ್ತಿದ್ದರು. ಇದರಿಂದ ದೆವ್ವ ಭೂತಗಳ ಕಾಟವಿರುವುದಿಲ್ಲ—ಎಲ್ಲ ಅನಿಷ್ಟಗಳೂ ತಾವಾಗಿಯೇ ದೂರವಾಗುತ್ತವೆ ಎಂಬ ವಿಶ್ವಾಸ ಇಂದಿಗೂ ಅನೇಕ ಜನರಲ್ಲಿಯೂ ಉಳಿದಿರುವುದು ಗಮನಾರ್ಹ. ಸ್ವತಃ ಮಂತ್ರವಾದಿಗಳೇ ಕೊರಳಿಗೆ, ತೋಳಿಗೆ ಇಂತಹ ತಾಯಿತಗಳನ್ನು ಕಟ್ಟಿಕೊಳ್ಳುವುದುಂಟು. ಮನೆಯ ಬಾಗಿಲಿಗೆ ತೆಂಗಿನಕಾಯನ್ನು ಮಂತ್ರಿಸಿ ಕಟ್ಟುವುದು, ಹಳ್ಳಿಯ ಮನೆಗಳಲ್ಲಿ ಕೆಲವರು ಹಳೆಯ ಚಪ್ಪಲಿಗಳನ್ನು ಮನೆಯ ಹೊರಭಾಗದಲ್ಲಿ ನಾಲ್ಕು ಮೂಲೆಗಳಿಗೂ ನೇತುಬಿಡುವುದು—ಇವೆಲ್ಲ ಇಂತಹ ನಂಬಿಕೆಯ ಹಿನ್ನೆಲೆಯಲ್ಲಿಯೇ ಕಾಣಿಸಿಕೊಂಡವುಗಳು.

ಈ ಮಾಟ–ಮಂತ್ರಗಳು ಸಮಾಜದಲ್ಲಿ ಅಂದಿನಿಂದ ಇಂದಿನವರೆವಿಗೂ ವಿವಿಧ ಸ್ತರಗಳಲ್ಲಿ, ವಿವಿಧ ಪ್ರಮಾಣದಲ್ಲಿ ಉಳಿದುಕೊಂಡೇ ಬಂದಿವೆ. ಅನೇಕ ಸಂದರ್ಭದಲ್ಲಿ ಒಳ್ಳೆಯದನ್ನು ಮಾಡಿರುವಂತೆಯೇ ಕೆಟ್ಟದ್ದನ್ನೂ ಮಾಡಿದೆ. ಕೆಲವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿರುವಂತೆಯೇ ಮತ್ತೆ ಕೆಲವರಲ್ಲಿ ಭಯವನ್ನೂ ಅಂಜಿಕೆಯನ್ನೂ ಉಂಟು ಮಾಡಿವೆ. ಹೀಗಾಗಿ, ಸಾಧುವಾದ ಧರ್ಮಕ್ಕೆ ಅಳುಕದ ಜನ, ಅಸಾಧುವೆನಿಸಿದ ಮಂತ್ರವಿದ್ಯೆಗೆ ಇಂದಿಗೂ ಅಳುಕಿ ನಡೆಯುವುದನ್ನು ಕಾಣಬಹುದು. ಅಜ್ಞಾನ–ಅಂಧಕಾರದಲ್ಲಿ ತೊಳಲಾಡುತ್ತಿದ್ದ ಆದಿವಾಸಿಗಳಲ್ಲಿದ್ದಷ್ಟು ಪ್ರಮಾಣದಲ್ಲಿ ಇಂದು ಮಂತ್ರವಿದ್ಯೆಯ ಪ್ರಾಬಲ್ಯವನ್ನು ಕಾಣದಿದ್ದರೂ, ಅದು ಸಂಪೂರ್ಣವಾಗಿ ಮಾಯವಾಗಿಲ್ಲ ಎಂಬುದಂತೂ ನಿಶ್ಚಿತ. ಈ ನಿಟ್ಟಿನಲ್ಲಿ ಕ್ರೋಬರ್, ಮಂತ್ರ ಮಾಟಗಳನ್ನು ಕುರಿತು ಹೇಳಿರುವ ಮಾತು ಗಮನಾರ್ಹ: ಒಂದು ಸಮಾಜ ಈ ಬಗೆಯ ಮಂತ್ರ–ಮಾಟಗಳಿಗೆ ಎಷ್ಟೆಷ್ಟು ಶ್ರದ್ಧೆ ಆಸಕ್ತಿಗಳನ್ನು ತೋರುತ್ತದೋ ಅದು ಅಷ್ಟಷ್ಟೂ ಹಿಂದಾಗಿರುತ್ತದೆಯೆಂದೂ; ಅದು ಅವುಗಳಿಂದ ದೂರವಾದಷ್ಟೂ ಆಧುನಿಕವಾಗಿ ಮುಂದುವರಿಯಲು ಸಾಧ್ಯವಾಗುತ್ತದೆ ಎಂದೂ ಭಾವಿಸುತ್ತಾನೆ. ಅಜ್ಞಾನ ಹೆಚ್ಚಿದಷ್ಟೂ ಮನುಷ್ಯ ಮೂಢ ನಂಬಿಕೆಗಳಿಗೆ ಒಳಗಾಗುತ್ತಾನೆ—ಎಂದು ಭಾವಿಸಿದರೂ, ರಕ್ತಗತವಾಗಿ, ಪರಂಪರಾಗತವಾಗಿ ಬಂದ ಕೆಲವು ಅಂಶಗಳು ನಾಗರಿಕ ಸಮಾಜದಲ್ಲಿಯೂ ಕಂಡುಬರುವುದನ್ನು

ನೋಡಿದಾಗ—ನಾವಿನ್ನೂ ಅಜ್ಞಾನದಿಂದ ಸಂಪೂರ್ಣವಾಗಿ ಮುಕ್ತರಾಗಿಲ್ಲ ಎಂಬುದು ವೇದ್ಯವಾಗುತ್ತದೆ. ಆದರೂ, ಮಾಟ—ಮಂತ್ರಗಳ ಬಗೆಗೆ, ಮಂತ್ರವಾದಿಗಳ ಬಗೆಗೆ ಹಿಂದೆ ಇದ್ದ ಭಯ—ಭೀತಿಯ ವಾತಾವರಣ ಇಂದು ಇಲ್ಲವಾಗಿದೆ ಎಂಬುದು ಸಮಾಧಾನಕರ ವಿಷಯ ಅಷ್ಟೆ.

* * *

ಇವುಗಳಂತೆಯೇ ಮೋಡಿ ಕೂಡ ಒಂದು ಕಾಲಕ್ಕೆ ಭಯವನ್ನು ಹುಟ್ಟಿಸುವ ಇದೇ ರೀತಿ–ನೀತಿಯ ಒಂದು ಪ್ರಕಾರವಾಗಿತ್ತು. ಆದರೆ, ಇಂದು ಅದು ಒಂದು ಮನರಂಜನೆಯ ಕಲೆಯಾಗಿ ಸ್ಥಾನಪಡೆದಿದೆ. ನೋಡುವವರ ಮೈ ನಡುಗಿಸುವ, ಭಯದ ವಾತಾವರಣದಲ್ಲಿಯೇ ಚಮತ್ಕಾರ ಪ್ರಧಾನವಾದ ಪ್ರದರ್ಶನ ನೀಡುವ ಈ ಪ್ರಕಾರ ಇಂದು ಒಂದು ಕಲೆಯ ಸ್ಥಾನವನ್ನು ಪಡೆದುಕೊಂಡಿದೆ. ಮೋಡಿಹಾಕಿ ಮರುಳುಮಾಡುವುದು ಒಂದು ವಿದ್ಯೆ. ವಿಶಿಷ್ಟ ಬಗೆಯ ಒಂದು ಕಲೆ ಕೂಡ, ನೋಡುವವರ ಕಣ್ಣಿಗೆ ಅದೆಲ್ಲವೂ ನಿಜವಾಗಿಯೇ, ಕಣ್ಣೆದುರಿಗೆ ನಡೆಯುತ್ತಿರುವಂತೆಯೇ ತೋರುತ್ತದೆ. ಕತ್ತಿಯಿಂದ ಕಡಿದುಕೊಳ್ಳುವುದು, ಬೆಂಕಿಯ ನಡುವೆ ಸಿಕ್ಕಿ ನರಳಾಡುವುದು, ಹಾವು ಚೇಳುಗಳ ಕಡಿತಕ್ಕೆ ಒಳಗಾಗುವುದು, ಯಾವುದೋ ಅಲೌಕಿಕ ಶಕ್ತಿಯು ಕೈಗೆ ಸಿಕ್ಕಿದಂತೆ ಒದ್ದಾಡುವುದು, ರಕ್ತ ಕಾರುವುದು ಇನ್ನೂ ಮುಂತಾಗಿ—ಇವೆಲ್ಲ ಮೋಡಿಯಲ್ಲಿ ಸಾಮಾನ್ಯ. ಇದರಂತೆಯೇ ಅವುಗಳಿಂದ ಪಾರಾಗಲು ಪ್ರತಿ ಮೋಡಿಯನ್ನು ಹಾಕುವುದೂ, ಆ ಮೂಲಕ ತನ್ನ ಚಮತ್ಕಾರವನ್ನೂ, ಶಕ್ತಿಯನ್ನೂ ತೋರುವುದು ಇದರಲ್ಲಿ ಸಾಮಾನ್ಯ.

ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ನಡೆಯುವ ಈ ಚಮತ್ಕಾರವಿದ್ಯೆ ರೋಮಾಂಚನವನ್ನುಂಟುಮಾಡುವುದಷ್ಟೇ ಅಲ್ಲದೆ, ನಮ್ಮ ಕುತೂಹಲವನ್ನೂ ಕೆರಳಿಸುತ್ತದೆ. ಮಾಟ–ಮಂತ್ರಗಳಿಗೆ ಹೆದರುತ್ತಿದ್ದಂತೆಯೇ ಜನ ಈ ಮೋಡಿಗೆ ಹೆದರುತ್ತಿದ್ದರು. ಮಾಂತ್ರಿಕನಂತೆಯೇ ಈ ಮೋಡಿಕಾರನೂ ಅಲೌಕಿಕ ಶಕ್ತಿಗಳ ಸಿದ್ಧಿಯನ್ನು ಪಡೆದವನೆಂದು ಭಾವಿಸಿದ್ದರು. ಅಂತಹ ಪ್ರದರ್ಶನಗಳನ್ನು ನೋಡುವಾಗ ಜೀವವನ್ನು ಕೈಯಲ್ಲಿ ಹಿಡಿದು ನೋಡುತ್ತಿದ್ದರು. ಅಷ್ಟೊಂದು ಅದ್ಭುತ ಚಮತ್ಕಾರ ಹಾಗೂ ವೈಶಿಷ್ಟ್ಯ ಈ ಮೋಡಿಯದು.

ಮೋಡಿಯಲ್ಲಿ ಪ್ರಮುಖವಾಗಿ ಎರಡು ವಿಧ—'ರಾಜಮೋಡಿ' ಮತ್ತು 'ರಣಮೋಡಿ'. ಇವುಗಳಲ್ಲಿ 'ರಾಜಮೋಡಿ' ಮನರಂಜನೆಗಷ್ಟೇ ಸೀಮಿತವಾದದು. ತನ್ನ ಬಗೆಬಗೆಯ ಚಮತ್ಕಾರಗಳಿಂದ ಜನರನ್ನು ರಂಜಿಸುವುದು ಇದರ ವಿಶೇಷ. ಕೆಲವು ಅಪಾಯದ ಸನ್ನಿವೇಶಗಳಂತೆ ಕಂಡರೂ, ಅಪಾಯ ತಗಲುವುದಿಲ್ಲ. ಆದರೆ, 'ರಣಮೋಡಿ'ಯ ಮಹತ್ವವೇ ಬೇರೆ. ಇದು, ಎದುರಾಳಿಗಳನ್ನು ಗೆಲ್ಲಲು ಬಳಸುವ ವಿದ್ಯೆ. ಎದುರಾಳಿಯ ತಂತ್ರದಿಂದ ಪಾರಾಗಲು ಹಾಗೂ ಎದುರಾಳಿಯನ್ನು ಗೆಲ್ಲಲು ಇದನ್ನು ಬಳಸಲಾಗುತ್ತದೆ. ಇದರಲ್ಲಿ ಪ್ರಾಣಾಪಾಯ ಸಂಭವಿಸಿದರೂ ಸಂಭವಿಸ

ಬಹುದು. ಎದುರಾಳಿ ಹಾಕಿದ ಮೋಡಿಯಿಂದ ಪಾರಾಗಲಾರದೆ ಪ್ರಾಣ ಕಳೆದುಕೊಂಡ ಘಟನೆಗಳ ಕತೆಗಳಿಗೂ ಕಡಿಮೆಯಿಲ್ಲ.

ಮೋಡಿ ವಿದ್ಯೆಯಲ್ಲಿ ಪರಿಣತಿ ಪಡೆದವರಲ್ಲಿ ಗೊಲ್ಲರು ಪ್ರಧಾನವಾಗಿ ಕಂಡು ಬರುತ್ತಾರೆ. ಈ ವಿದ್ಯೆ ಕಂಚಿಗೊಲ್ಲರು ಮತ್ತು ಪೆದ್ದಟ್ಟಿಗೊಲ್ಲರಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಹರಿಜನರಲ್ಲಿಯೂ ಸ್ವಲ್ಪಮಟ್ಟಿಗೆ ಇದು ಕಂಡುಬರುತ್ತದೆ. ಅವರುಗಳ ಪ್ರಕಾರ ಈ ಒಂದು ಅದ್ಭುತ ವಿದ್ಯೆ ವಂಶಪಾರಂಪರ್ಯವಾಗಿ ಬಂದದ್ದಾದರೂ, ವ್ಯಕ್ತಿಯ ಸತತ ಪ್ರಯತ್ನ, ಶ್ರದ್ಧೆ ಹಾಗೂ ಶ್ರಮವೂ ಅಗತ್ಯವಾಗಿ ಬೇಕು ಎಂಬುದು. ಮಾಟ–ಮಂತ್ರಗಳ ಮಂತ್ರವಾದಿಗಳಂತೆಯೇ ಈ ಮೋಡಿಕಾರರೂ ಅಮಾವಾಸ್ಯೆಯ ಮಧ್ಯ ರಾತ್ರಿಯಲ್ಲಿ ಸ್ಮಶಾನದಲ್ಲಿ ಅನೇಕ ವರ್ಷಗಳ ಕಾಲ ಕಠಿಣವಾದ ಆಚರಣೆಗಳನ್ನು ಆಚರಿಸ ಬೇಕಾಗುತ್ತದೆ. ಸೂರ್ಯ-ಚಂದ್ರಗ್ರಹಣಗಳ ದಿನಗಳು ಇವರಿಗೆ ಪ್ರಶಸ್ತವಾದುವು. ಇಂತಹ ದಿನಗಳಲ್ಲಿಯೇ ಮೋಡಿ ವಿದ್ಯೆ ಕೈಗೂಡುವುದು—ಎಂಬುದು ಅವರ ಭಾವನೆ. ದೈವದತ್ತವಾಗಿಬಂದ ವಿದ್ಯೆ ಇದೆಂದು ಭಾವಿಸುವವರೂ ಉಂಟು.

ಮೋಡಿ ಒಂದು ಕಲೆಯೂ ಹೌದು, ಅದ್ಭುತ ಚಮತ್ಕಾರಯುಕ್ತವಾದ ವಿದ್ಯೆಯೂ ಹೌದು. ಹಿಂದಿನಷ್ಟು ಪ್ರಾಮುಖ್ಯತೆ ಇಂದು ಇವರಿಗಿಲ್ಲವಾದರೂ, ಅಲ್ಲಲ್ಲಿ ಅಪರೂಪವಾಗಿ ಕಂಡುಬರುತ್ತಾರೆ. ಅವರ ಹೆಮ್ಮೆಯ ಈ ಒಂದು ಕಲೆ, ಇಂದು ಕೇವಲ ಹೊಟ್ಟೆಪಾಡಿನ ಒಂದು ಸಾಧನವಾಗಿ ಮಾತ್ರ ಉಳಿದಿದೆ. ಒಂದು ಕಾಲಕ್ಕೆ ರಾಜರ ಹಾಗೂ ಸರ್ಕಾರದ ಸಂಬಂಧವನ್ನು ಹೊಂದಿದ್ದ ಈ ಪ್ರದರ್ಶನಕಾರರು, ಇಂದು ಹೇಳಹೆಸರಿಲ್ಲದಂತಾಗುತ್ತಿದ್ದಾರೆ. ಮೋಡಿ ಪ್ರದರ್ಶನವನ್ನು ಏರ್ಪಡಿಸುವ ಪೂರ್ವ ಭಾವಿಯಾಗಿ ಅವರು ಸರ್ಕಾರದ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತಿತ್ತು ಎಂಬುದನ್ನು ಗಮನಿಸಿದಾಗ, ಅದರ ಮಹತ್ವ ಹಾಗೂ ವೈಶಿಷ್ಟ್ಯ ವೇದ್ಯವಾಗುತ್ತದೆ. ಇತರ ವೃತ್ತಿಗಾಯಕರಂತೆ, ಈ ಮೋಡಿಕಾರರೂ ಮೋಡಿ ವಿದ್ಯೆಯನ್ನು ವೃತ್ತಿಯನ್ನಾಗಿಸಿ ಕೊಂಡವರು. ಅದರಲ್ಲಿಯೇ ಬದುಕುತ್ತ ಬಂದವರು.

ಹಾವಾಡಿಗರು, ಇದೇ ಸಾಲಿನಲ್ಲಿ ಬರುವ ಮತ್ತೊಂದು ವರ್ಗ. ಹಾವುಗಳನ್ನು ಹಿಡಿದು ಆಡಿಸಿ ಜೀವನ ಸಾಗಿಸುವ ಕಲೆಯನ್ನು ಬಲ್ಲ ಇವರು ಮೋಡಿವಿದ್ಯೆಯನ್ನೂ ಸ್ವಲ್ಪ ಮಟ್ಟಿಗೆ ಬಲ್ಲವರು. ಇವರು ಕಂಚಿಗೊಲ್ಲರಷ್ಟು ಪರಿಣತರಲ್ಲದಿದ್ದರೂ, ತಮ್ಮದೇ ಆದ ರೀತಿಯಲ್ಲಿ ಜನರನ್ನು ರಂಜಿಸುವ, ಬೆರಗುಗೊಳಿಸುವಷ್ಟು ಪ್ರಮಾಣದ ಮೋಡಿ ತಂತ್ರವನ್ನು ಬಲ್ಲವರು. ಕೆಲವು ವಸ್ತುಗಳನ್ನು ಮಾಯವಾಗಿಸುವುದಾಗಲಿ, ಮಣ್ಣಿನಿಂದಲೋ ಅಥವಾ ಮತ್ತೊಂದರಿಂದಲೋ ಬೇರೊಂದು ಉತ್ತಮ ವಸ್ತುವನ್ನು ತೋರಿಸುವುದಾಗಲಿ, ಇಲ್ಲವೇ ಒಬ್ಬನನ್ನು ಸತ್ತವನಂತೆ ಮಲಗಿಸಿ ಅವನ ಮುಖದ ತುಂಬ ಬಟ್ಟೆಹೊದಿಸಿ, ಗುಂಪಿನ ಜನರನ್ನು ಆಶ್ಚರ್ಯಗೊಳಿಸುವಂತಹ ಪ್ರಶ್ನೆಗಳನ್ನು ಕೇಳುವುದಾಗಲಿ ಇಲ್ಲಿ ಸಾಮಾನ್ಯ. ಹಾವು ಕಚ್ಚಿದ್ದಕ್ಕೆ ತಾಯಿತವನ್ನು ಮಂತ್ರಿಸಿಕೊಡುವ ಮಂತ್ರವಿದ್ಯೆಯನ್ನೂ ಇವರು ಬಲ್ಲರು. ಹಾಗೆಯೇ ದೆವ್ವ ಪಿಶಾಚಿಗಳಿರುವೆಡೆ

ಗಳಲ್ಲಿಯೂ ಧೈರ್ಯವಾಗಿ ಓಡಾಡುವಂತೆ ಧೈರ್ಯ ತುಂಬುವ ಯಂತ್ರತಂತ್ರಗಳನ್ನು ಈ ಹಾವಾಡಿಗರು ಮಾಡಿ, ಆ ಸ್ಥಳದಲ್ಲಿಯೇ ಹಣಕ್ಕೆ ಮಾರಾಟ ಮಾಡುತ್ತಾರೆ. ಇಂದಿಗೂ ಇದು ಸಾಮಾನ್ಯವಾದ ನೋಟ. ನಿಜವಾದ ಮೋಡಿಕಾರರು ಇಂದು ಕಣ್ಮರೆಯಾಗುತ್ತಿದ್ದರೂ, ಇಂತಹ ಹಾವಾಡಿಗರನ್ನು-ಎಲ್ಲ ಸಂತೆಗಳಲ್ಲಿ, ಜಾತ್ರೆಗಳಲ್ಲಿ, ಹಳ್ಳಿಯ ಇತರ ಸ್ಥಳಗಳಲ್ಲಷ್ಟೇ ಅಲ್ಲದೆ; ನಗರಗಳ ಬಸ್ ನಿಲ್ದಾಣ ಅಥವಾ ಜನ ಸೇರುವ ಪ್ರಮುಖ ಸ್ಥಳಗಳಲ್ಲಿ ಕಾಣಬಹುದು. ಇಲ್ಲಿ ಗಾಂಭೀರ್ಯ ಅಥವಾ ಭಯಕ್ಕಿಂತ, ತಮಾಷೆ ಹಾಗೂ ಮನರಂಜನೆಯ ದೃಷ್ಟಿ ಮುಖ್ಯವಾಗಿ ತೋರುತ್ತದೆ.

ಹಾವಾಡಿಸುವುದು ಹಾವಾಡಿಗರ ಮುಖ್ಯ ಕಸುಬಾದರೂ, ಈ ಬಗೆಯ ಮೋಡಿ ವಿದ್ಯೆಯನ್ನು-ಕೇವಲ ಜನರನ್ನು ಆಕರ್ಷಿಸಲು ಇವರು ಕಲಿತಿದ್ದಾರೆ ಅನಿಸುತ್ತದೆ. ಹಾಗಾಗಿ ಇವರಿಗೆ ಅದೊಂದು ತಮಾಷೆ ತೋರುವ ಸಾಧನ ಅಷ್ಟೆ.

ಮಾಟ-ಮಂತ್ರ-ಮೋಡಿ-ಇವುಗಳು ಸಮಾಜದಲ್ಲಿ ಧರ್ಮದ ಸಮ ಸಮಕ್ಕಲ್ಲದಿದ್ದರೂ, ಬೇರೊಂದು ರೀತಿಯಲ್ಲಿ ಅವರನ್ನು ಹದ್ದುಬಸ್ತಿನಲ್ಲಿಡುವ ಕಾರ್ಯವನ್ನು ಸಾಧಿಸಿಕೊಂಡು ಬಂದಿವೆ. ಧರ್ಮ ಸಾತ್ವಿಕ ರೀತಿಯಲ್ಲಿ ಅದನ್ನು ಸಾಧಿಸಿದರೆ, ಇವುಗಳು ಭಯ, ಕುತೂಹಲಗಳ ಸಂಗಮದಲ್ಲಿ ಮಾನವನನ್ನು ನಡೆಸಿಕೊಂಡು ಬಂದಿವೆ. ಆದರೂ, ಧರ್ಮಕ್ಕಿರುವ ವ್ಯಾಪಕತೆ ಇವುಗಳಿಗಿಲ್ಲ ಎಂಬುದೂ ಸ್ಪಷ್ಟ ಸಂಗತಿ. ಮಾಟ-ಮಂತ್ರ-ಮೋಡಿಗಳು ಕಾಲಕಾಲಕ್ಕೆ ಬೇರೆ ಬೇರೆ ಸ್ವರೂಪವನ್ನೂ, ಸ್ಥಾನಮಾನವನ್ನೂ ಪಡೆದುಕೊಂಡು ಬಂದಿರುವುದನ್ನು ಗಮನಿಸಿದಾಗ -ಧರ್ಮದ ನಿಜ್ವಳ ಸ್ವರೂಪವೇನು ? ಎಂಬುದು ಮನದಟ್ಟಾಗುತ್ತದೆ; ಹಾಗೂ ಅದು ಸಮಾಜದ ಮೇಲೆ ಶಾಶ್ವತವಾಗಿ ಬೀರಿರುವ ಪ್ರಭಾವವೆಂತಹುದೆಂಬುದೂ ವ್ಯಕ್ತವಾಗುತ್ತದೆ.

ಶ್ರೀಮತಿ ಎ. ಸಿ. ಲಲಿತ

ಜನಪದ ಕಲೆಗಳು

ಪ್ರಾಣಿ ಸಮೂಹದಿಂದ ಮಾನವನನ್ನು ಪ್ರತ್ಯೇಕಿಸುವ ಏಕೈಕ ಅಂಶವೆಂದರೆ ಪೀಳಿಗೆಯಿಂದ ಪೀಳಿಗೆಗೆ ಪ್ರಸರಿಸುವ ಆತನ ಸಾಂಸ್ಕೃತಿಕ ಬದುಕು. ಪ್ರಪಂಚಾದ್ಯಂತ ಕಂಡು ಬರುವ ಮಾನವಕುಲಕೋಟಿಯಲ್ಲಿ ಹಂಚಿಹೋಗಿರುವ ಸಾರ್ವತ್ರಿಕ ಅಂಶಗಳಲ್ಲಿ ಸಂಸ್ಕೃತಿಯೂ ಒಂದು. ಮಾನವನ ಭಾವನಾತ್ಮಕ ಸಂವೇದನೆ, ಪ್ರೇರಣೆಗಳು ಆತನ ಸಾಂಸ್ಕೃತಿಕ ಪರಿಸರದಲ್ಲಿಯೇ ವೈವಿಧ್ಯತೆಯನ್ನು ಪಡೆಯುತ್ತವೆ ಎಂಬುದರಲ್ಲಿ ಅನುಮಾನವಿಲ್ಲ. ಪ್ರಕೃತಿಯು ಇದಕ್ಕೆ ಪ್ರತಿಕೂಲವಾಗಿರುವುದು ಗಮನಿಸಬೇಕಾದ ಸಂಗತಿ. ಪ್ರಕೃತಿಯೊಡನೆ ಮಾನವನ ಒಪ್ಪಂದ ಒಡಂಬಡಿಕೆಗಳು ಅಸಂಖ್ಯಾತ ಎಂದು ಬಲ್ಲ ಮೂಲಗಳು ತಿಳಿಸುತ್ತವೆ. ಪ್ರಾರಂಭದಲ್ಲಿ ಮಾನವನನ್ನು ಪ್ರಧಾನವಾಗಿ ಕಾಡಿರಬಹುದಾದ ಹುಟ್ಟು, ಸಾವು, ಬೆಳವಣಿಗೆ, ಪ್ರಕೃತಿಯಲ್ಲಿನ ಅತಿವೃಷ್ಟಿ, ಅನಾವೃಷ್ಟಿ, ಇತರ ವಿಕೋಪಗಳು ಆತನಿಗೆ ಆಗಾಗ್ಗೆ ಸಮಸ್ಯೆಯನ್ನು ತಂದಿರಲುಬಹುದು. ಇವುಗಳನ್ನು ಹತ್ತಿಕ್ಕುವ ವೇಳೆಯಲ್ಲಿಯೇ ಯಾವುದಾದರೂ ಮಾಧ್ಯಮದ ಬಳಕೆ ಮಾಡಿರಲೂಬಹುದು. ಈ ಸಮಸ್ಯೆಗಳಿಗೆ ಪರಿಹಾರ ಹುಡುಕುವಲ್ಲಿ ಪ್ರಕೃತಿಯೊಂದಿಗಿನ ಆತನ ಒಪ್ಪಂದ ಒಡಂಬಡಿಕೆಗಳು ಒಂದು ಅನಿವಾರ್ಯ ಸಂಗತಿಯಾಗಿ ಕಾಲಕ್ರಮೇಣ ಇವುಗಳು ವಿವಿಧ ರೂಪಗಳಾಗಿ ಆತನ ಬದುಕಿನಲ್ಲಿ ನೆಮ್ಮದಿ, ಸಂತೋಷ, ತೃಪ್ತಿ, ಮನರಂಜನೆಯನ್ನು ಒದಗಿಸುವ ಮಾಧ್ಯಮಗಳಾಗಿ ರೂಪುಗೊಂಡಿರಲೂಬಹುದು. ಅಂದ ಮೇಲೆ 'ಕಲೆ' ಎಂದರೇನು ಎಂಬ ಪ್ರಶ್ನೆ ಯಾವುದೇ ವಿದ್ವಾಂಸನನ್ನು ಕಾಡಿರಲಿಕ್ಕೂ ಸಾಧ್ಯ. ಇದಕ್ಕೆ ಕಾರಣ ಕಲೆಯೂ ಕೂಡ ಸಂಸ್ಕೃತಿಯಂತೆಯೇ ಸಾರ್ವತ್ರಿಕವಾಗಿರುವ ಸಂಗತಿ. ಅಷ್ಟೇ ಅಲ್ಲದೆ ಮಾನವ ವರ್ಗಕ್ಕೆ ಮಾತ್ರ ಸೀಮಿತವಾಗಿರುವ ಈ ಕಲೆಯೂ ಆತನ ಕೌಶಲ್ಯವನ್ನಷ್ಟೆ ಸ್ಪಷ್ಟವಾಗಿ ಹೇಳುತ್ತದೆ. ಪ್ರಕೃತಿಯನ್ನು ಹೊರತು ಪಡಿಸಿ (ಕಲೆ ಎಂಬುದು) ಮಾನವನ ಸಾಮರ್ಥ್ಯ ಮತ್ತು ಕುಶಲತೆ ಯಾವುದೇ ರೂಪದಲ್ಲಿ ಹೊರಹೊಮ್ಮಬಹುದು. ಉದಾ: ಕುಣಿತ, ಸಂಗೀತ, ನಾಟಕ, ಕಾವ್ಯ ಗೀತೆ ರಚನೆ ಇತ್ಯಾದಿ. ಇದರ ಹಿಂದೆ 'ಮಾನವ ಮನಸ್ಸು ಮೂಲಭೂತವಾಗಿ ಕೆಲಸ ಮಾಡುತ್ತದೆ. ಅದರಲ್ಲಿನ ಏಕಾಗ್ರತೆ, ಕೌಶಲ್ಯ, ಪರಿಶ್ರಮ, ಶ್ರದ್ಧೆ, ಎಚ್ಚರಿಕೆ ಅಂತರಾಳದ ಸ್ಪಂದನ

ಇತ್ಯಾದಿಗಳು ಯಾವುದೇ ಕಲೆಯ ಅಸ್ತಿತ್ವಕ್ಕೆ ಕಾರಣವಾಗಬಹುದು. ಈ ಹಿನ್ನೆಲೆಯಲ್ಲಿ ಕಲೆ, ಕಾಲ, ದೇಶ, ಜನರನ್ನು ದಾಟಿ ಇಂದಿಗೂ ಜನಪ್ರಿಯತೆ ಮತ್ತು ಚಲನಾತ್ಮಕ ಮೌಲ್ಯವನ್ನು ಪಡೆದುಕೊಂಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಎಂದ ಹಾಗೆ ನೋಡುವವರ ಕಣ್ಣಲ್ಲಿ ಎಲ್ಲಾ ರೀತಿಯ ಸೌಂದರ್ಯೋಪಾಸನೆಯು ಅಡಗಿರುತ್ತದೆ ಎಂಬುದಕ್ಕೆ ಸಂಶಯವಿಲ್ಲ. ಮಾನವನ ಅನುಭವದಲ್ಲಿ ಕಲೆ ಆರಾಧನೆ ವಸ್ತುವಾಗಿ, ಸಿಹಿಯಾಗಿ, ಸ್ವಾದುವಾಗಿ ಸಾಗಿಬಂದಿರುವುದನ್ನು ಕಾಣಬಹುದು. ಹರಿಸ್ಕೋವಿಟ್ಸರ "ಮಾನವ ನಿರ್ಮಿತ ಪರಿಸರದ ಭಾಗವೇ ಸಂಸ್ಕೃತಿ" ಎನ್ನುವಲ್ಲಿ ಕಲೆಯು ಸಂಸ್ಕೃತಿಯ ಒಂದು ಭಾಗವೇ ಎಂದಾಗುತ್ತದೆ. ಇ. ಬಿ. ಟೈಲರನ ಅಭಿಪ್ರಾಯದಂತೆ ಸಮಾಜದ ಸದಸ್ಯನಾಗಿ ತನ್ನ ಸಾಮರ್ಥ್ಯ ಹಾಗೂ ಕೌಶಲ್ಯದಿಂದ ಮಾನವ ಗಳಿಸಿಕೊಳ್ಳಬಹುದಾದ ತಿಳಿವಳಿಕೆ, ನಂಬಿಕೆ, ಸಂಪ್ರದಾಯ, ಆಚರಣೆ, ನೀತಿ, ಧರ್ಮ ಇತ್ಯಾದಿಗಳಲ್ಲಿ 'ಕಲೆ' ಎಂಬುದು ಒಂದು ವಿಶಾಲ ಅರ್ಥವನ್ನು ಪಡೆಯುವುದರ ಜೊತೆಗೆ 'ಕಲೆ' ವ್ಯಕ್ತಿ ಹಾಗೂ ಸಾಂಘಿಕ ಚಟುವಟಿಕೆ ಎಂದು ವಿದಿತವಾಗುತ್ತದೆ. ಕಾರಣವಿಷ್ಟೆ, ಯಾವುದೇ 'ಕಲೆ' ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸಂದರ್ಭದಲ್ಲಿಯೇ ಅರಳುವುದನ್ನು ಕಾಣಬಹುದು. ಟಾಲ್ಸ್‌ಟಾಯ್ ಅವರ "ಮಾನವ ಕಲ್ಯಾಣಕ್ಕೆ ಹೇತುವಾದುದೇ ಕಲೆ" ಎಂಬ ವಾದ ಇಲ್ಲಿ ಪ್ರಸ್ತುತ ಎನಿಸುತ್ತದೆ. ಸ್ಥಿತಿ, ಲಯ, ತಾಳಗಳು ಕಲೆಯ ಪ್ರಧಾನ ಲಕ್ಷಣಗಳು. ಮಾನವನ ಬಾಹ್ಯ ಜಗತ್ತಿನಲ್ಲಿ ತಾನು ಅನುಭವ ಪಡೆದ ಹಾಗೆ ಸೃಷ್ಟಿಸಿಕೊಂಡಿರಬಹುದಾದ ರೇಖೆಗಳು, ಬಣ್ಣಗಳು, ಶಬ್ದಗಳು, ಸಂವೇದನೆಗಳು ಚಲನೆಗಳು ಇತ್ಯಾದಿ ವಿಚಾರಗಳು ಕಲೆ ಎನಿಸಿಕೊಳ್ಳುತ್ತದೆ. ಕಲೆಯನ್ನು ಮನುಷ್ಯನ ಒಂದು ಹುಟ್ಟುಗುಣಕ್ಕೆ ಆರೋಪಿಸುವುದು ಸರ್ವಸಾಮಾನ್ಯ. ಇದು ಅವನಲ್ಲಿನ ಸೃಜನಶೀಲತೆಯ ಬಗ್ಗೆ ತಿಳಿಸುತ್ತದೆ. ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಸೃಜನಶೀಲತೆ ಪೂರ್ವಯೋಜಿತವೆನ್ನುವಂತೆ ಆಯಾ ಸಂಸ್ಕೃತಿಗನುಗುಣವಾಗಿ ರೂಪಾಕಾರಗಳನ್ನು ಪಡೆಯುವ ಕ್ರಿಯೆಯು ಈ ಮೊದಲೇ ನಿರ್ಧರಿಸಲ್ಪಟ್ಟಿರುತ್ತದೆ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಯ ಯಾವುದೇ ಅನುಭವವೂ ಪ್ರಪ್ರಥಮವಾಗಿ ಆತನ ಸಂಸ್ಕೃತಿಯ ಸಂದರ್ಭದಲ್ಲೇ ಹುಟ್ಟಿ ಬೆಳೆಯಲು ಬೇಕು. ಇಲ್ಲವಾದರೆ ಯಾವುದೇ ವಿಷಯದ ಬಗೆಗಿನ ಆತನ ತಿಳಿವಳಿಕೆ ಈ ಅನುಭವದಿಂದ ವಂಚಿತವಾಗಿ ಶೂನ್ಯವೆನಿಸುತ್ತದೆ. ಆದುದರಿಂದ ವ್ಯಕ್ತಿಯ ಸಂವೇದನೆಯನ್ನು ಕಲೆ ಎಂದು ಗುರುತಿಸುವಲ್ಲಿ Kinaesthetic ಮತ್ತು rhythmic ಅನಂತರ ಅವನ್ನು decorative ಮಾಡುವುದೇ ಪ್ರಧಾನ ಲಕ್ಷಣಗಳಾಗುತ್ತವೆ. ಇದರ ಜೊತೆಗೆ ಈ ಮೂರು ಲಕ್ಷಣಗಳನ್ನೊಳಗೊಂಡ ಅಭಿವ್ಯಕ್ತಿಯನ್ನು ಪ್ರಾತಿನಿಧಿಕ ಕಲೆಯನ್ನಾಗಿ ಮಾಡುವುದು ಅನಂತರದ ಬೆಳವಣಿಗೆಯು ಸ್ಪಷ್ಟವಾಗಿಯೇ ಹೇಳುತ್ತದೆ.

ಒಟ್ಟಾರೆ ಕಲೆ ಎಂಬುದು ಇಂಥದ್ದೆ ಒಂದು ಅನುಭವ ಸಂವೇದನೆ, ಪ್ರೇರಣೆಯಿಂದ ಎಂದು ಹೇಳಲಿಕ್ಕೆ ಕಷ್ಟ ಸಾಧ್ಯ. ಕಾರಣ ಕಲೆಯ ಹುಟ್ಟು, ಬೆಳವಣಿಗೆ ಆಯಾ

ಸಂಸ್ಕೃತಿಯು ನೆಲೆಗಟ್ಟಿನಲ್ಲಿಯೇ ಮೂಡಿಬರುವುದನ್ನು ಕಾಣಬಹುದು. ಸೃಷ್ಟಿಸಿದ ಎಲ್ಲಾ ಬಗೆಯ ಕಲಾನೈಪುಣ್ಯ ಎಲ್ಲರಿಂದಲೂ ಸ್ವೀಕೃತವಾಗಬೇಕು. ಎಲ್ಲರ ಒಪ್ಪಿಗೆಯ ಮುದ್ರೆಯನ್ನು ಪಡೆಯಬೇಕು ಅನಂತರವೇ ಕಲೆ 'ಕಲಾತ್ಮಕವಾಗಿದೆ' ಎಂಬ ಸ್ಥಾನವನ್ನು ಪಡೆಯುವುದು. ಇಲ್ಲವಾದರೆ ಟೀಕೆ, ಅಪಹಾಸ್ಯಗಳಿಗೆ ಗುರಿಯಾಗುವುದು ನಿಶ್ಚಿತ. ಈ ಹಿನ್ನೆಲೆಯಲ್ಲಿ ಯಾವುದೇ ಕಲೆಯನ್ನು ಅದರ ಸಂಸ್ಕೃತಿಯಿಂದ ಬೇರ್ಪಡಿಸುವುದಕ್ಕೆ ಆಗುವುದಿಲ್ಲ.

ಮೇಲೆ ಹೇಳಿದ ಸಂಗತಿಗಳು ಜನಪದ ಕಲೆ ಎಂಬ ವಿಷಯಕ್ಕೂ ಅನ್ವಯಿಸುತ್ತವೆ. ಮಾನವ ಸಂಸ್ಕೃತಿಯನ್ನು ಆದಿವಾಸಿ, ಜನಪದ, ಶಿಷ್ಟವೆಂದು ಮೂರು ಹಂತಗಳಲ್ಲಿ ವಿವೇಚಿಸುವಾಗ ಅನಕ್ಷರಸ್ಥ ಮತ್ತು ಅಕ್ಷರಸ್ಥ ಸಮಾಜದ ಸೇತುವೆ ಎನಿಸುವ "ಜನಪದ ಕಲೆ"ಯನ್ನು ಜನಸಾಮಾನ್ಯರ ಕಲೆ ಅಥವಾ ಅಭಿವ್ಯಕ್ತಿ ಎಂದೇ ಹೇಳಬೇಕಾಗುತ್ತದೆ. ಇದರ ಹುಟ್ಟು ಮತ್ತು ಬೆಳವಣಿಗೆಯು ಆಯಾ ಜನಪದ ಸಂಸ್ಕೃತಿ ಮತ್ತು ಸಮಾಜದಲ್ಲಿ ನಡೆಯುವ ವಿಚಾರ, ಪ್ರಕೃತಿಯೇ ಜನಪದ ಹುಟ್ಟಿಗೆ ಪ್ರಧಾನ ಅಂಶವಾಗುತ್ತದೆ. ಈ ಮೊದಲೇ ತಿಳಿಸಿದಂತೆ ಆದಿಮಾನವನ ಸ್ಥಿತಿಯಲ್ಲಿನ ಎಷ್ಟೋ ಕುತೂಹಲಕರ ಸಂಗತಿಗಳು, ಸಂದರ್ಭಗಳು, ಯಾವುದೇ ತೆರನಾದ ಕಲಾ ಪ್ರಕಾರವನ್ನು ಹುಟ್ಟು ಹಾಕಿರಲಿಕ್ಕೂ ಸಾಧ್ಯ. ಭಾರತೀಯ ಸಂದರ್ಭದಲ್ಲಿ ಕಲೆಯನ್ನು ವಿವೇಚಿಸುವಾಗ Art is Divine ಎನ್ನುವ ಮಾತು ಸಮಂಜಸವೆನಿಸುತ್ತದೆ. ಕಾರಣ ಕಲೆ ಮತ್ತು 'ಧರ್ಮ' ಜೊತೆಜೊತೆಯಲ್ಲಿಯೇ ಸಾಗಿಬಂದಿರುವುದು ನಮ್ಮ ಸಂಸ್ಕೃತಿಯಲ್ಲಿನ ಒಂದು ವಿಶಿಷ್ಟ ಲಕ್ಷಣವೆಂದೇ ಹೇಳಬೇಕು. ಭಾರತದ ಸಂದರ್ಭದಲ್ಲಿ ಕಂಡುಬರುವ ಎಲ್ಲ ಕಲೆಗಳು ಎಲ್ಲ ಮಾನವ ಆತ್ಮಗಳನ್ನು ಅಂತಿಮವಾಗಿ ದೈವತ್ವದತ್ತ ಸಮೀಕರಿಸಿ ಅದರಲ್ಲಿ ಲೀನವಾಗಿಸುವ ಪ್ರಕ್ರಿಯೆಯ ಗುರಿಯನ್ನು ಒಳಗೊಂಡಿದೆ. ಬಹುಶಃ ಈ ಮಾತು ನಮ್ಮ ಜನಪದ ಕಲೆಗೂ ಅನ್ವಯಿಸುತ್ತದೆ ಎಂದೇ ನಾನಾದರು ಭಾವಿಸುತ್ತೇನೆ. ಹಾಗಾಗಿ ನಮ್ಮ ಜನಪದ ಕಲೆಗಳಲ್ಲಿ ಅಭಿವ್ಯಕ್ತಿಗೊಳ್ಳುವ ನಾಯಕ—ನಾಯಕಿ ಕಲ್ಪನೆಯು ಅಂತಿಮವಾಗಿ ವಿಶ್ವದಲ್ಲಿ ಅನಂತವಾಗುವ ಪ್ರಕ್ರಿಯೆಯನ್ನು ಪ್ರತಿನಿಧಿಸುತ್ತದೆ.

ಹೀಗೆ ಜನಪದರ ಬದುಕಿನಲ್ಲಿ ಭಯ, ಭಕ್ತಿ, ಪ್ರೀತಿ, ಆದರಗಳು ಸಂವೇದನೆಗೊಂಡು ಮುಂದೆ ಆರಾಧನಾ ಮನೋಧರ್ಮ ತಾಳಿ ಅಲೌಕಿಕ ಆನಂದ, ತೃಪ್ತಿ, ಸಂತೋಷಗಳನ್ನು ಹೊಂದಲು ಅಲೌಕಿಕ ಶಕ್ತಿಯೊಂದಿಗೆ ಕಲೆಯ ಮೂಲಕ ಒಪ್ಪಂದ ಒಡಂಬಡಿಕೆಗಳನ್ನು ಮಾಡಿಕೊಂಡಿರುವಂತೆ ಭಾಸವಾಗುತ್ತದೆ.

ಜನಪದ ಕಲೆಯನ್ನು ವರ್ಗೀಕರಿಸುವಲ್ಲಿ ಹಲವಾರು ಅಂಶಗಳು ತಮ್ಮ ಪ್ರಭಾವವನ್ನು ಬೀರುತ್ತವೆ. ಈವರೆಗೂ ಯಾವುದೇ ಸ್ಥೂಲವಾದ ವರ್ಗೀಕರಣವು ಜನಪದ ಕಲೆಯನ್ನು ಕುರಿತಂತೆ ಇಲ್ಲ. ಪ್ರಧಾನವಾಗಿ ಜನಪದ ಕಲೆಯನ್ನು ದೃಶ್ಯ ಮತ್ತು ಶ್ರವ್ಯ ಎಂದು ವಿಭಜನೆ ಮಾಡಿಕೊಂಡಲ್ಲಿ ಪುನಃ ಇವುಗಳು ಪರಸ್ಪರ ಘರ್ಷಣೆಗೊಳ

ಪಡುತ್ತವೆ. ಆಯಾ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಜನಪದ ಕಲೆಗಳನ್ನು ವರ್ಗೀಕರಿಸು ವುದು ಮತ್ತೊಂದು ಬಗೆಯದ್ದಾಗಂತ್ತದೆ. ವಾದ್ಯ, ವೇಷ ಭೂಷಣ, ಸಂಗೀತ ಇತ್ಯಾದಿ ಅಂಶಗಳು ಕೆಲವೊಮ್ಮೆ ಪರಸ್ಪರ ಒಂದೇ ಕಲಾ ಪ್ರಕಾರಗಳಲ್ಲಿ ಮೇಳೈಸಬಹುದು.

ಜನಪದ ಕಲೆಗಳ ಇನ್ನೊಂದು ಬಗೆಯ ವರ್ಗೀಕರಣವನ್ನು ಭೌಗೋಳಿಕ ಲಕ್ಷಣ ಗಳಿಗನುಗುಣವಾಗಿ ಮಾಡಿಕೊಳ್ಳುವ ಸಾಧ್ಯತೆ ಇದೆ. ಎಂದರೆ ಪರ್ವತ ಶ್ರೇಣಿ ಮತ್ತು ಬೆಟ್ಟಗಳ ಸಾಲುಗಳು, ಕರಾವಳಿ ಪ್ರದೇಶಗಳು, ಮತ್ತು ಬಯಲು ಸೀಮೆ—ಇವುಗಳು ಸಹಜವಾಗಿಯೇ ವಿವಿಧ ನಮೂನೆಯ ಜನಪದ ಕಲೆಗಳನ್ನು ಕೊಡುಗೆಯಾಗಿ ನೀಡಿರು ವುದಕ್ಕೆ ಉಲ್ಲೇಖಗಳಿಗೇನು ಕೊರತೆಯಿಲ್ಲ. ಪ್ರಪಂಚದಾದ್ಯಂತ ಕಂಡು ಬರುವ ಈ ಬಗೆಯ ಭೌಗೋಳಿಕ ಪರಿಸರ ಸಹಜವಾಗಿಯೇ ಒಂದೇ ತೆರನಾದ ಕಲಾ ಪ್ರಕಾರಗಳಿಗೆ ಪ್ರೇರಣೆ ನೀಡಿರುವುದಕ್ಕೆ ಉಲ್ಲೇಖಗಳಿವೆ.

ಒಟ್ಟಾರೆ ಜನಪದ ಕಲೆಗಳು ಯಾವುದೇ ಭೌಗೋಳಿಕ ಮಿತಿಯಲ್ಲಿ ಜನ್ಮತಾಳಿದ್ದರೂ ಅವುಗಳನ್ನು ಸ್ಥೂಲವಾಗಿ

೧. ಕುಣಿತಗಳು ಅಥವಾ ನೃತ್ಯಗಳು
೨. ನೃತ್ಯ ನಾಟಕಗಳು
೩. ರಂಗಕಲೆಗಳು
೪. ಮನರಂಜಕರು

ಎಂಬುದಾಗಿ ವರ್ಗೀಕರಿಸಿಕೊಳ್ಳಬಹುದು. ಮೇಲಿನ ಈ ವರ್ಗೀಕರಣದಲ್ಲಿ ಸಂಗೀತವು ಪ್ರಧಾನವಾಗಿಯೋ ಇಲ್ಲವೆ ಕುಣಿತವು ಪ್ರಧಾನವಾಗಿಯೋ ಕುಣಿತವು ಪ್ರಧಾನವಾಗಿಯೋ ಇಲ್ಲವೇ ಸಂಭಾಷಣೆ ಜೊತೆಗಿನ ಅಭಿನಯವನ್ನೋ ಕಾಣಲಿಕ್ಕೆ ಸಾಧ್ಯ. ಇನ್ನು ಕೆಲವೊಮ್ಮೆ ವಾದ್ಯಗಳ ಮತ್ತು ಪ್ರಾಣಿಗಳ ಬಳಕೆಯೂ ಇರುತ್ತದೆ. ಒಟ್ಟಾರೆ ಜನಪದ ಕಲೆಯು ದೃಶ್ಯ ಮತ್ತು ಶ್ರವ್ಯ ಎರಡನ್ನು ಕೂಡಿದಂತೆ ಒಂದು ಉತ್ತಮ ಪ್ರದರ್ಶನ ಕಲೆ ಎನಿಸುತ್ತದೆ. ಈ ಎಲ್ಲ ಕಲೆಗಳಲ್ಲಿ ಧಾರ್ಮಿಕಚೌಕಟ್ಟನ್ನು ಗುರುತಿಸಬಹುದಾದರೂ ಕೆಲವು ಮಾತ್ರ ಕಲಾವಿದನ ಜೀವನೋಪಾಯಕ್ಕಾಗಿಯೇ ಸೀಮಿತವಾಗಿದ್ದರೂ, ಮನರಂಜನೆಯೂ ಪ್ರಧಾನ ಅಂಶವಾಗಿ ಸಾಗಿಬರುತ್ತದೆ. ಉದಾ : ದೊಂಬರಾಟ, ಕೋತಿಯಾಟ, ಕರಡಿಯಾಟ, ಹಾವಾಡಿಗ ಇತ್ಯಾದಿ. ಹೀಗೆ ಜನಪದ ಕಲೆ ಗಳು ಹಾಡು, ಕುಣಿತ, ನಾಟಕ ಭಾಗಗಳನ್ನು ಹೊಂದಿರುವುದು ಅದರ ವಿಶಿಷ್ಟವಾದ ಲಕ್ಷಣಗಳಲ್ಲಿ ಒಂದು. ಇನ್ನೂ ಕೆಲವು ಕಲಾವಿದರ ಕೈಚಳಕವನ್ನು, ಕೌಶಲ್ಯವನ್ನು ಹೊಂದಿರುವಂತಹುದು. ಉದಾ : ರಂಗವಲ್ಲಿ, ಹಚ್ಚೆ, ಗೃಹೋಪಕರಣಗಳು, ವ್ಯವಸಾಯೋಪಕರಣಗಳು ಇತ್ಯಾದಿ. ಇನ್ನು ಪ್ರದರ್ಶನ ಕಲೆಗಳಲ್ಲಿ ಪ್ರಧಾನವಾಗಿ ಕಂಡುಬರುವ ಹಾಡು, ಕುಣಿತ, ನಾಟಕಗಳ ಲಕ್ಷಣಗಳನ್ನು ಗಮನಿಸಿದಾಗ ಈ ಕೆಳಗಿನ ಅಂಶಗಳು ಕಂಡುಬರುತ್ತವೆ.

ಹಾಡುಗಳು : ಹಾಡು ಎಂದಾಗ ಈ ಮೊದಲೇ ಹೇಳಿದಂತೆ ತಾಳ, ಲಯ ಬದ್ಧತೆಗಳನ್ನು ಹೊಂದಿರುತ್ತದೆ. ಇವುಗಳನ್ನು ಜನಪದ ಗೀತೆ ಎಂದು ಕರೆಯಲಾಗುತ್ತದೆ. ಇವುಗಳು ತನ್ನ ಸರಳತೆಯಿಂದ :

೧. ಜನಸಾಮಾನ್ಯರನ್ನು ನೇರವಾಗಿ ತಲುಪುವಂತಹವು.
೨. ಯಾವುದೇ ಒತ್ತಡ ಆತಂಕಗಳಿಲ್ಲದೆ ಪ್ರತಿಯೊಬ್ಬ ಜನಪದರ ಪಾತ್ರವನ್ನು ಒಳಪಡುವಂತಹುದು.
೩. ಪರಸ್ಪರ ಸೌಹಾರ್ದತೆ, ಪ್ರೀತಿ ವಿಶ್ವಾಸಗಳನ್ನು ತಂದುಕೊಡುವಂತಹುದು.
೪, ಶಿಕ್ಷಣ ಮಾಧ್ಯಮವಾಗಿ ವರ್ತಿಸುವುದು.
೫. ಉತ್ತಮ ಶಾರೀರ ಹೊಂದಿರುವ ಯಾವುದೇ ವ್ಯಕ್ತಿ ಇದರಲ್ಲಿ ತೊಡಗಬಹುದು.

ಈ ರೀತಿಯ ಲಕ್ಷಣಗಳನ್ನೊಳಗೊಂಡ ಹಾಡು ತನ್ನದೇ ಆದ ಸಂಗೀತವನ್ನು ಪಡೆದಿದೆ ಎಂದರೆ ತಪ್ಪಾಗಲಾರದು. ಜನಪದ ಗೀತೆ ಅಥವಾ ಹಾಡುಗಳ ಸಂಗೀತವನ್ನು ಪ್ರಕಾರಗಳ ನೆಲೆಯಲ್ಲಿಯೇ ಗುರುತಿಸಬಹುದು. ಇದನ್ನೇ ಜನಪದ ಮಟ್ಟು ಅಥವಾ ಶ್ರುತಿ ಎಂದು ಕರೆಯುತ್ತಾರೆ. ಉದಾ : ಜೋಗುಳ ಹಾಡುಗಳು ಇವುಗಳ ಸಂಗೀತದ ಮಾಧುರ್ಯವೇ ಬೇರೆ. ಶ್ರಮಜೀವಿಗಳ ಸಂದರ್ಭದ ಹಾಡುಗಳು ಸಂಗೀತದ ಮಟ್ಟುಗಳು, ವೀರ ಕಾವ್ಯಗಳನ್ನು ಹಾಡುವಾಗಿನ ಮಟ್ಟು, ಯಕ್ಷಗಾನ ಸಂದರ್ಭದ ಹಾಡುಗಳು ದೇವರ ಪದ ಅಥವಾ ಕಾವ್ಯಗಳಲ್ಲಿನ ಮಟ್ಟು ಬೀಸುವಾಗ ಒಕ್ಕುವಾಗ, ಕೋಲಾಟ ಇತ್ಯಾದಿ ಸಂದರ್ಭಗಳಲ್ಲಿನ ಹಾಡುಗಳ ಸಂಗೀತಗಳಲ್ಲಿ ಸಹಜವಾಗಿಯೇ ವೈವಿಧ್ಯವನ್ನು ಕಾಣಬಹುದು. ಜನಪದ ಕಲೆಗಳ ಸಂಗೀತವನ್ನು ಏಕಸೂತ್ರದ ಅಡಿಯಲ್ಲಿ ಯಾವ ಕಾರಣಕ್ಕೂ ತರಲಾಗುವುದಿಲ್ಲ. ಕಾರಣ ಅದು ಒಂದು ಶ್ರುತಿಯನ್ನು ಹೊಂದಿರಬಹುದು; 'ಮಟ್ಟು' ವ್ಯತ್ಯಾಸವಾಗಬಹುದು. ಇವೇ ಕೆಲವು ಲಕ್ಷಣಗಳ ಆಧಾರದ ಮೇಲೆ ಬದಲಾಗುತ್ತಿರುವ ಇವತ್ತಿನ ಸಮಾಜದಲ್ಲಿ ಜನಪವ ಸಂಗೀತದ ಮಹತ್ವವೇನು ಎಂಬುದನ್ನು ಅರಿಯಬಹುದು. ಜನಪದ ಸಂಗೀತದ ಪ್ರಭಾವದಿಂದಲೇ ಇವತ್ತಿನ ಸಮೂಹ ಮಾಧ್ಯಮಗಳು ತಮ್ಮ ಧ್ಯೇಯೋದ್ದೇಶವನ್ನು ಗುರಿಯನ್ನು ಮುಟ್ಟುತ್ತಿರುವುದು ಎಂದರೆ ತಪ್ಪಾಗಲಾರದು. ಹಾಡುಗಳಿಂದ ಕೂಡಿದ ಸಂಗೀತವಲ್ಲದೆ ವಾದ್ಯಸಂಗೀತವೂ ವೈವಿಧ್ಯಮಯವಾಗಿದೆ. ತಂತ್ರೀವಾದ್ಯ, ಚರ್ಮವಾದ್ಯ, ಲೋಹವಾದ್ಯ, ಊದುವ ವಾದ್ಯಗಳು ಮುಂತಾದವುಗಳಿಂದ ಹೊರಡುವ ನಾದ ಪ್ರತ್ಯೇಕ ಅಧ್ಯಯನಕ್ಕೆ ಯೋಗ್ಯವಾಗಿದೆ. ಇನ್ನು ಜನಪದ ಕುಣಿತವನ್ನು ಕುರಿತು ಹೇಳುವಾಗ:

೧. ಜನಪದ ಸಂಗೀತದಂತೆ ಇದು ಕೂಡ ವಿವಿಧ ಸಂದರ್ಭಗಳನ್ನು ಒಳಗೊಳ್ಳುತ್ತದೆ.
೨. ಕುಣಿತ ಸರಳವಾಗಿಯೂ ಆಕರ್ಷಕವಾಗಿಯೂ ಇರುತ್ತದೆ.

೩. ದೇವರ ಹೆಸರಿನಲ್ಲಿ ನಡೆಯುವ ಕುಣಿತಗಳೇ ವಿಶಿಷ್ಟ ಮಾದರಿಯದ್ದಾಗಿರುತ್ತವೆ.

೪. ಯಕ್ಷಗಾನ ಸಂದರ್ಭದ ಕುಣಿತಗಳು ಸಾಮಾನ್ಯ ಕುಣಿತಕ್ಕಿಂತ ಭಿನ್ನವಾಗಿರುತ್ತವೆ. ತಾಳಲಯ ಬದ್ಧತೆ ಪ್ರತ್ಯೇಕವಾಗಿರುತ್ತದೆ.

೫. ಪ್ರತಿಯೊಂದು ಜನಪದ ಕುಣಿತದಲ್ಲಿ ಪ್ರಾದೇಶಿಕತೆಯ ಸೊಗಡು ಪ್ರತಿಬಿಂಬವಾಗಿರುತ್ತದೆ.

೬. ದೇಹ ಮನಸ್ಸುಗಳೆರಡಕ್ಕೂ ಒಳ್ಳೆಯ ವ್ಯಾಯಾಮವನ್ನು ಒದಗಿಸುವ ಉತ್ತಮ ಸಾಧನ.

೭. ದೈನಂದಿನ ಬದುಕಿನ ಬವಣೆ ಜಂಜಾಟದಿಂದ ದೂರ ಉಳಿಯಬಹುದಾದ ಜನಪದದ ಏಕೈಕ ಉತ್ತಮ ಮಾಧ್ಯಮ.

ಜನಪದ ಕಲೆಗಳಲ್ಲಿ ಬಹು ಜನಪ್ರಿಯವಾಗಿರುವ ಪ್ರಕಾರವೆಂದರೆ ರಂಗಕಲೆಗಳು. ಜನಪದ ರಂಗಕಲೆಗಳು ಸಮಷ್ಟಿಯ ಸೃಷ್ಟಿಯಾಗಿ ಜನರ ಎಷ್ಟೋ ವಿಚಾರಗಳಲ್ಲಿ ತಮ್ಮ ಪ್ರಭಾವವನ್ನು ಬೀರುತ್ತವೆ ಎಂದರೆ ತಪ್ಪಲ್ಲ. ರಸಾಸ್ವಾದನೆಯನ್ನು ನೀಡುವ ರಂಗಕಲೆ ಕೆಲವೊಮ್ಮೆ ಸಂಜೀವಿನಿಯಾಗುತ್ತದೆ. ಧೈರ್ಯ, ಶೌರ್ಯ, ಸಾಹಸ ಇತ್ಯಾದಿಗಳನ್ನು ವ್ಯಕ್ತಿಯಲ್ಲಿ ತುಂಬಲು ಇದು ಒಂದು ಒಳ್ಳೆಯ ಮಾಧ್ಯಮ. ದಡ್ಡನಿಗೆ ಬುದ್ಧಿ, ಹೇಡಿಗೆ ಧೈರ್ಯ, ಮಮತೆ, ವಾತ್ಸಲ್ಯ ಇತ್ಯಾದಿಗಳನ್ನು ನೀಡುವ ಖನಿ.

ಈ ಹಿನ್ನೆಲೆಯಲ್ಲಿ ಜನಪದಕಲೆಗಳನ್ನು ಕುರಿತು ವಿವೇಚಿಸುವಾಗ ಜನಪದ ಕಲೆಗಳು ಸಾರ್ವತ್ರಿಕವಾಗಿ ಜನರಿಗಾಗಿ ಜನರಿಂದ ಜನರಿಗೋಸ್ಕರ ಎಂಬುದು ತಿಳಿಯುತ್ತದೆ. ಕಾಲ, ದೇಶ, ವ್ಯಕ್ತಿಯನ್ನು ಮೀರಿ ಬೆಳೆಯುವ ಇವು ಅತೀತವಾದ ಗುಣಗಳನು ಕಾಲಕ್ರಮೇಣ ಪಡೆದುಕೊಳ್ಳುತ್ತವೆ. ಯಾವ ಒಬ್ಬ ವ್ಯಕ್ತಿಯು ಇಲ್ಲಿ ಶಾಶ್ವತವಾಗಿ ನಿಲ್ಲಲಾರ ಆದರೆ ಆತನ ಸೃಜನಶೀಲತೆ (ಎಂದರೆ ತಂತ್ರಗಳು) ಸಾಕಾರವಾಗಿ ಕಲೆಯೊಂದೇ ಪ್ರಧಾನವಾಗುತ್ತದೆ. ಜೊತೆಗೆ ಯುಗಧರ್ಮ, ಲೋಕೋಭಿನ್ನ ರುಚಿ ಎಂಬ ತತ್ವ, ಮನೋಧರ್ಮ ವಾಸ್ತವತೆ ಇತ್ಯಾದಿ ಕಲೆಯ ಲಕ್ಷಣಗಳು ಎಂತಲೂ ಸ್ವೀಕರಿಸಬಹುದು.

ಕೊನೆಯದಾಗಿ, ಜನಪದ ಕಲೆಯು ಮಾನವನ ಬದುಕಿಗೆ ಅತಿ ಸಮೀಪವಾಗಿರುವ ವಿಚಾರ. ಯಾವುದೇ ಕಾರಣಕ್ಕೂ ಇದನ್ನು ಅತನಿಂದ ಬೇರ್ಪಡಿಸುವುದಕ್ಕೆ ಸಾಧ್ಯವಿಲ್ಲ. ಜನಪದಕಲೆಗಳಲ್ಲಿ ಸಾರ್ವತ್ರಿಕತೆ, ಲೋಕದೃಷ್ಟಿ, ವೈಚಾರಿಕತೆ, ಭಾವೈಕ್ಯತೆ, ಸಂವೇದನೆ, ಸಾಮಾಜಿಕತೆ ಇತ್ಯಾದಿಗಳನ್ನು ಕಾಣಬಹುದು. ಅನಾದಿಕಾಲದಿಂದಲೂ ಮಾನವನ ಆರೋಗ್ಯಕರವಾದ ಬೆಳವಣಿಗೆಗೆ (ಮಾನಸಿಕ ಮತ್ತು ದೈಹಿಕ) ಪೂರಕವಾದ ಒಂದು ಸಾಂಸ್ಕೃತಿಕ ಅಂಶ ಕಲೆ. ಆಂತರಿಕ, ಆಧ್ಯಾತ್ಮಿಕ ಹಾಗೂ ಲೌಕಿಕ ಅಗತ್ಯಗಳೆಲ್ಲವನ್ನೂ ಪೂರೈಸುವ ಏಕೈಕ ಪ್ರಬಲವಾದ ಸಂವಹನ ಮಾಧ್ಯಮವಾಗಿ ಇಂದಿಗೂ ಎಲ್ಲಾ ದೇಶ, ಕಾಲ, ಜನರಲ್ಲಿ ಕಲೆ ಪ್ರಚಲಿತವಾಗಿದೆ.

ಕೆ.ಸಂ. ೫೬೫೦—ಎಂ.ಯು.ಪಿ.ಎಂ.—೨,೦೦೦ ಪ್ರತಿಗಳು—೧೬—೪—೯೯